The present system is working satisfactorily. No complaint regarding that has been received regarding tha the village admini- is on stration is suffering due to the shortage of Grama Sahayakas. There proposa lbefore the Government tocr eate the additional posts of Grama Sahayakas for cach village.

But there are complaints from the pnblic regarding the residence of the Village Accountants. Instructions have already been issued that every Village Accountant should stay in the village where he is posted, If he is not residing, I have asked the Deputy Commissioners to take disciplinary action against him immediately and hon. Members are requested to bring it to my notice where the Village Accountant is not residing in that village.

MADAM DEPUTY SPEAKER.—Hon'ble Leader of Opposition to initiate the discussion.

ವಿತ್ತೀಯ ಕಾರ್ಯಕಲಾಪಗಳು

೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

(ಹಣಕಾಸು, ಅಬಕಾರಿ ಮತ್ತು ಯೋಜನಾ ಬೇಡಿಕೆಗಳು)

†ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ, ಬೇಡಿಕೆಗಳ ಸಂಖ್ಯೆ ೩೭–೩೮–೪೪–೧೭–೧೮–೧೯–೨೦–೨೧–೨೨ ಮತ್ತು ೨೫ ಈ ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಬೇಕಾಗಿದೆ. ಏನೆಂದರೆ, ನನಗೆ ನಿನ್ನೆಯೇ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ಬಹಳ ಕುತೂಹಲ ಮತ್ತು ಆಸಕ್ತಿ ಇತ್ತು. ಕಾರಣವೇನೆಂದರೆ ಮೊದಲನೆ ಬಾರಿಗೆ ಕರ್ನಾಟಕ ರಾಜ್ಯದ ಹಣಕಾಸಿನ ಮಂತ್ರಿಗಳು ತುಂಬ ಉಲ್ಲಾಸಿತರಾಗಿ, ನಗುನಗುತ್ತಾ ಇದ್ದರು. ಏನೋ ಮನಸ್ಸು ಪ್ರಫುಲ್ಲವಾಗಿದೆ. ಅವರಿಗೆ ನಾವು ಹೇಳಿದ್ದು ಮನಸ್ಸಿಗೆ ಹೋಗಬಹುದು ಎಂಬ ಕುತೂಹಲ ಇತ್ತು. ಇವತ್ತೂ ಸಹ ಅದೇ ನಗುಮುಖಕಾಣುತ್ತಿರುವುದರಿಂದ ನಾನು ಹೇಳತಕ್ಕಂಥ ಕೆಲವು ವಿಚಾರಗಳನ್ನು ಅವರು ಗಮನಿಸುತ್ತಾರೆಂದು ನಾನಾದರೂ ಭಾವನೆ ಮಾಡುತ್ತೇನೆ. ಆರ್ಥಿಕ ಹಣಕಾಸನ್ನು ರಾಜ್ಯದಲ್ಲಿ ತೂಗಿಸುವುದೆಂದರೆ ಮುಖ್ಯವಾಗಿ ಸಾಮಾಜಿಕ ನ್ಯಾಯಗಳನ್ನು ಬಲಿಕೊಡದೆ ಅಭಿವೃದ್ಧಿ ಗತಿಯನ್ನು ಕಾದುಕೊಂಡು ಬರತಕ್ಕಂಥ ಒಂದು ಸೇತುವೆಯಾಗಬೇಕು ಈ ಹಣಕಾಸಿನ ಇಲಾಖೆ. ಅರ್ಥ–ಶಾಸ್ತ್ರ ಬರೀಗಣಿತವಾಗುವುದಿಲ್ಲ. ಗಣಿತವನ್ನು ಮೀರಿದ ಸಾಮಾಜಿಕ ನ್ಯಾಯವನ್ನು ಒದಗಿಸತಕ್ಕಂಥ ಒಂದು ವೇದಿಕೆಯಾಗಬೇಕು. ಪ್ರಾರಂಭದಲ್ಲಿ ನಾನು ಈ ಮಾತನ್ನು ಹೇಳುವುದಕ್ಕೆ ಕಾರಣವೇನೆಂದರೆ,

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಳೆದ ಕೆಲವು ವರ್ಷಗಳಿಂದ ಹಿಂದಿನ ಸರ್ಕಾರ ಮಾಡಿದಂಥ ಸಾಮಾಜಿಕ ಸೇವೆಗಳ ಬಗ್ಗೆ ಅತಿಯಾದಂಥ ಟೀಕೆಗಳು ಬಂದಿತು. ಅದು ಪಠ್ಯಪುಸ್ತಕಗಳನ್ನು ಕೊಡುವುದಿರಲಿ, ಬಟ್ಟೆಗಳನ್ನು ಕೊಟ್ಟಿರುವುದಿರಲಿ, ಅಥವಾ ಓಲ್ಡೇಜ್ ಪೆನ್‌ಷನ್ ಕೊಟ್ಟಿರುವುದೇ ಇರಲಿ, ಗರ್ಭಿಣಿ ಸ್ತ್ರೀಯರಿಗೆ ಪರಿಹಾರವನ್ನು ಕೊಟ್ಟಿರುವುದೇ ಇರಲಿ, ಇಂಥ ಅನೇಕ ಕಾರ್ಯಕ್ರಮಗಳಿಂದ ಆಡಳಿತದ ದಿಕ್ಕನ್ನೇ ಬದಲಿಸಿದೆ ಎನ್ನುವ ಕಾರಣವನ್ನು ಒಡ್ಡಿ ಪ್ರಸ್ತಾಪ ಮಾಡಿದ್ದಾರೆ. ಈ ಕಾರಣದಿಂದ ಈ ಮಾತನ್ನು ಮೊದಲೇ ಹೇಳಬೇಕಾಗಿದೆ. ನಾನು ಬೇರೆ ವಿಚಾರಗಳಿಗೆ ಹೋಗುವುದಕ್ಕೆ ಮುಂಚೆ ಇತ್ತೀಚೆಗೆ ಮಾನ್ಯ ಹಣಕಾಸಿನ ಸಚಿವರು ಈ ಸದನದ ಮುಂದೆ ಸರ್ಕಾರದ ಮತ್ತು ತಮ್ಮ ಅನ್ನಿಸಿಕೆಗಳನ್ನು ಹೇಳತಕ್ಕಂಥ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೯ನೇ ವಿತ್ತೀಯ ಆಯೋಗದ ವರದಿಯ ಬಗ್ಗೆ ಸಂಕ್ಷಿಪ್ತವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಬಹಳ ಪ್ರಮುಖವಾದಂಥ ಹೇಳಿಕೆ ಮತ್ತು ಬಹಳ ಮುಖ್ಯವಾಗಿ ಗಮನಿಸಬೇಕಾದಂಥ ವಿಚಾರ. ೯ನೇ ಹಣಕಾಸಿನ ಆಯೋಗದ ಎರಡನೇ ವರದಿ ಕೇಂದ್ರ ಸರ್ಕಾರದ ಎಲ್ಲ ಶಿಫಾರಸ್ಸುಗಳನ್ನು ಒಪ್ಪಿಕೊಂಡಿದೆ. ಇದ್ದರಿಂದ ಕರ್ನಾಟಕಕ್ಕೆ ತೀವ್ರವಾದಂಥ ನ್ಯಾಯ ಸಿಕ್ಕಿಲ್ಲ ಎನ್ನತಕ್ಕಂಥ ಆರೋಪವನ್ನು ಮಾಡಿದ್ದಾರೆ. ನಾನು ಈ ವಿಚಾರದಲ್ಲಿ ಅವರ ಜೊತೆಗೆ ಸಹಾನುಭೂತಿಯನ್ನು ವ್ಯಕ್ತಮಾಡುತ್ತೇನೆ. ಹೀಗೆ ಮಾಡುವಾಗ ಈ ಒಂದು ಹಣಕಾಸಿನ ಆಯೋಗ ರಾಜ್ಯಾಂಗದ ವಿಧಿಬದ್ಧವಾದ ಒಂದು ಸಂಸ್ಥೆ. ರಾಜ್ಯಾಂಗದ

೧೧.೩೦ ಎ.ಎಂ.

೨೮೦ನೇ ವಿಧಿಯಲ್ಲಿ ಈ ಹಣಕಾಸಿನ ಆಯೋಗದ ಬಗ್ಗೆ ಶಾಶ್ವತವಾದ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ.

> "The President shall, within two years from the commencement of this Constitution and there after at the expiration, of every fifth year or at such earlier time as the President considers necessary, by order constitute a Finance Commission which shall consist of a Chairman and four other members to be appointed by the President,"

ಎಂದು ಹೇಳಿದ್ದಾರೆ. ಆದರೆ ಹೇಗೆ ಕೆಲಸ ಮಾಡಬೇಕು? ಇದರಲ್ಲಿ ಬರೀ ರಾಷ್ಟ್ರಾಧ್ಯಕ್ಷರಿಗೆ ರೆಕಮೆಂಡೇಷನ್ಸ್ ಮಾಡತಕ್ಕ ಅಧಿಕಾರ ಮಾತ್ರ ಇದೆ. ಅದನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ವಿಶೇಷವಾಗಿ ೯ನೇ ಹಣಕಾಸಿನ ಆಯೋಗ ಬಹಳ ಚರ್ಚೆಗೆ, ಟೀಕೆಗೆ ಸಿಕ್ಕಿದಂತಹ ಒಂದು ಆಯೋಗವೆಂದು ಹೇಳಿದರೆ ಅದನ್ನು ಮಾನ್ಯ ಹಣಕಾಸಿನ ಸಚಿವರು ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ. ಆದ್ದರಿಂದ ಈ ಅನ್ಯಾಯವಾಗುತ್ತದೆಂದು ಹೇಳಿ ೧೯೮೮ನೇ ಇಸವಿ ಜನವರಿ ೧೧ನೇ ತಾರೀಖು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ಒಂದು ಸಮಾವೇಶ ನಡೆದಾಗ ಇದನ್ನು ಈಗಲೇ ಸರಿಪಡಿಸತಕ್ಕ ಪ್ರಯತ್ನ ಮಾಡಬೇಕೆಂಬ ಒಂದು ಠರಾವನ್ನು ಮಂಡನೆ ಮಾಡಿದ್ದರು. ಜೊತೆಗೆ ಅಂದಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ಕೂಡ ವಿವರಿಸಿದ್ದರು. ಆದರೆ ಪರಿಣಾಮ ಏನೂ ಆಗಲಿಲ್ಲ. ಅಲ್ಲಿ ಕೆಲವು ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರು. ಏನು ಆ ಪ್ರಸ್ತಾಪ ಎಂಬ ಬಗ್ಗೆ ಒಂದೆರಡನ್ನು ಈ ಸದನದಲ್ಲಿ ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಜನವರಿ ೨೩, ಮತ್ತು ಫೆಬ್ರವರಿ ೫ರಂದು ಫ್ರಂಟ್ ಲೈನ್‌ನಲ್ಲಿ ಒಂದು ಆರ್ಟಿಕಲ್ ಬರೆದಿದ್ದಾರೆ. ಅದರಲ್ಲಿ ವಿತ್ತೀಯ ಪಂಡಿತರಾದಂಥ ಮತ್ತು ಹಲವು ವರ್ಷಗಳ ಕಾಲ ಈ ಕಮಿಷನ್ನಿನ ಸದಸ್ಯರಾಗಿದ್ದಂತಹ ಶ್ರೀ ಮಾನ್ ಗುಲಾಟಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ,

> "The Constitution gives the Finance Commission freedom to decide, how to go about it. Over the last thirty years, since the 3rd Finance Commission, the Central Government has tried to suggest criteria or cosiderations with the Finance Commission, may take into account practically all Finance Commissions had taken those suggestions as guide lines and not as directives."

The ninth Finance Commission, almost it become a directive of the Central Government. That was the basic objection took at that point of time. ಏನು ಡಿವಿಯೇಷನ್ಸ್ ಆಗಿತ್ತು ಎಂಬ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

> "This time the Ninth Finance Commission's terms of reference are so worded that they could be taken as attemts on the part of the Central Government to impose certain conditions."

The basic concept of Finance Commission as guided by Art. 280 of the constitution has been taken away. That was the basic objection took up at that point of time in 1988 in the non-Congress (I) Chief Ministers' Conference. ಅದರಲ್ಲಿ ಮತ್ತೊಂದು ಮುಖ್ಯವಾದ ಒಂದೆರಡು ಅಂಶಗಳನ್ನು ಹೇಳುತ್ತಾರೆ,

> "This time a distinction has been made in that terms of reference speak of protecting the committed expenditures and liabilities of the Centre but when it comes to the States there is no reference to their committed expenditures and liabilities. All that the terms speak of is the special problems if any of the States."

ಮುಂದಕ್ಕೆ ಬಹಳ ದೀರ್ಘವಾಗಿ ಚರ್ಚೆ ಆದಮೇಲೆ ಈ ಅಭಿಪ್ರಾಯಗಳನ್ನು ಇವರು ಏನು ವ್ಯಕ್ತ ಮಾಡಿದ್ದಾರೆ, ಅದು ನಿಜ ಎನ್ನುವಂಥ ಭಾವನೆಯನ್ನು ತಾವೂ ಸಹ ವ್ಯಕ್ತ ಮಾಡಿದ್ದೀರಿ ಎಂಬುದು ನನಗೆ ಸಂತೋಷ.

> "What the states are afraid of is that they may be thrown into a situation where they may not know how to balance their receipts and expenditures, being unable to get out of their committed expenditures. So the terms of reference make a very major departure in the whole financial distribution between the Centre and the States"

೯ನೇ ವಿತ್ತೀಯ ಆಯೋಗದಿಂದ ಈ ಫಲಿತಾಂಶ ಬಂದಿದೆ ಎಂಬುದನ್ನು ತಾವೂ ಒಪ್ಪಿಕೊಂಡಿದ್ದೀರಿ ಎಂಬುದು ನನಗೆ ಬಹಳ ಸಂತೋಷ ಆಗಿದೆ. ಕಾರಣ ಏನೆಂದರೆ ಹಿಂದಿನ ವಿತ್ತೀಯ ಆಯೋಗದ ಸಮಿತಿಯನ್ನು ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಇದು ಹಿಂದಿನ ಕಾಂಗ್ರೆಸ್ ಸರ್ಕಾರ ಮಾಡಿದಂಥ, ಭಾರತ ಸರ್ಕಾರ ಮಾಡಿದಂಥ ಒಂದು ದೃಷ್ಟಿಯಿಂದ ನಾನು ಹೆಚ್ಚಾಗಿ ಮುಂದಕ್ಕೆ ಹೋಗುತ್ತಿದ್ದೇನೆ ಎಂಬ ಭಾವನೆ ತಮಗೆ ಬಂದರೂ ಸಹ ಅದನ್ನು ನಾನು ಒಪ್ಪುವುದಕ್ಕೆ ಸಿದ್ಧನಿದ್ದೇನೆ. ಇದೊಂದು ರಾಜಕೀಯ ಸಮಿತಿಯಾಗಿ ರಚನೆ ಮಾಡಿದರು. ಅದಕ್ಕಾಗಿ ರಾಜಕೀಯ ವರದಿ ಬಂತು. ಅದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ, ತಮಿಳುನಾಡಿಗೆ ಮಹಾರಾಷ್ಟ್ರಕ್ಕೆ ಹಾಗೂ ಇನ್ನಿತರ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಎಂಬ ಮಾತನ್ನು ತಾವು ಕೊನೆಯಲ್ಲಿ ಪ್ರಸ್ತಾವ ಮಾಡಿದಿರಿ. ಪ್ಯಾರಾ ೭ರಲ್ಲಿ ಈ ಶಿಫಾರಸ್ಸುಗಳ ಒಟ್ಟು ಪರಿಣಾಮ ಎಂದರೆ ಹಿಂದಿನ ಹಣಕಾಸು ಆಯೋಗಗಳು ಶಿಫಾರಸ್ಸು ಮಾಡಿದ ಒಟ್ಟು ವರ್ಗಾವಣೆಯಲ್ಲಿ ನಮ್ಮ ರಾಜ್ಯದ ಪಾಲು ೭ನೇ ಹಣಕಾಸು ಆಯೋಗದ ಶೇಕಡ ೪.೮೨ ಆಗಿದೆ. ಇದರ ವಿಚಾರ ಕೇಂದ್ರಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಈ ವರದಿಯನ್ನು ಏತಕ್ಕೆ ಒಪ್ಪಿಕೊಂಡರು ? ಇದನ್ನು ತಿರಸ್ಕರಿಸುವುದಕ್ಕೆ ಅವಕಾಶ ಇತ್ತು. ಬಹುಶಃ ಹಿಂದಿನ ಕೇಂದ್ರ ಸರ್ಕಾರ ಒಂದು ಸತ್ಸಂಪ್ರದಾಯ ಪಾಲನೆ ಮಾಡುವ ದೃಷ್ಟಿಯಿಂದ ಹಿಂದೆ ಮಾಡಿರುವ ವಿತ್ತೀಯ ಆಯೋಗದ ವರದಿಯನ್ನು ತಿರಸ್ಕರಿಸಿ ಅವರಿಗೆ ಅಗೌರವ ಮಾಡಬಾರದು ಎಂಬ ದೃಷ್ಟಿಯಿಂದ, ಇಂಥ ಒಂದು ರಾಜ್ಯಾಂಗಬದ್ಧವಾದ ಸಂಸ್ಥೆಗಳಿಗೆ ಅಪಮಾನ ಮಾಡಬಾರದು ಎಂಬ ಸದಿಚ್ಛೆಯಿಂದ ಇದನ್ನು ಒಪ್ಪಿಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ. ಆ ಭಾವನೆಗೆ ಪೂರಕವಾಗಿ ಮೊನ್ನೆತಾನೆ ಕೇಂದ್ರದ ಹಣಕಾಸಿನ ಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ರಾಜ್ಯದ ಹಣಕಾಸು ನಿಗಮದ ಹೊಸ ಕಟ್ಟಡದ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡುತ್ತಾ ೯ನೇ ವಿತ್ತೀಯ ಆಯೋಗದ ಶಿಫಾರಸ್ಸುಗಳನ್ನು ನೋಡಿದಾಗ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇದೊಂದು ದೃಷ್ಟಿಯಿಂದ ಕರ್ನಾಟಕ ಮಾಡಿದಂಥ ಒಂದು ಉಪಕಾರ ಎಂದು ಹೇಳಿ......

(ಸಭೆಯಲ್ಲಿ ಹಲವು ಸದಸ್ಯರು ನಿಂತು ಮಾತನಾಡುತ್ತಿದ್ದರು)

MR. SPEAKER.—Order. Order. Could you kindly resume your seats ?

ಶ್ರೀ ಡಿ. ಬಿ. ಚಂದ್ರೇಗೌಡ.—ಹಾಗೆ ಒಪ್ಪಿಕೊಳ್ಳುತ್ತಾ ನಮ್ಮ ರಾಜಕ್ಕೆ ಈ ಒಂದು ವರದಿಯಿಂದ ಆಗಿರತಕ್ಕ ನಷ್ಟವನ್ನು ತುಂಬಿಕೊಡತಕ್ಕ ಆಲೋಚನೆಯನ್ನು ಮಾಡಿದ್ದಾರೆ. ಯಾವರೀತಿಯಲ್ಲಿ ಆ ನಷ್ಟವನ್ನು ತುಂಬಿಕೊಡಬೇಕು ಎಂಬ ಬಗ್ಗೆ ಸರ್ಕಾರ ಹೇಗೆ ಆಲೋಚನೆ ಮಾಡಿದೆಯೋ ಗೊತ್ತಿಲ್ಲ. ಆದರೆ ಬೇರೆ ರೂಪದಲ್ಲಿ ತುಂಬಿಕೊಡುತ್ತೇವೆಂದು ಸಾರ್ವಜನಿಕವಾಗಿ ಏನು ಹೇಳಿದ್ದಾರೆ ಅದರ ಲಾಭವನ್ನು ಇಲ್ಲಿನ ಹಣಕಾಸಿನ ಮಂತ್ರಿಗಳು ಪಡೆದುಕೊಳ್ಳಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಇಲ್ಲಿ ನಾವು ಗಮನಿಸಬೇಕು. ೯ನೇ ಹಣಕಾಸು ಆಯೋಗದಲ್ಲಿ ಅರ್ಥಶಾಸ್ತ್ರದ ಪರಿಣಿತರು ಯಾರೂ ಇಲ್ಲ ಎಂಬುದನ್ನು ಗಮನಿಸ ಬೇಕು. ಬಹಳ ಮುಖ್ಯವಾದ ವಿಚಾರ ಏನೆಂದರೆ ಆ ಕಾಲಕ್ಕೂ ಇಂದಿಗೂ ಪ್ರಸ್ತಾಪ ಏನು ನಡೆದಿದೆ ಎಂಬುದನ್ನು ನೋಡಬೇಕು. ಒಂದು ಅಂತರ ರಾಜ್ಯ ಮಂಡಲಿಯನ್ನು ರಚನೆ ಮಾಡಬೇಕು, ರಾಜ್ಯಗಳಿಗೆ ಇರತಕ್ಕಂಥ ಆರ್ಥಿಕ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಅದು ಒಂದು ವೇದಿಕೆ ಯಾಗಬೇಕು. ಅದರ ಮೂಲಕ ರಾಜ್ಯಗಳಿಗೆ ಅನ್ಯಾಯವಾಗದಂತೆ ತಡೆಗಟ್ಟುವುದಕ್ಕೆ ಪ್ರಯತ್ನಗಳು ಹೇಗೆ ಮಾಡಬೇಕು ಎಂಬ ಬಗ್ಗೆ ಆಲೋಚನೆ ನಡೆದವು. ಸುದೈವದಿಂದ ಕೇಂದ್ರದಲ್ಲಿ ಹೊಸ ಸರ್ಕಾರ ಬಂದ ಮೇಲೆ ಇಂತಹ ಒಂದು ಮಂಡಲಿ ರಚನೆಯಾಗಿದೆ. ರಚನೆಯಾಗಿದ್ದು ಅಷ್ಟೇ ಅಲ್ಲ, ಆ ಮಂಡಲಿಯ ಸಭೆ ಬರುವ ತಿಂಗಳು ೬ನೇ ತಾರೀಖು ಇದೇ ಸದನದಲ್ಲಿ ಬೆಂಗಳೂರು ನಗರದಲ್ಲಿ ಸೇರತಕ್ಕ ಒಂದು ಸಂತೋಷದ ಸುದ್ದಿಯನ್ನು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಮೂಲಕ ಈ ನಾಡಿಗೆ ಕೊಟ್ಟಿದ್ದಾರೆ. ಆ ಕಾರಣ ಇನ್ನು ಮುಂದೆ ಇಂತಹ ಕಮಿಷನ್ ಅಥವಾ ಆಯೋಗಗಳನ್ನು ನೇಮಕ ಮಾಡುವಾಗ ಈಗ ಆಗಿರತಕ್ಕ ದೋಷಗಳನ್ನು ಗುರುತಿಸಿ, ಅದನ್ನು ಸರಿಪಡಿಸಿ ಎಂದು ಹೇಳತಕ್ಕದ್ದನ್ನು ಆ ಸಂದರ್ಭದಲ್ಲಿ ನನಗೆ ಆಗ ಅವಕಾಶ ಇಲ್ಲದೆ ಇರುವುದರಿಂದ ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ. ಈ ೯ನೇ ವಿತ್ತೀಯ ಆಯೋಗದಲ್ಲಿ ಅರ್ಥ ಶಾಸ್ತ್ರಜ್ಞರು, ಪರಿಣಿತರು ಇರಲಿಲ್ಲ, ಎನ್ನುವ ಮಾತನ್ನು ಹೇಳುವಾಗ ನಾನು ಮತ್ತೊಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಒಂದು ಸಮಿತಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದ್ದಾಗ ರಾಜ್ಯಪಾಲರ ಸಲಹೆಗಾರರಾಗಿದ್ದ ಶ್ರೀಮಾನ್ ವೆಂಕಟರಮಣನ್ ಕೂಡ ಒಬ್ಬ ಸದಸ್ಯರಾಗಿದ್ದರು. ಅವರು ಈ ರಾಜ್ಯಕ್ಕೆ ಸಲಹೆ ಕೊಡುವುದಕ್ಕೆ ಬಂದರು. ಆರ್ಥಿಕ ಸಹಾಯ ಮಾಡುವುದಕ್ಕೆ ಬರಲಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಅವರು ಎಷ್ಟು ಸಭೆಗಳಿಗೆ ಹೋಗಿದ್ದರೋ, ಎಂಬುದು ಗೊತ್ತಿಲ್ಲ. ಇಲ್ಲಿ ರಾಜ್ಯಪಾಲರಿಗೆ ಸಲಹೆ ಕೊಡುವುದಕ್ಕೆ ಬಂದಂತಹ ಒಬ್ಬ ಅತ್ಯಂತ ಹಿರಿಯ ಗೌರವಾನ್ವಿತ ವ್ಯಕ್ತಿ. ಈ ಒಂದು ಸಮಿತಿಯ ಸದಸ್ಯರಾಗಿ ನಮಗೆ ಅನ್ಯಾಯವಾಯಿತು ಅಂತ ಹೇಳುವವರೆಗೆ ಅವಕಾಶ ಕೊಟ್ಟಿದ್ದು ಒಂದು ದುರದೃಷ್ಟ ಘಟನೆ ಅಂತ ನಾನು ಭಾವನೆ ಮಾಡುತ್ತೇನೆ. ಅದನ್ನು ಮತ್ತಷ್ಟು ಲಂಬಿಸುವುದಕ್ಕೆ ನಾನು ಹೋಗುವುದಿಲ್ಲ. ಒಟ್ಟು ಅಲ್ಲಿ ಲಕೋನ ಅಂತ ಒಬ್ಬ ಸದಸ್ಯರು ಇದ್ದರು. ಅದನ್ನು ನೀವು ತರಿಸಿ ನೋಡಿದರೆ ಗೊತ್ತಾಗುತ್ತದೆ. ಅವರು ಎಷ್ಟು ಸಭೆಗೆ ಹೋಗಿದ್ದರು ಎಂಬುದು ಗೊತ್ತಾಗುತ್ತದೆ. ಒಟ್ಟಿನಲ್ಲಿ ನನ್ನ ಮಾತಿನ ಅರ್ಥ ಇಷ್ಟೆ, ಒಂದು ದೃಷ್ಟಿಯಿಂದ ಏಕ ಸದಸ್ಯತ್ವದ ಸಭೆಯಾಗಿತ್ತು. ಆದ್ದರಿಂದ ಈ ತೀರ್ಮಾನ ಬಂದ ನಂತರ ಸುದೈವದಿಂದಲೋ, ದುರ್ದೈವದಿಂದಲೋ ಒಟ್ಟಾರೆ ೯ನೇ ಆಯೋಗದ ಶಿಫಾರಸ್ಸುಗಳನ್ನು ಅದೂ ೨ನೆಯ ಶಿಫಾರಸ್ಸುಗಳನ್ನು ನಾವು ಪ್ರಶ್ನೆ ಮಾಡತಕ್ಕ ಪ್ರಸ್ತಾಪ ಬಂದಿದೆ. ಆದ್ದರಿಂದ ನಾನು ಅಂತಿಮವಾಗಿ ಈ ವಿಚಾರದಲ್ಲಿ ಹೇಳತಕ್ಕಂತಹದ್ದು ಇದು ಹಿಂದಿನ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಕೊಟ್ಟ ಕೊಡುಗೆ. ಆ ಕಾರಣದಿಂದ ನಾವು ಇವತ್ತು ಇದನ್ನು ಅನುಭವಿಸಬೇಕಾಗಿದೆ. ಈ ಹೊರೆಯನ್ನು ಹೊತ್ತುಕೊಳ್ಳತಕ್ಕ ಜವಾಬ್ದಾರಿ ತಮ್ಮ ಮೇಲೆ ಬಿದ್ದಿದೆ. ಈ ಕರ್ಮಕಾಂಡವನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರದ ಅರ್ಥ ಸಚಿವರು ಏನು ಸೂಚನೆ ಕೊಟ್ಟಿದ್ದಾರೆ, ಆ ಸೂಚನೆಯ ಲಾಭವನ್ನು ತಾವು ಪಡೆಯಬೇಕು ಎಂದು ಹೇಳಿ ನಾನು ತಮ್ಮಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಆದ್ದರಿಂದ ಈ ಒಂದು ೯ನೆಯ ವಿತ್ತೀಯ ಆಯೋಗದ ೨ನೇ ವರದಿಯಲ್ಲಿರತಕ್ಕ ಅನ್ಯಾಯಕ್ಕೆ ಕೇಂದ್ರ ಸರ್ಕಾರ ಏನಾದರು ಸರಿಪಡಿಸತಕ್ಕ ಸಲಹೆಗಳನ್ನು ಕೊಟ್ಟಿದೆಯೇ ? ಅಥವಾ ನೀವು ಕೇಂದ್ರ ಸರ್ಕಾರದ ಜೊತೆಯಲ್ಲಿ ಯಾವ ರೂಪದ ಸಹಾಯವನ್ನು ಕೇಳಿದ್ದೀರಿ ಎಂಬುದನ್ನು ದಯಮಾಡಿ ಈ ಸದನಕ್ಕೆ ತಿಳಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಜೊತೆಗೆ ಇಂತಹ ಒಂದು ವಿಚಾರವನ್ನು ಮುಂದಿನ ತಿಂಗಳು 4ನೇ ತಾರೀಖು ಇದೇ ಸದನದಲ್ಲಿ ನಡೆಯತಕ್ಕ ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲೂ ಕೂಡ ಕರ್ನಾಟಕದ ಪರವಾಗಿ ತಾವು ಈ ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ನಾನು ಈ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಇದನ್ನು ಪ್ರಸ್ತಾಪ ಮಾಡುವುದಕ್ಕೆ ನನ್ನ ಮತ್ತೊಂದು ಮುಖ್ಯವಾದ ಕಾರಣ ಕಳೆದ 2-3 ವರ್ಷಗಳಿಂದ ಬಹಳ ದೊಡ್ಡ ಚರ್ಚೆಯಾಗುತ್ತಾ ಬಂದಿದೆ. ಆರ್ಥಿಕ ದಿವಾಳಿತನವಾಗಿದೆ. ಮತ್ತು ಸಂಬಳ ಕೊಡುವುದಕ್ಕೂ ದುಡ್ಡು ಇಲ್ಲ. ಟ್ರಜರಿಗಳೆಲ್ಲಾ ಖಾಲಿಯಾಗಿವೆ, ಮಾಶಾಸನಗಳನ್ನು ಕೊಟ್ಟಿಲ್ಲ ಎಂಬ ಮಾತುಗಳನ್ನು ಪ್ರಸ್ತಾಪ ಮಾಡಿದರು. ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸರ್ಕಾರ ಉತ್ತಮವಾದ ಆರ್ಥಿಕ ನಿರ್ವಹಣೆಯನ್ನು ಮಾಡಲಿಲ್ಲ ಎನ್ನುವಂತಹ ಆಪಾದನೆಯನ್ನು ಮಾಡಿದ್ದಾರೆ. ಈ ಆಪಾದನೆ ಮಾಡುವಾಗ ನಿಮ್ಮ ಇತ್ತೀಚಿನ ದ್ವನಿಗಳು ಏನು ಇದ್ದಾವೆ, ಬದಲಾವಣೆ ಆದ ಹೇಳಿಕೆಗಳು ಏನು ಇದ್ದಾವೆ, ಇವು ಇದಕ್ಕೆ ಪೂರಕವಾಗಿಲ್ಲ, ಇದಕ್ಕೆ ವಿರುದ್ಧವಾಗಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಕಾರಣ ಏನು ? ಮೊದಲನೆಯದಾಗಿ ಈ 9ನೇ ವಿತ್ತೀಯ ಆಯೋಗಕ್ಕೆ ತಾವು ಏನು ಈ ಸರ್ಕಾರ ಬಂದಮೇಲೆ ಮೆಮೊರ್ಯಾಂಡಮ್‌ಗಳನ್ನು ಕೊಟ್ಟಿದ್ದೀರಿ ಈ ಎರಡು ಮೆಮೊರ್ಯಾಂಡಮ್‌ಗಳು ಹಿಂದಿನ ಸರ್ಕಾರ ತಯಾರು ಮಾಡಿದ ಮೆಮೊರ್ಯಾಂಡಮ್‌ಗಳೇ ಒಂದು ಅಕ್ಷರ ಸೇರಿಸಿಲ್ಲ, ಒಂದು ಅಕ್ಷರ ಬಿಟ್ಟಿಲ್ಲ, if I am correct. If I am not correct, I may be corrected. ಮತ್ತೆ ಆಗಿದ್ದರೆ ಸಾರ್ವಜನಿಕ ವೇದಿಕೆಯಲ್ಲಿ ರಾಜಕೀಯಕ್ಕಾಗಿ ನಮ್ಮನ್ನು ತೆಗಳಿ, ರಾಜ್ಯಾಂಗದ ವೇದಿಕೆಗಳ ಮೇಲೆ ಹಿಂದಿನ ಸರ್ಕಾರ ಆರ್ಥಿಕ ನಿರ್ವಹಣೆಯನ್ನು ಹೊಗಳತಕ್ಕ ಕೆಲಸ ನನಗೆ ಸಂತೋಷ. ತಪ್ಪಿದ್ದರೆ ಸರಿಪಡಿಸೋಣ. ನಾವು ಇಲ್ಲಿ ಏನೊ ರಾಜಕೀಯ ಲಾಭ ಪಡೆಯಬೇಕೆನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ತಾವು ಏನು ಹೇಳಿದ್ದೀರಿ? ಮುಖ್ಯಮಂತ್ರಿಗಳೂ ಕೂಡಾ ಅದೇ ವೇದಿಕೆಯಲ್ಲಿ ಹೇಳಿದ್ದಾರೆ. 4ನೇ ತಾರೀಖಿನ ಹಿಂದೂ ಪತ್ರಿಕೆಯಲ್ಲಿ ಬಂದಿರುವ ಒಂದು ಶಬ್ದವನ್ನು ಇಲ್ಲಿ ಓದುತ್ತೇನೆ. It has come in Page 3. 'Injustice' Chief Minister Mr. Veerendra Patil said the 9th Finance Commission has done great injustice to Karnataka......"

This is one portion.

"......and it was one of the few states which was exercising great financial discipline." This is what the chief Minister of Karnataka has said in public. ಹಿಂದಿನ ಸರ್ಕಾರ ಕೊಟ್ಟ ಎರಡು ಮೆಮೊರ್ಯಾಂಡಮ್‌ಗಳನ್ನೇ 9ನೇ ವಿತ್ತೀಯ ಆಯೋಗಕ್ಕೆ ತಾವು ಕೊಟ್ಟಿದ್ದೀರೆಂದು ಪೂರ್ವಭಾವಿಯಾಗಿ ಹೇಳಿದ್ದೇ ಆ ಕಾರಣಕ್ಕೆ. ವಿತ್ತೀಯ ಆಯೋಗ ನಿಮ್ಮ 6 ತಿಂಗಳ ಅವಧಿಯನ್ನು ಗಮನಿಸಿ ವರದಿ ಕೊಟ್ಟಿಲ್ಲ. ಇದು ಕೊಟ್ಟಿರುವುದು 5 ವರ್ಷಕ್ಕೆ. ಈಗ ಹೊಸ ಹೊಸ ವ್ಯವಸ್ಥೆಗಳು ಬೇರೆ ಬಂದಿವೆ. ನಾನು ಆ ಡೀಟೇಲ್ಸ್‌ಗೆ ಹೋಗುವುದಿಲ್ಲ. ಅವರಿಗೆ ಕಮಿಷನ್ ಎಂದರೆ ಏನೆಂದು ತಿಳಿಯುವುದಿಲ್ಲ, ವರದಿ ಎಂದರೆ ಏನೆಂದು ತಿಳಿಯುವುದಿಲ್ಲ.

(ಗೊಂದಲ)

ಶ್ರೀ ಆರ್ ಎನ್. ನಾಯಕ್.—ನೀವು ಪದೇ ಪದೇ ಅದನ್ನೇ ಹೇಳುತ್ತೀರಿ ? ಬೇರೆಯವರಿಗೆ ಏನೂ ಗೊತ್ತಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಹಾಗಿದ್ದರೆ ಯಾವ ವರದಿ ಮೇಲೆ ಇಲ್ಲಿ ಚರ್ಚೆಯಾಗುತ್ತಿದೆ ? ಈ ವರದಿ ಅಧ್ಯಕ್ಷರು ಯಾರು ಎಂದು ತಮಗೆ ಗೊತ್ತಿದೆಯೇ ?

ಶ್ರೀ ಆರ್. ಎನ್. ನಾಯಕ್.—ತಾವು ಆ ಸ್ಥಾನದಿಂದ ಏನು ಮಾತನಾಡುತ್ತಿದ್ದೀರಿ, ಅದನ್ನು ಮಾನ್ಯ ಮಂತ್ರಿಗಳು ತಾಳ್ಮೆಯಿಂದ ಕೇಳುತ್ತಿದ್ದಾರೆ. ಅದೇ ಮತ್ತೊಬ್ಬರಾಗಿದ್ದರೆ ಅಬ್ಜೆಕ್ಟ್ ಮಾಡುತ್ತಿದ್ದರು.

ಶ್ರೀ ಡಿ. ಬಿ. ಚಂದ್ರೇಗೌಡ.—ವಿತ್ತೀಯ ಆಯೋಗದ ಹಿಂದಿನ ಅಧ್ಯಕ್ಷರು ಯಾರು ಎಂದು ನಿಮಗೆ ಗೊತ್ತಿದೆಯೇ ? ಅವರನ್ನು ನೇಮಕ ಮಾಡಿದವರು ಯಾರು ಎಂದು ಹೇಳಿ ?

ಶ್ರೀ ಆರ್. ಎನ್. ನಾಯಕ್.—ನಾನು ಏಕೆ ಹೇಳಬೇಕು ? ನಾನು ನಿಮಗೆ ಸಪೋರ್ಟ್ ಮಾಡುವುದಕ್ಕೆ ಇಲ್ಲಿ ನಿಂತಿಲ್ಲ. ನೀವು ಏನು ಹೇಳುತ್ತೀರೋ ಅದನ್ನು ಹೇಳಿಕೊಂಡು ಹೋಗಿ.

ಶ್ರೀ ಜಿ. ರಾಜುಗೌಡ.—೯ನೇ ಹಣಕಾಸಿನ ೨ನೇ ವರದಿ ನೋಡಿದಾಗ ನಮ್ಮ ರಾಜ್ಯಕ್ಕೆ ಸುಮಾರು ೩೬ ಕೋಟಿ ರೂಪಾಯಿ ವಂಚನೆಯಾಗಿರುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಈ ವಿಚಾರದಲ್ಲಿ ನಿಮ್ಮ ಜೊತೆಗಿದ್ದೇನೆಂದು ನಾನು ಮೊದಲೇ ಹೇಳಿದೆ. ಕೇಳುವುದಕ್ಕೇ ತಾಳ್ಮೆ ಇಲ್ಲ ಎಂದರೆ ಹೇಗೆ ? ಅನ್ಯಾಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆ ಅನ್ಯಾಯವಾಗಿದೆ ಎಂದು ಚರ್ಚೆ ಮಾಡುತ್ತಿದ್ದೇನೆ. ಆದುದರಿಂದ ಹಿಂದಿನ ಕೇಂದ್ರ ಸರ್ಕಾರ ಕರ್ನಾಟಕಕ್ಕೇ ಏನು ಬಳುವಳಿ ಕೊಟ್ಟಿದೆ, ಆ ಬಳುವಳಿಗೆ ಕಾರಣ, ಹಿಂದಿನ ಕೇಂದ್ರ ಸರ್ಕಾರ ಮಾಡಿದ ಕಮಿಷನ್ ವರದಿ. ಇದು ಇವತ್ತು ಮಾಡಿದ ಕಮಿಷನ್ ಅಲ್ಲ.

ಶ್ರೀ ಆರ್. ಎನ್. ನಾಯಕ್.—ಬರೀ ನಿಮ್ಮ ಸರ್ಕಾರ ಅನ್ಯಾಯ ಮಾಡಿದ ಹಾಗೇ ಹೀಗೆ ಎಂದು ಹೇಳಿದರೆ ಹೇಗೆ ? ನೀವು ಈಗ ಅಲ್ಲಿ ಅಧಿಕಾರ ಮಾಡುತ್ತಿದ್ದೀರಿ. ನೀವು ನ್ಯಾಯ ಕೊಟ್ಟಿದ್ದರೆ ನಮ್ಮ ಮುಖ್ಯಮಂತ್ರಿಗಳು ಏಕೆ ಕೇಳುತ್ತಿದ್ದರು ? ಈ ಬಗ್ಗೆ ತಾವು ವಿ. ಪಿ. ಸಿಂಗ್ ಅವರ ಜೊತೆ ಮಾತನಾಡಿ. ಯೋಜನಾ ಆಯೋಗದ ನಿಮ್ಮ ಉಪಾಧ್ಯಕ್ಷರಾಗಿದ್ದರಲ್ಲ ಅವರ ಜೊತೆ ಮಾತನಾಡಬೇಕಾಗಿತ್ತು, ಇವತ್ತು ಮುಖ್ಯಮಂತ್ರಿಗಳಿಗೆ ಎಷ್ಟು ಜವಾಬ್ದಾರಿಯಿದೆಯೋ ಅಷ್ಟೇ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೂ ಇದೆ. ಏನೋನೋ ಮಾಡಬೇಕೆಂದಿದ್ದರೆ, ಕರ್ನಾಟಕಕ್ಕೆ ಸ್ವರ್ಗ ಇಳಿಸಬೇಕೆಂದರೆ ಇಳಿಸಿ, ಡೆಲ್ಲಿಯಿಂದ ಹಣ ತೆಗೆದುಕೊಂಡು ಬನ್ನಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ಪ್ರಶ್ನೆ ಹೇಳಿದ್ದಾರೆ. ಮಾಡಿಯೆಂದು ಹೇಳಿದ್ದಾರೆ, ನೀವು ಹೋಗಿ ಹೇಳಿಯೆಂದು ಹೇಳಿದ್ದಾರೆ., ನಾನು ಹೇಳಬೇಕಾಗಿಲ್ಲ. ಕೇಂದ್ರ ಸರ್ಕಾರದ ಅರ್ಥ ಮಂತ್ರಿಗಳು ಹೇಳಿದ್ದಾರೆ. ಅದನ್ನು ಮಾನ್ಯ ಕರ್ನಾಟಕ ರಾಜ್ಯದ ಹಣಕಾಸಿನ ಸಚಿವರು ಈ ಸದನಕ್ಕೆ ತಿಳಿಸಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ದಯವಿಟ್ಟು ವಿಷಯವನ್ನು ತಿಳಿದುಕೊಳ್ಳಿ. ಇದನ್ನು ನಾನು ಹೇಳಿದ್ದಲ್ಲ. ಇದು ರಾಜ್ಯದ ಹಣಕಾಸಿನ ಸಚಿವರು ಹೇಳಿರತಕ್ಕ ಮಾತು. ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಕಟ್ಟಡ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುವಾಗ ೯ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಒಪ್ಪಿಕೊಂಡು ನಮ್ಮ ರಾಜ್ಯಕ್ಕೆ ಆಗಿರುವ ನಷ್ಟವನ್ನು ಇತರ ರೀತಿಯಲ್ಲಿ ತುಂಬಿಕೊಡಲು ಪ್ರಯತ್ನಿಸುವುದಾಗಿ ಭರವಸೆಯನ್ನು ನೀಡಿದ್ದಾರೆ, ನಾನು ಏತಕ್ಕೆ ನಿಮಗೆ ಭರವಸೆಯನ್ನು ಕೊಡಬೇಕು ? I was present and I am happy That is why I am quoting this. ಇಲ್ಲಿ ಇಷ್ಟಕ್ಕೆ ಸೀಮಿತವಾಗಿ ಹೇಳಿದ್ದೇನೆ. ಟ್ರಜರಿ ಖಾಲಿಯಿತ್ತು. ಮತ್ತೊಂದು ಆಗಿತ್ತು as if, ಕರ್ನಾಟಕ ರಾಜ್ಯದಲ್ಲಿ ಹಳೆಯ ಮೈಸೂರು ಸಂಸ್ಥಾನದ ಅರಸರು ಒಂದು ಟ್ರಜರಿ ಇಟ್ಟಿದ್ದರು. ಆ ಟ್ರಜರಿಯಲ್ಲಿಟ್ಟಿದ್ದ ನೂರಾರು ಕೋಟಿ ರೂಪಾಯಿ ಲೂಟಿಯಾಯಿತು ಎನ್ನುವ ಅರ್ಥದಲ್ಲಿ ಮಾತನಾಡಿದರು. ಈ ಬಗ್ಗೆ ಮಾನ್ಯ ಮಂತ್ರಿಗಳ ಧ್ವನಿ ಬದಲಾವಣೆ ಆಗಿದ್ದಕ್ಕೆ ನಾನು ಸಂತೋಷ ವ್ಯಕ್ತ ಮಾಡುತ್ತೇನೆ, ಅದನ್ನು ವ್ಯಕ್ತಮಾಡುವುದು ಬೇಡವೆ ? ಬೇಡ ಎಂದರೆ ಅದನ್ನು ಬಿಟ್ಟು ಬಿಡೋಣ.

ಶ್ರೀ ಜಿ. ರಾಜೂಗೌಡ.—ರಾಜ್ಯದ ಮುಖ್ಯ ನ್ಯಾಯಾಲಯ ಈ ಭೂರಹಿತರಿಗೆ ನಿವೇಶನ ಒದಗಿಸತಕ್ಕ ಕಾಲದಲ್ಲಿ ನೀವೇನು ಭೂಸ್ವಾಧೀನ ಮಾಡಿಕೊಂಡಿದ್ದೀರಿ ಅದಕ್ಕೆ ಪರಿಹಾರ ಕೊಡತಕ್ಕದ್ದು ನಿಧಾನವಾದಾಗ ಹನ್ನೆರಡೂವರೆ ಪರ್ಸೆಂಟ್ ಬಡ್ಡಿಯನ್ನು ಸೇರಿಸಿ ಕೊಡಬೇಕೆಂದು ತೀರ್ಮಾನವಾದುದು ತಮ್ಮ ಕಾಲದಲ್ಲಿ ಏಳು ವರ್ಷಗಳ ಕಾಲ ತಾವು ಏನು ಆಡಳಿತ ಮಾಡಿದಿರಲ್ಲ, ಆ ಒಂದೂವರೆ ಕೋಟಿ ರೂಪಾಯಿಗಳಿಗೆ ೫೦ ಲಕ್ಷ ಸೇರಿಸಿ ಕೊಡಬೇಕೆಂದು ಕೋರ್ಟ್ ತೀರ್ಮಾನವಾಗಿದೆ. ಬಹುಶಃ ನಿಮ್ಮ ಹತ್ತಿರ ಕೊಡುವುದಕ್ಕೆ ಹಣವಿಲ್ಲದೆ ೫೦ ಲಕ್ಷ ಬಡ್ಡಿ ಕೊಡಬೇಕೆಂದು ಸ್ಟ್ರಿಕ್ಚರ್ ಪಾಸ್ ಆಗಿದೆ. ರಾಜ್ಯದ ಮುಖ್ಯ ನ್ಯಾಯಾಲಯದ ತೀರ್ಪು ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಹತ್ತಿರ ಕಂಟ್ರೋಲರ್ ಆಫ್ ಆಡಿಟ್ ಜನರಲ್‌ರವರ ವರದಿ ಇದೆ. ನಾನು ಅಲ್ಲಿಗೆ ಬರುತ್ತೇನೆ.

ಶ್ರೀ ಜಿ. ರಾಜೂಗೌಡ.—ಹೇಗೆ ಭತ್ಯೆಯನ್ನು ತಮ್ಮ ಕಾಲದಲ್ಲಿ ಎಷ್ಟು ಜನಗಳಿಗೆ ಕೊಟ್ಟಿದ್ದೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕೆ ನಾನು ಹೇಳಿದ್ದೇನೆ ನಾವು ಈಗ ಪ್ರಸ್ತಾಪ ಮಾಡುವುದು ಆ ವಿಚಾರವಲ್ಲ. ಸ್ಥೂಲವಾಗಿ ಒಂದು ರಾಜ್ಯದ ಆರ್ಥಿಕ ಸ್ಥಿತಿಯನ್ನು ತೂಗುವಾಗ ಏನನ್ನು ಮಾಡಬಹುದು, ಏನನ್ನು ಮಾಡುವುದಕ್ಕೆ ಸಾಧ್ಯವಿಲ್ಲ, ಹಾಗೆ ಹೇಳುವಾಗ ಚುನಾವಣೆ ಸಮಯದಲ್ಲಿ ಹೇಳುವ

ಮಾತು ಬೇರೆ. ಶಾಸನಸಭೆಗಳಲ್ಲಿ ವಿತ್ತೀಯ ವಿಚಾರಗಳನ್ನು ಚರ್ಚೆ ಮಾಡುವಾಗ ನಾವು ಅಂಕಿಅಂಶಗಳ ಆಧಾರದ ಮೇಲೆ ಚರ್ಚೆ ಮಾಡುವುದು ಬೇರೆ ಮಾತು. ಈ ಕಾರಣದ ಜೊತೆಗೆ ಇಂತಹ ಪರಿಸ್ಥಿತಿ ಕಾರಣಗಳೇನು ? ಅದನ್ನು ನಾನು ಹೇಳುವುದಿಲ್ಲ. ನಿಮ್ಮ ವರದಿಯನ್ನು ಕೋಟ್ ಮಾಡುತ್ತೇನೆ. ನಾನು ನನ್ನ ಹೆಗಲನ್ನು ತಟ್ಟಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಆರ್ಥಿಕ ಸಮೀಕ್ಷೆಯೊಳಗೆ ಇದರ ಕಾರಣಗಳನ್ನು ವಿಮರ್ಶೆ ಮಾಡಿದ್ದಾರೆ. ಆದರೆ ಸುಮ್ಮನೆ ವ್ಯಾಜ್ಯ ಮಾಡಿಕೊಂಡು ಹೋಗುವುದಕ್ಕೆ ಬದಲಾಗಿ ಒಂದು ಸೆಂಟೆನ್ಸ್ ಓದುತ್ತೇನೆ. ಅದರಿಂದ ನಿಮಗೆ ಸಮಾಧಾನವಾದರೆ ಸಾಕು. ೧೯೮೯-೯೦ನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಯು ಅನಾವೃಷ್ಟಿಯ ಪರಿಣಾಮದಿಂದ ಚೇತರಿಸಿಕೊಂಡು, ಇದನ್ನು ನಾನಲ್ಲ ಬರೆದಿದ್ದು. ನಿಮ್ಮ ಸರ್ಕಾರ ಬರೆದಿದ್ದು. ಅಂದರೆ ಅನಾವೃಷ್ಟಿ ಪರಿಸ್ಥಿತಿ ಇತ್ತೆಂಬುದನ್ನು ನೀವು ಒಪ್ಪುತ್ತೀರಾ ? ಅನಾವೃಷ್ಟಿ ಪರಿಣಾಮದಿಂದ ಚೇತರಿಸಿಕೊಂಡು ಪ್ರಗತಿಯ ಲಕ್ಷಣಗಳನ್ನು ತೋರಿಸಿದೆ. ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ ಈ ಮೂರು ವರ್ಷಗಳಲ್ಲಿ ಅನಾವೃಷ್ಟಿ ಪರಿಸ್ಥಿತಿಯನ್ನು ಎದುರಿಸಿದ ನಂತರ ಈಗ ರಾಜ್ಯದ ಆರ್ಥಿಕ ಪರಿಸ್ಥಿತಿ ಪ್ರೋತ್ಸಾಹದಾಯಕವಾಗಿದೆ ಎಂದು ಹೇಳಿದ್ದಾರೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು ಎಂದು ಹೇಳುವಾಗ ಅದಕ್ಕೆ ಕಾರಣಗಳನ್ನು ಸಹ ನೋಡಬೇಕು. ಅದನ್ನು ನಾನಲ್ಲ ಹೇಳಿದ್ದು, ನೀವು ಹೇಳಿರುವುದು ೧೯೮೮-೮೯ ಮತ್ತು ೧೯೮೯-೯೦ರಲ್ಲಿ......

ಶ್ರೀ ಗೋಪಿನಾಥ ಆರ್. ಸಾಂಡ್ರ.—ನಿಮ್ಮ ಮರ್ಯಾದೆ ಗೌರವವನ್ನು ಬಯಲಿಗೆ ಹಾಕಬಾರದೆಂಶಿದು ಹಾಗೆ ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ತಮ್ಮಿಂದ ಹೊಸ ವಿಚಾರವನ್ನು ಕೇಳಿದಹಾಗೆ ಆಯಿತು. ಬಹಳ ಸಂತೋಷ. ಅನಾವೃಷ್ಟಿ ಇತ್ತೆಂದು ಹೇಳಿದ್ದಾರೆ. ಅದಕ್ಕೆ ಬಹಳ ಸಂತೋಷ. ಯಾರನ್ನು ಯಾರು ಸಂತೋಷಪಡಿಸಬೇಕಾಗಿದೆ ಎಂಬುದನ್ನು ಮುಂದೆ ನೋಡೋಣ. ಅದೆಲ್ಲ ಈಗಲೇ ಏತಕ್ಕೆ ? ನಾನು ಹಿಂದಿನ ಸರ್ಕಾರದ ಒಂದು ಹಣಕಾಸಿನ ವ್ಯವಹಾರವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಯಾರು ಏನು ಹೇಳಿದ್ದೀರಿ ಎಂದು ನೋಡಬೇಕು. ತಾವು ಇದೇ ಕರ್ನಾಟಕ ವಿಧಾನಸಭೆಯಲ್ಲಿ ಒಂದು ಶ್ವೇತಪತ್ರವನ್ನು ಮಂಡನೆ ಮಾಡಿದಿರಿ. ತಾವು ಹಾಗೆ ಕರೆಯದಿದ್ದರೂ ನಾನಂತೂ ಹಾಗೆ ಅಂದುಕೊಂಡಿದ್ದೇನೆ. ೨೨.೧೨.೮೮ ರಂದು ಕರ್ನಾಟಕ ಆರ್ಥಿಕ ಪರಿಸ್ಥಿತಿಯನ್ನು ಕುರಿತು ನೀಡಿದ ಹೇಳಿಕೆಯಲ್ಲಿ ಒಂದು ಮಾತು ಹೇಳಿದ್ದೀರಿ.—

> "...ನಮ್ಮ ಮೇಲಿನ ಹೊಣೆಗಾರಿಕೆಯನ್ನು ಎದುರಿಸಲು ಬೇಕಾಗುವ ಸಂಪನ್ಮೂಲಗಳು ಕ್ರಮೇಣ ಕ್ಷೀಣಿಸುತ್ತಿರುವುದು ಎಲ್ಲ ರಾಜ್ಯ ಸರ್ಕಾರಗಳ ಸಾಮಾನ್ಯ ಅನುಭವ. ಅಲ್ಲದೆ ಕೇಂದ್ರ ಸರ್ಕಾರದಂತೆ ರಾಜ್ಯಸರ್ಕಾರ ಕೊರತೆಯ ಆರ್ಥಿಕ ವ್ಯವಸ್ಥೆಯ ಮೊರೆ ಹೋಗುವಂತಿಲ್ಲ. ಹೀಗಾಗಿ ಅನೇಕ ರಾಜ್ಯಸರ್ಕಾರಗಳು ಸಂಪನ್ಮೂಲಗಳ ಕೊರತೆಯನ್ನು ಅನುಭವಿಸಬೇಕಾಗಿ ಬಂದಿದ್ದರಲ್ಲಿ ಏನೂ ಆಶ್ಚರ್ಯ ಇಲ್ಲ. ಕರ್ನಾಟಕ ರಾಜ್ಯ ಇದಕ್ಕೆ ಹೊರತೇನೂ ಅಲ್ಲ"
>
> ಮಾನ್ಯ ಸದಸ್ಯರಿಗೆ ಈ ಪುಸ್ತಕದ ಪತ್ರಿಗಳನ್ನು ತಾವು ಹಂಚತಕ್ಕ ಕೃಪೆ ಮಾಡಬೇಕು. ಇಲ್ಲದಿದ್ದರೆ ನಾನು ಹೇಳುವುದು ಅವರಿಗೆ ತಿಳಿಯುವುದಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಈ ಶ್ವೇತಪತ್ರವನ್ನು ಯಾವಾಗ ಕೊಟ್ಟಿದ್ದು ? ಅದು ಹೇಳಿ. ನಮ್ಮ ಸರ್ಕಾರ ನಿರ್ಧಿಷ್ಟವಾದ ನಿರ್ಣಯ ತೆಗೆದುಕೊಂಡು ಆರ್ಥಿಕ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂಬುದರ ಮುಂಚೆ ಇದನ್ನು ಕೊಟ್ಟಿದ್ದಾರೆ. ಇದಾದಮೇಲೆ ಏನು ಪರಿಣಾಮವಾಗಿದೆ, ಏನು ಪರಿಸ್ಥಿತಿ ಬಂದಿದೆ. ನಮ್ಮ ಸರ್ಕಾರ ಮಾಡಿದ್ದನ್ನು ನೀವು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮಗೆ ತಿಳಿಯುವುದಿಲ್ಲ ಎಂದು ನಾನು ಹೇಳಿದ್ದು. ಈ ಕಾರಣಕ್ಕಾಗಿಯೇ ಈ ಪುಸ್ತಕದ ಪ್ರತಿಗಳನ್ನು ತಮಗೆ ಕಳಿಸಿಕೊಡಿ ಎಂದು ನಾನು ಹೇಳಿದ್ದು. ಈ ಪುಸ್ತಕವನ್ನು ಸಭೆಯ ಮುಂದೆ ಇದ್ದಾಗ, ರಾಜ್ಯದ ಹಣಕಾಸಿನ ಸಚಿವರು ಸಂಪನ್ಮೂಲಗಳ ಕೊರತೆಯ ಕಾರಣಗಳನ್ನು ಹೇಳುವಾಗ, ಈ ಕೊರತೆಯನ್ನು ಎಲ್ಲ ರಾಜ್ಯಗಳೂ ಅನುಭವಿಸಿವೆ, ಕರ್ನಾಟಕ ರಾಜ್ಯ ಇದಕ್ಕೆ ಹೊರತಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಕಾರಣದಿಂದ, ಇದೇನು ಚರ್ಚೆ ನಡೆಯಿತಲ್ಲ. ಜೇಬು ಸ ಬರಿದಾಗಿದೆ ಎಂದು ಹೇಳುವುದಕ್ಕೆ ಅರ್ಥ ಇಲ್ಲ, ಆದರೆ ಇದನ್ನೇ ಆಧಾರವಾಗಿಟ್ಟುಕೊಂಡು......

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಇಡೀ ದೇಶಕ್ಕೆ ಗೊತ್ತಿರುವಂಥ ವಿಚಾರವನ್ನು ಎಷ್ಟು ಗಂಟೆ ಚರ್ಚೆ ಮಾಡಿದರೂ, ಜನ ನಗುತ್ತಾರೆ. ಏಕೆಂದರೆ ತಮ್ಮ ಕಾಲದಲ್ಲಿ ಏನು ಆರ್ಥಿಕ ಪರಿಸ್ಥಿತಿ ಏನು ಇತ್ತು ಎಂಬುದು ಇಡೀ ದೇಶಕ್ಕೆ ಗೊತ್ತಿದೆ. ೫೦ ರೂಪಾಯಿ ಚೆಕ್ಕುಗಳು ಸಹ ಬೌನ್ಸ್ ಆದವು. ಇದು ಗೊತ್ತಿರತಕ್ಕಂಥ ವಿಚಾರ ಅಲ್ಲವೆ ? ಆಮೇಲೆ ಸುಮಾರು ೧೩೦ ಕೋಟಿ ರೂಪಾಯಿಗಳಷ್ಟು ಪಿ. ಡಬ್ಲ್ಯೂ. ಡಿ. ಬಿಲ್‌ಗಳು ಎರಡೂವರೆ ವರ್ಷದಿಂದ ಪೆಂಡಿಂಗ್ ಇದ್ದವು. ಹೀಗೆ ಹೇಳುತ್ತಾ ಹೋದರೆ ಬಹಳ ಹೇಳಬಹುದು. ಇದು ಬಿಟ್ಟು ಬೇರೆ ಏನಾದರೂ ಹೇಳಿ. ದೇಶಕ್ಕೇ ಗೊತ್ತಿರತಕ್ಕಂಥ ವಿಚಾರವನ್ನು ತಾವು ಎಷ್ಟು ಹೊತ್ತು ಆರ್ಗ್ಯು ಮಾಡಿದರೂ ಪ್ರಯೋಜನ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಹನುಮೇಗೌಡರೇ, ನಿಮ್ಮ ಮಂತ್ರಿಗಳು ಮಾಡುವ ಕೆಲಸದಲ್ಲಿ ನಿಮಗೆ ವಿಶ್ವಾಸ ಇದೆ. ನಮ್ಮ ಮೇಲೆ ವಿಶ್ವಾಸ ಇರುತ್ತದೆಯೇ ? ಇಲ್ಲ, ಬರುವುದಿಲ್ಲ. ಆದರೆ ಈ ಮಾತನ್ನು ಮಾನ್ಯಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿದ್ದಾರೆ. ನಾನು ವಾದ ಏಕೆ ಮಾಡಲಿ ? ಮೊದಲು ನಿಮ್ಮ ಸರ್ಕಾರ ಏನು ಮಾಡಿದೆ. ಅದನ್ನು ಸರಿಪಡಿಸಿಕೊಳ್ಳಿ. ನಾನು ಹೇಳಿದ ಉದ್ದೇಶ, ಒಂಬತ್ತನೇ ವಿತ್ತೀಯ ಆಯೋಗದಿಂದಾದ ಅನ್ಯಾಯಗಳನ್ನು ಸಮರ್ಥನೆ ಮಾಡುವುದರ ಜೊತೆಗೆ ಇಂತಹ ಒಂದು ಕೊಡುಗೆಯನ್ನು ಏನುಕೆ ಕೊಟ್ಟಿದ್ದಾರೆ, ಏಕೆಂದರೆ N. K. P. Salve ಅವರು ಅದಕ್ಕೆ ಅಧ್ಯಕ್ಷರಾಗಿದ್ದರು. ಹಿಂದಿನ ಸರ್ಕಾರ ಕೊಟ್ಟು ಕೊಡುಗೆಯನ್ನು ನಾನು ಹೇಳುತ್ತಿದ್ದೇನೆ, ತಾವು ಯಾವ್ಯಾವ ಸಂದರ್ಭದಲ್ಲಿ ಯಾವ ಮಾತನ್ನು ಹೇಳಿದ್ದೀರಿ, ಇಲ್ಲಿ ಮುಖ್ಯಮಂತ್ರಿಗಳು ಈ ಮಾತನ್ನು ಹೇಳುತ್ತಾರೆ— "It is a premium on the non-performing governments" ಎನ್ನುವಂಥ ಮಾತನ್ನು ಹೇಳಿದ್ದಾರೆ. ಈ ಒಂಬತ್ತನೇ ಆಯೋಗ, ಯಾವ ಸರ್ಕಾರಗಳು ಕೆಲಸ ಮಾಡುವುದಿಲ್ಲ, ಆರ್ಥಿಕವಾಗಿ ಸಮರ್ಥವಾಗಿ ಕೆಲಸ ಮಾಡಿಲ್ಲ, ಅಂಥಾದ್ದಕ್ಕೆ ಪ್ರೀಮಿಯಂ ಕೊಟ್ಟಿದ್ದಾರೆ. ಸಮರ್ಥವಾಗಿ ಕೆಲಸ ಮಾಡಿದಂಥ ಸರ್ಕಾರಗಳಿಗೆ ಅನ್ಯಾಯವಾಗಿದೆ ಎಂಬ ಮಾತನ್ನು ಹೇಳಿದ್ದೇನೆ. ಈ ಕಾರಣಕ್ಕಾಗಿ ನಾನು ಇಷ್ಟು ಹೇಳಿದೆ. ಆದ್ದರಿಂದ ಒಂಬತ್ತನೇ ಆಯೋಗ ಕೊಟ್ಟಿರತಕ್ಕಂಥ ಹರದಿಯಿಂದ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಆಲೋಚನೆ ಏನು ಮಾಡಿದ್ದಾರೆ, ಆ ಆಲೋಚನೆಗೆ ಪೂರಕವಾಗಿ ಕರ್ನಾಟಕ ಯಾವ ರಾಜ್ಯಸರ್ಕಾರ ಸವಲತ್ತುಗಳನ್ನು ಕೇಳಿದೆ ?

೧೨–೦೦ ಪಿ. ಎಂ.

ಡಾ॥ ಎನ್. ಬಿ. ನಂಜಪ್ಪ.—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಚಂದ್ರೇಗೌಡರು ಪೇಜ್ ನಂ. ೧೨ ರಲ್ಲಿ ಕಮಿಷನ್ ಆನ್ ಸ್ಟೇಟ್ ಫೈನಾನ್ಸ್ ಎನ್ನುವುದರ ಬಗ್ಗೆ......

ಅಧ್ಯಕ್ಷರು.—ಯಾವ ರೂಲ್ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದೀರಿ. ಮೊದಲು ನನಗೆ ರೂಲ್ ಹೇಳಿ. ತಮ್ಮ ಕೈಯಲ್ಲಿ ಪುಸ್ತಕ ಇದೆಯೇ? You are trying to get Mr. Chandre Gowda to yield the floor for you,

ಡಾ॥ ಎನ್. ಬಿ. ನಂಜಪ್ಪ.—ಹೌದು, ಈಗ ವಿರೋಧ ಪಕ್ಷದ ನಾಯಕರು ಕಮೀಷನ್ ಆನ್ ಸ್ಟೇಟ್ಸ್ ಫೈನಾನ್ಸ್ ಮಂಡನೆ ಮೇಲೆ ಮಾತನಾಡುತ್ತಾ ಕ್ಲಾರಿಫಿಕೇಷನ್ ಕೇಳಿದರೆಂದು ನಾನು ಭಾವಿಸಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅದರ ಮೇಲೆ ನಾನು ಕಾಮೆಂಟ್ ಮಾಡುವುದಿಲ್ಲ ಇದನ್ನು ಸರಿಪಡಿಸುವುದಕ್ಕೆ ಮತ್ತು ಲಾಭ ಪಡೆದು ಸಹಾಯ ತೆಗೆದುಕೊಳ್ಳುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ಎನ್ನುವುದನ್ನು ತಮ್ಮಿಂದ ತಿಳಿಯಬಯಸುತ್ತೇನೆ. ನಾನು ದೀರ್ಘವಾಗಿ ಹೋಗುವುದಿಲ್ಲ, ಈಗಾಗಲೇ ಸಮಯ ಆಗಿದೆ. ತಮ್ಮ ತೆರಿಗೆ ನೀತಿ ಬಗ್ಗೆ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ತೆರಿಗೆ ನೀತಿ......

ಶ್ರೀ ಕೆ. ಹೆಚ್. ಹನುಮೇಗೌಡ.—ನಿಮ್ಮ ಸಾಧನೆಗಳು ಕರ್ನಾಟಕದ ಇತಿಹಾಸದಲ್ಲಿ ಸೇರಿ ಹೋಗಿವೆ, ಅದನ್ನು ಮರೆತುಬಿಟ್ಟಾರು ಎಂದು ಜ್ಞಾಪಿಸುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಬಹಳ ಇತಿಹಾಸಗಳು ತೇಲಿಹೋಗಿವೆ. ಶತಮಾನಗಳಿಂದ ತೇಲಿ ಹೋಗಿವೆ. ಇದೇನು ಹೊಸದಲ್ಲ. ನಾವೊಬ್ಬರೇ ಪ್ರಬುದ್ಧರು, ಸತ್ಯಸಂಧರು, ಸತ್ಯಹರಿಶ್ಚಂದ್ರರು ಎಂದು ಹೇಳುವುದಕ್ಕೆ ಹೋಗಬೇಡಿ. ನಿಮ್ಮ ಇಂಟಿಗ್ರಿಟಿ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ, ಅದನ್ನು ಪ್ರಶ್ನೆ ಮಾಡುವುದಕ್ಕೆ ಅವಕಾಶ ಕೊಡಬೇಡಿ......

ಶ್ರೀ ಬಿ. ಹೆಚ್. ಬನ್ನಿಕೋಡ್.—ನಮ್ಮ ಹಿಂದಿನ ರಾಜಕೀಯ ಈಗ ಇತಿಹಾಸ ಆಗಿದೆ, ನಿಮ್ಮ ಈಗಿನ ರಾಜಕೀಯವೂ ಸಹ ಮುಂದಿನ ಇತಿಹಾಸವಾಗುತ್ತದೆ ಎಂಬುದನ್ನು ತಾವು ಮರೆಯಬೇಡಿ...... ನಿಮ್ಮ ಇತಿಹಾಸವನ್ನು ಇನ್ನೂ ನೋಡುವುದಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಬಾಟ್ಲಿಂಗ್ ವಿಷಯ ಇದೆಯಲ್ಲ, ಅದನ್ನು ಜ್ಞಾಪಿಸಿ ಕೊಳ್ಳಿ ಎಂದು ಹೇಳಿದರು ಅಷ್ಟೆ.

ಶ್ರೀ ಆರ್. ಎನ್. ನಾಯಕ್.—ಅವರಿಗೆ ಬಾಟ್ಲಿಂಗ್ ಪ್ರಕರಣಗಳನ್ನು ಕೇಳಿ, ಕೇಳಿ ಅವರ ಮನಸ್ಸಿಗೆ ನೋವಾಗುವುದಿಲ್ಲ ಅದು ನಮಗೆ ಗೊತ್ತಿದೆ. ನಾವು ಹೇಳಿದ್ದು ಮುನ್ನೂರು ಕೋಟಿ ಚಿಲ್ಲರೆ ಕಳೆದ ಸಾಲಿಗಿಂತ ಈ ವರ್ಷ ಹೆಚ್ಚು ಅಬಕಾರಿಯಿಂದ ಬಂದಿದೆ. ಇದರ ಬಗ್ಗೆ ನಿಮ್ಮ ಜಸ್ಟಿಫಿಕೇಷನ್ ಇದೆಯೋ, ಇಲ್ಲವೋ. ಹಿಂದೆ ಈ ರೀತಿ ಏಕೆ ಬಂದಿಲ್ಲ. ನಿಮ್ಮ ಅಬಕಾರಿ ನೀತಿಗೆ ಏನು ತೊಂದರೆ ಇತ್ತು. ಈ ರೀತಿ ಕಡಿಮೆ ಆಗುವುದಕ್ಕೆ ಕಾರಣ ಏನು, ಈ ವರ್ಷ ಹೆಚ್ಚು ಬರುವುದಕ್ಕೆ ಕಾರಣ ಏನು ಎಂಬ ಬಗ್ಗೆ ವಿರೋಧ ಪಕ್ಷದ ನಾಯಕರಿಂದ ಕಾಮೆಂಟ್ಸ್ ಕೇಳುವುದಕ್ಕೆ ನಾವು ಕಾತುರರಾಗಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಹಿಂದಿನ ಸರ್ಕಾರ ಏನು ಮಾಡಿತು ಎಂದು ಹೇಳುವುದಕ್ಕೆ ನಾನು ನಿಂತಿಲ್ಲ. ಮುಂದೆ ಏನು ಮಾಡಬೇಕೆಂಬುದನ್ನು ಹೇಳಲು ನಿಂತಿದ್ದೇನೆ. ಹಿಂದಿನ ಸರ್ಕಾರದಲ್ಲಿ ನಾನು ಮಂತ್ರಿ ಆಗಿರಲಿಲ್ಲ. ಆರು ವರ್ಷಗಳ ಕಾಲ ನಾನು ಮಂತ್ರಿ ಆಗಿರಲಿಲ್ಲ. ಈಗಿನ ಸರ್ಕಾರ ಏನು ಮಾಡಿದೆ ಎಂದು ಹೇಳುತ್ತೇನೆ. ನಾನು ಜನರಲ್ ಪ್ರಿನ್ಸಿಪಲ್‌ನ್ನು ಡಿಸ್ಕಸ್ ಮಾಡುತ್ತಾ ಹೇಳಿದ್ದೇನೆ. ಹಿಂದಿನ ಸರ್ಕಾರದ್ದೂ ಹೇಳಬೇಕಿಲ್ಲ. ಮಾನ್ಯ ಗುಂಡೂರಾಯರ ಸರ್ಕಾರದಲ್ಲಿ ಏನಾಗಿದೆ, ಮಾನ್ಯ ದೇವರಾಜ ಅರಸರ ಸರ್ಕಾರದಲ್ಲಿ ಏನಾಗಿದೆ ಎಂಬುದನ್ನೂ ಹೇಳಬೇಕಾಗುತ್ತದೆ. ನಾನು ಈ ರೀತಿಯಗೆ ವಿತಂಡವಾದಕ್ಕೆ ಹೋಗುವುದಿಲ್ಲ. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಹಣಕಾಸಿನ ಸಚಿವರಿ. ಒಂದೆರಡು ಸಲಹೆಗಳನ್ನು ತಮ್ಮ ಮೂಲಕ ಕೊಡುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾದುದ್ದು "Simplification of taxes". ಕರ್ನಾಟಕ ರಾಜ್ಯ ಬಹುಶಃ ಭರತಖಂಡದಲ್ಲೆಲ್ಲಾ ಅತ್ಯಂತ ಹೆಚ್ಚು ತೆರಿಗೆ ಕೊಡತಕ್ಕ ಒಂದು ರಾಜ್ಯ. ಇಲ್ಲಿ ನೀವು ಏನು ಮಾಡಿದ್ದೀರಿ? tax at sale point, tax at purchase point, last point sales tax. ಹೀಗೆ ಬಾಕಿ. ಹಾಕಿ ಒಂದು ತರಹ ಕನ್‌ಫ್ಯೂಷನ್ ಆಗಿದೆ. ಈ ಕನ್‌ಫ್ಯೂಷನ್ ತೆಗೆಸುವುದಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನುವುದನ್ನು ತಮ್ಮಿಂದ ಕೇಳುತ್ತೇನೆ. ಏತಕ್ಕೆಂದರೆ ಲೆವಿ ಆಫ್ ಟ್ಯಾಕ್ಸ್ ಬೇರೆ, ರೇಟ್ ಆಫ್ ಟ್ಯಾಕ್ಸ್ ಬೇರೆ, ಈ ಎರಡರಲ್ಲೂ ಕನ್‌ಫ್ಯೂಷನ್. ಅದುದರಿಂದ ನೀವು ಲೆವಿ ಮಾಡುವಾಗ ಮತ್ತು ರೇಟ್ ನಿಗದಿ ಮಾಡುವಾಗ ಪಕ್ಕದ ರಾಜ್ಯಗಳನ್ನು ನೋಡಿ ಹೋಲಿಕೆ ಮಾಡಿ ನೋಡಿಕೊಂಡು, ನಮ್ಮ ಇಂಡಸ್ಟ್ರೀಸ್ ಇರಲಿ, ಇನ್ನಾವುದೇ ವ್ಯವಹಾರಗಳು ಇರಲಿ, ಅದು ಹೊರ ರಾಜ್ಯಗಳಿಗೆ ಹೋಗದಹಾಗೆ ನಮ್ಮ ತೆರಿಗೆಯನ್ನು ಹೊಂದಿಸಬೇಕು ಅಥವಾ ಸಮೀಕರಿಸ ಬೇಕು. ಇಲ್ಲದಿದ್ದರೆ ಬಹುಶಃ ಹೆಚ್ಚಿನ ಭಾಗದ ವ್ಯವಹಾರ ನಮ್ಮ ರಾಜ್ಯದಿಂದ ಹೊರಕ್ಕೆ ಹೋಗುತ್ತದೆ. ಇದರ ಬಗ್ಗೆ ಸಾಕಷ್ಟು ಇನ್‌ಸ್ಟನ್ಸಸ್ ಇರುವುದು ತಮಗೆ ಗೊತ್ತಿರಬಹುದು. ಆ ವಿಚಾರದಲ್ಲಿ ಎಕ್ಸೈಸ್ ಬಂದಾಗ ನಾನು ಇದು ಹೇಗೆ ಆಗಿದೆ ಎಂದು ಸ್ವಲ್ಪಮಟ್ಟಿಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೊಂದು ಏನೆಂದರೆ ನಾವು ಎಲ್ಲಾ ಪುಸ್ತಕಗಳನ್ನು ಓದಿಕೊಂಡು ಹೋದರೆ, ಯಾವಾಗ ನೋಡಿದರೂ ಅರಿಯರ್ಸ್ ಇರುತ್ತದೆ. ೧೮೫ ಕೋಟಿ, ೨೦೦ ಕೋಟಿ, ೨೧೫ ಕೋಟಿ ಹೀಗೆ ಪ್ರತಿವರ್ಷ ಅರಿಯರ್ಸ್ ಬೆಳೆಯುತ್ತಿದೆ ಇದು ವಸೂಲಾಗದಿರುವ ಲೆಕ್ಕದಲ್ಲಿ ಅರಿಯರ್ಸ್ ಆಗಿ ಉಳಿದಿದೆ. ಇದನ್ನು ಏತಕ್ಕೆ ವಜಾ ಮಾಡಬಾರದು, ಇದನ್ನು ಒಂದು ಸಲ ಅತ್ತಲಾಗೆ ಒಗೆದುಬಿಟ್ಟರೆ ಒಳ್ಳೆಯದು. ನಮ್ಮ ಅಧಿಕಾರಿಗಳ ಕೆಲಸ ಏನಾಗಿದೆ ಎಂದರೆ ಅವರು ಅರಿಯರ್ಸ್ ಹಿಂದೆ ಹುಡುಕಿಕೊಂಡು ಹೋಗುವುದು. ಅದು ಬರುವ ಹಾಗೆ ಇಲ್ಲ, ಇವರು ಬಿಡುವ ಹಾಗೆ ಇಲ್ಲ. ಕೆಲವು ಕೋರ್ಟ್‌ಗಳಲ್ಲಿ ನಿಂತಿದೆ. ಇನ್ನು ಕೆಲವು ಬರಲಾರದ ಸ್ಥಿತಿಗೆ ಹೋಗಿದ್ದಾವೆ. ದಯಮಾಡಿಟ್ಟು ಈ ಹಳೆಯ ಬಾಕಿ ಎಂದು ಇದೆಯಲ್ಲ, ಇದು ಉಂಟು ಎಂದಾಗಲೀ ಅಥವಾ ಇಲ್ಲಾ ಎಂದು ಆಗಲಿ. ಅಥವಾ ವಸೂಲು ಆಗಲಿ, atleast during your period ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ನಿಮ್ಮ ಇಲಾಖೆಯೊಳಗೆ ಒಂದು ಕಂಪ್ಯೂಟರ್ ಇದೆ. ಇದನ್ನು ಹೇಗೆ ಉಪಯೋಗಿಸುತ್ತಾರೆ ಎಂದು ತಿಳಿದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡಿದೆ. ಆದರೆ ಇದು ಕಂಪ್ಯೂಟರ್ ತಿಳಿದುಕೊಳ್ಳುವಷ್ಟೇ ಕಾಂಪ್ಲಿಕೇಟೆಡ್ ಆದುದರಿಂದ, ಬೇಡ ಎಂದು ಬಿಟ್ಟುಬಿಟ್ಟೆ. ಇದರಲ್ಲಿ ಏನಾಗಿದೆ ಎಂದರೆ demand and collection and balance ಇದಕ್ಕೆ ನೀವು ಕಂಪ್ಯೂಟರ್ ಬಳಸುತ್ತೀರಿ. ಈ ಕಂಪ್ಯೂಟರ್ ಕಾಂಪ್ಲಿಕೇಟೆಡ್ ಇದ್ದು, ಅದು ಕೊಡತಕ್ಕಂಥ

ಫಿಗರ್ಸ್ ತಪ್ಪಾಗಿ ಬಿಟ್ಟರೆ the whole system gets eroded. ಆದುದರಿಂದ ಮೊದಲು ಈ ಕಂಪ್ಯೂಟರ್ಸ್ ಅನ್ನು ಸರಿಪಡಿಸಿ, ಅದಕ್ಕೆ ಬೇಕಾದಂಥ ತಜ್ಞರನ್ನು ನೇಮಿಸಿ, ಕ್ವಾಲಿಫೈಡ್ ಪರ್ಸನ್ಸ್ ನೇಮಕ ಮಾಡಿ, ಆಮೇಲೆ ಕಂಪ್ಯೂಟರ್ ಬಳಕೆಯನ್ನು ತಾವು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ ಕಲೆಕ್ಷನ್‌ನಲ್ಲಿ ಒಂದು ಹ್ಯರಾಸ್‌ಮೆಂಟ್ ಇದೆ. particularly commercial tax and more so in the check-post. ಆಮೇಲೆ ನಿಮ್ಮ ಇಂಟಲಿಜೆನ್ಸ್ ವಿಂಗ್ ಇದೆ. It is mainly target oriented. ಎಷ್ಟು ಟ್ಯಾಕ್ಸ್ ಹಾಕಿದ್ದೀರಿ, ಎಷ್ಟು ವಸೂಲಿ ಮಾಡಬೇಕು ಇದನ್ನು ನಿಗದಿ ಮಾಡಿಬಿಡುತ್ತೀರಿ. ಇದನ್ನು ನಿಮ್ಮ ಇಲಾಖೆ ಫಿಕ್ಸ್ ಮಾಡುತ್ತದೆ. ಆ ಗುರಿ ತಲುಪಬೇಕೆನ್ನುವ ಒಂದು ಕಾತರತೆಯಿಂದ ಕೆಲವು ತಪ್ಪುಗಳನ್ನು ಮಾಡುತ್ತಾರೆ. ನನ್ನದೇ ಒಂದು ನಿದರ್ಶನವನ್ನು ತಮಗೆ ಕೊಡುತ್ತೇನೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಚಿಕ್ಕಮಗಳೂರಿನ ತೋಟಕ್ಕೆ ಕಳುಹಿಸುವುದಕ್ಕೆ ಕೆಲವೊಂದು ಫರ್ನೀಚರ್ಸ್ ಕೊಂಡು ಕೊಂಡೆ. ಅವನು ಸೇಲ್ ರಸೀತಿ ಕೊಟ್ಟ. ಆ ರಸೀತಿಯನ್ನು ಕೊಟ್ಟು ಲಾರಿಯಲ್ಲಿ ಹಾಕಿ ಕಳುಹಿಸಿ ಕೊಟ್ಟೆ. ಅಲ್ಲಿ ಹೋದರೆ ಲಾರಿ ಹಿಡಿದರು. ಡ್ರೈವರ್ ಫೋನ್ ಮಾಡಿದ. ಸೇಲ್ ರಸೀತಿ ಇದೆಯಲ್ಲ ಅದನ್ನು ಕೊಟ್ಟು ಬಿಡು ಎಂದೆ. ಆದರೆ ಆ ರಸೀತಿ ಒಳಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಆಫ್ ದಿ ಸೆಲ್ಲರ್ ನಂಬರ್ ಇಲ್ಲ ಎಂದರು. ಅದು ಹೇಗೆ ನಮಗೆ ಗೊತ್ತಾಗಬೇಕು. ರಿಜಿಸ್ಟ್ರೇಷನ್ ಸರ್ಟಿಫಿಕೇಟ್, ನಂಬರ್ ಆ ಬಿಲ್‌ನಲ್ಲಿ ಹಾಕಿದ್ದಾರೋ ಇಲ್ಲವೋ ಎಂಬುದು ನಮಗೆ ಹೇಗೆ ಗೊತ್ತಾಗಬೇಕು. ಆದ್ದರಿಂದ ನಮಗೆ ಗೊತ್ತಿಲ್ಲ, ಈಗ ನಾವು ಕೊಂಡು ಕೊಂಡು ಬಿಟ್ಟಿದ್ದೇವೆ, ಇದನ್ನು ಬೇರೆ ಊರಿಗೆ ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದೇವೆ ಎಂದು ಹೇಳಿದೆ. ಆದರೆ ಫಾರಂ ನಂಬರ್ ೩೯ ಇಲ್ಲ ಎಂದರು. ಇದೆಲ್ಲಾ ಕೊಂಡು ಕೊಂಡು ಹೋದವನ ಕೆಲಸವೋ, ಮಾರಾಟ ಮಾಡಿದವನ ಕೆಲಸವೋ, ಲಾರಿಯಲ್ಲಿ ಸಿಕ್ಕಿಬಿದ್ದ ಡ್ರೈವರ್ ಕೆಲಸವೋ? ಕೊನೆಗೆ ಏನೇನೂ ಪ್ರಯೋಜನ ಆಗಲಿಲ್ಲ. ೨೭೦೦ ರೂಪಾಯಿ ತೆರಿಗೆ ಕಟ್ಟಿ, ಹೋಗು ಎಂದು ಕಳುಹಿಸಿದೆ. ಕೊಂಡುಕೊಂಡ ಬಿಲ್ ಮೇಲೆ ೨೭೦೦ ರೂಪಾಯಿ ಹೆಚ್ಚುವರಿ ತೆರಿಗೆ ಕೊಟ್ಟು ನನ್ನದೇ ಲಾರಿ ಬಿಡಿಸಿದ್ದೇನೆ ಎಂದರೆ ಜನ ಸಾಮಾನ್ಯರ ಸ್ಥಿತಿ ಏನಾಗಬೇಕು. ರಾತ್ರಿ ೨-೩ ಘಂಟೆ ಹೊತ್ತಿನಲ್ಲಿ ಹೀಗೆ ಆಯಿತು. ಬಿಲ್ ಮೇಲೆ ಇದನ್ನು ಹಾಕಬೇಕು. ಫಾರಂ ನಂಬರ್ ೩೯ ಮತ್ತು ರಿಜಿಸ್ಟ್ರೇಷನ್ ನಂಬರ್‌ಗಳನ್ನು ಹಾಕಿ ಎಂದು ಹೇಳಿ, ದಯವಿಟ್ಟು ಗ್ರಾಹಕರಿಗೆ ಈ ರೀತಿ ಆಗತಕ್ಕಂಥ ತೊಂದರೆಯನ್ನು ತಾವು ಗಮನಿಸಿ ಪರಿಹರಿಸತಕ್ಕಂಥ ಒಂದು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಾನು ೨೭೦೦ ರೂಪಾಯಿಗಳನ್ನು ಕೊಟ್ಟ ವಿವರಗಳು ಬೇಕು ಎಂದರೆ ನಾನು ಕೊಡುತ್ತೇನೆ. ಆದರೆ ಈ ಸದನದಲ್ಲಿ ಅದನ್ನು ಕೊಡುವುದು ಬೇಡ. ಮತ್ತೊಂದು ಇಲ್ಲಿ ಏನಾಗಿದೆ ಅಂದರೆ ನಿಮ್ಮ ಚೆಕ್ ಪೋಸ್ಟ್‌ಗಳಿಗೆ ಹೋದರೆ ಅಲ್ಲಿ ನಿಮ್ಮ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ಸ್ ಈ ಚೆಕ್‌ಪೋಸ್ಟ್‌ಗಳಲ್ಲಿ ಜಾನುವಾರುಗಳನ್ನು ಕೂಡಿಹಾಕುವ ದೊಡ್ಡಿಗಳಲ್ಲಿ ಕೆಲಸ ಮಾಡುವಂತೆ ಕೆಲಸ ಮಾಡಬೇಕಾಗಿದೆ. ಈ ಚೆಕ್‌ಪೋಸ್ಟ್‌ಗಳನ್ನು ಯಾವ ಕಾಲದಲ್ಲಿ ಕಟ್ಟಿದರು ಎಂಬುದು ಆ ಭಗವಂತನಿಗೆ ಗೊತ್ತು. ಆ ಅಧಿಕಾರಿಗಳು ಈ ಚೆಕ್ ಪೋಸ್ಟ್‌ಗಳಲ್ಲಿ ಯಾವ ರೀತಿ ಕೆಲಸ ಮಾಡಬೇಕು? ಈ ಚೆಕ್‌ಪೋಸ್ಟ್‌ಗಳಲ್ಲಿ ಲಾರಿಗಳನ್ನು ಹಿಡಿಯುವುದು ಅದಾದ ಮೇಲೆ ಅಲ್ಲಿ ತಿಗಣೆಗಳನ್ನು ಹೊಸಕಿ ಹಾಕುವ ಕೆಲಸ ಮಾಡುವುದು. ಇಂತಹ ಪರಿಸ್ಥಿತಿಯಲ್ಲಿ ಆ ಚೆಕ್ ಪೋಸ್ಟ್‌ಗಳನ್ನು ತಾವು ಇಟ್ಟಿದ್ದೀರಿ. ಆದ್ದರಿಂದ ಈ ಚೆಕ್ ಪೋಸ್ಟ್‌ಗಳನ್ನು ತಾವು ಸ್ವಲ್ಪ ಅಪ್‌ಗ್ರೇಡ್ ಮಾಡಿ ಅವರಿಗೆ ಕೆಲವು ಸೌಲತ್ತುಗಳನ್ನು ಕೊಡಿ. ಅದು ಬಿಟ್ಟು ಅವರು ಚೆಕ್ ಪೋಸ್ಟ್‌ಗಳಲ್ಲಿ ನೊಣ ಹೊಡೆಯುವುದು ತಿಗಣೆ ಹೊಸಕಿ ಹಾಕುವುದು ಈ ಕೆಲಸ ಮಾಡುತ್ತಿದ್ದಾರೆ. ದಯಮಾಡಿ ಅವರನ್ನು ತಾವು ಈ ಪರಿಸ್ಥಿತಿಗೆ ತರಬೇಡಿ. ಇದು ತಮ್ಮ ಕಾಲದಲ್ಲಿ ಆಗಲಿ, ಅವರಿಗೆ ಹೆಚ್ಚು ಸೌಲಭ್ಯಗಳನ್ನು ಕೊಡಿ. ಅವರಿಗೆ ಅಲ್ಲಿ ಟಾಯಿಲೆಟ್ ಸೌಲಭ್ಯ ಕೂಡ ಇಲ್ಲ. ನಮ್ಮ ಲಾರಿ ಹಿಡಿದ ಮೇಲೆ ನಮಗೆ ಅಲ್ಲಿನ ಪರಿಸ್ಥಿತಿ ಗೊತ್ತಾಯಿತು. ಅದಕ್ಕಿಂತ ಮೊದಲು ನಮಗೆ ಅಲ್ಲಿನ ಪರಿಸ್ಥಿತಿ ಗೊತ್ತಿರಲಿಲ್ಲ. ಆಮೇಲೆ ತಾವು ಒಂದು ಮೋಡ್ ಆಫ್ ಟ್ಯಾಕ್ಸೇಷನ್ ಮಾಡಿದ್ದೀರಿ. ಇದು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿ ಇದೆ. ನಮ್ಮ ರಾಜ್ಯದಲ್ಲಿ ಇದು ಒಂದು ರೀತಿ ವಿಭಿನ್ನವಾಗಿ ಇದೆ. ಅದಕ್ಕೆ ಟ್ಯಾಕ್ಸ್ ಸೋರಿಕೆ ಯಾವ ರೀತಿ ಆಗುತ್ತದೆ ಎನ್ನುವುದನ್ನು ಅಭ್ಯಾಸ ಮಾಡುವುದಕ್ಕಾಗಿ ತಾವು ಏನಾದರೂ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕೆಲವು ಜನ ವ್ಯಾಪಾರಸ್ಥರು ನನ್ನನ್ನು ಬಂದು ಭೇಟಿ ಮಾಡಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದ ವಿಚಾರ ಏನೆಂದರೆ, ನಿಮ್ಮ ಇಲಾಖೆಯಲ್ಲಿ ಫಾರಂ ನಂಬರು ೩೯ ಸರಿಯಾಗಿ ಸಪ್ಲೈ ಆಗಿಲ್ಲವೆಂದು ಅವರು ನನಗೆ ಹೇಳಿದರು. ಇಷ್ಟೊಂದು ದೊಡ್ಡ ಇಲಾಖೆ ಸುಮಾರು ೧೨೦೦ ರಿಂದ ೧೩೦೦ ಕೋಟಿ ರೂಪಾಯಿಗಳನ್ನು ವಸೂಲಿ ಮಾಡತಕ್ಕಂಥ ಇಲಾಖೆ, ವಸೂಲಿಗೆ ಬೇಕಾಗಿರತಕ್ಕಂಥ ಫಾರಂ ನಂಬರು ೩೯ ನಿಮ್ಮಲ್ಲಿ ಇಲ್ಲ ಎಂದ,

ಇನ್ನು ನೀವು ಏನು ಕೆಲಸ ಮಾಡುತ್ತೀರಿ? ಇದಕ್ಕೆ ಕಾರಣವೇನು? ಪ್ರಿಂಟಿಂಗ್ ಆಗಿಲ್ಲ ಎಂದು, ನಿಮ್ಮ ಇಲಾಖೆಯಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್ ಇಡಿ. ಅಲ್ಲಿ ಪ್ರಿಂಟ್ ಮಾಡಿ ಫಾರಂ ನಂಬರು ೩೯ ವ್ಯಾಪಾರಸ್ಥರಿಗೆ ಮುಕ್ತವಾಗಿ ಸಿಗುವಂತೆ ವ್ಯವಸ್ಥೆ ಮಾಡಿ. ಪ್ರಿಂಟಿಂಗ್ ಪ್ರೆಸ್ ಒಂದನ್ನು ತೆಗೆದುಕೊಳ್ಳತಕ್ಕಂಥ ಆಲೋಚನೆಯನ್ನು ತಮ್ಮ ಇಲಾಖೆಯವರು ಮಾಡಬೇಕೆಂದು ನಾನು ಹೇಳುತ್ತೇನೆ. To satisfy the needs of the tax payers. ಹಿಂದೆ ಸೇಲ್ಸ್ ಟ್ಯಾಕ್ಸ್ ಅಡ್ವೈಜರಿ ಬೋರ್ಡ್ ಒಂದು ಇತ್ತು. ಅದು ಎಷ್ಟು ಸಾರಿ ಮೀಟ್ ಮಾಡಿದೆ? ಮತ್ತು ಅವರು ಮಾಡಿರತಕ್ಕಂಥ ರೆಕಮೆಂಡೇಶನ್ಸ್ ಏನು? Could you kindly give me details while replying? ನನಗೆ ಗೊತ್ತಿಲ್ಲ ಅವರು ಎಷ್ಟು ಸಾರಿ ಮೀಟ್ ಆಗಿದ್ದಾರೆ? ಎಂದು. ಏನೇನು ರೆಕಮೆಂಡೇಶನ್ಸ್ ಮಾಡಿದ್ದಾರೆ ಎನ್ನುವುದನ್ನು ತಾವು ನಮಗೆ ತಿಳಿಸಬೇಕು. ಮತ್ತೆ ತೆರಿಗೆಗಳಿಗೆ ಸಂಬಂಧಪಟ್ಟಂತೆ ಎನ್‌ಕ್ವೈರಿ ಕಮಿಟಿ ಎಂದು ಒಂದು ಇತ್ತು. ಇದುವರೆವಿಗೂ ತಾವು ಆ ಕಮಿಟಿಯನ್ನು ರಚನೆ ಮಾಡಿಲ್ಲ. ಹಿಂದೆ ಇದ್ದ ಕಮಿಟಿಯನ್ನು ವಜಾ ಮಾಡಿದ್ದೀರಿ. The taxation Enquiry Committee has not been constituted yet. This Committee should be constituted in order to rationalise and simplify the tax. ಈ ಕಾರಣದಿಂದ ಈ ಒಂದು ಸಮಿತಿಯನ್ನು ಸಾಧ್ಯವಾದಷ್ಟು ಬೇಗ ತಾವು ಜಾರಿಗೆ ತನ್ನಿ ಅಥವಾ ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ನಮಗೆ ಲೇಟೆಸ್ಟ್ ಸೇಲ್ಸ್ ಟ್ಯಾಕ್ಸ್ ಪ್ರೊಪೋಜಲ್ಸ್ and ವೇರಿಯಸ್ ಆಸ್‌ಪೆಕ್ಟ್ಸ್ ಬಗ್ಗೆ ಪಬ್ಲಿಕೇಶನ್ಸ್ ಸಿಗುತ್ತಿಲ್ಲ. I don't know how the tax payers will do or the Tax Practioners will do. ಆ ಒಂದು ಪಬ್ಲಿಕೇಶನ್ಸ್, ಸೇಲ್ಸ್ ಟ್ಯಾಕ್ಸ್‌ನ ಮೋಡ್ ಆಫ್ ಮೆಥೆಡ್ಸ್ ವಿಭಿನ್ನವಾದಂಥ ರೀತಿಯಲ್ಲಿ ಹಾಕಿರುವ ಬಗ್ಗೆ ನೋಟಿಫಿಕೇಶನ್ ಆಗಿ ಹೊರಗಡೆ ಬಂದಿಲ್ಲ. ದಯವಿಟ್ಟು ಅದನ್ನು ಮಾಡಬೇಕು. ಮತ್ತೆ ಹಿಂದಿನ ಸರ್ಕಾರದವರು ಒಂದು ಸೇಲ್ಸ್ ಟ್ಯಾಕ್ಸ್‌ಗೆ ಅಪೆಲೇಟ್ ಟ್ರಿಬ್ಯೂನಲ್ ಮಾಡಬೇಕೆಂದು ಹೇಳಿ ಅವರು ಈ ಕೇಸಸ್‌ನ್ನು ತೀರ್ಮಾನ ಮಾಡಬೇಕೆಂದು ಆಲೋಚನೆ ಮಾಡಿದ್ದು ನನಗೆ ನೆನಪು ಇದೆ. ಅಂತಹ ಒಂದು ಟ್ರಿಬ್ಯೂನಲ್‌ನ್ನು ತಾವು ರಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? Otherwise, speedy disposal of the cases become very very impossible almost. ಮತ್ತೆ, ಈ ಪ್ರೊಫೆಷನಲ್ ಟ್ಯಾಕ್ಸ್ ಕಲೆಕ್ಷನ್‌ಗಿಂತ here identification is important ಇದನ್ನು ಐಡೆಂಟಿಫಿಕೇಷನ್ ಮಾಡುವುದಕ್ಕೆ ಬೇಕಾಗಿರತಕ್ಕಂಥ ಅಧಿಕಾರಿಗಳ ಕೊರತೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಕೊರತೆ ಇರುವುದರಿಂದ ಅಧಿಕಾರಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಹಾಕಿ ತುಂಬಿಕೊಡಬೇಕು. ಇನ್ನು ಎಂಟ್ರಿ ಟ್ಯಾಕ್ಸ್‌ನಲ್ಲೂ there is lot of evasion.

(SRI G. S. ACHAR IN THE CHAIR)

Sometimes I feel like suggesting this Government to abolish entry tax and introduce octroi again. ಆಕ್ಟ್ರಾಯಿ ತೆಗೆದಿದ್ದಕ್ಕೆ ಒಂದೇ ಒಂದು ಕಾರಣ ಏನು? ಟ್ರಾನ್ಸ್‌ಪೋರ್ಟ್ ವೆಹಿಕಲ್ಸ್ ಏನು ಹೋಗುತ್ತಾವೋ, ಅಲ್ಲಿ ಹೋಗತಕ್ಕಂಥ ವಾಹನಗಳು ಹತ್ತಾರು ಕಡೆ ನಿಲ್ಲಸಬೇಕು, ಅದರಿಂದ ತೊಂದರೆಯಾಗುತ್ತದೆಂದು. ಈಗ ಕಮರ್ಷಿಯಲ್ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳುವ ಕಡೆ ಲಾರಿಗಳು ನಿಲ್ಲಲೇಬೇಕು. ಇದರಿಂದ ಪುರಸಭೆಗಳಿಗೆ ಬರತಕ್ಕಂಥ ಆದಾಯ ಸಂಪೂರ್ಣವಾಗಿ ನಿಂತುಹೋಯಿತು. ಈಗ ನೀವು ಕೊಡುವ ಭಿಕ್ಷೆ ಮೇಲೆ ಪುರಸಭೆಗಳು ಕೆಲಸ ಮಾಡಬೇಕು. ಆಕ್ಟ್ರಾಯಿ ತೆರಿಗೆ ಬಗ್ಗೆ ಲೆಕ್ಕ ಇಲ್ಲ. ಆ ಕಾರಣ ಇದನ್ನು ಸ್ವಲ್ಪಮಟ್ಟಿಗೆ ತಾವು ಗಮನಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತಾ, ಮತ್ತೆ ಎಂಟರ್‌ಟೇನ್ ತೆರಿಗೆ ಏನಿದೆ. ಇದರಿಂದ ಸಿನಿಮಾ ಓನರ್‌ಗಳಿಗೆ ವಿಪರೀತವಾಗಿದೆ. ಇದರಲ್ಲಿ ರಿಡಕ್ಷನ್ ಮಾಡಬೇಕೆಂದು ನನಗೆ ಕೆಲವರು ಮನವಿ ಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕಷ್ಟೇ ನಾನು ಪ್ರಯತ್ನ ಮಾಡುತ್ತೇನೆ. ಮುಖ್ಯವಾಗಿ ಇನ್ನು ಎರಡು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು, ಆಧಾರ ಪತ್ರಗಳನ್ನು ನೋಂದಾಣಿ ಮಾಡಿಕೊಳ್ಳುವುದಕ್ಕೆ ವಿಧಿಸುವ ಶುಲ್ಕ. ಸ್ವಾಮಿ, ಹಿಂದಿನ ಸಾರಿ ಸ್ಟ್ಯಾಂಪ್ ಡ್ಯೂಟಿಯಲ್ಲಿ ೧೫ ಸಾವಿರದವರೆಗೆ ವಿನಾಯಿತಿ ಇತ್ತು. ೧೫ ಸಾವಿರದ ಮೇಲೆ ಸಹಕಾರಿ ಸಂಘಗಳಲ್ಲಿ ಸಾಲ ಮಾಡತಕ್ಕಂಥ ರೈತನಿಗೆ ಸ್ಟ್ಯಾಂಪ್ ಡ್ಯೂಟಿಯಲ್ಲಿ ೧೫ ಸಾವಿರದವರೆಗೆ ವಿನಾಯಿತಿ ಇತ್ತು. ೧೫ ಸಾವಿರಕ್ಕೆ ಮೇಲ್ಪಟ್ಟ ಸಾಲಕ್ಕೆ ಅರ್ಧ ರಿಯಾಯಿತಿ ಇತ್ತು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ, ೩೧ನೇ ಮಾರ್ಚ್ ೧೯೯೦ಕ್ಕೆ ಇದನ್ನು ಕೊಟ್ಟಿತ್ತು. ೮ನೇ ಪಂಚವಾರ್ಷಿಕ ಯೋಜನೆಯನ್ನು ಈಗ ನಾವು ಪ್ರಾರಂಭ

ಮಾಡುತ್ತಿದ್ದೇವೆ. ಈ ಅವಧಿಗೂ ವಿಸ್ತರಿಸಿ ಕೊಡಿ. ನಿಮ್ಮ ಏನು ೧೫ ಸಾವಿರ ಇದೆಯಲ್ಲಾ, ಒಬ್ಬ ರೈತ ಪಂಪುಸೆಟ್ ಹಾಕಿ ೨ ಎಕರೆಗೆ ನೀರಾವರಿ ಮಾಡಬೇಕಾದರೆ ೪೫ ರಿಂದ ೫೦ ಸಾವಿರ ರೂಪಾಯಿ ಬೇಕು ೪೫ ರಿಂದ ೫೦ ಸಾವಿರ ರೂಪಾಯಿ ಸಾಲಕ್ಕೆ ಸ್ಟ್ಯಾಂಪ್ ಡ್ಯೂಟಿ ನನಗೆ ತಿಳಿದ ಹಾಗೆ ೪ ಅಥವಾ ೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದಕಾರಣ ಆಧಾರ ಪತ್ರದ ನೋಂದಣಿ ಶುಲ್ಕ ಬೇರೆ ರಾಜ್ಯಗಳಲ್ಲಿ ಏನಿದೆ ಎಂಬುದನ್ನು ತರಿಸಿ ನಾನು ನೋಡಿದೆ. ಆಂಧ್ರಪ್ರದೇಶದಲ್ಲಿ, ತಮಿಳುನಾಡಿನಲ್ಲಿ ಮತ್ತು ಇನ್ನೂ ಕೆಲವು ರಾಜ್ಯಗಳಲ್ಲಿ ೫೦ ಸಾವಿರದವರೆಗೆ ಸ್ಟ್ಯಾಂಪ್ ಡ್ಯೂಟಿ ಇಲ್ಲ. ಇನ್ನು ೬-೭ ರಾಜ್ಯಗಳಲ್ಲಿ ಸಂಪೂರ್ಣ ವಿನಾಯಿತಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ೧೫ ಸಾವಿರದವರೆಗೆ ವಿನಾಯಿತಿ ಹಿಂದೆ ಇತ್ತು. ೧೫ ಸಾವಿರಕ್ಕೆ ಮೇಲ್ಪಟ್ಟ ಸಾಲಕ್ಕೆ ಅರ್ಧ ರಿಯಾಯಿತಿ ಇತ್ತು. ಈಗ ತಾವು ೧೫ ಸಾವಿರದವರೆಗೆ ವಿನಾಯಿತಿ ಎಂದು ತೋರಿಸಿದ್ದೀರಿ. ಅದರ ಮೇಲೆ ಸಾಲ ಮಾಡಿದರೆ ಪೂರ್ತಿ ಸ್ಟ್ಯಾಂಪ್ ಡ್ಯೂಟಿ ಕೊಡಬೇಕು. ಮೊದಲು ೬ ಪರ್ಸೆಂಟ್ ಇತ್ತು, ಈಗ ಅದನ್ನು ೫ ಪರ್ಸೆಂಟ್ ಮಾಡಿದ್ದೀರಿ. ಹೀಗಾದರೆ ನಾವು ಯಾವ ದಿಸೆಯಲ್ಲಿ, ಯಾವ ದಿಕ್ಕಿನಲ್ಲಿ ಗ್ರಾಮೀಣ ಜನರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ ಎನ್ನುವುದನ್ನು ಇದು ತೋರಿಸುತ್ತದೆ, ನಮ್ಮ ರಿಯಾಯಿತಿಗಳನ್ನು ಅಥವಾ ಆರ್ಥಿಕವಾಗಿ ಆಲೋಚನೆ ಮಾಡುವಾಗ ಇದು ಪ್ರತಿಧ್ವನಿತವಾಗಬೇಕು, ೧ನೇ ಏಪ್ರಿಲ್ ೧೯೮೦ ರಿಂದ ೬ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿದೆ. ಈಗಾಗಲೇ ಸಹಕಾರ ಸಂಘ ಸಂಸ್ಥೆಗಳು ಸತ್ತು ಹೋಗುವ ಪರಿಸ್ಥಿತಿಗೆ ಬಂದಿವೆ. ಅವುಗಳು ಮತ್ತಷ್ಟು ಸಾಯುವುದಕ್ಕೆ ತೊಂದರೆ ಕೊಡಬೇಡಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಒಂದು ಮುಖ್ಯವಾದ ವಿಚಾರ, ೧೯೮೮ರಲ್ಲಿ ಕೇಂದ್ರ ಸರ್ಕಾರ ಬಜೆಟ್‌ನ್ನು ಮಂಡನೆ ಮಾಡುತ್ತಾ ಒಂದು ಹೊಸ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಗ್ರಾಮೀಣ ಪ್ರದೇಶದ ಜನಕ್ಕೆ ವಸತಿ ಕಟ್ಟಿಕೊಡಲು ರಾಷ್ಟ್ರೀಯ ಮಟ್ಟದಲ್ಲಿ ಒಂದು ಗ್ರಾಮೀಣ ಗೃಹ ನಿರ್ಮಾಣ ಬ್ಯಾಂಕ್ ಎಂದು ಮಾಡಿದರು. ನಗರಗಳಲ್ಲಿ ಮನೆಕಟ್ಟಿಕೊಳ್ಳಲು ಬೇಕಾದಷ್ಟು ಸೊಸೈಟಿಗಳು ಹಾಗೂ ಬೇರೆ ಬೇರೆ ನಿಗಮಗಳಿಂದ ಹಣಕಾಸು ದೊರೆಯುತ್ತದೆ. ಆದರೆ ಗ್ರಾಮೀಣ ಪ್ರದೇಶದ ರೈತರಿಗೆ ಮನೆ ಕಟ್ಟಿಕೊಡಲು ಸಹಾಯ ಮಾಡುವಂತಹ ಯಾವ ಸಂಘ ಸಂಸ್ಥೆಗಳು ನನ್ನ ಗಮನಕ್ಕೆ ಬಂದಿಲ್ಲ. ನಿಮಗೆ ತಿಳಿದಿದ್ದರೆ ಅದನ್ನು ತಿಳಿಸಿ. ಈ ಕಾರಣದಿಂದ ಕೇಂದ್ರ ಸರ್ಕಾರ ೧೯೮೮ರ ಆಯವ್ಯಯದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಗ್ರಾಮೀಣ ಬ್ಯಾಂಕನ್ನು ಸ್ಥಾಪನೆ ಮಾಡಿತು. ಇದನ್ನು ಸ್ಥಾಪನೆ ಮಾಡಿದಾಗ ಏಜೆನ್ಸಿಗಳು ಯಾವುದು ಎಂಬುದನ್ನು ನಿರ್ಧರಿಸಿದರು. ಯಾವ ಏಜೆನ್ಸಿ ಮೂಲಕ ಈ ಹಣ ಕೊಡುವುದು ಎಂಬುದನ್ನು ನಿರ್ಧಾರ ಮಾಡಿದರು. ಭೂ ಅಭಿವೃದ್ಧಿ ಬ್ಯಾಂಕುಗಳು ರಾಜ್ಯದ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಇರುವುದರಿಂದ ಆ ಘಟಕ ಏನಿದೆ, ಅದರ ಮೂಲಕ ಗ್ರಾಮೀಣ ಜನರಿಗೆ ಈ ಸೌಲಭ್ಯವನ್ನು ಒದಗಿಸಬೇಕೆಂದು ನಿರ್ಧರಿಸಲಾಗಿದೆ. ಭೂ ಅಭಿವೃದ್ಧಿ ಬ್ಯಾಂಕ್ ಮೂಲಕ ಗ್ರಾಮೀಣ ಜನರಿಗೆ ಇದರ ಲಾಭವನ್ನು ಕೊಡತಕ್ಕ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ ನೀವು ಏನು ಒಂದು ರೂಪಾಯಿಯನ್ನೂ ಕೊಡಬೇಕಾಗಿಲ್ಲ. ಕೇಂದ್ರ ಸರ್ಕಾರದವರೇ ಕೊಡುತ್ತಾರೆ ಉಳಿದಿದ್ದನ್ನು ನಬಾರ್ಡ್‌ನವರು ಕೊಡುತ್ತಾರೆ. ನಿಮ್ಮ ಸಹಾಯ ಎಲ್ಲಿ ಬೇಕು ಅಂದರೆ ಇದಕ್ಕೆ ನಿಮ್ಮ ಗ್ಯಾರಂಟಿ ಬೇಕಾಗುತ್ತದೆ. ಕರ್ನಾಟಕ ರಾಜ್ಯ ಸರ್ಕಾರ ಹೀಗೆ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಕೊಡತಕ್ಕ ಗೃಹ ನಿರ್ಮಾಣ ಯೋಜನೆಯ ಸಾಲಕ್ಕೆ ಅಂದರೆ ಅದರ ವಸೂಲಾತಿ ಬಗ್ಗೆ ನಿಮ್ಮ ಗ್ಯಾರಂಟಿ ಇದ್ದರೆ ಸಾಕು, ಆದರೆ ಇಷ್ಟು ಕೆಲಸ ನಿಮಗೆ ಮಾಡಲು ಸಾಧ್ಯವಾಗಿಲ್ಲ. ಏತಕ್ಕೆ ಎಂದು ನಮಗೆ ಗೊತ್ತಿಲ್ಲ. ರಾಷ್ಟ್ರೀಯ ಗೃಹ ನಿರ್ಮಾಣ ಯೋಜನೆ ಏನಿದೆ, ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಇದನ್ನು ಮೊದಲ ಬಾರಿಗೆ ಜಾರಿಗೆ ತಂದವರು ಯಾರು ಎಂದರೆ ನಮ್ಮ ರಾಜ್ಯ ಸರ್ಕಾರ. ಈ ಯೋಜನೆಯನ್ನು ೧೭ನೇ ಜುಲೈ ೧೯೮೯ರಲ್ಲಿ ಹಿಂದಿನ ರಾಜ್ಯಪಾಲರಾದ ಶ್ರೀ ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಉದ್ಘಾಟನೆ ನಡೆಯಿತು. ಮೂರೂವರೆ ಕೋಟಿ ರೂಪಾಯಿವರೆಗೆ ಅಂದಾಜು ಸಾಲ ಸಹ ಕೊಟ್ಟರು. ಈಗ ತಾವು ಗ್ಯಾರಂಟಿ ಕೊಡುತ್ತಿಲ್ಲವೆಂದು ಅದು ನಿಂತು ಹೋಯಿತು. ತತ್ರಾಪಿ ಕೇರಳ ಸರ್ಕಾರ ಸುಮಾರು ೧೮ ಕೋಟಿ ರೂಪಾಯಿಯಷ್ಟು ಗ್ರಾಮೀಣ ಜನರಿಗೆ ಮನೆ ಕಟ್ಟುವುದಕ್ಕೆ ಸಾಲ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ, ಈ ಒಂದು ಯೋಜನೆಯ ಮೂಲಕ ಲಾಭವನ್ನು ಪಡೆದುಕೊಂಡಿದೆ. ಈ ಸಾರ್ತಿ ೨೫ ಕೋಟಿ ರೂಪಾಯಿಯನ್ನು ಕೇಳಿದ್ದಾರೆಂದು ತಿಳಿದುಬಂದಿದೆ. ನಮ್ಮ ರಾಜ್ಯದಲ್ಲೂ ಕೂಡ ಕನಿಷ್ಠ ೧೦ ಕೋಟಿ ರೂಪಾಯಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಡಲು ಸಾಧ್ಯವಿದೆ. ಆದುದರಿಂದ ಈ ಯೋಜನೆಯಡಿಯಲ್ಲಿ ಸಾಲ ಪತ್ರಕ್ಕಾಗಿ ರಾಜ್ಯ ಸರ್ಕಾರ ಖಾತ್ರಿ ಕೊಡತಕ್ಕದ್ದು ನೆನೆಗುದಿಯಲ್ಲಿ ಹಾಗೆಯೇ ಏನು ಉಳಿದಿದೆ ಅದನ್ನು ಕೊಟ್ಟು ಗ್ರಾಮೀಣ ಜನರು ಮನೆಕಟ್ಟಿಕೊಳ್ಳಲು ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಸಹಕಾರಿ ಸಂಸ್ಥೆಗಳ ಸಾಲದ ಬಗ್ಗೆ ಹೇಳಬೇಕಾಗಿದೆ. ಇದು ಕೃಷಿ ಸಚಿವರನ್ನು ಬಿಟ್ಟು ಸಹಕಾರಿ ಸಚಿವರನ್ನು ಬಿಟ್ಟು, ನಮ್ಮ ಕುತ್ತಿಗೆಗೆ ಬಂದು ಬಿದ್ದಿದೆ. ಅವರು ಏನು ಹೇಳುತ್ತಾರೆಂದರೆ ನಾವೇನು ಮಾಡುವುದು. ನೀವು ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಅರ್ಧ ಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಕೃಷಿ ಸಚಿವರು ಒಂದು ಕಡೆ ತಪ್ಪಿಸಿಕೊಂಡರೆ ಸಹಕಾರಿ ಸಚಿವರು ಮತ್ತೊಂದು ಕಡೆ ತಪ್ಪಿಸಿಕೊಂಡಿದ್ದಾರೆ. ತಾವು ಏನು ಹೇಳುತ್ತೀರಿ ಎಂದರೆ, ಕೇಂದ್ರ ಸರ್ಕಾರದವರು ಕೊಟ್ಟರೆ ಕೊಡುತ್ತೇವೆಂದು. ಇದು ಯಾವ ರೀತಿಯಾಗಿ ಎಂದರೆ "ಕಲ್ಲಪ್ಪ ಗುಂಡಪ್ಪ ಸೇರಿ ಮೆಣಸಪ್ಪ ಪುಡಿಯಾದ ಎಂದು ನಮ್ಮಲ್ಲಿ ಒಂದು ಗಾದೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ. ಇವತ್ತು ಕೇಂದ್ರ ಸರ್ಕಾರದ ಯೋಜನೆಯಂತೆ ರೈತರ ಸಾಲ ಮನ್ನಾ ಮಾಡುವ ಕಾರ್ಯಕ್ರಮ ಏನು ಇದೆ. ಇದರ ಪ್ರಕಾರ ನಮ್ಮ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಬರುತ್ತದೆ ಎಂದು ನಾನು ಹಿಂದೆಯೇ ಕೇಳಿದ್ದೇನೆ. ಶೇಕಡ ೫೦ ರಷ್ಟು ತುಂಬಿ ಕೊಡಬೇಕೆಂದು ಹೇಳಿದರೂ ಕೂಡ ನನ್ನ ಪ್ರಕಾರ ೨೫ ರಿಂದ ೩೦ ಕೋಟಿ ರೂಪಾಯಿ ಭಾರ ಸರ್ಕಾರಕ್ಕೆ ಬೀಳುವುದಿಲ್ಲ. ಈಗ ಇರುವಂತಹ ಯೋಜನೆಯ ಪ್ರಕಾರ ಶೇಕಡ ೫ ರಷ್ಟು ರೈತರಿಗೂ ಈ ಪ್ರಯೋಜನ ಸಿಕ್ಕುವುದಿಲ್ಲ. ನಮ್ಮ ರಾಜ್ಯ ಇದಕ್ಕೆ ಸಂಬಂಧಪಟ್ಟಹಾಗೆ ಪ್ರಪೋಸಲ್ ಅನ್ನು ಇದುವರೆಗೆ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿಲ್ಲ. ಕೇಂದ್ರ ಸರ್ಕಾರ ೨ನೇ ಅಕ್ಟೋಬರ್ ೧೯೮೯ ರಲ್ಲಿ ಯಾರು ಯಾರು ಡಿಫಾಲ್ಟರ್ಸ್ ಆಗಿದ್ದಾರೆ. ಅಂತಹವರಿಗೆ ಪ್ರಯೋಜನ ಆಗುತ್ತದೆಂದು ಹೇಳುವುದರಿಂದ, ಇದರಿಂದ ಯಾರಿಗೂ ಹೆಚ್ಚು ಪ್ರಯೋಜನವಾಗುವುದಿಲ್ಲ. ಇದರಿಂದ ಈ ರಾಜ್ಯದ ರೈತರು ತಬ್ಬಲಿಗಳಾಗುವ ಪರಿಸ್ಥಿತಿ ಒದಗಿದೆ. ಈ ಬಗ್ಗೆ ತಾವು ಬಹಳ ಹೆಚ್ಚಿನ ರೀತಿಯಲ್ಲಿ ಸರ್ಕಾರಕ್ಕೆ ತಿಳಿಸಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ವಿಚಾರದಲ್ಲಿ ನಮಗೆ ನಿಮಗೆ ಕನ್‌ಫ್ಯೂಸ್ ಆಗುವುದು ಬೇಡ, ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಕೇಂದ್ರದ ಹಣಕಾಸಿನ ಸಚಿವರು ಒಂದು ಟೆಲಿಗ್ರಾಂ ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ ಏನಿದೆ ಎಂಬುವನ್ನು ಹೇಳುತ್ತೇನೆ.

Let me quote:

"I must express my happiness at our discussions at the last week meeting of the National Development Council regarding the debt relief scheme for the benefit of farmers and artisans financed by other co-operative credit institutions. I had given an assurance on that occasion that the Govt. of India would find a reasonable solution to the difficulty posed by some Chief Ministers that they would be in a position to immediately provide funds to meet their share of the support needed by the co-operative credit institutions.

As you are well aware, the scheme of debt relief financed by the Central Government provides that the cost of the debt relief to borrowers from the public sector banks and the Regional Rural Banks will be fully met by the Govt. of India.

As regards borrowers of co-operative credit institutions, I have already announced that 50% of the cost involved in the debt relief in accordance with the Central Scheme would be provided as grant by the Central Government..."

" as grant by the Central Government ", we have to note that.

" .. would be provided as grant by the Central Government. As announced by me at the NDC meeting, I have further discussions on the matter with the Reserve Bank which has agreed that inview of the urgent need to finance the pending khariff operations, the NABARD will be requested to finance and relevant legal provisions with a loan to the State co-operative banks concerned. this loan will cover the order of support expected from the State Government concerned under the Central Scheme *i. e.*, 50% of the debt relief by the co-operatives as per the Central Scheme: The loan will be repaid with concessional interest of 10% and so on and soforth.."

ಈಗ ಅರ್ಧ ಗ್ರ್ಯಾಂಟ್‌ನಲ್ಲಿ ಕೊಡುತ್ತೇವೆ, ಉಳಿದರ್ಧವನ್ನು ಸಾಲದ ರೂಪದಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಈ ಸ್ಕೀಮ್‌ನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಅಥಾರಿಟಿ ರಾಜ್ಯಸರಕಾರದ್ದು ಇದೆ. ಅದಕ್ಕೆ ಬೇಕಾದಂಥ ಮೆಟೀರಿಯಲ್ಸ್ ಕೇಂದ್ರ ಸರಕಾರ ಹಾಕಿರತಕ್ಕಂಥ ನಿಯಮಗಳ ವ್ಯಾಪ್ತಿಯೊಳಗೆ ಆ ಒಂದು ಅಳತೆಗೋಲಿನ ಪ್ರಕಾರ ಎಷ್ಟು ಜನ ರೈತರು ಆದರಲ್ಲಿ ಬರುತ್ತಾರೆ ಎಂಬುದನ್ನು ನಿಗದಿ ಮಾಡಿ, ಈ ಸರಕಾರ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಏನಾದರೂ ಒಂದು ನಿರ್ಧಾರವನ್ನು ತಮ್ಮ ಉತ್ತರದಲ್ಲಿ ಹೇಳಿ, ಸ್ಥಗಿತಗೊಂಡಿರತಕ್ಕಂಥ ಸರಕಾರ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಏನಾದರೂ ಒಂದು ಮಾರ್ಗದರ್ಶನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಟ್ಯಾಕ್ಸೇಶನ್ ವಿಚಾರದಲ್ಲಿ ಹೇಳುವುದಾದರೆ, ಅಬಕಾರಿ ವಿಚಾರದಲ್ಲಿ ನೀವು ಏನು ಹೇಳುತ್ತೀರಿ ? ಎಂದು ನನ್ನನ್ನು ಪ್ರಶ್ನಿಸಿದ್ದರು. ನಾನು ಏನ್ನನ್ನೂ ಹೇಳ ಬಾರದು ಎಂದು ಇದ್ದೆ. ಕಾರಣ ಏನೆಂದರೆ, ಮಾನ್ಯ ಹಣಕಾಸಿನ ಸಚಿವರು ಏನೋ ಎಂದು ಸಂಬಂಧ ಕಲ್ಪಿಸಿಬಿಟ್ಟಿದ್ದರು. ಆದುದರಿಂದ ಆ ಸಂಬಂಧವಾಗಿ ನಾನು ಏನೂ ಹೇಳ ಬಾರದು ಎಂದು ಇದ್ದೆ. ನಮ್ಮ ಮತ್ತು ಅಬಕಾರಿಯ ಸಂಬಂಧ ಬಹಳ ನಿಕಟ. ಆದರೆ ನಿಮಗೆ ಆ ಸಂಬಂಧ ಇಲ್ಲ ಮತ್ತು ಇರಬೇಕೆಂದು ನಾನು ಅಪೇಕ್ಷೆಯನ್ನು ಕೂಡ ಮಾಡುವುದಿಲ್ಲ. ಆ ಸಂಬಂಧ ತೆರಿಗೆ ರೂಪದಾಗಿರಲಿ, ಅಲ್ಲಿರತಕ್ಕಂಥ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವಂತಾದ್ದಾಗಿರಲಿ ಅಥವಾ ಉಳಿದ ಯಾವುವೂ ಅರ್ಥಾರ್ಥ ಸಂಬಂಧ ನನಗೆ ಇಲ್ಲ. ಅದರೂ ಕೂಡ ಈ ಜಾಗದಲ್ಲಿ ಕುಳಿತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮಾಡಬೇಕಾದಂಥ ಕೆಲಸವನ್ನು ಮಾಡುವುದಕ್ಕಾಗಿ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ, ೧೯೪೮ರಲ್ಲಿ ಹಳೆಯ ಮೈಸೂರು ರಾಜ್ಯದ ಪ್ರಮುಖ ಅಬಕಾರಿ ಆದಾಯವು ೧೫ ಲಕ್ಷ ರೂಪಾಯಿಗಳು ಮಾತ್ರ. ಈಗಲೂ ಈ ಸರಕಾರಕ್ಕೆ ಪ್ರಾಮುಖ್ಯವಾದಂಥ ಒಂದು ಉತ್ಪತ್ತಿಯು ಎಲ್ಲಿಂದ ಬರುತ್ತದೆ ಎಂದು ಕೇಳಿದರೆ ಆದಕ್ಕೆ

೧೨,೩೦ ಪಿ.ಎಂ.

ಉತ್ತರ ಎಕ್ಸೈಸ್‌ಬಾಬಿನಿಂದ ಬರುತ್ತದೆ. ಆದರೆ ದುರ್ದೈವ, ಚಿನ್ನದ ಮೊಟ್ಟೆ ಇಡುವ ಬಾತು ಕೋಳಿ ಕತ್ತು ಕತ್ತರಿಸುವ ಪ್ರಯತ್ನ ನಡೆದಿದೆ ? ಏಕೆ ? ಒಂದು ರಾಜ್ಯದ ಅರ್ಥಮಂತ್ರಿಗಳು ಅಟ್‌ಲೀಸ್ಟ್ ವೇಲ್ಯೂಟಕ್ಕೆ ಆದರೂ ಇಡೀ ರಾಜ್ಯದ ವ್ಯವಹಾರ ಮಾಡುತ್ತಾರೆಂಬ ಭಾವನೆ ಬರಬೇಕು. ಎಲ್ಲಿಯೋ ಒಂದು ತೂಕ ಯಾರದೋ ಪರವಾಗಿದ್ದಾರೆ ಅಥವಾ ಯಾರಿಗೋ ವಿರೋಧವಾಗಿ ದ್ದಾರೆಂಬ ಅಭಿಪ್ರಾಯ ಬರಬಾರದು. ಆದರೆ ದುರ್ದೈವದಿಂದ ಇಂತಹ ಅಭಿಪ್ರಾಯ ರಾಜ್ಯದಲ್ಲಿ ಬಂತು. ಈಗ ಹೆಂಡ ಇಳಿಸುವುದನ್ನು ನಿಲ್ಲಿಸಿಬಿಟ್ಟಿದ್ದೀರಿ ಇದರಿಂದ ಸುಮಾರು ೬೦ ಸಾವಿರ ಜನ ಮೂರ್ತೆದಾರರು ಕರ್ನಾಟಕದಲ್ಲಿ ಅಥವಾ ದಕ್ಷಿಣ ಕನ್ನಡದಲ್ಲಿ ಉದ್ಯೋಗರಹಿತರಾಗಿದ್ದಾರೆ. ನಿರುದ್ಯೋಗಿಗಳಾಗಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆ ಒಂದರಲೇ ೬ ಸಾವಿರ ಜನ ನಿರುದ್ಯೋಗಿಗಳಾಗಿದ್ದಾರೆ ಎಂದು ಇಟ್ಟುಕೊಳ್ಳೋಣ,

ಶ್ರೀ ಎ. ರುಕ್ಮಯ್ಯ ಪೂಜಾರಿ.—೬ ಸಾವಿರ ಜನ ಮೂರ್ತೇದಾರರ ಹಿಂದೆ ಅವರನ್ನು ನಂಬಿದ ವರು ಇನ್ನೂ ಹಲವಾರು ಜನ ಇದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮೂರ್ತೆದಾರರು ನಿರುದ್ಯೋಗಿಗಳಾದರು ಎಂದರೆ ಅರ್ಥ ಸಚಿವರು ನಗುತ್ತಾರೆ ಏನೋ ಸಂಬಂಧ ಇರಬೇಕು ಅವರಿಂದ ನಿಮ್ಮ ಆರೋಗ್ಯ ಕೆಡುತ್ತಿರಲಿಲ್ಲ. ಆರೋಗ್ಯ ಕೆಡುತ್ತಾ ಇದ್ದುದು ಬೆಂಗಳೂರಿನಲ್ಲಿದ್ದಾರಲ್ಲ ಸಾರಾಯಿ ತಯಾರು ಮಾಡುವ ಜನ ಅವರಿಂದ ಕೆಡುತ್ತಿದೆ. ಆದರೆ ಸೇಂದಿಯಿಂದ ಕೆಡುತ್ತಾ ಇರಲಿಲ್ಲ. ಆದರೆ ಸೇಂದಿಯಿಂದ ಕೆಡುತ್ತಾ ಇತ್ತೆಂದು ಹೇಳಿ ದಕ್ಷಿಣ ಕನ್ನಡ ಜಿಲ್ಲೆಯ ಹೊರೆತುಪಡಿಸಿ ಪ್ರಚಾರ ಮಾಡಿದ್ದುದು ನಿಜ ಆದರೆ ದುರ್ದೈವ ಈ ತೀರ್ಮಾನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯೂ ಬಲಿಯಾಗ ಬೇಕಾಯಿತು, ಈಗ ಐ. ಎಂ ಎಫ್. ಎಲ್. ಅನ್ನು ಉತ್ಪಾದನೆ ಮಾಡುವಂತಹ ಸುಮಾರು ೨೭ಡಿಸ್ಟಿಲರಿಗಳು ನಮ್ಮಲ್ಲಿ ಇವೆ, ಇವುಗಳಲ್ಲಿ ೧೦ ಸಾವಿರ ಜನ ಕೆಲಸ ಮಾಡುತ್ತಾರೆ. ನಾನು ಅವರ ಪತ್ರಿಕಾ ಹೇಳಿಕೆ ನೋಡಿದೆ. ಕರ್ನಾಟಕ ಬ್ರಿವರ್ಸ್ ಆಂಡ್ ಡಿಸ್ಟಿಲರ್ಸ್ ಅಸೋಷಿಯೇಷನ್ ಅವರು ಸುಮಾರು ಹತ್ತು ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ..—ಈ ಡಿಸ್ಟಿಲರಿಯವರಿಗೂ ನಿಮಗೂ ಏನೇನು ಸಂಬಂಧ ಈಗ ಇದೆ, ಹಿಂದೆ ಏನೇನಿತ್ತೆಂದು ನನಗೆ ಗೊತ್ತಿದೆ. ನಾನು ಮಾತನಾಡುವಾಗ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಇದನ್ನು ಪ್ರಸ್ತಾಪವ ಮಾಡಬಾರದು ಎಂದಿದ್ದೆ. ನಾನಂತೂ ಡಿಸ್ಟಲರಿ ಜೊತೆ ಸಂಬಂದ ಮಾಡಿಲ್ಲ ನಾನುಸಂಬಂಧ ಮಾಡಿರುವುದು ಹುಡುಗನ ಜೊತೆಗೆ ನಾನು ಹುಡುಗಿ ಕೊಟ್ಟಿದ್ದೇನೆ. ಅದಕ್ಕೆ ಡಿಸ್ಟಿಲರಿ ಸಂಬಂಧ ಎಂದು ಏತಕ್ಕೆ ಹೇಳುತ್ತೀರಿ.

ಶ್ರೀ ಸಿ. ಬೈರೇಗೌಡ.—ಆದರೆ ಬೇರೆ ಸಂಬಂಧ ಏನಿದೆ ಎಂಬುದು ನನಗೆ ಗೊತ್ತಿದೆ. ಹಳೆಯ ಸಂಬಂಧ ಏನಿದೆ ಎಂಬುದೂ ನನಗೆ ಗೊತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಸಂಬಂಧ ಇದೆ ಎಂದು ಹೇಳಿದರೆ ಏನು ಅರ್ಥ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಾವು ಡಿಸ್ಟಿಲರಿ ಲೈಸೆನ್ಸನ್ನು ಏನಾದರೂ ತೆಗೆದುಕೊಂಡಿದ್ದೀರಾ? (ಮಾನ್ಯ ಭೈರೇಗೌಡರನ್ನು ಉದ್ದೇಶಿಸಿ) ಆ ರೀತಿ ಏನಾದರೂ ತೆಗೆದುಕೊಂಡಿದ್ದರೆ ಹೇಳಿ. ಡಿಸ್ಟಿಲರೀನೋ ಬಾಟ್ಲಿಂಗೋ ಏನ್ನಾವುದಾದರೂ ತೆಗೆದುಕೊಂಡಿದ್ದರೆ ಹೇಳಿ?

ಶ್ರೀ ಡಿ.ಬಿ. ಚಂದ್ರೇಗೌಡ.—ನನಗೆ ಈ ವಿಚಾರದಲ್ಲಿ ಎ.ಬಿ.ಸಿ.ಡಿ. ಕೂಡ ತಿಳಿಯುತ್ತಿರಲಿಲ್ಲ. ಡಿಸ್ಟಿಲರಿ ಅಂದರೆ ಏನು ಬಾಟ್ಲಿಂಗ್ ಅಂದರೆ ಎಂದರೇನು? ಈ ಲೇಬಲಿಂಗ್ ಎಂದರೇನು? ಇದು ಯಾವುದು ಕೂಡ ನನಗೆ ಗೊತ್ತಿಲ್ಲ. ಆದರೆ ನನಗೆ ಒಂದು ಗೊತ್ತು. ಬಾಟಲ್ ಒಳಗಡೆ ಏನು ಇದೆ ಎಂದು ಗೊತ್ತು. ಅದು ಬಿಟ್ಟು ಉಳಿದದ್ದು ಏನೂ ಗೊತ್ತಿಲ್ಲ. ಇದರ ವ್ಯವಹಾರ ಏನೂ ಗೊತ್ತಿಲ್ಲ. ಇದು ಅಪರಾಧ ಏನು ಅಲ್ಲವಲ್ಲ. ಇಷ್ಟು ಬಿಟ್ಟು ನನಗೆ ಏನೂ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯವಾದದ್ದನ್ನೇ ಹಿಡಿದುಬಿಟ್ಟಿದ್ದೀರಿ,

ಶ್ರೀ ಡಿ.ಬಿ. ಚಂದ್ರೇಗೌಡ.—ಏನು ಮಾಡುವುದು? ನಾವು ನೀವು ಮಲೆನಾಡಿನಿಂದ ಬಂದವರು. ನಮ್ಮ ಹುಟ್ಟು ಪ್ರಾರಂಭವಾಗಿದ್ದೇ ಅಲ್ಲಿಂದ. ಸ್ನೇಹಿತರೇ ನಿಮಗೆ ಆಶ್ಚರ್ಯವಾಗಬಹುದು, ಒಂದು ದಿನಕ್ಕೆ ನಮ್ಮಪ್ಪ ೨೦ ಬಾಟಲ್ ಸೇಂದಿ ಕುಡಿಯುತ್ತಿದ್ದರು. ನಿಮಗೆ ಆಶ್ಚರ್ಯ ಆಗಬಹುದಲ್ಲವೇ? ಇದು ತಮಗೂ ಗೊತ್ತಿದೆ ನನಗೆ ನಾಚಿಕೆ ಏನೂ ಇಲ್ಲ.

ಶ್ರೀ ಸಿ. ಭೈರೇಗೌಡ.—ಬಂಗಾರಪ್ಪನವರದು ಇದನಲ್ಲಿ ಹಳೆಯ ಸಂಬಂಧ,

ಶ್ರೀ ಡಿ.ಬಿ. ಚಂದ್ರೇಗೌಡ.—ಆದ್ದರಿಂದ ಮುಖ್ಯವಾಗಿ ನಾನು ಚರ್ಚೆಯನ್ನು ಮಾಡುವುದಕ್ಕೆ ಹೊರಟಿದ್ದುದು, ನಿಮ್ಮ ಅಬ್ಕಾರಿ ನೀತಿ ಬಗ್ಗೆ. ಶೇಕಡ ಒಂದು ಪರ್ಸೆಂಟ್‌ನಿಂದ ೨೦ಕ್ಕೆ ಏರಿಸಿ ಮೂರು ತಿಂಗಳಿಂದ ಈ ಡಿಸ್ಟಿಲರಿ ಕೆಲಸ ಸ್ಥಗಿತವಾಗಿದೆಯಲ್ಲಾ, ಇಲ್ಲಿ ಸುಮಾರು ನಾಲ್ಕೈದು ಸಾವಿರ ಜನ ಕಾರ್ಮಿಕರು ನಿರುದ್ಯೋಗಿಗಳಾಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೋ? ಒಂದು ಕಡೆಯಲ್ಲಿ ಮೂರ್ತೆದಾರರು ನಿರುದ್ಯೋಗಿಗಳಾದರು, ಇನ್ನೊಂದು ಕಡೆಯಲ್ಲಿ ಡಿಸ್ಟಿಲರಿ ಕೆಲಸ ಮಾಡತಕ್ಕಂಥವರು ನಿರುದ್ಯೋಗಿಗಳಾದರು, ಡಿಸ್ಟಿಲರಿಯನ್ನೇ ಹೊಂದಿಕೊಂಡಿರತಕ್ಕಂಥ ಬಾಟಲ್ ಮಾಡತಕ್ಕಂಥ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ನಿರುದ್ಯೋಗಿಗಳಾದರು. ಇದು ಒಂದು ಬಿಗ್ಗೆಸ್ಟ್ ಸಂಸ್ಥೆ. ಮೆಟಲ್ ಕ್ಯಾಪ್ಸ್ ಮಾಡತಕ್ಕಂಥ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ನಿರುದ್ಯೋಗಿಗಳಾದರು. ಲೇಬಲ್ಸ್ ಮಾಡತಕ್ಕಂಥ ಸಂಸ್ಥೆಗಳವರು ನಿರುದ್ಯೋಗಿಗಳಾದರು. ಬೇರೆ ಬೇರೆ

ಆನ್ಸಿಲರಿ ಯೂನಿಟ್ಸ್‌ಗಳು ಏನು ಇದ್ದವು, ಆ ಎಲ್ಲಾ ಆನ್ಸಿಲರಿಯಲ್ಲಿ ಕೆಲಸ ಮಾಡತಕ್ಕಂಥವರು ಸೇರಿ ಸರಿ ಸುಮಾರು ಐದು ಸಹಸ್ರ ಜನ ಇಪತ್ತು ಬೀದಿಗೆ ಇಳಿಯುತಕ್ಕಂಥ ಸ್ಥಿತಿ ಬಂದಿದೆ. ಇದರ ಅರ್ಥ ಇದರ ಇನ್ನೊಂದು ಮುಖ ಏನು? ಮುಂದೆ ಇದರ ಪರಿಣಾಮ ಏನಾಗಬಹುದು? ಈಗ ಸೆಕೆಂಡ್ಸ್ ನಿಲ್ಲಿಸುವುದಕ್ಕಾಗಿ ನೀವು ಒಂದು ಪ್ರಯೋಗವನ್ನು ಮಾಡಿದ್ದೀರಿ, ಅದು ಸರಿಯೋ ತಪ್ಪೋ ಎಂದು ನಾನು ಹೇಳುವುದಿಲ್ಲ. ಸೆಕೆಂಡ್ಸ್ ನಿಲ್ಲಿಸುವುದಕ್ಕಾಗಿ ಪ್ರಯೋಗ ಪ್ರಾರಂಭವಾಗಿದೆ. ಈಗ ಥರ್ಡ್ ಪ್ರಾರಂಭವಾಗಿದೆ. ಸೆಕೆಂಡ್ಸ್ ನಿಂತಿದೆ ಇಲ್ಲವೋ ಗೊತ್ತಿಲ್ಲ. ಥರ್ಡ್ಸ್ ಈಗ ಪ್ರಾರಂಭವಾಗಿದೆ. ಥರ್ಡ್ಸ್ ಅಂದರೆ ಏನು? ಹೊರಗಡೆಯಿಂದ ಬಾಟಲ್ ಬರುತ್ತದೆ. ಇಲ್ಲಿ ಲೋಕಲ್‌ನಲ್ಲಿ ಲೇಬಲ್ ಮಾಡಿ ಮಾರುತ್ತಿದ್ದಾರೆ. ಇದು ಥರ್ಡ್ಸ್. ಸಧ್ಯದಲ್ಲಿ ಫೋರ್ಥ್ ತಯಾರಾಗಬಹುದು. ಇದು ಸ್ಪೂರಿಯಸ್. ಬೆಂಗಳೂರು ನಗರದಲ್ಲಿ ಹಿಂದೆ ಸುಮಾರು ೩೯೦ ಜನ ಕಳ್ಳಭಟ್ಟಿ ದುರಂತದಲ್ಲಿ ಸತ್ತಿದ್ದು, ಅದಕ್ಕಾಗಿ ದೇಸಾಯಿ ಕಮಿಷನ್ ಎಂದು ನೇಮಕ ಮಾಡಿ ಅವರು ಕೆಲವು ರೆಕಮೆಂಡೇಷನ್‌ಗಳನ್ನು ಕೂಡ ಕೊಟ್ಟಿದ್ದರು. ನಾನು ಎಲ್ಲದಕ್ಕೂ ದೀರ್ಘವಾಗಿ ಹೋಗುವುದಿಲ್ಲ, because it is not connected with that. Now I am only connected with the taxation. ಈಗ ಸ್ವಲ್ಪ ನಾನು ಇದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಮ್ಮ ರಾಜ್ಯದ ಪ್ರೊಡಕ್ಷನ್ ಮತ್ತು ಐ.ಎಂ.ಎಫ್.ಎಲ್. ಸೇಲ್ ಎಷ್ಟಾಗಿದೆ ಎಂದು ನಾನು ನೋಡಿದೆ, ಎರಡು ಕೋಟಿ ತೊಂಭತ್ತು ಲಕ್ಷದ ಐವತ್ತನಾಲ್ಕು ಸಾವಿರ ಲೀಟರ್ಸ್ ಹೊರಗಡೆಗೆ ಹೋಗಿದೆ. ಸುಮಾರು ಮೂರು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಇಪ್ಪತ್ತಮೂರು ಸಾವಿರ ಉತ್ಪತ್ತಿ, ಇದರಲ್ಲಿ ಮೂರನೇ ಎರಡು ಭಾಗ ರಾಜ್ಯದ ಹೊರಗಡೆ ಹೋಗಿದೆ. ಕರ್ನಾಟಕದಲ್ಲಿ ಖರ್ಚು ಆಗತಕ್ಕದ್ದು ಸುಮಾರು ೮೦ ಲಕ್ಷ ಲೀಟರ್‌ನಷ್ಟು. ಇದರಲ್ಲಿ ಒಬ್ಬೊಬ್ಬರಿಗೆ ಎಷ್ಟೆಷ್ಟು ಕಳಿಸಿದ್ದಾರೆ ಎಂಬ ವಿವರಕ್ಕೆ ನಾನು ಹೋಗುವುದಿಲ್ಲ. ಯಾವ ಯಾವ ರೂಪದಲ್ಲಿ ಹೋಗಿದೆ? ಎರಡು ಕೋಟಿ ತೊಂಭತ್ತು ಲಕ್ಷ ಬಲ್ಕ್ ಲೀಟರ್‌ನಷ್ಟು ಹೊರಗಡೆ ಹೋಗಿದೆ ಅಂದರೆ, ಇದನ್ನು ಉತ್ಪಾದನೆ ಮಾಡುವುದಕ್ಕೆ ಬೇಕಾಗಿರತಕ್ಕಂಥ ರೆಕ್ಟಿಫೈಡ್ ಸ್ಪಿರಿಟ್ ಎಷ್ಟು? ಇದು ಎಲ್ಲಿಲ್ಲಿ ತಯಾರಾಗುತ್ತದೆ, ಇದನ್ನು ಯಾರ್ಯಾರು ಯಾವ್ಯಾವ ರೂಪದಲ್ಲಿ ತೆಗೆದುಕೊಳ್ಳುತ್ತಾರೆ? Rectified spirit is the base material. ಸಾರಾಯಿ ಆಗಲಿ ಅಥವಾ ಐ.ಎಂ.ಎಲ್, ಆಗಲೀ, ಈ ಎರಡಕ್ಕೂ ಬೇಸ್ ಮೆಟೀರಿಯಲ್ ಅಂದರೆ ರೆಕ್ಟಿಫೈಡ್ ಸ್ಪಿರಿಟ್, ಐ.ಎಂ.ಎಲ್.ನವರು ಆರು ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಾರೆ. ಅರಾಕ್‌ನವರು ನಾಲ್ಕು ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಾರೆ. ಈ ವ್ಯತ್ಯಾಸ ಇದೆ, ತಾವು ಸ್ವಲ್ಪ ತೆಗೆಸಿ ನೋಡಿ, I may be wrong also. ನಮ್ಮ ಉದ್ದೇಶ ಏನು? ಆರರಲ್ಲಿ ಕೊಂಡರೆ ಲಾಭಾನೋ ಅಥವಾ ನಾಲ್ಕರಲ್ಲಿ ಕೊಂಡರೆ ಲಾಭಾನೋ ನಮಗೆ ಏನು ಲಾಭ ಅಂದರೆ ಸಕ್ಕರೆ ಕಂಪನಿಗಳಿಂದ ಈ ರೆಕ್ಟಿಫೈಡ್ ಸ್ಪಿರಿಟ್ ಏನು ಇರುತ್ತದೆ, ಅಲ್ಲಿ ಆರು ರೂಪಾಯಿ ಸಿಕ್ಕಿದರೆ ಇವೊತ್ತು ಸಕ್ಕರೆ ಕಂಪನಿಗಳು ನಡೆಯುತ್ತಾ ಇರತಕ್ಕದ್ದು ಸಕ್ಕರೆ ಉತ್ಪಾದನೆಯಿಂದ ಅಲ್ಲ, ಬಹುತೇಕ ಮೊಲಾಸಸ್ ಮತ್ತು ಅದರ ಅವಿಭಾಜ್ಯ ಅಂಗವಾದ ರೆಕ್ಟಿಫೈಡ್ ಸ್ಪಿರಿಟ್‌ನಿಂದ, ಈ ರೆಕ್ಟಿಫೈಡ್ ಸ್ಪಿರಿಟನ್ನು ಆರು ರೂಪಾಯಿ ಕೊಟ್ಟು ಐಎಂಎಲ್ ಕೊಳ್ಳುತ್ತಾರೆ. ನಾಲ್ಕು ರೂಪಾಯಿ ಕೊಟ್ಟು ಇವರು ಕೊಳ್ಳುತ್ತಾರೆ. ನಮಗೆ ಆರು ರೂಪಾಯಿ ಕೊಟ್ಟರೆ, ರೈತರಿಗೆ ಒಂದು ರೂಪಾಯಿ ವೆಚ್ಚ ಸಿಕ್ಕುತ್ತಿತ್ತು ಎನ್ನುವ ದೃಷ್ಟಿಯಿಂದ ಮತ್ತು ಅವುಗಳ ಸಾಮರ್ಥ್ಯದ ದೃಷ್ಟಿಯಿಂದ Total production according to my information is roughly about 6 crores of litres. One third is consumed by Indian made Foreign liquors. ಉಳಿದಿದ್ದು ಕೆಲವು ಭಾಗವನ್ನು ಸಾರಾಯಿನವರು ತೆಗೆದುಕೊಳ್ಳುತ್ತಾರೆ. ಇನ್ನು ಉಳಿದಿರತಕ್ಕ ಒಂದು ಕೋಟಿ ಲೀಟರ್‌ನಷ್ಟು ಸರ್‌ಪ್ಲಸ್ ಅನ್ನು ನೀವು ಹೊರಗಡೆಗೆ ಕಳಿಸುತ್ತಿದ್ದೀರಿ. ಇದಕ್ಕೆ ಎಷ್ಟು ಬೆಲೆ ಅಂದರೆ ಮೂರು ರೂಪಾಯಿ. ಹೊರಗಡೆಗೆ ಅಂದರೆ ಎಲ್ಲಿಗೆ ಕಳಿಸುತ್ತಿದ್ದೀರಿ ಎಂದರೆ ಕರ್ನಾಟಕದ ಹೊರಗಡೆ ಎಕ್ಸ್‌ಪೋರ್ಟ್ ಆಗಿದೆ. ತಾವು ತೆಗೆಸಿ ನೋಡಿ, ನನ್ನ ಲೆಕ್ಕ ಇದು. ಈಗ ಹೊರಗಡೆಗೆ ಕಳಿಸದೇ ಇರತಕ್ಕ ಒಂದು ಪದ್ಧತಿಯಿಂದಾಗಿ ಈ ವರ್ಷ ಸರಿ ಸುಮಾರು ಮೂರು ಕೋಟಿ ಲೀಟರ್‌ನಷ್ಟು ರೆಕ್ಟಿಫೈಡ್ ಸ್ಪಿರಿಟ್ ಮೂರು ರೂಪಾಯಿನಲ್ಲಿ ಹೊರಗಡೆ ಕಳಿಸಬೇಕಾಗುತ್ತದೆ. ಈ ಮೂರು ಕೋಟಿ ರೆಕ್ಟಿಫೈಡ್ ಸ್ಪಿರಿಟ್ ಏನು ಮಾಡುತ್ತೀರಿ? ಮತ್ತೊಂದು ಮುಖ್ಯವಾದ ಪ್ರಶ್ನೆ ಏನು? ಈ ಎಕ್ಸ್‌ಪೋರ್ಟ್ ಮಾಡತಕ್ಕಂಥ ರೆಕ್ಟಿಫೈಡ್ ಸ್ಪಿರಿಟ್‌ಗೆ ಎಕ್ಸ್‌ಪೋರ್ಟ್ ಡ್ಯೂಟಿ ಹಾಕುವಂತಿಲ್ಲ. ಆದರೆ ಫಿನಿಶ್ಡ್ ಗೂಡ್ಸ್ ಮೇಲೆ ನೀವು ಎಕ್ಸೈಜ್ ಡ್ಯೂಟಿ ಹಾಕಬೇಕು, ಆದ್ದರಿಂದ ನೆಟ್ ನಿಮಗೆ ಸಿಗುವುದು ಮೂರು ರೂಪಾಯಿ. ಆದರೆ ಅದೇ ಫಿನಿಷಡ್ ಗೂಡ್ಸ್ ಮಾಡಿ ಕಳಿಸಿದರೆ ಇಲ್ಲಿ ಆರು ರೂಪಾಯಿ ಸಿಗುತ್ತದೆ, ಪ್ಲಸ್ ಅದಕ್ಕೆ ಬೇಕಾಗಿರತಕ್ಕ ಸೇಲ್ಸ್ ಟ್ಯಾಕ್ಸ್ ಎಕ್ಸೈಜ್ ಡ್ಯೂಟಿ ಹಾಕುವುದಕ್ಕೆ ಅವಕಾಶ ಇದೆ.

SRI M. RAJASHEKARA MURTHY.—That is our policy.

ಶ್ರೀ ಡಿ.ಬಿ. ಚಂದ್ರೇಗೌಡ.—ಹಾಗಿದ್ದರೆ ಸರಿ. ಅದಕ್ಕಾಗಿ ಈಗ ನಾನು ಥರ್ಡ್ಸ್ ಬಗ್ಗೆ ಹೇಳಿದೆನಲ್ಲ, ನಾವು ಅಲ್ಲಿ ಇಲ್ಲಿ ಸ್ವಲ್ಪ ಪ್ರವಾಸ ಮಾಡುತ್ತೇವೆ. ಆಗ ಏನು ನಡೆಯುತ್ತಿದೆ ಎಂದು ನೋಡಬೇಕಲ್ಲ. ಸರಿ ಸುಮಾರು ಗೋವಾ ಒಂದರಿಂದ ಪ್ರತಿ ದಿನಕ್ಕೆ ೧೦ ಲೋಡಿನಷ್ಟು ಐಎಂಎಲ್ ಬೆಂಗಳೂರು ನಗರವನ್ನು ಹೊರತುಪಡಿಸಿ ಉಳಿದ ರಾಜ್ಯದ ಎಲ್ಲಾ ಮುಖ್ಯ ಕೇಂದ್ರಗಳಿಗೆ ಬರುತ್ತಿದೆ ಎನ್ನುವುದು ನನಗೆ ತಿಳಿದಿರುವ ಸುದ್ದಿ, ಆದ್ದರಿಂದ ಸುಮಾರು ಆರು ಸಾವಿರ ಕೇಸಸ್ ಹೊರ ರಾಜ್ಯಗಳಿಂದ ಇಲ್ಲಿಗೆ ಬರುತ್ತಿದೆ, ಆಮೇಲೆ ಥರ್ಡ್ಸ್ ಬಗ್ಗೆ ಹೇಳಿದನಲ್ಲ, ಸೆಕೆಂಡ್ಸ್ ಇಲ್ಲ, ಸಾರಾಯಿ ಇದೆಯಲ್ಲಾ, ಇದಕ್ಕೆ ಬಣ್ಣ ಹಚ್ಚಿ ಲೇಬಲ್ ಹಚ್ಚಿ ಥರ್ಡ್ಸ್ ಎಂದು ಮಾರುತ್ತಾ ಇದ್ದಾರೆ. ಅದು ಬಹಳ ಸುಲಭ. ಏಕೆಂದರೆ, ರೇಟ್‌ನಲ್ಲಿ ವ್ಯತ್ಯಾಸ ಏನು? ಅರಾಕ್ ಸುಮಾರು ೧೧ ರೂಪಾಯಿ, ನಿಮ್ಮ ಐಎಂಎಲ್ ೧೯ ರೂಪಾಯಿ. ಅದನ್ನು ಏನಾದರೂ ಹತ್ತಿರ ಹತ್ತಿರಕ್ಕೆ ತರದೇ ಇದ್ದರೆ ಇವೆರಡನ್ನೂ ಈ ರೀತಿ ಮಾಡುವುದಕ್ಕೆ ಅವಕಾಶವಿದೆ. ಇದು ಒಂದು ಕಡೆ. ಹಾಗಿದ್ದರೆ ನಮ್ಮಲ್ಲಿ ನಡೆಯುತ್ತಾ ಇದ್ದಂಥ ಇಂಡಸ್ಟ್ರೀಸ್‌ಗಳನ್ನು ಮುಚ್ಚಿ, ಸರಿಸುಮಾರು ೧೦ ಸಾವಿರ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿ, ರಾಜ್ಯದಲ್ಲಿ ನಡೆಯುತ್ತಾ ಇದ್ದಂಥ ಇಂಡಸ್ಟ್ರೀಸನ್ನು ಹೊರ ರಾಜ್ಯಕ್ಕೆ ಕಳಿಸಿ, ಕಳೆದ ಮೂರು ತಿಂಗಳಿಂದ ನಿಮ್ಮ ಪಾಲಿಸಿಯನ್ನು ಅನೌನ್ಸ್ ಮಾಡದೆ ಹಾಗೂ ಹೀಗೂ ನಡೆಸಿಕೊಂಡು ಬರುತ್ತಿದ್ದೀರಲ್ಲ, ನಾಳೆ ಏನಾಗುತ್ತದೆ ಎಂದು ಕಾಯುತ್ತಿದ್ದಾರಲ್ಲಾ, ಅವರ ಗತಿ ಏನು? ತಾವು ಹಿಂದಿನ ಸಾರಿ ಹೇಳಿದಿರಿ, ಸುಪ್ರೀಂ ಕೋರ್ಟ್‌ನಿಂದ ಒಬ್ಬರು ಸ್ಟೇ ತಂದಿದ್ದಾರೆ, ಉಳಿದವರೆಲ್ಲರೂ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಮೂಲಕ ಮಾರಾಟ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆಂದು ಹೇಳಿದಿರಿ, ಸಂತೋಷ. ಅವರಿಗೆ ಮಾರಾಟ ಮಾಡಿ ಎಂದು ಹೇಳಿದರೆ ಸಂತೋಷ. ನಮಗೇನು ನೀವು ಮಾರಾಟವಾದರೂ ಮಾಡಿ, ಏನಾದರೂ ಮಾಡಿ. ಈ ೫ ಸಾವಿರ ಜನ ನೌಕರರು ಇದ್ದಾರಲ್ಲಾ ಅವರ ಗತಿಯೇನು. ಈ ಪತ್ರಿಕಾ ಹೇಳಿಕೆಯಿಂದ ನಮಗೆ ಏನು ಗೊತ್ತಾಗುತ್ತದೆ. ಸರ್ಕಾರ ಈ ಒಂದು ವಿಚಾರದಲ್ಲಿ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳದೇ ಇದ್ದರೆ ಇನ್ನೊಂದು ವಾರದಲ್ಲಿ ಅವರನ್ನು ಹೊರಗೆ ಹಾಕುತ್ತೇವೆಂದು ಹೇಳಿದ್ದಾರೆ. ಅದು ಒಂದು ಸ್ಟೇಟ್‌ಮೆಂಟ್. The Spokesman of the Association said in the press meet here today that because of the twenty-fold increase in the export duty, there had been total stoppage of the export. ಟೋಟಲ್ ಸ್ಟಾಪೇಜ್. ಅರ್ಥಾತ್ ಒಂದು ರೂಪಾಯಿ ಇದ್ದಾಗ ೨ ಕೋಟಿ ೯೪ ಲಕ್ಷ ಲೀಟರ್ ಹೋಗುತ್ತಾ ಇತ್ತು ಎಂದು ಅಂದಾಜು ಮಾಡಿದರೂ: ಕನಿಷ್ಟ ನಿಮಗೆ ೩ ಕೋಟಿ ರೂಪಾಯಿ ಆದಾಯ ಬರುತ್ತಿತ್ತು. ಪ್ಲಸ್ ಸೇಲ್ಸ್ ಟ್ಯಾಕ್ಸ್ ಎಷ್ಟಾಗುತ್ತದೆ ಎಂದು ದಾಮಾಷಾ ಪ್ರಕಾರ ನಾನು ಲೆಕ್ಕ ಹಾಕಿದೆ, ಅದು ಸುಮಾರು ಎರಡೂವರೆ ಕೋಟಿ ರೂಪಾಯಿ ಆಗುತ್ತದೆ. ೩ ಕೋಟಿ ಮತ್ತು ಎರಡೂವರೆ ಕೋಟಿ ಒಟ್ಟು ಐದೂವರೆ ಕೋಟಿ ಅದರ್‌ದ್ಯಾನ್ ಇದು ಬರುತ್ತಿತ್ತು. ಈಗ ಮೂರು ತಿಂಗಳಿಂದ ಮೂರು ರೂಪಾಯಿ ಬಂದಿಲ್ಲ, ತತ್ರಾಪಿ ಹೊರಗಡೆಯಿಂದ ಇಲ್ಲಿಗೆ ಇಂಪೋರ್ಟ್ ಆಗುತ್ತಿದೆ. ಇವರು ಒಂದ್ಟು ಬಾಟಲ್ ಕೂಡ ಎಕ್ಸ್‌ಪೋರ್ಟ್ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. "Distillrries" export from April first-distilleries facing the prospects of closure if the old percentage of duty was not restored." Whether you restore it not, it is not my concern. ನಾನು ಹೇಳಿದ ಪ್ಯಾರಾಮೀಟರ್ಸ್ ಏನೇನು ಇದೆ, ಒಂದು ಕಡೆ ನಿರುದ್ಯೋಗಿಗಳ ಸಮಸ್ಯೆ, ಮತ್ತೊಂದು ಕಡೆ ರಾಜ್ಯದ ಇಂಡಸ್ಟ್ರೀಸ್ ಹೊರಗಡೆ ಹೋಗತಕ್ಕಂಥಾದ್ದು ಮತ್ತೊಂದು ಮುಖ್ಯವಾದ ಅಂಶ ಅಂದರೆ, ಕರ್ನಾಟಕದ ಬ್ರಾಂಡ್ಸ್ ಹೊರಗಡೆ ಪಾಪ್ಯುಲರ್ ಆಗಿದ್ದವು. ಡೆಲ್ಲಿಯಲ್ಲಾಗಲಿ, ಬಾಂಬೆಯಲ್ಲಾಗಲಿ ಬೇರೆ ಬೇರೆ ಕಡೆ ಪಾಪುಲರ್ ಆಗಿದ್ದವು. ಕರ್ನಾಟಕದಲ್ಲಿ ಆ ಪಾಪುಲರ್ ಬ್ರಾಂಡ್ ಹೋಗುತ್ತಾ ಇಲ್ಲ, ಒನ್ಸ್ ಫಾರ್ ಆಲ್ ಬೇಡ ಎಂದು ತೆಗೆದುಬಿಡಿ, ಅದು ಏನಾಗುತ್ತದೋ ನೋಡೋಣ. ಇಲ್ಲವೇ ಅವರಿಗೆ ಒಂದು ನೀತಿ, ಇವರಿಗೆ ಒಂದು ನೀತಿ ಮಾಡಬೇಡಿ. ಇಲ್ಲಿ ಒಂದು ನೀತಿಯನ್ನು ಎಲ್ಲಿ ಮಾಡಿದ್ದೀರಿ. ಮಲ್ಟಿಪಲ್ ಪಾಯಿಂಟ್ ತೆರಿಗೆ ಬಗ್ಗೆ ನಾನು ಹೇಳಿದೆ. ಸ್ವಾಮಿ, ಅರ್ಯಾಕ್‌ನವರಿಗೆ ಕೊನೆ ಹಂತದ ತೆರಿಗೆ ತೆಗೆಯುತ್ತೀರಿ. ಇವರಿಗೆ ಇದನ್ನು ಏಕೆ ಇಟ್ಟುಕೊಳ್ಳುತ್ತೀರಿ ಇದರಿಂದ ಏನೋ ನಡೆದಿದೆ ಎಂಬ ಅನುಮಾನಕ್ಕೆ ಶಂಕೆಗೆ ಎಡೆಮಾಡಿಕೊಡುತ್ತದೆ. ಅದಕ್ಕಾಗಿ ಮಲ್ಟಿಪಲ್ ತೆರಿಗೆ ಹಾಕಿ ಎಂದು ನಾನು ಹೇಳಿದೆ. ಈಗಿರುವುದನ್ನು ನಾನು ತರಿಸಿ ನೋಡಿದೆ. ಎಷ್ಟು ಕಡೆ ತೆರಿಗೆ ಇದೆ. ಇದು ವೆರಿ ಇಂಟರೆಸ್ಟಿಂಗ್ ಇದೆ. ಪರ್ ಕೇಸ್ ಯೋಸಿಕ್ ೧೦೦ ರೂಪಾಯಿ, ಡ್ಯೂಟಿ ೨೫೯, ಆಮೇಲೆ ೪೫ ಪರ್ಸೆಂಟ್, ಕೆ.ಎಸ್.ಟಿ. ೧೨೫...

ಶ್ರೀ ಸಿ. ಬೈರೇಗೌಡ. ಪ್ರಾಡಕ್ಟ್ ಯಾವುದು?

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಾಡಕ್ಟ್ ಯಾವುದು ಎಂದು ಗೊತ್ತಿಲ್ಲ. ನಾನು ಹೇಳಿದ್ದುದು ಐ.ಎಂ.ಎಲ್.ದು ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್. ಇದು ಒಂದು ಸಾರಿ ಆಯಿತು. ಹೀಗೆ ಮತ್ತೆ ಎರಡನೆಯ ಸಾರಿ ೬೧.೫ ಎಂದು ಮತ್ತೆ ಮೂರನೇ ಸಾರಿ ಮಾಡುತ್ತೀರಿ. ಮೂರು ಸಾರಿ ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡುತ್ತೀರಿ. ಹೀಗೆ ೪೫ ಪರ್ಸೆಂಟ್ ಎನ್ನುವ ಬದಲು ಒಂದೇ ಸಾರಿ ಮಾಡಿ ೫೦ ಅನ್ನಿ, ೫೫ ಅನ್ನಿ, ೬೦ ಅನ್ನಿ, ಮೂರು ಹಂತ ಏತಕ್ಕೆ. ಎಲ್ಲಾದರೂ ಒಂದು ಕಡೆ ಸೋರಿಹೋಗುವಂಥಾದ್ದು ನಿಂತುಹೋಗಲಿ. ಒಂದೇ ಕಡೆ ವಸೂಲು ಮಾಡಿ ೬೦ ಪರ್ಸೆಂಟ್ ಎಂದು ಹಾಕಿ. ಈ ಮಲ್ಟಿಪಾಯಿಂಟ್ ನಿಲ್ಲಿಸಿ. ಇಲ್ಲವೇ ಅರಾಕಿಗೆ ತೆಗೆದುಹಾಕಿದಂತೆ ಮಲ್ಟಿಪಾಯಿಂಟ್ ಇಲ್ಲೂ ತೆಗೆದುಹಾಕಿಬಿಡಿ. ಇಲ್ಲವೆ ಅಲ್ಲೂ ಕೊಡಿ. ಐ.ಎಂ.ಎಲ್.ಗೆ ಆದರೆ ಮಲ್ಟಿಪಾಯಿಂಟ್ ಅರಾಕಿನವರಿಗಾದರೆ ಸಿಂಗಲ್ ಪಾಯಿಂಟ್ ಏತಕ್ಕೆ ? You can explain in your reply about this. ಇದೆಲ್ಲಾ ತಲೆ ಹೊಡೆದಿದ್ದು ಆಯಿತಲ್ಲ. ತಾವು ಏನು ನಿರ್ಧಾರಕ್ಕೆ ಬಂದಿದ್ದೀರಿ ಎನ್ನುವುದೇ ನಮಗೆ ಗೊತ್ತಾಗುತ್ತಿಲ್ಲ. ನಿಮ್ಮ ಜಗಳ ಏನು ಎಂದು ನನಗೆ ಗೊತ್ತಾಗುತ್ತಿಲ್ಲ. ಏನೋ ಡಿಸ್ಟಲರೀಸ್‌ಗೂ, ಐ.ಎಂ.ಎಲ್.ಗೂ ನಿಮಗೂ ಸಂಬಂಧ ಚೆನ್ನಾಗಿಲ್ಲವೇನೋ ಎನ್ನುವ ಅರ್ಥ ಬರುತ್ತದೆ. ಈ ಶಂಕೆ ರಾಜ್ಯದ ಹಣಕಾಸಿನ ಮಂತ್ರಿಗಳಿಗೆ ಬರಬಾರದು ಎಂದು ಪ್ರಾರಂಭಿಕವಾಗಿಯೇ ಹೇಳಿದೆ. ರಾಜ್ಯಕ್ಕೆ ಒಳ್ಳೆಯದಾಗುವುದನ್ನು ನೋಡಿ, ಇಲ್ಲಿ ಒಬ್ಬ ಸೇಲ್‌ಗೆ ಬರಲಿಲ್ಲ ಎಂಬ ಉಳಿದವರ ಕತ್ತು ಕತ್ತರಿಸುವಂಥಾದ್ದು ಆಗಬಾರದು. ಇನ್ನು ಡಿಸ್ಟಲರೀಸ್ ಲೈಸೆನ್ಸ್ ಫೀ ಬಗ್ಗೆ ಹೇಳುವುದಾದರೆ, ಕೇರಳದಲ್ಲಿ ಒಂದುಸಾವಿರ ಇದ್ದರೆ, ನಮ್ಮಲ್ಲಿ ೫ ಲಕ್ಷ ಮಾಡಿದ್ದೀರಿ ಈ ಸಾರಿ ೨ ರಿಂದ ೫ ಮಾಡಿದ್ದೀರಿ. ಬ್ರಿವರೀಸ್‌ಗೆ ಒಂದು ಲಕ್ಷ ಇದ್ದದನ್ನು ೩ ಲಕ್ಷ ಮಾಡಿದ್ದೀರಿ, ಇದನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿ. ಕೇರಳದಲ್ಲಿ ಒಂದು ಸಾವಿರ, ತಮಿಳುನಾಡಿನಲ್ಲಿ ೨ ಸಾವಿರ, ಮಹಾರಾಷ್ಟ್ರದಲ್ಲಿ ೨೦ ಸಾವಿರ, ಗುಜರಾತ್‌ನಲ್ಲಿ ೫೦೦. ಒಂದು ಇಂಡಸ್ಟ್ರೀಸ್‌ಗೆ ಒಂದು ರಾಜ್ಯದಲ್ಲಿ ೫೦೦ ಇದ್ದರೆ, ಇನ್ನೊಂದು ಕಡೆ ೫ ಲಕ್ಷ ಅಂದರೆ ಪರಿಸ್ಥಿತಿ ಏನಾಗುತ್ತದೆ. ಹರಿಯಾಣದಲ್ಲಿ ೨ ಲಕ್ಷ ಇದೆ, ರಾಜಸ್ಥಾನದಲ್ಲಿ ೭೫,೦೦೦ ಇದೆ, ಹಿಮಾಚಲ ಪ್ರದೇಶದಲ್ಲಿ ೫೦,೦೦೦ ಇದೆ. ಆಂಧ್ರದ್ದು ನನ್ನ ಹತ್ತಿರ ಇಲ್ಲ. ನನ್ನ ಮುಖ್ಯವಾದಂಥ ಪ್ರಶ್ನೆ ಅಂದರೆ ನೀವು ಏನಾದರೂ ಹೇಳಿಬಿಡಿ ಇಳಿಸುವುದಕ್ಕಾಗುವುದಿಲ್ಲ. ನಿಮ್ಮ ನಿಮ್ಮ ದಾರಿ ನೀವ್ನೋಡಿಕೊಳ್ಳಿ ಎಂದು ಹೇಳಿ. ಅವರಾದರೂ ಬೀದಿಗೆ ಬೀಳಲಿ ಇವರಾದರೂ ಬೀದಿಗೆ ಬೀಳಲಿ. ಷುಗರ್ ಕಂಪನಿಗಳನ್ನಾದರೂ ಮುಚ್ಚಲಿ, ರೆಕ್ಟಿಫೈಡ್ ಸ್ಪಿರಿಟ್‌ಅನ್ನು ಹೊರಗಡೆ ಕಳುಹಿಸುವುದು ನಮಗೆ ಸಂಬಂಧಪಟ್ಟಿದ್ದು ನಿಮಗಲ್ಲ ಎಂದು ಹೇಳಿ. ನೌಕರಿ ಮಾಡತಕ್ಕವರು ನಿಮ್ಮ ಹತ್ತಿರವೂ ಬರುತ್ತಾರೆ. ನಮ್ಮ ಹತ್ತಿರವೂ ಬರುತ್ತಾರೆ. ಈಗಾಗಲೇ ಶುರುವಾಗಿದೆ. ಇನ್ನೊಂದು ವಾರದಲ್ಲಿ ತಾವು ಮಾಡದಿದ್ದರೆ ಅವರು ಮುಚ್ಚುತ್ತಾರೆ. ಇದರಿಂದ ಇನ್ನೊಂದು ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಬೇಡಿ ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಸುಮಾರು ೩೦೬ ಕೋಟಿ ರೂಪಾಯಿವರೆಗೆ ಉತ್ಪಾದನೆ ಬಂದಿದೆಯೆಂದು ಹೇಳಿದ್ದೀರಿ. ನನಗೆ ಗಾಬರಿ ಆಯಿತು. ಬೆಂಗಳೂರು ಹರಾಜು ಸರಿಸುಮಾರು ೧೦೦ ಕೋಟಿ. ಶಹಭಾಷ್ ಎಂದು ನಿಮ್ಮ ಬೆನ್ನು ತಟ್ಟಿದ್ದೇವೆ. ಪ್ರೈವೇಟಾಗಿ ಹೇಳಿದ್ದೇನೆ, ಪಬ್ಲಿಕ್ಕಾಗಿ ಸಹ ಹೇಳಿದ್ದೇನೆ. ಆದರೆ ಒಂದು ಶಂಕೆ ನನ್ನ ಮನಸ್ಸಿನಲ್ಲಿದೆ. ಪುನರಪಿ ದೇಸಾಯಿ ಕಮೀಷನ್ ನೇಮಕಕ್ಕೆ ಕಾರಣವಾದಂಥ ಮತ್ತೊಂದು ಭಾರಿ ದುರಂತಕ್ಕೆ ಕಾರಣವಾದೀತು. ಜನಸಾಮಾನ್ಯರು ಕುಡಿಯುವುದನ್ನು ಬಿಡುವುದಿಲ್ಲ. ಅವನ ಕೈಗೆ ಎಟುಕಲಾರದಷ್ಟು ಎತ್ತರಕ್ಕೆ ಬೆಲೆ ಏರಿಸಿದರೆ ಬೇರೆ ಮಾರ್ಗ ಅವನು ಹಿಡಿಯುತ್ತೇನೆ. ಅನ್ಯ ಮಾರ್ಗ ಹಿಡಿಯುತ್ತಾನೆ. ಇಂಥಾದಕ್ಕೆ ಖಂಡಿತ ಅವಕಾಶ ಇದೆ. ಮುಂದಿನ ಬಜೆಟ್ ಚರ್ಚೆ ಮಾಡುವಾಗ ಇದನ್ನು ಚರ್ಚೆ ಮಾಡುವುದು ಬಿಟ್ಟು, ಭಾರಿ ದುರಂತವೊಂದರ ಚರ್ಚೆ ಮಾಡುವುದಕ್ಕೆ ಅವಕಾಶವಾಗದ ಹಾಗೆ ಎಚ್ಚರಿಕೆಯನ್ನು ವಹಿಸಬೇಕು. ೩೦೬ ಕೋಟಿ ಬಂದಿದೆಯೆಂದು ಸಂತೋಷಪಡುವುದಿಲ್ಲ. ಇಂಥಾದ್ದು ಆಗಬಾರದು, ಇವತ್ತು ಗ್ರಾಮೀಣ ಪ್ರದೇಶದಲ್ಲಿ ಇದು ಗೃಹ ಕೈಗಾರಿಕೆಯಾಗಿ ಪರಿವರ್ತನೆಯಾಗಿದೆ. ಆ ಕಾರಣದಿಂದ ಇದನ್ನು ಸ್ವಲ್ಪ ಪರಿಷ್ಕರಿಸಿ. ಇದು ಒಂದು ಆಮೇಲೆ ಇನ್ನೊಂದು ಪಾಯಿಂಟ್ ಹೇಳುವುದು ಬಿಟ್ಟೆ. ಆಮೇಲೆ ಈ ಸಿಂಗಲ್ ಪಾಯಿಂಟ್ ಟ್ಯಾಕ್ಸೇಷನ್ ಬಗ್ಗೆ ನಾನು ಹೇಳುವಾಗ ಇದು ಆಗುವುದಿಲ್ಲವೆಂದು ಅದಕ್ಕೆ ನಾನು ಹೇಳಿದೆ ೫೦ ಎಂದು ಅನ್ನಿ, ೬೦ ಎಂದು ಅನ್ನಿ. Can you think of merging Sales Tax and Excise duty and a single point taxation ? ಎಷ್ಟು ಸಾಧ್ಯವೋ ಅಷ್ಟು ಹಗುರ ಮಾಡುವುದು ಒಳ್ಳೆಯದು. ಆದ್ದರಿಂದ ತೆರಿಗೆಯೂ ಹೆಚ್ಚು ಬರುತ್ತದೆ. ಇನ್ನು ಕೊನೆಯದಾಗಿ ಒಂದು ಮಾತು ಹೇಳಬೇಕಾಗಿದೆ. ರೇಷ್ಮೆ ನಮ್ಮ ರಾಜ್ಯದ ಬಹಳ ಎಷ್ಟು ಗೌರವಾನ್ವಿತವಾದುದು

ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ನಾನು ವಿಧಾನಸಭೆಯ ಅಧ್ಯಕ್ಷನಾಗಿ ಲಂಡನ್‌ನ ಕಾನ್‌ಫರೆನ್ಸ್‌ಗೆ ಹೋಗಿದ್ದೆ. ಕಾನ್‌ಫರೆನ್ಸ್ ಆದಮೇಲೆ ಹಿಂದಿನ ಮಿಸೆಸ್ ಥ್ಯಾಚರ್ ಪ್ರೈಮಿನಿಸ್ಟರು ಒಂದು ಭೋಜನ ಕೂಟಕ್ಕೆ ಕರೆದಿದ್ದರು. ಸಾಯಂಕಾಲ ನಾನು ನಮ್ಮ ಮನೆಯವರು ಹೋಗಿದ್ದೆವು. ಆಗ ಮೈಸೂರು ಸಿಲ್ಕ್‌ನಿಂದ ತಯಾರು ಮಾಡಿದಂಥ ಕತ್ತಿಗೆ ಹಾಕಿಕೊಳ್ಳುವಂಥ ಸ್ಕಾರ್ಫ್‌ನ್ನು ಮತ್ತು ಗಂಧದ ಕಡ್ಡಿಯನ್ನು ತೆಗೆದುಕೊಂಡು ಹೋಗಿದ್ದೆವು. ಇದು ನನ್ನ ಸ್ವಭಾವ. ಅಲ್ಲಿಗೆ ಹೋಗುವಾಗ ಗಂಧದಿಂದ ಮಾಡಿರತಕ್ಕಂಥ ಕೆಲವು ಸಾಮಗ್ರಿಗಳು ತೆಗೆದುಕೊಂಡು ಹೋಗಿದ್ದೆ. ನಾನು ಕರ್ನಾಟಕದಿಂದ ಬಂದಿದ್ದೇನೆ. ಇದು ಕರ್ನಾಟಕದ ಸಿಲ್ಕ್ ಹಾಗೆ, ಹೀಗೆ ಎಂದು ಏನೇನೋ ಹೇಳಿದೆ, ಅವರಿಗೆ ಪಾಪ ಗೊತ್ತಾಗಲಿಲ್ಲ. I said this is Mysore Silk. She grabbed it. She said, "Mr. Gowda, can you spare me two more?" I said, "you take half a dozen" because I had carried 100, pieces. This is the reputation we have so far as Mysore Silk is concerned. The Prime Minister of England grabbed six pieces form me. ಇವೊತ್ತು ನಮ್ಮ ನೀತಿಯಿಂದಾಗಿ ರೇಷ್ಮೆ ಕೈಗಾರಿಕೆ ಮುಚ್ಚತಕ್ಕ ಸ್ಥಿತಿಗೆ ಬಂದಿದೆ. ಕರ್ನಾಟಕದಲ್ಲಿ ನಮ್ಮ ತೆರಿಗೆ ನೀತಿಯಿಂದ ಈ ರೀತಿಯಾಗಿದೆ. ದಯೆಯಿಟ್ಟು ಈ ತೆರಿಗೆಯನ್ನು ತೆಗೆದುಬಿಡಿ. ಏನೂ ಆಗುವುದಿಲ್ಲ. ಈಗ ತಮಗೆ ಇದರಿಂದ ಎರಡು ಕೋಟಿ ರೂಪಾಯಿ ಬರುತ್ತದೆ. ಅದಕ್ಕಿಂತಲೂ ಹೆಚ್ಚು ಏನೂ ನಾವು ಮಾಡಲಿಕ್ಕೆ ಆಗಿಲ್ಲ. ರೈತರು ಹೆಚ್ಚು ರೇಷ್ಮೆಯನ್ನು ಬೆಳೆಯಲಿ, ನಮ್ಮಲ್ಲಿ ಸುಖವಾಗಿ ನಮ್ಮ ರಾಜ್ಯದಲ್ಲಿ ಬೆಳೆದು, ನೇಯ್ದು, ನಾಲ್ಕಾರು ರಾಜ್ಯಗಳಿಗೆ ಕಳುಹಿಸಿಕೊಡಲಿ. ಈ ಉದ್ದಿಮೆ ದೊಡ್ಡದಾಗಿ ಕೆಲಸಮಾಡಲಿ. ಈ ರೇಷ್ಮೆ ವಿಚಾರದಲ್ಲಿ ಹೇಳುವುದಾದರೆ. ಇದು ಒಂದು ಹಳೆಯ ಮೈಸೂರಿನ ಒಂದು ಗೌರವದ ಸಂಕೇತ ಇದು. ಆ ಸಂಕೇತಕ್ಕೆ ಕಾರಣರಾದಂಥ ಗ್ರಾಮೀಣ ಜನ, ನೇಯ್ಗೆಯವರು ಏನಿದ್ದಾರೆ ಅಥವಾ ಹಿಪ್ಪುನೇರಳೆ ಬೆಳೆಯುತಕ್ಕವರು ಏನಿದ್ದಾರೆ, ಆ ಜನರಿಗೆ ನಮ್ಮಿಂದ ಅನ್ಯಾಯವಾಗಬಾರದು. ಇನ್ನು ಯಾವುದಾದರೂ ರೂಪದಲ್ಲಿ ಎರಡು ಕೋಟಿ ರೂಪಾಯಿ ಕೊಡಿಸೋಣ. ಅಥವಾ ಅವರಿಗೆ ಇಲ್ಲಿ ನ್ಯಾಯವಾಗಿ ಅವರು ನೇಯ್ದು ಕಳುಹಿಸತಕ್ಕಂತಾದ್ದಕ್ಕೆ ಪ್ರಯತ್ನ ಮಾಡಿದರೆ ಅದನ್ನು ಮತ್ತೆ ತರುವುದಕ್ಕೆ ಸಾಧ್ಯ ಇದೆ. ಆದ್ದರಿಂದ, ದಯಮಾಡಿ ಇದನ್ನು ಹಾಳು ಮಾಡುವುದಕ್ಕೆ ಕಾರಣವಾಗಿದೆಯೋ ಏನೋ ಎನ್ನುವಷ್ಟರಮಟ್ಟಿಗೆ ಪತ್ರಿಕೆಗಳಲ್ಲಿ ನೋಡಿದ್ದೇನೆ. ಇದನ್ನು ಪರಿಷ್ಕರಣ ಮಾಡಬೇಕೆಂದು ನಾನು ನಿಮ್ಮಲ್ಲಿ ಪ್ರಸ್ತಾಪಮಾಡುತ್ತೇನೆ. ಇನ್ನು ಒಂದೆರಡು ವಿಚಾರಗಳನ್ನು ಪ್ಲಾನಿಂಗ್ ಮೇಲೆ ಹೇಳಬೇಕಾಗಿದೆ. ಪ್ಲ್ಯಾನಿಂಗ್ ಮಂತ್ರಿಗಳು ಬಂದಿದ್ದಾರೆ.

ಛೇರ್ಮನ್.—ಈಗ ಸಭೆ ಮುಂದುವರಿದು. ಪುನಃ ಎರಡು ಗಂಟೆಗೆ ಸೇರುವುದು.

(ಸದನವು ೧-೦೦ ಗಂಟೆಗೆ ಮುಕ್ತಾಯವಾಗಿ ಪುನ. ೨-೧೦ ಗಂಟೆಗೆ ಸಮಾವೇಶಕೊಳ್ಳಲು ತೀರ್ಮಾನಿಸಿತು)

(ಸದನವು ಪುನಃ ೨.೧೫ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಉಪಾಧ್ಯಕ್ಷರೇ ಯೋಜನಾ ಇಲಾಖೆ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ಸದನದಲ್ಲಿ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ. ಯೋಜನೆ ಎಂಬುದು ಪಂಡಿತ್ ಜವಹರ್‌ಲಾಲ್ ನೆಹರು ದೃಷ್ಟಿಯಲ್ಲಿ ಬಹಳ ಮುಖ್ಯವಾದದ್ದು. ಅವರು ಒಂದು ಮುಖ್ಯವಾದ ಮಾತು ಹೇಳಿದ್ದಾರೆ. ಏನೆಂದರೆ

"Planning means some conception of the goal we are striving for of the kind of society we are aiming at, trying to work up towards that end harmoniously and peacefully with as few obstacles as posible, laying down targets so that on all sectors we may advance simultaneously".

ಎಂದು ಒಂದು ಭವ್ಯ ಸಮಾಜವನ್ನು ನಿರ್ಮಾಣ ಮಾಡುವ ಕಾರ್ಯಕ್ಕೆ ಒಂದು ಮೂರ್ತಿ ಸ್ವರೂಪ ಇರಬೇಕು. ಅದನ್ನು ಅಷ್ಟೇ ಕೊಟ್ಟರೆ ಸಾಲದು ಆ ಗುರಿ ಮುಟ್ಟಲು ನಾವು ನಮ್ಮದೇ ಆದ ಕೆಲವು ಕಾರ್ಯಕ್ರಮಗಳನ್ನೂ ಹಾಕಿಕೊಳ್ಳಬೇಕು ಮತ್ತು ಎಲ್ಲಾ ಕಾರ್ಯಕ್ರಮಗಳು ಒಟ್ಟಿಗೇ ಹೋಗಬೇಕು, ಇದಕ್ಕೆ ಬೇಕಾಗಿರುವ ಆಡಳಿತಾತ್ಮಕ ಹಾಗೂ ಬೇರೆ ಬೇರೆ ವ್ಯವಸ್ಥೆಗಳನ್ನು ಕ್ರೋಢೀಕರಿಸಿಕೊಳ್ಳಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಹಾಗಿದ್ದರೆ ೬ನೇ ಪಂಚವಾರ್ಷಿಕ ಯೋಜನೆ ಗುರಿಗಳೇನು ? ಅದನ್ನು ಗಮನದಲ್ಲಿಟ್ಟುಕೊಂಡು ನಾವು ವಾರ್ಷಿಕ ಯೋಜನೆಯನ್ನು ಮತ್ತು ೬ನೇ ಪಂಚವಾರ್ಷಿಕ ಯೋಜನೆ ಗುರಿಯನ್ನು ತಲುಪುವುದಕ್ಕೆ ಬೇಕಾದ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಆ ಕಾರಣ ಮೊದಲು ೮೦–೮೧ರ ವಾರ್ಷಿಕ ಗುರಿ ಮುಟ್ಟಲು ಬೇಕಾಗಿರುವ ಒಂದು ಭಾಗವನ್ನು ಹೊರಗಿಟ್ಟು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾನು ಅರ್ಥಮಾಡಿಕೊಂಡಂತೆ ನಾಲ್ಕು ಪ್ರಮುಖವಾದ ಗುರಿಗಳನ್ನು ಇಟ್ಟುಕೊಂಡಿದ್ದಾರೆ. ಒಂದು, ಬಡತನದ ನಿರ್ಮೂಲನೆಗೆ ಬಹಳ ಮುಖ್ಯವಾದ ಉದ್ಯೋಗ ಸೃಷ್ಟಿ ಮಾಡುವುದು, ಇದು ಹೇಳಿದಷ್ಟು ಸುಲಭವಲ್ಲ Right to work should become part and parcel of the Consisticution ಅನ್ನುವಂಥಾದ್ದು ನಮ್ಮ ಪಕ್ಷದ ಪ್ರಣಾಳಿಕೆಯ ಒಂದು ಅತ್ಯಂತ ಪ್ರಮುಖವಾದಂಥ ಅಂಶ. ಇದನ್ನು ರಾಜ್ಯಾಂಗದ ಒಂದು ಭಾಗವಾಗಿ ಮಾಡುವುದಕ್ಕೆ ಮುನ್ನ ಅದಕ್ಕೆ ಬೇಕಾದಂತ ಸ್ಥೂಲವಾದ ವ್ಯವಸ್ಥೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯ ಗುರಿ ಉದ್ಯೋಗದ ನಿರ್ಮಾಣ. ಕೆಲಸ ಮಾಡುವ ಹಕ್ಕು ಮೂಲಭೂತ ಹಕ್ಕಾಗಿಬಿಟ್ಟರೆ ಮಾತ್ರ ರಾಜ್ಯಾಂಗದಲ್ಲಿ ಬರೆದರೆ ಮಾತ್ರ ಉದ್ಯೋಗಗಳು ನಿರ್ಮಾಣವಾಗುತ್ತದೆ ಕೆಲಸ ದೊರೆಯುತ್ತದೆ ಎಂದು ಅಲ್ಲ. ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಯೊಳಗೆ ಆ ಆಳ್ವಿಕೆಯ ಇತಿಮಿತಿಯೊಳಗೆ ತನಗೂ ಏನಾದರೂ ಸಿಕ್ಕೀತು ಎನ್ನತಕ್ಕಂಥ ನಂಬಿಕೆ ವಿಶ್ವಾಸ ಜನರಲ್ಲಿ ಬರಬೇಕು ಎನ್ನುವ ಕಾರಣದಿಂದ ಬಹುಶಃ poverty alivation and eradication of unemployment ಎಂಬುದನ್ನು ಮೊದಲ ಪ್ರೋಗ್ರಾಮ್ ಎರಡನೆಯದು ಡೀಸೆಂಟ್ರಲೈಜೇಷನ್. ಈ ವಿಕೇಂದ್ರಿಕೃತ ವ್ಯವಸ್ಥೆ ಇಂದು ನಿನ್ನೆಯದಲ್ಲ. ಗಾಂಧೀ ಪ್ರಣೀತ ಚತುಷ್ಕಂಬ ರಾಷ್ಟ್ರದ ವ್ಯವಸ್ಥೆಯ ಮೂಲಸ್ವರೂಪವೇ ಈ ವಿಕೇಂದ್ರೀಕೃತ ವ್ಯವಸ್ಥೆ. ಕರ್ನಾಟಕದ ಹಿಂದಿನ ಸರ್ಕಾರಕ್ಕೆ ದಿವಂಗತ ನಜೀರ್ ಸಾಹೇಬರಿಗೆ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಈ ಬಹು ಭಾಗದ ಕೀರ್ತಿಯನ್ನು ನಾವು ಕೊಡಬೇಕಾಗುತ್ತದೆ. ಅಂಥ ಒಂದು ವ್ಯವಸ್ಥೆಯನ್ನು ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಹ ತೇಕ ಈ ರಾಷ್ಟ್ರದ ಮತ್ತು ಹೊರಗಡೆಯ ವರು ಕೂಡ ಇದರ ಒಂದು ವಿಶೇಷ ಗೌರವಕ್ಕೆ ಪಾತ್ರರಾದರು. ಅದರಲ್ಲಿ ದೋಷಗಳು ಇಲ್ಲ ಎಂದು ನಾನು ಹೇಳುವುದಿಲ್ಲ ತಿದ್ದುವುದಕ್ಕೆ ಅವಕಾಶಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಪ್ಲಾನಿಂಗ್ ಪ್ರೋಸೆಸ್ ಏನು ಇದೆ, ಇದು ತಿರುವುಮುರುವು ಆಗಿದೆ. ಕೆಳಗಡೆಯಿಂದ ಪ್ಲಾನಿಂಗ್ ಮೇಲಕ್ಕೆ ಹೋಗುವುದಿಲ್ಲ. ಮೇಲೆ ಕುಳಿತು ನಾವು ಪ್ಲಾನಿಂಗ್ ಪ್ರೋಸೆಸ್‌ನ್ನು ಪ್ರಾರಂಭ ಮಾಡುತ್ತೇವೆ ಆ ಕಾರಣ ಯೋಜನೆಗಳ ರೂಪು ಅಲ್ಲಿನ ಪರಿಸರಕ್ಕೆ ಹೊಂದಿಕೊಂಡು ಅಲ್ಲಿಯ ಜನರ ಅಭೀಷ್ಟಗಳನ್ನು ನೆರವೇರಿಸುವುದಕ್ಕೆ ಅಡ್ಡಿರತಕ್ಕಂಥ ಇತಿಮಿತಿಗಳನ್ನು ಅರ್ಥಮಾಡಿಕೊಂಡು ಅಲ್ಲಿಂದಲೇ ಬರಬೇಕು ಎನ್ನುವ ಮೂಲಚಿಂತನೆ ಏನು ಇದೆ, ಈ ಒಂದು ಚಿಂತನೆಯನ್ನು ರಾಜ್ಯಾಂಗದ ಬದಲಾವಣೆಯ ಮೂಲಕ ಇದನ್ನು ತರಬೇಕು ಎನ್ನುವ ಪ್ರಯತ್ನವನ್ನು ಹಿಂದಿನ ಸರ್ಕಾರ ಮಾಡಿದಾಗ ಕೂಡ ಅಲ್ಪ ಸ್ವಲ್ಪ ದೋಷಗಳು ಸಮಾಧಾನಕರವಾಗಿ ಎಲ್ಲರೂ ಒಟ್ಟಾಗಿ ಹೋಗದೇ ಇರುವುದರಿಂದ ಆ ರಾಜ್ಯಾಂಗದ ತಿದ್ದುಪಡಿಯನ್ನು ವಾಪಸ್ ತರಬೇಕಾಯಿತು, ಇದು ಎರಡನೆಯ ಗುರಿ. ಸ್ವಲ್ಪಮಟ್ಟಿಗೆ ಇದರಲ್ಲಿ ಕರ್ನಾಟಕ ಒಂದು ಹೆಜ್ಜೆ ಮುಂದೆ ಇದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದಂಥ ಸಂಗತಿ. ಇನ್ನು ಬಹಳ ಮುಖ್ಯವಾಗಿರತಕ್ಕಂಥದ್ದು ಅಂದರೆ ಬೇಸಿಕ್ ನೀಡ್ಸ್, ಅವಶ್ಯಕವಾದಂಥ ಅಗತ್ಯಗಳು ಏನು ? ಅದು ಕುಡಿಯುವ ನೀರು ಇರಬಹುದು. ಅಥವಾ ಕೆರೆಗಳನ್ನು ರಸ್ತೆಗಳನ್ನು ದುರಸ್ತಿ ಮಾಡಿಸುವುದು ಇರಬಹುದು, ವಿದ್ಯಾಭ್ಯಾಸದ ಅಭಿವೃದ್ಧಿ ಕಾರ್ಯ ಇರಬಹುದು, ಮತ್ತು ಗ್ರಾಮೀಣ ಜನರಲ್ಲಿ ಇರತಕ್ಕಂಥ ಮಕ್ಕಳಿಗೆ ಬೇಕಾಗಿರತಕ್ಕಂಥ ಪ್ರೋಟೀನ್ ಫುಡ್ ಕೊಡತಕ್ಕಂಥ ವ್ಯವಸ್ಥೆ ಇರಬಹುದು. ಹೀಗೆ ಹಲವು ಹತ್ತಾರು ವಿಭಾಗದಲ್ಲಿ ಬೇಸಿಕ್ ನೀಡ್ ಪ್ರೋಗ್ರಾಮನ್ನು ಮೂರನೆಯ ಒಂದು ಪ್ರೈಯಾರಿಟಿಯಾಗಿ ಎಂಟನೇ ಪಂಚ ವಾರ್ಷಿಕ ಯೋಜನೆಯಲ್ಲಿ ಇಟ್ಟುಕೊಂಡಿದ್ದಾರೆ. ನಾಲ್ಕನೆಯದು ಮತ್ತು ಅತ್ಯಂತ ಮುಖ್ಯವಾದದ್ದು rural orientation to the planning ಇದುವರೆಗೆ, ಪ್ಲಾನಿಂಗ್ ಪ್ರೋಸೆಸ್‌ನಲ್ಲಿ ೩೦ ಅಥವಾ ೩೩ ಕ್ಕಿಂತ ಹೆಚ್ಚು ಭಾಗವನ್ನು ಗ್ರಾಮೀಣ ಪ್ರದೇಶದ ಮತ್ತು ನೂರಕ್ಕೆ ೬೦ ರಷ್ಟು ಜನ ಅಥವಾ ಒಟ್ಟಾರೆ ಶೇಕಡ ೭೨ ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಜನಕ್ಕೆ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಹಾಕತಕ್ಕಂತಹ ಯೋಜನೆಗಳ ಫಲ ಮತ್ತು ಅದರ ಲಾಭ ಅವರಿಗೆ ದೊರೆಯುತ್ತಿಲ್ಲ ಎನ್ನತಕ್ಕಂಥ ಕಟು ಸತ್ಯವನ್ನು ನೆನಪಿನಲ್ಲಿಟ್ಟುಕೊಂಡು ಇವತ್ತು

ಪ್ಲಾನಿಂಗ್ ಪ್ರೊಸೆಸ್‌ನಲ್ಲಿ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಿಸುಮಾರು ಶೇಕಡ ೪೯ ಭಾಗವನ್ನು ಇತ್ತೀಚಿನ ವರ್ಕಿಂಗ್ ಪ್ಯಾಟ್ರನ್‌ನಲ್ಲಿ ಸ್ವಲ್ಪ ಹೆಚ್ಚು ಬಂದಿದೆ ಎಂದು ಹೇಳುತ್ತಾರೆ. ಆದರೆ ನಮಗೆ ಗೊತ್ತಿರುವ ಹಾಗೆ ಶೇಕಡ ೪೯ ಭಾಗ ಒಟ್ಟಾರೆ ಪ್ಲಾನಿಂಗ್‌ನ ಒಂದು ಗುರಿಯನ್ನು ಸಾಧಿಸುವುದಕ್ಕೆ ಗ್ರಾಮೀಣ ಪ್ರದೇಶಕ್ಕೆ ಈ ವ್ಯವಸ್ಥೆಯನ್ನು ಕೊಂಡೊಯ್ಯತಕ್ಕಂಥ ಮತ್ತು ಅಲೊಕೇಷನ್ ಮಾಡತಕ್ಕಂಥ ನಿರ್ಣಯವನ್ನು ಮಾಡಿದರು. ಇವೆಲ್ಲಾ ನಾಲ್ಕು ಪ್ರಮುಖವಾದಂತಹ ಗುರಿಯನ್ನು ಏನು ಎಂಟನೇ ಪಂಚವಾರ್ಷಿಕ ಯೋಜನೆ ಹೊಂದಿಕೊಂಡಿದೆ. ಈ ಗುರಿ ಸಾಧನೆ ರಾಜ್ಯ ಸರ್ಕಾರಗಳ ಸಹಕಾರ ಇಲ್ಲದೇ ಸಾಧ್ಯ ಇಲ್ಲ. ರಾಜ್ಯಗಳಿಗೆ ಜನರ ಸಹಕಾರ ಇಲ್ಲದೇ ಸಾಧ್ಯ ಇಲ್ಲ. ಈ ಎರಡೂ ಕಟು ಸತ್ಯ. ಆದ್ದರಿಂದ ಈ ಒಂದು ಗುರಿ ಸಾಧನೆ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರ ಪೂರಕವಾದ, ಸಿದ್ಧತೆಗಳನ್ನು ಏನು ಮಾಡಿಕೊಂಡಿದೆ? ನಾವು ಏಳನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿದ್ದೇವೆ. ಎಂಟನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷದಲ್ಲಿದ್ದೇವೆ. ಇವೆರಡೂ ಬಹಳ ಮುಖ್ಯವಾದವುಗಳು. ನಾವು ಹೇಳಬಹುದೆಂದರೆ ಕ್ರೈಮರದಲ್ಲಿದ್ದೇವೆ ಹ್ಯಾಂಡ್ ಪೋಸ್ಟ್, ನಮ್ಮ ಗುರಿ ತಲುಪುವುದಕ್ಕೆ ಆಯ್ಕೆ ಮಾಡಿಕೊಂಡಿರತಕ್ಕ ಮಾರ್ಗಗಳು ನಿರ್ದಿಷ್ಟವಾಗಿವೆ. ಅದನ್ನು ತಲುಪುವುದಕ್ಕೆ ಬೇಕಾಗಿರತಕ್ಕಂಥ ವ್ಯವಸ್ಥೆಯನ್ನು ಅಥವಾ ಪೂರಕವಾದಂತಹ ಸಿದ್ಧತೆಗಳನ್ನು ತಾವು ಏನು ಮಾಡಿಕೊಂಡಿದ್ದೀರಿ ಎನ್ನುವುದನ್ನು ಈ ಸದನದ ಮೂಲಕ ಕರ್ನಾಟಕದ ಜನತೆಗೆ ನೀವು ವಿವರಣೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಗುರಿಯನ್ನು ಮುಟ್ಟುವುದಕ್ಕೆ ಹಾಕಿಕೊಳ್ಳಬೇಕಾದಂತಹ ಅಥವಾ ಉದ್ದೇಶ ಸಾಧನೆಗೆ ಬೇಕಾದಂಥ ಪೂರಕ ಸಿದ್ಧತೆ ಮಾಡುವಾಗ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದಂತಹ ಸಾಧನೆಗಳು, ತಪ್ಪು ಒಪ್ಪುಗಳನ್ನು ಮತ್ತು ಒಟ್ಟಿನಲ್ಲಿ ಅದಂಥ ದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಬಹಳ ಮುಖ್ಯವಾಗಿ ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ೩೫೭೫ ಕೋಟಿ ರೂಪಾಯಿಗಳ ಗುರಿಯನ್ನು ಹಾಕಿಕೊಂಡಿದ್ದು ಪ್ರಸಕ್ತ ಬೆಲೆಯಲ್ಲಿ ಅದನ್ನು ಹೋಲಿಸಿ ನೋಡಿದರೆ ೩೯೬೦ ಕೋಟಿ ರೂಪಾಯಿಗಳ ಒಂದು ಗುರಿ ಆಗುತ್ತದೆ. ಆದರೆ ದುರದೃಷ್ಟವಶಾತ್ ಅನುಮೋದಿತ ವೆಚ್ಚಕ್ಕಿಂತ ವಾಸ್ತವ ವೆಚ್ಚ ಸ್ವಲ್ಪ ಮಟ್ಟಿಗೆ ಕಡಿಮೆ ಆಗಿದೆ ಎನ್ನತಕ್ಕದ್ದನ್ನು ನಾವು ಒಪ್ಪಿಕೊಳ್ಳಬೇಕು. ಹಾಗೆ ಒಪ್ಪಿಕೊಂಡಾಗ ಅದಕ್ಕೆ ಕಾರಣಗಳನ್ನು ನಾವು ವಿವರವಾಗಿ ಚರ್ಚೆ ಮಾಡಬೇಕು. ನಾನು ಅಷ್ಟು ಗೂರ ಚರ್ಚೆಗೆ ಹೋಗುವುದಿಲ್ಲ ಸಾಕಷ್ಟು ಸಂದರ್ಭಗಳಲ್ಲಿ ಈ ವಿಚಾರಗಳು ಚರ್ಚೆ ಆಗಿದೆ. ಆದರೆ ನಾಗು ಅದಕ್ಕಾಗಿ ಸನ್ಮಾನ್ಯ ಹಣಕಾಸಿನ ಸಚಿವರು ಡಿಸೆಂಬರ್‌ನಲ್ಲಿ ಮಂಡಿಸಿದಂತಹ ಒಂದು ವರದಿಯನ್ನು ನಾನು ಹಿಂದೆ ಗಮನಕ್ಕೆ ತಂದ ಉದ್ದೇಶವೇ ಇದು. ಈ ಗುರಿ ಸಾಧನೆ ತಲುಪದೇ ಇರುವುದಕ್ಕೆ ಕರ್ನಾಟಕದಲ್ಲಿ ೩-೪ ವರ್ಷಗಳ ಸತತ ಬರಗಾಲ ಮತ್ತು ಇದ್ದಂತಹ ಪರಿಸ್ಥಿತಿ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಇಡೀ ರಾಷ್ಟ್ರದಲ್ಲಿ ಯಾವುದೇ ರಾಜ ಈ ಗುರಿಯನ್ನು ಮುಟ್ಟುವುದು ಸಾಧ್ಯ ಆಗಿಲ್ಲ ಎನ್ನುವುದು ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ಯಾವ ರಾಜ್ಯವೂ ಗುರಿ ಮುಟ್ಟಿಲ್ಲ. ಕೇಂದ್ರ ಸರ್ಕಾರ ಮುಟ್ಟುವುದಕ್ಕೆ ಸಾಧ್ಯ ಆಗುತ್ತದೆ ಎಂದರೆ, ಅವರಿಗೆ ಕಡಿಮೆ ಆದರೆ ನೋಟ್ ಪ್ರಿಂಟ್ ಮಾಡುವ ಅವಕಾಶ ಇದೆ, ನಮಗೆ ಇಲ್ಲ. ಆದ್ದರಿಂದ ಇರತಕ್ಕಂಥ ಒಂದು ಪರಿಸರ ಮತ್ತು ಪರಿಸ್ಥಿತಿಯನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡು ಈ ಒಂದು ಗುರಿ ಸಾಧನೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕೆಂದು ನಾನು ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ೧೯೯೦-೯೧ಕ್ಕೆ ನಮ್ಮ ಯೋಜನೆ. ನಾವು ಕೇಳಬೇಕು ಎಂದು ಹೊರಟಿದ್ದುದು ೧೧೦೦ ಕೋಟಿ ರೂಪಾಯಿಗಳು. ನಮಗೆ ಅನುಮೋದನೆ ದೊರೆತಿರತಕ್ಕದ್ದು ೧೧೪೫ ಕೋಟಿ ರೂಪಾಯಿಗಳು. ಇದರಲ್ಲಿ ೪೦ ಕೋಟಿ ರೂಪಾಯಿಗಳು ಹೈದರಾಬಾದ್ ಕರ್ನಾಟಕದ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ಅದರ ಒಂದು ವಿಶೇಷವಾದ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಆದರೆ ನಾನು ಇಲ್ಲಿ ಒಂದು ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಬಹಳ ಹಳೆಯ, ಅನುಭವಿ, ಈ ಸದನದ ಹಿರಿಯ ಸದಸ್ಯರೂ ಆದ ಅವರಲ್ಲಿ ನಾನು ಕೇಳುತ್ತೇನೆ. ಈ ೪೦ ಕೋಟಿ ರೂಪಾಯಿ ಕೊಡುವುದಕ್ಕಿಂತ ಮುಂಚೆ ವಿಶೇಷವಾದ ಯೋಜನೆ ಸಿದ್ಧಪಡಿಸುವುದಕ್ಕೆ ಮುಂಚೆ ಪ್ಲಾನಿಂಗ್ ಕಮೀಷನ್ ಅಧಿಕಾರಿಗಳು ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಪ್ರವಾಸ ಮಾಡಿ, ಅಲ್ಲಿಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇದರ ಅಗತ್ಯ ಇದೆ ಎಂದು ಈ ೪೦ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಸೇರಿಸುವಂತಹ ಪ್ರಯತ್ನ ಮಾಡಿದರು. ಸ್ವಾತಂತ್ರ್ಯ ನಂತರ ಪ್ಲಾನಿಂಗ್ ಪ್ರೊಸೆಸ್ ಪ್ರಾರಂಭ ಆದ ಮೇಲೆ ಎಲ್ಲಿಯಾದರೂ ಇಂತಹ ನಿದರ್ಶನ ಇದ್ದರೆ ನನ್ನ ನೆನಪಿಗೆ ತಂದುಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಉದ್ದೇಶ ಏನು ಇದೆ, ಇವೊತ್ತು ನಮ್ಮ ರಾಜ್ಯದ ಹಿರಿಯ ಮುಖಂಡರಲ್ಲಿ ಒಬ್ಬರಾದವರು ಪ್ಲಾನಿಂಗ್ ಕಮೀಷನ್‌ನ ಉಪಾಧ್ಯಕ್ಷರು ಆಗಿದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರೇ ಈ ಕೊಡುಗೆಯನ್ನು

ಕೊಟ್ಟರು ಎಂಬುದು ಹೇಳುವುದಕ್ಕಲ್ಲ, ಆದರೆ ಒಂದು ಪ್ಲಾನಿಂಗ್‌ನ ಆಲೋಚನೆ ಏನು ಇದೆ, ಥಿಂಕಿಂಗ್, ಇದರ ಗತಿಯಲ್ಲಿ ಬದಲಾವಣೆಯನ್ನು ತೋರಿಸಿದ್ದಾರೆ. ಇದನ್ನು ನಾವು ಅಪ್ರಿಷಿಯೇಟ್ ಮಾಡಬೇಕಾದ ಕೆಲಸ. ಆ ಕಾರಣ ನಾವು ೧೧೦೦ ಕೋಟಿ ರೂಪಾಯಿಯನ್ನು ಮುಂದಿನ ವರ್ಷದ ಯೋಜನೆ ಗುರಿಯನ್ನು ಇಟ್ಟುಕೊಂಡು ೪೦ ಕೋಟಿ ರೂಪಾಯಿಗಳನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಏರಿಯಾಗೆ ಮಾಡಿದ್ದೇವೆ. ಐದು ಕೋಟಿ ರೂಪಾಯಿಗಳನ್ನು ಗಡಿನಾಡ ಅಭಿವೃದ್ಧಿಗಾಗಿ ತಾವು ಮೀಸಲು ಇಟ್ಟಿದ್ದೀರಿ. ನಾನು ಇಲ್ಲಿ ಇನ್ನೊಂದು ಅಂಶವನ್ನು ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಅದು ಮೊದಲ ಬಾರಿಗೆ ಈ ವಾರ್ಷಿಕ ಯೋಜನೆಯು ತಯಾರಿಸಿ ಲ್ಲಗಲಿ, ಅದಕ್ಕೆ ಅನುಮೋದನೆ ಪಡೆಯುವಲ್ಲಿ ಆಗಲಿ, ಯಾವುದೇ ರಾಜ್ಯ ಆಗಲಿ, ಕರ್ನಾಟಕ ರಾಜ್ಯ ಎಂದು ಹೇಳುತ್ತಾ ಇಲ್ಲ, ಯಾವುದೇ ರಾಜ್ಯ ಎರಡನೆಯ ಅಭಿಪ್ರಾಯವನ್ನು ಹೇಳಿಲ್ಲ. ಎಲ್ಲಾ ರಾಜ್ಯಗಳು ಸಂತೋಷದಿಂದ ಈ ವಾರ್ಷಿಕ ಯೋಜನೆಯನ್ನು ಒಪ್ಪಿಕೊಂಡಿದ್ದಾರೆ ಒಪ್ಪಿಸತಕ್ಕಂಥ ಕೆಲಸವನ್ನು ಪ್ಲಾನಿಂಗ್ ಕಮಿಷನ್ ಮಾಡಿದೆ ಎನ್ನತಕ್ಕಂಥಾದ್ದು ನಿಜಕ್ಕೂ ಸಂತೋಷದ ವಿಚಾರ. ಎಲ್ಲರಿಗೂ ತೃಪ್ತಿಯಾಗುವಂಥ ಕಾರ್ಯವನ್ನು ಮಾಡುವುದು ಅಷ್ಟು ಸುಲಭವಲ್ಲ. ಎಲ್ಲ ರಾಜ್ಯಗಳಿಗೂ ತೃಪ್ತಿ ಬರುವ ಹಾಗೆ ವಾರ್ಷಿಕ ಯೋಜನೆಯನ್ನು ಈ ಸಾರಿಯ ಪ್ಲಾನಿಂಗ್ ಕಮಿಷನ್‌ನವರು ಮಾಡಿದ್ದಾರೆ. ನಾನು ಇಲ್ಲಿ ಹಿಂದುಳಿದ ಪ್ರದೇಶಗಳು ಎಂದು ಹೇಳುವಾಗ ನಾನು ಪುನಃ ಸ್ಟ್ಯಾಟಿಸ್ಟಿಕಲ್ ಡಾಟಾಸ್‌ಗೆ ಹೋಗುವದಿಲ್ಲ. ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದರ ಬಗ್ಗೆ ತುಂಬ ಸಂತೋಷ ವ್ಯಕ್ತ ಮಾಡಿದ್ದೇನೆ. ಅದೇ ರೀತಿ ಕರ್ನಾಟಕದ ಇನ್ನಿತರ ಭಾಗಗಳಿವೆ. ಉದಾಹರಣೆಗೆ ಕೋಲಾರ ಜಿಲ್ಲೆ, ಸ್ವಲ್ಪ ಮಟ್ಟಿಗೆ ತುಮಕೂರ ಜಿಲ್ಲೆ. ಚಿತ್ರದುರ್ಗ ಜಿಲ್ಲೆ ಇದೆ. ರಾಜ್ಯವನ್ನು ಒಟ್ಟಾರೆ ಭಾಗವಾಗಿ ಇಟ್ಟುಕೊಂಡು ನೋಡಿದರೆ ಇಂತಹ ೨-೩ ಜಿಲ್ಲೆಗಳು ಕೂಡ ಅಷ್ಟೇ ಹಿಂದುಳಿದಂಥ ಪ್ರದೇಶಗಳಿವೆ. ಹಾಗೆಯೇ ಬಿಜಾಪುರ ಜಿಲ್ಲೆ ಇದೆ. ಬಿಜಾಪುರ ಜಿಲ್ಲೆಯ ಒಟ್ಟು ಲೆಕ್ಕ ನೋಡಿದರೆ ಅಲ್ಲಿ ವಿದ್ಯಾವಂತರ ಸಂಖ್ಯೆ ಜಾಸ್ತಿ ಕಾಣುತ್ತದೆ. ೫ ನದಿಗಳು ಹರಿಯುತ್ತವೆ. ಆದರೆ ಅದರ ಉಪಯೋಗ ಎಷ್ಟಾಗಿದೆಯೆಂದು ನೋಡೋಣ. ಆ ಕಾರಣ ಈ ಅಭಿವೃದ್ಧಿ ಆಗದೆ ಇರತಕ್ಕಂಥ ಇಂತಹ ಕೆಲವು ಜಿಲ್ಲೆಗಳಿಗಾಗಿ ಮತ್ತೊಂದು ವಿಶೇಷವಾದಂಥ ಒಂದು ಹಿಂದುಳಿದ ಪ್ರದೇಶಗಳ ಯೋಜನೆ ಎನ್ನತಕ್ಕಂಥ ಒಂದು ಹೊಸ ಯೋಜನೆಯನ್ನು ಹಮ್ಮಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾನ್ಯ ಮಂತ್ರಿಗಳು ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆ ಬಗ್ಗೆ ಹೇಳಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಕೋಲಾರ ಜಿಲ್ಲೆ ಬಗ್ಗೆ ನಾನು ಮೊದಲೇ ಹೇಳಿದೆ. ನೀವು ಬಂದಿದ್ದು ತಡವಾಯಿತು. ಕೋಲಾರ, ಸ್ವಲ್ಪಮಟ್ಟಿಗೆ ತುಮಕೂರು, ಚಿತ್ರದುರ್ಗ ಜಿಲ್ಲೆಗಳು, ತೀರ ಹಿಂದುಳಿದ ಪ್ರದೇಶಗಳಿಗಾಗಿ ಒಂದು ಹೊಸ ಯೋಜನೆ ಮಾಡಿ ಎಂದು ಹೇಳಿದೆ. ಮತ್ತೊಂದು ಮುಖ್ಯವಾದಂಥಾದ್ದು ಮಲೆನಾಡಿನ ಅಭಿವೃದ್ಧಿ. ಶ್ರೀಮಾನ್ ರಾಜಶೇಖರ ಮೂರ್ತಿಯವರಿಗೆ ಇದರ ಬಗ್ಗೆ ಹೆಚ್ಚಿನ ಅನುಭವ ಉಂಟು. ಶ್ರೀಮಾನ್ ಬದರಿ ನಾರಾಯಣ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಮಲೆನಾಡಿನ ಅಭಿವೃದ್ಧಿ ಯೋಜನೆ ಎಂದು ಮಾಡಿದರು. ಕಾರಣವೇನೆಂದರೆ, ಮಲೆನಾಡಿಗೆ ವಿಶೇಷವಾದ, ವಿಶಿಷ್ಟವಾದ ಸಮಸ್ಯೆಗಳಿವೆ. ಮಲೆನಾಡಿನ ಈ ಸಮಸ್ಯೆಗೂ ಬಹುತೇಕ ಬಯಲು ಸೀಮೆಯ ಸಮಸ್ಯೆಗೂ ಸಂಬಂಧವೇ ಇಲ್ಲದೆ ಇರತಕ್ಕಂಥ ಸಮಸ್ಯೆಗಳಿವೆ. ಮೂಲಭೂತವಾದ ಸಮಸ್ಯೆ ಏನೆಂದರೆ, ಎಲ್ಲಾ ಕಾಡು. ೧೯೬೧ರಲ್ಲಿ ದಾವಾಪಾ ಸರ್ವೆ ಮಾಡಿಬಿಟ್ಟರು. ಮತ್ತೆ ಅವನ್ನೆಲ್ಲ ಮೈನರ್ ಫಾರೆಸ್ಟ್ ಎಂದು ಬೆಂಗಳೂರಿನಲ್ಲಿ ಮ್ಯಾಪ್ ಇಟ್ಟುಕೊಂಡು ಮಾಡಿದರು. ಹಾಗಾಗಿ ಇವತ್ತು ಅಲ್ಲಿ ಮನೆ ಕಟ್ಟುವುದಕ್ಕೆ, ಹೆಣ ಹೂಳುವುದಕ್ಕೆ ಜಾಗ ಇಲ್ಲ. ಕಾರಣ, ಮೈನರ್ ಫಾರೆಸ್ಟ್. ನಾನು ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಪ್ರಾಜೆಕ್ಟ್‌ನ್ನ ಎಲ್ಲಿ ಕಟ್ಟಿ ಮುಳುಗಿಸಿ ಬಿಟ್ಟಿದ್ದೀರಿ ಸಂತೋಷ. ದೇಶಕ್ಕಾಗಿ ಮುಳುಗಿದ್ದೇವೆ. ಆದರೆ ದೇಶಕ್ಕೆ ಮುಳುಗಿದ ಜನ ಇವತ್ತು ಕತ್ತಲೆಯಲ್ಲಿ ಬದುಕುತ್ತಿದ್ದಾರೆ. ಅವರಿಗೆ ಎಲೆಕ್ಟ್ರಿಸಿಟಿ ಕೊಡಿ ಎಂದು ಕೇಳಿದರೆ ಇಲ್ಲ. ದೇಶಕ್ಕೆ ಬೆಳಕು, ವಿದ್ಯುಚ್ಛಕ್ತಿ ಕೊಟ್ಟಿರುವವರನ್ನು ಕತ್ತಲಲ್ಲಿಟ್ಟು ಇವತ್ತು ಎಲೆಕ್ಟ್ರಿಸಿಟಿ ಕೊಡುವುದಕ್ಕಾಗುವುದಿಲ್ಲ, ಇವೆಲ್ಲ ಮುಳುಗಡೆ ಪ್ರದೇಶ ಏನು ಹೇಳುತ್ತಾರೆ. ಏಕೆಂದರೆ ಮತ್ತೆ ಅವು ಮುಳುಗುತ್ತವೆ. ಅವರಿಗೆ ವ್ಯವಸಾಯ ಬಿಟ್ಟು ಬೇರೆ ಯಾವ ಕಸಬು ಗೊತ್ತಿಲ್ಲ. ಅವರು ಏನು ಮಾಡಬೇಕು, ಯಾವುದೋ ಮುಳುಗಿದರೆ ಸರಿ. ಸಿಕ್ಕಿದಷ್ಟು ಪರಿಹಾರ ಅವರ ಸಿಕ್ಕುತ್ತಿದೆ ಎಂದು ಅದನ್ನು ತೆಗೆದುಕೊಂಡು ಬೇರೆ ಏನೋ ಮಾಡುವುದಕ್ಕೆ ಹೋಗಿ ಏನಾಗಿದೆಯೆಂದರೆ, ಹತ್ತಾರು ಕುಟುಂಬಗಳನ್ನು ಸಾಕುತ್ತಿದ್ದ ಮನೆಗಳು ಇವತ್ತು ಹತ್ತಾರು ಕುಟುಂಬಗಳಲ್ಲಿ ಭಿಕ್ಷೆ ಎತ್ತತಕ್ಕಂಥ ಸ್ಥಿತಿ ಇದೆ. ಇದು

ವಸ್ತುಸ್ಥಿತಿ. ನಾನು ವಿಶೇಷಣಗಳನ್ನು ಇಲ್ಲಿ ಬಳಸುವಾಗ ಅನುಭವದ ಆಧಾರದ ಮೇಲೆ ತಮಗೆ ಹೇಳುತ್ತಿದ್ದೇನೆ. ಒಂದು ರಸ್ತೆ ಮಾಡಬೇಕು, ಅದಕ್ಕೆ ಎಷ್ಟು ಸಾರಿ ಬೇಕಾದರೂ ಮಣ್ಣು ಹಾಕಿ. ಜೂನ್, ಜುಲೈ, ಆಗಸ್ಟ್ ಮುಗಿಸಿಕೊಂಡು ಮತ್ತೆ ಹೋದರೆ, ಅಲ್ಲಿ ಒಂದು ರಸ್ತೆ ಇತ್ತು ಎಂಬ ನೆನಪು ಕೂಡ ಉಳಿದಿರುವುದಿಲ್ಲ. ಆದ್ದರಿಂದ ಅಲ್ಲಿ ಏನಾದರೂ ವಿಶೇಷವಾಗಿ ಮಾಡಬೇಕು. ಬೇರೆ ಕಡೆ ಎರಡು ಕಿಲೋಮೀಟರ್ ಟಾರ್ ಮಾಡುವುದಾದರೆ ನಮ್ಮ ಕಡೆ ೧೦ ಕಿಲೊಮೀಟರ್ ಟಾರ್ ಮಾಡತಕ್ಕದ್ದು ಆಗಬೇಕು. ರಸ್ತೆಗೆ ಮಣ್ಣು ಹಾಕುವ ಕೆಲಸದ ಬದಲು ಅಲ್ಲಿ ಪರಿಪೂರ್ಣವಾದಂಥ ಪಕ್ಕಾ ರಸ್ತೆ ಮಾಡಿ. ಎಷ್ಟಾಗುತ್ತದೋ ಅಷ್ಟು ಕೆಲಸವನ್ನು ಮಾಡಿಕೊಳ್ಳುತ್ತಾ ಬಂದಿದ್ದರೆ ಬಹುಶಃ ಏಳನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಈ ಕಮ್ಯುನಿಕೇಷನ್ ಸಮಸ್ಯೆಗಳು ಬಗೆಹರಿಯುತ್ತಿದ್ದುವು. ಮತ್ತೆ ವಿದ್ಯಾಭ್ಯಾಸ ಮತ್ತು ಕುಡಿಯುವ ನೀರು ಸಹ ಅಷ್ಟೇ ಮುಖ್ಯವಾದದ್ದು. ಕುಡಿಯುವ ನೀರು ಕೊಡುವುದಕ್ಕೆ ಜನಸಂಖ್ಯೆ ಆಧಾರ. ಒಂದು ಕಡೆ ೨೦೦೦ ಜನಸಂಖ್ಯೆ ಇರಬೇಕು. ಇನ್ನೊಂದು ಕಡೆ ೧೭೫೦ ಇರಬೇಕು. ಕೊಳವೆ ಬಾವಿ ಇರುವ ಕಡೆ ೨೦೦ ಕಡಿಮೆ ಮಾಡಿ ಎಂದು ಹೇಳುತ್ತಾರೆ. ಜನಸಂಖ್ಯಾ ದೃಷ್ಟಿಯಿಂದ ಮಲೆನಾಡನ್ನು ಅಳೆಯುವುದಕ್ಕಾಗುವುದಿಲ್ಲ. ಭೌಗೋಳಿಕವಾಗಿ ನಮ್ಮ ಒಂದು ಊರಿಗೆ ನಿಮ್ಮ ಹತ್ತು ಊರುಗಳನ್ನು ಸೇರಿಸಿದರೂ ಆಗುವುದಿಲ್ಲ. ಆದರೆ ನಮ್ಮಲ್ಲಿ ಜನಸಂಖ್ಯೆ ಕಡಿಮೆ. ಇಂಥ ಅನೇಕ ಸಮಸ್ಯೆಗಳು ನಮ್ಮಲ್ಲಿ ಇವೆ. ಹಿಂದೆ ಇದ್ದಂಥ ಮಲೆನಾಡು ಅಭಿವೃದ್ಧಿ ಯೋಜನೆ. ಬರೀ ಮಲೆನಾಡು ಜಿಲ್ಲೆಗಳಿಗೆ ಸೀಮಿತವಾಗಿಲ್ಲ. ಪಶ್ಚಿಮ ಘಟ್ಟಗಳನ್ನು ಸೇರಿಸಿಕೊಂಡು ಹೊಸ ಯೋಜನೆಯನ್ನು ತರತಕ್ಕಂಥ ವ್ಯವಸ್ಥೆಯನ್ನು ಶ್ರೀಮಾನ್ ವೀರಪ್ಪಮೊಯಿಲಿಯವರು ವಿಶೇಷವಾಗಿ ಮಾಡಬೇಕು. ಕಾರಣ ಏನೆಂದರೆ, ಪೂರ್ಣವಾಗಿ ಅವರು ಮಲೆನಾಡಿನಿಂದ ಬಂದವರು. ಅಲ್ಲಿನ ಸಮಸ್ಯೆಗಳ ಅರಿವು ಅವರಿಗೆ ಇದೆ. ಘಟ್ಟ ಇಳಿದರೇನು, ಘಟ್ಟ ಹತ್ತಿದರೇನು ಎನ್ನುವ ಅರಿವು ಅವರಿಗೆ ಇದೆ. ಆದಕಾರಣ ದಯಮಾಡಿ ಇಂತಹ ಒಂದು ಹೊಸ ಯೋಜನೆಯನ್ನು ತಾವು ಜಾರಿಗೆ ತರಬೇಕು. ಬಹು ಮುಖ್ಯವಾಗಿ ನಮ್ಮಲ್ಲಿ ಎಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ ಎಂದು ಒಂದು ಇತ್ತು. ಅದನ್ನು ಈ ಸರ್ಕಾರ ಬಂದ ತಕ್ಷಣ ವಜಾ ಮಾಡಿದರು. It is not only an expert body, but it had the good fortune of taking the opinion of the general public also. ಬೇರೆಯವರೂ ಇರಬೇಕಾಗುತ್ತದೆ. ನಾನು ಇದನ್ನು ಚಿಂತನ ಚಿಲುಮೆ ಎಂದು ಕರೆಯುವುದಿಲ್ಲ. ಚಿಂತನೆ ಬೇಕಾಗುತ್ತದೆ. ಯೋಜನೆಗಳಿಗೆ ಚಿಂತನೆ ಬೇಕಾಗುತ್ತದೆ. ಗೇಣಿದಾರರು ಯಾರು ಎಂದು ಹೇಳುವುದಕ್ಕೆ ಚಿಂತನೆ ಬೇಕಾಗಿಲ್ಲ. ಇದನ್ನು ಯಾರು ಬೇಕಾದರೂ ಹೇಳಬಹುದು. ಭೂ ಮಾಲೀಕರು ಮತ್ತು ಗೇಣಿದಾರರನ್ನು ಗುರುತಿಸುವುದಕ್ಕೆ ಯಾವುದೇ ಚಿಂತನೆ ಬೇಕಾಗಿಲ್ಲ. ಆದರೆ ಯೋಜನೆಗಳನ್ನು ಮಾಡುವಾಗ ಚಿಂತನೆ ಬೇಕಾಗುತ್ತದೆ, ಈ ಚಿಂತನೆಗಳು ಇಲ್ಲದ ಕಾರಣ. ಲೋಕೋಪಯೋಗಿ ಮಂತ್ರಿಗಳಿಗೆ ಕೇಳುತ್ತೇನೆ. ಯಾವುದಾದರೂ ಒಂದು ಯೋಜನೆ ನೀವು ನಿರ್ಧಾರ ಮಾಡಿದ್ದು, ಆ ದುಡ್ಡಿಗೆ, ಆ ಕಾಲಕ್ಕೆ ಆಗಿದ್ದನ್ನು ಒಂದನ್ನು ತಂದು ಕೊಟ್ಟರೆ ನಾನು ಕೃತಾರ್ಥನಾಗುತ್ತೇನೆ. ನಾನು ಇಷ್ಟು ವರ್ಷ ಸಾರ್ವಜನಿಕ ಜೀವನದಲ್ಲಿದ್ದುದಕ್ಕೂ ಸಾರ್ಥಕವಾಗುತ್ತದೆ, ಯೋಜನೆಗಳೆಲ್ಲಾ ತಿರುವುಮುರುವು ಆಗಿತ್ತಿವೆ. ಆದ್ದರಿಂದ ದಯಮಾಡಿ ಸಾಧ್ಯವಾದಷ್ಟು ಬೇಗ ಈ ಎಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ ಅನ್ನು ಪುನಃ ನೇಮಕ ಮಾಡಿ. ಚಿಂತನೆ ಚಿಲುಮೆ ಬಗ್ಗೆ ನಿಮಗೆ ಆಸಕ್ತಿ ಇಲ್ಲವೋ ಅಥವಾ ಹಿಂದಿನ ಸರ್ಕಾರದವರು ಮಾಡಿದ್ದು ಎನ್ನುವ ಅಸಡ್ಡೆ ಮನೋಭಾವನೆ ಇದ್ದರೆ, ಪ್ಲಾನಿಂಗ್ ಬೋರ್ಡ್ ಆದರೂ ಮಾಡಿ. ಹಿಂದೆ ಇದು ಇತ್ತು. ಈಗ ಮತ್ತೆ ಪ್ಲಾನಿಂಗ್ ಬೋರ್ಡ್ ಮಾಡಿದರೆ, ಚಿಂತನಶೀಲರು ಎನ್ನುವ ಮನೋಭಾವನೆ ಏನಿದೆ, ಅದನ್ನು ಬೇಕಾದರೆ ತೆಗೆದುಹಾಕಿ. You can add few more. ಆದ್ದರಿಂದ ತಾವು ಪ್ಲಾನಿಂಗ್ ಬೋರ್ಡ್ ಮಾಡತಕ್ಕ ಪ್ರಯತ್ನವನ್ನು ಆದಷ್ಟು ಬೇಗ ಮಾಡಬೇಕು. It is not only the requirement of the State, but it is the requirement of the Planning Commission also ಆ ಕಾರಣದಿಂದ ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಮತ್ತೆ ೮ನೇ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದ ಡ್ರಾಫ್ಟ್ ಪ್ಲಾನ್ ತಯಾರಾಗಿದೆ. ಈ ಸಂದರ್ಭದಲ್ಲಿ ಸ್ವಲ್ಪ ಅನುಭವಿಗಳ ಮತ್ತು ಚಿಂತನ ಶೀಲರ ಬುದ್ಧಿವಾದ ಮತ್ತು ಅನುಭವಗಳ ಸಂಯೋಜನೆ ಬೇಕಾಗುತ್ತದೆ. ಈ ಸಂಯೋಗಕ್ಕಾಗಿ ನೀವು ಸಾಧ್ಯವಾದಷ್ಟು ಜನಾಭಿಪ್ರಾಯವನ್ನು ರೂಢಿಸಿಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳಿ, ದೀರ್ಘವಾಗಿ ಪ್ಲಾನಿಂಗ್ ಬಗ್ಗೆ ಹೇಳುವುದೇನೋ ಇಲ್ಲ. ಏಕೆಂದರೆ, ಹಿಂದಿನದ್ದು ಹಳೇ ಕಥೆ. ಹೊಸ ಯುಗ ೮ನೇ ಪಂಚವಾರ್ಷಿಕ ಯೋಜನೆಯಿಂದ ಪ್ರಾರಂಭವಾಗತಕ್ಕ ಈ ಹೊತ್ತಿನಲ್ಲಿ ತಾವು ಹೆಚ್ಚು ಚಿಂತನ ಶೀಲರಾಗಬೇಕೆಂಬ ಮಾತನ್ನು,

ಹೇಳುತ್ತೇನೆ. ಈಗ ನಮ್ಮ ಮುಂದೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹೀಗೆ ಎರಡೂ ಇರುವುದರಿಂದ ಒಂದೆರಡು ಮಾತನ್ನು ಹೇಳುತ್ತೇನೆ. ಹಿಂದೆ ಮುನ್ಸೀಫರುಗಳನ್ನು ಆಯ್ಕೆ ಮಾಡುವಂಥ ಒಂದು ವ್ಯವಸ್ಥೆ ಏನಿತ್ತು, ಅದನ್ನು ಹಿಂದಿನ ಸರ್ಕಾರದವರು ಪಬ್ಲಿಕ್ ಸರ್ವೀಸ್ ಕಮೀಷನ್‌ನಿಂದ ತೆಗೆದು, ಹೈಕೋರ್ಟಿಗೆ ಕೊಟ್ಟರು. ಆಯ್ಕೆಯಲ್ಲಿ ರಾಜಕೀಯ ಪ್ರವೇಶ ಮಾಡಬಾರದು ಎನ್ನುವ ದೃಷ್ಟಿಯಿಂದ. ಇವತ್ತು ಹೆಚ್ಚು ಕಡಿಮೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದೊಂದು ಕೋರ್ಟುಗಳು ಇವೆ. ಅವು ಹೇಗಿವೆ ? ಮುನ್ಸೀಫ ಮ್ಯಾಜಿಸ್ಟ್ರೇಟರುಗಳು ಅಲ್ಲಿಗೆ ಹೋದ ಮೇಲೆ ಬಾಡಿಗೆ ಮನೆಯನ್ನು ಹುಡುಕಬೇಕು. ಜನತೆಗೆ ನ್ಯಾಯ ಸಿಗಬೇಕಾದರೆ ನ್ಯಾಯಾಧೀಶರು ನಿರ್ಬಾಧವಾಗಿ ನ್ಯಾಯವನ್ನು ಕೊಡಬೇಕೆಂಬ ಇಚ್ಛೆ ಇದ್ದರೆ ನ್ಯಾಯಾಧೀಶರುಗಳಿಗೆ ಬೇಕಾದ ವಸತಿ ವ್ಯವಸ್ಥೆಯನ್ನು ಮಾಡುವಂಥದ್ದು ಅತ್ಯಗತ್ಯವಾಗಿದೆ. This is the basic essential. ಎಲ್ಲಾ ಕಡೆಗೂ ನ್ಯಾಯಧೀಶರುಗಳಿಗೆ ಕಟ್ಟಡಗಳು ಇಲ್ಲ. ನಮಗೆ ಎಷ್ಟೇ ತೊಂದರೆಗಳು ಇದ್ದರೂ atleast Justice appears to be honest. ಇಷ್ಟಾದರೂ ನ್ಯಾಯಾಧೀಶರ ಬಗ್ಗೆ ಬೇಕಾದಷ್ಟು ಬಾಂಬೆ ಹೈಕೋರ್ಟ್‌ನಲ್ಲಿ ಏನಾಯಿತು, ಅವೆಲ್ಲಾ ಇವೊತ್ತಿನ ಸಂದರ್ಭಕ್ಕೆ ಪ್ರಸಕ್ತವಲ್ಲ. ದಯಮಾಡಿ ನ್ಯಾಯಾಲಯದ ಕಟ್ಟಡಗಳನ್ನು ಕಟ್ಟತಕ್ಕಂಥ ಒಂದು ಪ್ರಯತ್ನವನ್ನು ತಾವು ಮಾಡಬೇಕು. ಇನ್ನು ಕೊನೆಯದಾಗಿ ಮಾನ್ಯ ಉಪಾಧ್ಯಕ್ಷರು ಏನಿದ್ದಾರೆ, ಅವರಿಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಕಾರಣ ಏನು ಅಂದರೆ, ಸ್ಟೇಟ್ ಲೆಜಿಸ್ಲೇಚರ್ ಬಗ್ಗೆ ಯಾವ ಕಾಲದಲ್ಲಿಯೂ ಈ ಸದನದಲ್ಲಿ ಚರ್ಚೆ ಯಾಗಿಲ್ಲ, ಅದು ಆಗಕೂಡದು, ಇಲ್ಲಿ ಆಗತಕ್ಕಂಥ ಖರ್ಚುವೆಚ್ಚಗಳಾಗಲಿ, ಅಥವಾ ಆಗಬಹುದಾದಂಥ, ಆಗಬೇಕಾದಂಥ ಪರಿಹಾರವಾಗಲಿ, ಅದರ ಬಗ್ಗೆ ಪಾರ್ಲಿಮೆಂಟರಿಗೆ ಸಂಬಂಧಪಟ್ಟ ಮಂತ್ರಿಗಳು ಇರುತ್ತಾರೆ. ಮತ್ತು ಅದಕ್ಕೆ ಒಂದು ಬೋರ್ಡ್ ಮಾಡಿಬಿಟ್ಟಿದ್ದೇವೆ. ಆ ಬೋರ್ಡ್‌ನಲ್ಲಿ ಸಭಾಪತಿ ಯವರು ಸಭಾಧ್ಯಕ್ಷರು ಮತ್ತು ಹಣಕಾಸು ಮಂತ್ರಿಗಳು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇರುತ್ತಾರೆನ್ನುವ ಕಾರಣಕ್ಕಾಗಿ ಕೆಲವು ಸಲಹೆಗಳನ್ನು ಕೊಡಬೇಕೆಂದು ಹೇಳಿ ಯೋಚನೆ ಮಾಡಿದ್ದೇನೆ. ತಾವು ಅದನ್ನು ಬೋರ್ಡ್‌ಮುಂದೆ ಇಟ್ಟು, ಅದನ್ನು ಯಾವರೀತಿ ಆಲೋಚನೆ ಮಾಡುತ್ತೀರೋ ಎಂಬುದನ್ನು ನಿಮ್ಮ ಆಲೋಚನೆಗೇ ಬಿಟ್ಟುಬಿಡುತ್ತೇನೆ. ಒಂದು ಬಹುತೇಕ ನಮ್ಮ ಸದಸ್ಯರಿಗೆ ಈಗ ನಮ್ಮದೊಂದು ಭವನ ಇದೆ. ಸದಸ್ಯರ ಭವನ ಇದೆ. ಅಲ್ಲಿ ಟೆಲಿಫೋನ್ ಇದ್ದಾವೆ ಎಂದು ಹೇಳಬೇಕು. ಆದರೆ ಸದಸ್ಯರಿಗೆ ಅದರ ಲಾಭ ಪರಿಪೂರ್ಣವಾಗಿ ಸಿಕ್ಕುತ್ತದೆ ಅಂತ ಹೇಳುವುದಿಲ್ಲ, ಸದನದಲ್ಲಿ ನಾವು ಕೆಲಸ ಮಾಡುವಾಗ ನಮಗೆ ಕೆಲವು ವಿಶೇಷ ಅಗತ್ಯಗಳು ಇವೆ. ಅನಿವಾರ್ಯ ಅಗತ್ಯಗಳು ಇವೆ. ಕೆಲಸ ಮಾಡತಕ್ಕಂಥ ಸದಸ್ಯರಿಗಂತೂ ಅನಿವಾರ್ಯ, ಅಗತ್ಯ ಇದ್ದಾವೆ. ಜನರು ನೂರಾರು ಮೈಲಿಗಳ ದೂರದಿಂದ ಬಂದಿರುತ್ತಾರೆ. ಅಷ್ಟೋ, ಇಷ್ಟೋ, ಈಗ ಇರುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಇನ್ನು ಅಲ್ಲಿ ಒಂದು ಟೆಲಿಫೋನ್ ಬೂತ್ ಮಾಡಿದ್ದಾರೆ. ಅದು ಭೂತವಾಗಿ ಪರಿವರ್ತನೆಯಾಗಿದೆ. ಅಲ್ಲಿಗೆ ಯಾರು ಹೋಗುತ್ತಾರೋ, ಯಾರು ಬರುತ್ತಾರೋ, ಯಾರು ಫೋನ್ ಮಾಡುತ್ತಾರೋ ಅದು ಒಬ್ಬರಿಗೂ ತಿಳಿಯುವುದಿಲ್ಲ, ಇದು ಲೆಜಿಸ್ಲೇಟರ್ಸ್ ಹೋಮ್ ಬಗ್ಗೆ ನಾನು ಹೇಳುತ್ತಿರುವುದು. ಅದಕ್ಕೆ ಏನಾದರೂ ಒಂದು ಸಲಹೆ ಏನೆಂದರೆ, ತಾವು ಯೋಚನೆ ಮಾಡಿ. It depends upon the financial availability, ಪ್ರತಿಯೊಬ್ಬ ಸದಸ್ಯರಿಗೂ ಒಂದೊಂದು ಟೆಲಿಫೋನ್ ಇಂಡಿಪೆಂಡೆಂಟ್ ಆಗಿ ಕೊಟ್ಟುಬಿಡಿ, ಅದಕ್ಕೆ ಕೆಲವು ನಿಯಮಗಳನ್ನು ಬೇಕಾದರೆ ಹಾಕಿ, ಐದುನೂರು ಅಥವಾ ಒಂದು ಸಾವಿರ ಕಾಲ್ ಸರ್ಕಾರ ವಹಿಸಿಕೊಳ್ಳುತ್ತದೆ. ಅದಕ್ಕಿಂತಲೂ ಹೆಚ್ಚು ಬಂದರೆ ಸರ್ಕಾರ ಜವಾಬ್ದಾರರಲ್ಲ ಎಂದು ಹೇಳಿ. ಏಕೆಂದರೆ, ಲೋಕಸಭಾ ಸದಸ್ಯರಿಗೆ, ರಾಜ್ಯಸಭಾ ಸದಸ್ಯರಿಗೆ. ೩೦ಸಾವಿರ ಟೆಲಿಫೋನ್ ಕಾಲ್ಸ್ ನಮಗೆ ಅಲ್ಲಿ ಫ್ರೀ ಇರುತ್ತವೆ. ಎರಡು ಟೆಲಿಫೋನ್‌ಗಳನ್ನು ಕೊಡುತ್ತಾರೆ. ಒಂದು ಅಲ್ಲಿ, ಒಂದು ಇಲ್ಲಿ. ನೀವು ಕನಿಷ್ಟ ಇಲ್ಲಿ ಒಂದಾದರೂ ಟೆಲಿಫೋನ್ ಕೊಡದಿದ್ದರೆ ಸದಸ್ಯರು ಕೆಲಸ ಮಾಡುವುದು ಹೇಗೆ ? ಇದು ಒಂದು, ಇನ್ನು ಎರಡನೆಯದು. ಈಗಿರುವ ಸದಸ್ಯರದ್ದು ಹಾಗೋ ಹೀಗೋ ನಡೆಯುತ್ತದೆ. ಸದಸ್ಯರು ಅಲ್ಲದೇ ಇರುವವರು ಏನಾದರೂ ಬಂದರೆ, ನಮ್ಮ ಶಾಸಕರ ಭವನದಲ್ಲಿ ಜಾಗ ಸಿಕ್ಕುವುದಿಲ್ಲ. ನಾವು ಜನರಲ್ ಹಾಸ್ಟೆಲಿಗೋ, ಮತ್ತೊಂದು ಕಡೆಗೋ ಕಳುಹಿಸಿಕೊಡುತ್ತೇವೆ. ಅವರು ಗೌರವಾನ್ವಿತರಾಗಿ ಈ ಸದನದಲ್ಲಿ ಕೆಲಸ ಮಾಡಿದವರು, ನಾವು ಇದ್ದೇವೆ ಎಂದು ಹೇಳಿ ನಾವು ಎಷ್ಟೇ ದೊಡ್ಡವರಾಗಿ ನಮ್ಮ ಹಿಂದೆ ಅವರು ಬಿಟ್ಟು ಹೋಗಿರತಕ್ಕಂಥ ಎಲ್ಲಾ ತ್ಯಾಗವನ್ನ ಇಂದು ಮರೆತು ಬಿಡತಕ್ಕಂಥ ಒಂದು ಪ್ರವೃತ್ತಿ ಸರಿಯಲ್ಲ. ಅದಕ್ಕಾಗಿ ಸಾಧ್ಯವಾದರೆ ಇಂತಹ ಲೋಕಸಭಾ ಮತ್ತು ರಾಜ್ಯಸಭಾ ಸಂಸದೀಯ ಸದಸ್ಯರು, ಹಾಗೂ ಮಾಜಿ ವಿಧಾನ ಸಭಾ ಸದಸ್ಯರುಗಳಿಗೆ ಏನಾದರೂ ಕನಿಷ್ಟ ಒಂದು ೨೦ ರೂಮಿನ ವ್ಯವಸ್ಥೆಯನ್ನು ಸಧ್ಯಕ್ಕೆ ಮಾಡಿ ಅವರು ಬಂದು ಹೋಗಲಿಕ್ಕೆ ಒಂದು ವ್ಯವಸ್ಥೆ ಮಾಡಿಕೊಡಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ದೆಹಲಿಯಲ್ಲಿ ನನಗೆ ಒಂದು ದೊಡ್ಡ ಬಂಗಲೆಯನ್ನು ಕೊಟ್ಟಿದ್ದರು.

ಬಹುಶಃ ಇಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೂ ಕೂಡ ಅಂಥ ಒಂದು ಬಂಗಲೆ ಇಲ್ಲವೆಂದು ಅನಿಸುತ್ತದೆ. ಅಂಥ ಬಂಗಲೆಯನ್ನು ಅಲ್ಲಿ ನನಗೆ ಕೊಟ್ಟಿದ್ದರು. ಇದು ರಾಜ್ಯ ಸಭಾ ಸದಸರಿಗೆ ೪ಬೆಡ್ ರೂಂ ಇರತಕ್ಕ ಬಂಗಲೆ ಅದು. ಆದರೆ ಇಲ್ಲ ಒಂದು ರೂಂ ಕೊಡುತ್ತಿದ್ದೇವೆ. ಆ ರೂಮಿನಲ್ಲೇ ಸದಸ್ಯರೂ ಬಂದು ಹೋಗುವವರೂ ಎಲ್ಲರೂ ಇರಬೇಕಾಗುತ್ತದೆ. ಈ ವ್ಯವಸ್ಥೆ ಸರಿಯಿಲ್ಲ. ಒಂದು ನಿರ್ಭೀತವಾದ ವಾತಾವರಣದಲ್ಲಿ ಕೆಲಸ ಮಾಡತಕ್ಕ ವ್ಯವಸ್ಥೆ ಇರಬೇಕು. ನಮ್ಮ ಶಾಸನ ಸಭೆಗೆ ೧೦೦ ವರ್ಷಗಳ ಇತಿಹಾಸವಿದೆ. ಆ ಕಾಲದಲ್ಲಿ ಸಂಬಳ ಇಲ್ಲದೆ ಕೆಲಸಮಾಡುತ್ತಿದ್ದರು. ಆದರೆ ಈ ಕಾಲದಲ್ಲಿ ಎಷ್ಟು ಸಂಬಳ ಕೊಟ್ಟರೂ ಸಾಲದು. ಇಂದು ಇಂಥ ಸ್ಥಿತಿ ಆದ್ದರಿಂದ ಬೇರೆ ಬೇರೆ ರಾಜ್ಯ ಸರ್ಕಾರಗಳಲ್ಲಿ ಶಾಸನಸಭಾ ಸದಸ್ಯರ ಸಂಬಳ ವ್ಯವಸ್ಥೆ ಯಾವರೀತಿ ಇದೆ ಎಂಬುದನ್ನು ತರಿಸಬೇಕು. ನಾವು ಈ ದಿಸೆಯಲ್ಲಿ ಎಷ್ಟು ದೂರ ಹೋಗಬಹುದು ಎಂಬುದನ್ನು ತಿಳಿದುಕೊಳ್ಳಬೇಕು. ಇಲ್ಲೇ ನಾನು ಎಲ್ಲವನ್ನೂ ಬಿಚ್ಚಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ಸದನದ ಸಮಿತಿಗೋ ಅಥವಾ ನಿಮ್ಮ ಬೋರ್ಡ್‌ಗೋ ನಮ್ಮ ಸಲಹೆ ಬೇಕೆಂದು ಆಹ್ವಾನಿಸಿದರೆ ನಾವು ಬಂದು ನಮ್ಮ ಸಲಹೆಯನ್ನು ಕೊಡುತ್ತೇವೆ. ಶಾಸಕರ ಭವನದಲ್ಲಿ ರೂಂ ಸರ್ವಿಸ್ ವ್ಯವಸ್ಥೆ, ಟೆಲಿಫೋನ್ ವ್ಯವಸ್ಥೆ, ಕ್ಯಾಂಟೀನ್ ವ್ಯವಸ್ಥೆ ಇದೆಲ್ಲಾ ಇದೆ. ಆದರೆ ಈ ಕ್ಯಾಂಟೀನ್ ವ್ಯವಸ್ಥೆ ಒಂದುರೀತಿಯಲ್ಲಿ ಹೇಳುವುದಾದರೆ ಇದು ಮುಗಿಯಲಾರದು. ಏಕೆಂದರೆ ನಾನು ಸಭಾಧ್ಯಕ್ಷ ಆಗಿ ೨ ವರ್ಷಕಾಲ ಕೆಲಸಮಾಡಿದಾಗ ಸ್ವಂತ ಅನುಭವದಿಂದ ಇದನ್ನು ನಾನು ತಿಳಿದುಕೊಂಡಿದ್ದೇನೆ. ಸದಸ್ಯರು ಮುಕ್ತ ವಾತಾವರಣದಲ್ಲಿ ಕೆಲಸ ಮಾಡತಕ್ಕ ವಾತಾವರಣವನ್ನು ಒಂದು ಸೃಷ್ಟಿ ಮಾಡಿಕೊಡಬೇಕು. ಅದೇರೀತಿ ಇಲ್ಲಿ ಕೆಲಸಮಾಡತಕ್ಕ ಸಿಬ್ಬಂದಿ ವರ್ಗಕ್ಕೂ ಕೂಡ...

ಶ್ರೀ ಕೆ. ಗಂಗಾಧರಗೌಡ.—ಮಾಜಿ ಶಾಸಕರಿಗೂ ಆನರರೇರಿಯಂ ಅನ್ನು ಹೆಚ್ಚಿಗೆ ಮಾಡತಕ್ಕ ವಿಚಾರವನ್ನೂ ತಾವು ಪ್ರಸ್ತಾಪ ಮಾಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಅದನ್ನೇ ನಾನೂ ಹೇಳಿದ್ದು. ಈಗ ಮಾಜಿ ಎಂ. ಪಿ. ಗಳಿಗೆ ಸರಿ ಸುಮಾರು ೧೦೦೦ ರೂಪಾಯಿ ಬರುತ್ತದೆ. ಮಾಜಿ ಶಾಸಕರ ಸಂಬಳವನ್ನು ಮಾತ್ರ ಹೇಳಲಿಲ್ಲ ಮಾಜಿ ಎಂ. ಪಿ. ಗಳಿಗೆ ಸಹ ೧೦೦೦ ರೂಪಾಯಿ ಬರುತ್ತದೆ. ಆದರೆ ಈ ಸದನದಲ್ಲಿ ನಾವು ನಮ್ಮ ಸೌಲಭ್ಯಗಳ ಬಗ್ಗೆ ಚರ್ಚೆಮಾಡುವುದು ಸರಿಯಲ್ಲವೇನೋ ಎಂದು ನಾನು ಹೆಚ್ಚು ವಿವರಕ್ಕೆ ಹೋಗಲಿಲ್ಲ. ಇದನ್ನು ಇಷ್ಟಕ್ಕೆ ಬಿಡುತ್ತೇನೆ. ಅನಂತರ ಏನು ಮಾಡಬೇಕೆಂದು ಯೋಚಿಸೋಣ

ಇನ್ನೊಂದು ವಿಚಾರ ಎಂದರೆ, ಇಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿವರ್ಗದವರಿಂದ ನಾವು ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೂ ದುಡಿಸಿಕೊಳ್ಳುತ್ತೇವೆ. ಆದರೆ ಅವರಿಗೆ ಆನರರಿಯಂನ್ನು ಕೊಡುವಾಗ "ಡಿ" ಗ್ರೂಪ್ ನೌಕರರಿಗೆ ೪ರೂ, "ಸಿ" ಗ್ರೂಪ್ ನೌಕರರಿಗೆ ೫ ರೂ. ಮತ್ತು "ಬಿ" ಗ್ರೂಪ್ ನೌಕರರಿಗೆ ೧೫ ಪರ್ಸೆಂಟ್ ಸ್ಯಾಲರಿ ಮೇಲೆ ಎಂದು ಮಾಡಿದ್ದೇವೆ. ಇದು ಅಷ್ಟು ಸಮರ್ಪಕ ಆಗಿಲ್ಲ, ದಯವಿಟ್ಟು ಸಂಸತ್ತಿನಿಂದ ವಿವರಗಳನ್ನು ಇದಕ್ಕೆ ಸಂಬಂಧಪಟ್ಟಂತೆ ತರಿಸಿಕೊಳ್ಳಿ. ಅಲ್ಲಿಯ ವ್ಯವಸ್ಥೆ ಏನಿದೆ ಎಂಬುದನ್ನು ಯೋಚನೆ ಮಾಡಿ ಅದೇರೀತಿ ಇಲ್ಲಿ ಕೆಲಸಮಾಡುವವರಿಗೂ ಆನರರಿಯಂನ್ನು ಹೆಚ್ಚಿಸುವ ಕೆಲಸ ಮಾಡೋಣ. ಅಲ್ಲಿ ಇವರು ಕೆಲಸ ಮಾಡುತ್ತಾರೆ. ನಾನು ತಮಗೆ ಇದನ್ನು ಹೇಳಬಾರದು. ಆದರೂ ಒಂದು ಮಾತನ್ನು ಹೇಳುತ್ತೇನೆ. ಇಲ್ಲಿ ಕೆಲಸಮಾಡತಕ್ಕ ರೆಕಾರ್ಡಿಂಗ್ ಆಫೀಸರ್ಸ್ ಮತ್ತು ವರದಿಗಾರರು ಏನಿದ್ದಾರೆ, they are the best. Our Reporters and Recording Officers are the best. I should place my compliments on record, ಇವರು ಬೆಸ್ಟ್ ಇದ್ದಾರೆ, ಹೇಗೋ ಅಂತೂ ಕೆಲಸವನು ಮಾಡಿದರಾಯಿತು ಎಂದು ಹೇಳುವುದು ಸರಿಯಲ್ಲ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮತ್ತೊಂದು ವಿಚಾರ ಎಂದರೆ, ಇವರಿಗೆ ಇಲ್ಲಿ ಪ್ರೊಮೋಷನಲ್ ಆಸ್ಪೆಕ್ಟ್ಸ್ ಇಲ್ಲ. ಬಹಳ ಕಡಿಮೆ ಅವಕಾಶಗಳಿವೆ. ೨-೩ ಜಾಗಕ್ಕೆ ಬರುವ ಹೊತ್ತಿಗೆ ಅವರ ಸೇವಾ ಅವಧಿಯೇ ಮುಗಿದು ಹೋಗುತ್ತದೆ. ಈ ಎಲ್ಲಾ ವಿಚಾರಗಳನ್ನೂ ನಾವು ಇಲ್ಲಿ ಕುಳಿತು ಚರ್ಚೆ ಮಾಡಲಿಕ್ಕೆ ಒಂದು ಅವಕಾಶವನ್ನು ಯಾವುದಾದರೊಂದು ರೂಪದಲ್ಲಿ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಎಲ್ಲಾಕ್ಕಿಂತಲೂ ಮುಖ್ಯವಾದುದ್ದು ಎಂದರೆ ರೆಫರೆನ್ಸ್ ಅಂಡ್ ರೀಸರ್ಚ್ ಫೆಸಿಲಿಟೀಸ್ ಇದು ಮೂಲಭೂತವಾದುದು: ಸಂಸತ್ತಿನಲ್ಲಿ ನಾವು ಒಂದು ಪ್ರಶ್ನೆಯನ್ನೋ ಹಾಕಿ ಉಪ ಪ್ರಶ್ನೆಯನ್ನು ಏನು ಕೇಳಬೇಕೆಂದು ಹೇಳಿಕಳಿಸಿದರೆ ಕೇವಲ ಅರ್ಧ ನಿಮಿಷ ಅಥವಾ ಒಂದು ನಿಮಿಷದಲ್ಲಿ ಆ ಮೆಟೀರಿ

ಯಲ್ ನಮಗೆ ಬರುತ್ತದೆ. ಸದನಕ್ಕೇ ಅದನ್ನು ತಂದುಕೊಡುತ್ತಾರೆ. ಎಂದರೆ ಅಷ್ಟರಮಟ್ಟಿಗೆ speedy inproved Reference and Research facility ಅಲ್ಲಿದೆ. ನಾವು ಅಷ್ಟು ದೂರದವರೆಗೆ ಹೋಗುವುದಕ್ಕಾಗದಿದ್ದರೂ ಒಂದು ಗಂಟೆ ಮುಂಚಿತವಾಗಿ ಹೇಳಿ ಕಳುಹಿಸಿದರೂ ನಮಗೆ ಸಿಕ್ಕುವಂಥ ವ್ಯವಸ್ಥೆಯಾಗಬೇಕು. ಒಂದು ಗೆಜೆಟ್ ನೋಟಿಫಿಕೇಷನ್ ಕಾಪಿಬೇಕೆಂದು ನಮ್ಮ ಹಿರಿಯ ಸದಸ್ಯರಾದ ಮಾನ್ಯ ಬೈರೇಗೌಡರು ಹೇಳುತ್ತಿದ್ದರು ತಮಗೆ ಬೇಕಾದ್ದರಿಂದ ಅದನ್ನು ನಾನು ಎಕ್ಸ್‌ಲೈಸ್ ಕಮಿಷನರ್‌ರವರಿಗೆ ಹೇಳಿ ಕಳುಹಿಸಿದೆ ಎಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅದು ಇಲ್ಲೇ ಸಿಕ್ಕಿದಿದ್ದರೆ ಅವರು ಅಲ್ಲಿಗೆ ಹೇಳಿಕಳುಹಿಸುವ ಪ್ರಮೇಯವೇ ಇರುತ್ತಿರಲಿಲ್ಲ. ನಾವು ಕೇಳಿದರೆ ಅವರು ಕೊಡುವುದಿಲ್ಲವೆಂದು ಅಲ್ಲ. ಆದರೆ ನಮ್ಮ ವ್ಯವಸ್ಥೆ ನಮ್ಮಲ್ಲಿರಬೇಕು. ಇದನ್ನೇ ನಾವು ರೆಫರೆನ್ಸ್ ಅಂಡ್ ರೀಸರ್ಚ್ ಫೆಸಿಲಿಟೀಸ್ ಎಂದು ಹೇಳತಕ್ಕದ್ದು. ಎಷ್ಟು ಜನ ಬಳಸುತ್ತಾರೋ ಗೊತ್ತಿಲ್ಲ. ಬಳಸಲು ಯೋಗ್ಯವಾಗಿದ್ದರೆ ಎಲ್ಲರೂ ಬಳಸುತ್ತಾರೆ. ಇಲ್ಲಿ ಮೆಟೀರಿಯಲ್ಸ್ ಸಿಕ್ಕುತ್ತವೆಂದು ತಿಳಿದರೆ ಎಲ್ಲರೂ ಬಳಸುತ್ತಾರೆ ಇವತ್ತು ನಾವು ಪ್ಲಾನಿಂಗ್ ಪ್ರೋಸಸ್ ಮೇಲೆ ನಾವು ಮಾತನಾಡಬೇಕೆಂದರೆ ಏನೇನು ಸಹಿತ್ಯವೂ ಸಿಕ್ಕುವುದಿಲ್ಲ. ಯಾವುದೋ ಪ್ರತಿಕೆಯನ್ನು ನೋಡಿ ಅಥವಾ ಯಾವುದೋ ಪುಸ್ತಕವನ್ನು ನೋಡಿ, ಅಥವಾ ಬೇರೆ ಯಾರನ್ನೋ ಕೇಳಿಯೋ, ಬರೆಸಿಯೋ, ಬರೆದುಕೊಂಡೋ ಬಂದು ಮಾತನಾಡಬೇಕಾಗುತ್ತದೆ ಇದು ನಮ್ಮ ಶಾಸನಸಭೆಯ ೧೦೦ ವರ್ಷಗಳ ಇತಿಹಾಸಕ್ಕೆ ಪೂರಕವಾದದ್ದಾಗಿದೆ. ಆದ್ದರಿಂದ ಇವನ್ನು ನಾವು ಇಂದು ಸ್ಟ್ರಾಂಗನ್ ಮಾಡತಕ್ಕ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಬಹಳ ಸೂಕ್ಷ್ಮವಾದ ವಿಚಾರ ಎಂದರೆ "ವಿಪ್" ಎಂದರೆ ಸರ್ಕಾರಿ ವಿಪ್ ಎಂತಲೂ ಆಗುತ್ತದೆ, ಮತ್ತು ವಿರೋಧಪಕ್ಷದ ವಿಪ್ ಎಂದೂ ಕೂಡ ಆಗುತ್ತದೆ. ಮಾನ್ಯ ಮಲಾರಗೌಡ ಪಾಟೀಲರು...

೨.೪೫.ಪಿ.ಎಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಾವು ಆರೂವರೆ ವರ್ಷಗಳ ಕಾಲ ಈ ಕಡೆ ಇದ್ದಾಗ ಏತಕ್ಕೆ ಹೇಳಲಿಲ್ಲ. ಆವಾಗ ಈ ವಿಷಯವನ್ನು ಹೇಳಿದ್ದರೆ ನಾನು ಒಪ್ಪುತ್ತಿದೆ, ಈವಾಗ ನೀವು ಇರುವುದು ೨೫ ಜನ...

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಕೊಟ್ಟಿರತಕ್ಕಂಥ ಸಲಹೆಯನ್ನು ಹಿಂದಿನ ಸರ್ಕಾರ ಒಪ್ಪಿಕೊಂಡಿತ್ತು. ಅದು ಇಂಪ್ಲಿಮೆಂಟ್ ಮಾಡುವ ಕಾಲಕ್ಕೆ ನಿಂತುಹೋಯಿತು. ರೇಕಾರ್ಡ್ಸ್ ಇದೆ, ತಾವು ನೋಡಿ, ಗೊತ್ತಾಗುತ್ತದೆ. ತಾವು ಈಗ ಮಾಡದಿದ್ದರೂ ಪರವಾಗಿಲ್ಲ. ಇದನ್ನು ಒಪ್ಪಿ ಕೊಂಡರೆ ಇನ್ನೂ ಸ್ವಲ್ಪ ಚೆನ್ನಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ತಮ್ಮದು ಪೊಲಿಟಿಕಲ್ ಪಾರ್ಟಿ ಎಂದು ರೆಕಾಗ್ನೈಸ್ಡ್ ಆಗಿರುವುದರಿಂದ ತಾವು ವಿಧಾನ ಸೌಧಕ್ಕೆ ಬಂದರೆ ತಮಗೆ ಕಛೇರಿ, ಟೆಲಿಫೋನ್ ಎಲ್ಲಾ ಸೌಲಭ್ಯಗಳು ಇರುತ್ತದೆ. ಆದರಂತೆ ನಾವು ಕೂಡ ಒಂದು ಪಾರ್ಟಿ, ನಾವೇನು ಇಂಡಿಪೆಂಡೆಂಟ್ ಆಗಿ ಆರಿಸಿ ಬಂದಿಲ್ಲ, ರೆಕಗ್ನೈಸ್ಡ್ ಪೊಲಿಟಿಕಲ್ ಪಾರ್ಟಿಗಳಿಗೆ ಪಾರ್ಲಿಮೆಂಟ್‌ನಲ್ಲಿ ವಿಶೇಶವಾದ ಅವಕಾಶಗಳನ್ನು ಸವಲತ್ತುಗಳನ್ನು ಕೊಡತಕ್ಕಂಥದ್ದು ಇದೆ. ಇಲ್ಲಿ ಮಾನ್ಯತೆ ಪಡೆದಿರತಕ್ಕಂಥ ಪಾರ್ಟಿ ಇದ್ದರೂ ಇಲ್ಲಿ ಯಾವ ವಿಧವಾದ ಸೌಲಭ್ಯಗಳೂ ಇಲ್ಲ. ಅದರ ಒಂದು ಕಷ್ಟ ತಮಗೆ ಗೊತ್ತಾಗುವುದಿಲ್ಲ. ಆದರೆ ಆದರ ಕಷ್ಟಗೊತ್ತಿರುವ ನಾವು ಇಲ್ಲಿದ್ದೇವೆ. ಈ ಬಗ್ಗೆ ತಾವು ಏನು ಹೇಳುತ್ತೀರೋ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ವಿವರಕ್ಕೆ ಹೋಗಬಾರದೆಂದು ಇದ್ದೆ. ವಿವರಕ್ಕೆ ಹೋದರೆ ಎಲ್ಲವನ್ನೂ ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ತಾವು ಮೇಲ್ಮನೆಯಲ್ಲಿ ಕೆಲಸ ಮಾಡಿ ಅನುಭವವನ್ನು ಪಡೆದಿದ್ದೀರಿ. ಇಲ್ಲಿಯೂ ಕೂಡ ಅಧ್ಯಕ್ಷರಾಗಿ ಕೆಲಸಮಾಡಿ ಅನುಭವ ಪಡೆದಿರುತ್ತೀರಿ. ಹೆಚ್ಚು ವೇಳೆ ತೆಗೆದುಕೊಂಡರೂ ಪರವಾಗಿಲ್ಲ, ಎಲ್ಲವನ್ನು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಹೇಳಿದನ್ನು ನಾನು ಒಪ್ಪುತ್ತೇನೆ. ಸಂಸತ್‌ನಲ್ಲಿ ಮಾನ್ಯತೆಯನ್ನು ಪಡೆದಿರತಕ್ಕಂಥ ಪಕ್ಷಗಳಿಗೆ ವಿಶೇಷವಾದ ಸೌಲಭ್ಯಗಳನ್ನು ಕೊಟ್ಟಿರುತ್ತಾರೆ. ಮಾನ್ಯತೆಯನ್ನು ಪಡೆದಿರತಕ್ಕಂಥ ಬೇರೆ ಬೇರೆ ಪಕ್ಷಗಳಿಗೂ ಕೂಡ ಕನಿಷ್ಟ ಒಂದು

ಕೊಠಡಿ ಮತ್ತು ಒಂದು ಟೆಲಿಫೋನ್ ಸೌಲಭ್ಯವನ್ನು ಕೊಟ್ಟಿರುತ್ತಾರೆ. ಒಂದು ಕಾರು ಇರುತ್ತದೆ. ಕೊಶ್ಚನ್ ತಯಾರು ಮಾಡುವುದಕ್ಕೆ ಅಲ್ಲಿ ಇಲ್ಲಿ ಹುಡುಕಿಕೊಂಡು ಹೋಗಬೇಕಾಗಿಲ್ಲ. ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಇದಕ್ಕೆ ಸೀಮಿತವಾಗಿ ಟೈಪಿಂಗ್ ಸೆಕ್ಷನ್ ಇರುತ್ತದೆ. ಅಲ್ಲಿ ೧೦–೧೨ ಜನರು ಕೆಲಸ ಮಾಡುತ್ತಿರುತ್ತಾರೆ. ಇದೆಲ್ಲವನ್ನು ವಿಸ್ತಾರವಾಗಿ ಹೇಳಬೇಕಾಗಿಲ್ಲ. ನಮ್ಮನ್ನು ಕರೆಯಿರಿ, ಚರ್ಚೆ ಮಾಡೋಣ, ಇನ್ನು ಶಾಸಕರ ಭವನದ ಪಕ್ಕದಲ್ಲಿ ಸ್ವಲ್ಪ ಜಾಗ ಇದೆ. ಪ್ಲಾನಿಟೇರಿಯಮ್ ಪಕ್ಕದಲ್ಲಿ ಆ ಜಾಗವನ್ನು ತೆಗೆದುಕೊಂಡರೆ ಈ ಎಲ್ಲ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬಹುದು ಹಿಂದೆ ನನ್ನ ಕಾಲವಲ್ಲಿಯೇ ಒಂದು ಲೆಜಿಸ್ಲೇಚರ್ ಕ್ಲಬ್‌ನ್ನು ಕೂಡ ಪ್ರಾರಂಭ ಮಾಡಬೇಕೆಂದು ಪ್ರಪೋಸ್ ಮಾಡಿದ್ದೆ. ಕ್ಲಬ್ ಎಂದರೆ ಇಸ್ಪೀಟ್ ಆಡತಕ್ಕಂಥ ಕ್ಲಬ್ ಎಂದು ಅರ್ಥ ಬರುತ್ತದೆ. ಆದರೆ ಅದಲ್ಲ ಪಾರ್ಲಿಮೆಂಟ್‌ನಲ್ಲಿ ಕಾನಸ್ಟಿಟ್ಯೂಷನ್ ಕ್ಲಬ್ ಎಂದು ಇದೆ. ಅಲ್ಲಿ ಸ್ವಿಮಿಂಗ್ ಪೂಲ್‌ನಿಂದ ಹಿಡಿದು ಎಲ್ಲಾ ಆಟಗಳನ್ನು ಆಡತಕ್ಕಂಥ ವ್ಯವಸ್ಥೆ ಇದೆ. ಅದರಂತೆ ಇಲ್ಲೂ ಕೂಡ ಮಾಡಲು ರೂಪುರೇಖೆಯನ್ನು ತಯಾರುಮಾಡಿದ್ದೆವು ಇದಕ್ಕೆ ಅಂದಾಜು ೨೫-೩೦ ಲಕ್ಷ ಖರ್ಚಾಗಬಹುದು ಆ ಜಾಗದಲ್ಲಿ ಮಾಡಲು ಸಾಧ್ಯವಿದ್ದರೆ ಆ ಜಾಗವನ್ನು ತೆಗೆದುಕೊಂಡು ಬಳಸಿಕೊಳ್ಳಬಹುದೆಂದು ಸಲಹೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಎಕ್ಸ್ ಪಾರ್ಲಿಮೆಂಟ್ ಮೆಂಬರ್ಸ್‌ಗೆ ರೈಲು ಪಾಸ್ ಸೌಲಭ್ಯವನ್ನು ಕೊಟ್ಟಿದ್ದಾರೆ ಇಲ್ಲಿ ನಮ್ಮ ಮಾಜಿ ಸದಸ್ಯರಿಗೆ ನಾವು ಕನಿಷ್ಟ ಬಸ್ ಪಾಸ್‌ನ್ನಾದರೂ ಕೊಡುವುದು ಬೇಡವೆ ? ಎಕ್ಸ್ ಲಿಜಿಸ್ಲೇಟರ್ ಗೆ ಬಸ್ ಪಾಸ್‌ನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಇಷ್ಟು ಮಾತನಾಡಿ ಈ ಎಲ್ಲ ಬೇಡಿಕೆಗಳ ಮೇಲೆ ನನ್ನ ಅನಿಸಿಕೆಗಳನ್ನು ಹೇಳಲಿಕ್ಕೆ ಇಷ್ಟೊಂದು ಸುದೀರ್ಘವಾದ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜುಗೌಡ (ಹಾನೂರು), ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸದನದ ಮುಂದೆ ಮಂಡಿಸಿರತಕ್ಕ ಸುಮಾರು ಹತ್ತು ಬೇಡಿಕೆಗಳನ್ನು ಪುರಸ್ಕರಿಸುತ್ತಾ ಕೆಲವು ವಿಷಯಗಳನ್ನು ಮಾತನಾಡಲಿಚ್ಛಿಸುತ್ತೇನೆ. ಮೊಟ್ಟಮೊದಲು ನಮ್ಮ ರಾಜ್ಯಕ್ಕೆ ಆದಾಯ ಕೊಡುವುದರಲ್ಲಿ ಎರಡನೇ ಸ್ಥಾನದಲ್ಲಿರತಕ್ಕಂಥ ಅಬ್ಕಾರಿ ಬಾಬಿನ ಬಗ್ಗೆ ಪ್ರಸ್ತಾಪಮಾಡಲಿಚ್ಛಿಸುತ್ತೇನೆ. ನಮ್ಮ ಸರ್ಕಾರದ ಅಬ್ಕಾರಿ ನೀತಿ ಏನು ಎನ್ನತಕ್ಕದ್ದರ ಬಗ್ಗೆ ಈಗಾಗಲೇ ತಮಗೆ ಗೊತ್ತಿದೆ. ಯಾರಾದರೂ ಒಬ್ಬ ಮನುಷ್ಯ ದೀರ್ಘಾಯುಷಿ ಆಗಬೇಕಾಗಿದರೆ, ಅತನು ಪ್ರಮುಖವಾಗಿರತಕ್ಕ ದುಶ್ಚಟಗಳಿಂದ ದೂರವಿರಬೇಕೆಂಬ ಪ್ರತೀತಿ ಇದೆ, ಮಧ್ಯಪಾನ ವ್ಯಸನಿಯಾಗಿರಬಾರದು, ಸಿಗರೇಟ್, ಬೀಡಿಗಳನ್ನು ಸೇದಬಾರದು, ತಂಬಾಕು ಸೇವನೆಯಿಂದ ದೂರ ಇರಬೇಕೆಂದು ಇದೆ. ಇದನ್ನು ಮನಗಂಡ ಸರ್ಕಾರ ಒಂದು ನೀತಿಯನ್ನು ನಿರೂಪಣೆ ಮಾಡಿದೆ. ಬಹುಶಃ ತಮಗೆ ಗೊತ್ತಿದ ಹಾಗೆ ಈ ರಾಜ್ಯದಲ್ಲಿ ಹೆಂಡ ಮಾರಾಟ ನಡೆಯುತ್ತಿತ್ತು, ಆ ಹೆಂಡ ಮಾರಾಟದಲ್ಲಿ ಒಳ್ಳೆಯ ಗುಣಮಟ್ಟ ಕಡಿಮೆಯಾಗಿ ಈಚಲ ಮರ ಇಲ್ಲದಿದ್ದರೂ ಸೇಂದಿ ತಯಾರಿಸಿ, ನೀರಿಗೆ ಕ್ಲೋರಿನ್ ಮತ್ತಿತರ ಮಾದಕ ವಸ್ತುಗಳನ್ನು ಬೆರೆಸಿ ಈ ರಾಜ್ಯದ ಜನತೆಯ ಆರೋಗ್ಯವನ್ನು ಹಾಳು ಮಾಡುವುದನ್ನು ನಮ್ಮ ಸರ್ಕಾರ ಮನಗಂಡು ನಮ್ಮ ರಾಜ್ಯದಲ್ಲಿರತಕ್ಕ ಜನರ ಆರೋಗ್ಯವನ್ನು ಕಾಪಾಡಬೇಕೆಂದು ಸೇಂದಿ ಬಾಬಿನಿಂದ ೬೦-೬೫ ಕೋಟಿ ರೂಪಾಯಿ ಆದಾಯ ಬರುತ್ತಿದ್ದರೂ ಸಹ ಸೇಂದಿ ಮಾರಾಟವನ್ನು ನಿಷೇದ ಮಾಡಿದರು. ಅದು ತಮಗೆ ಗೊತ್ತಿರತಕ್ಕ ವಿಷಯ. ಇವತ್ತು ಸಾರಾಯಿ ಇನ್ನಿತರ ಐ. ಎಂ. ಎಲ್. ಎಂದು ಏನು ಹೇಳುತ್ತೇವೆ, ಅದೆಲ್ಲವನ್ನೂ ತಯಾರಿಸತಕ್ಕ ವ್ಯವಸ್ಥೆ ಇದ್ದರೂ, ಪ್ರತಿಯೊಂದು ಹಂತದಲ್ಲೂ ಒಳ್ಳೆಯ ರೀತಿಯ ಗುಣಮಟ್ಟವನ್ನು ಕಾಪಾಡಿಕೊಂಡು ಬರಬೇಕೆಂದು ನಮ್ಮ ಸರ್ಕಾರ ಒಂದು ನೀತಿಯನ್ನು ಹಾಕಿಕೊಂಡು, ಪ್ರತಿಯೊಂದು ಹಂತದಲ್ಲೂ ಪ್ರಯೋಗಕ್ಕೆ ಒಳಪಡಿಸಿ ಪರಿಶುದ್ಧವಾಗಿದೆಯೋ ಇಲ್ಲವೋ ಎಂದು ತಿಳಿದು ನಂತರ ವ್ಯಾಪಾರಕ್ಕೆ ಬಿಡುಗಡೆ ಮಾಡಿರತಕ್ಕದ್ದು ತಮಗೆ ಗೊತ್ತಿರುವ ವಿಷಯ. ಎರಡನೆಯದಾಗಿ, ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಅಬ್ಕಾರಿಬಾಬಿನಲ್ಲಿ ಪ್ರತಿಯೊಂದು ಹಂತದಲ್ಲೂ ಏನೇನು ಸೋರಿ ಹೋಗುತ್ತಿತ್ತು, ಆ ಸೋರಿಕೆಯನ್ನು ತಡೆಗಟ್ಟಲು ಒಳ್ಳೆಯ ರೀತಿಯಲ್ಲಿ ಕಡಿವಾಣ ಹಾಕಲಾಗಿದೆ. ವಿರೋಧ ಪಕ್ಷದವರೂ ಕೂಡ ಈ ವಿಷಯದಲ್ಲಿ ತಾವು ನಮ್ಮ ನೀತಿಯನ್ನು ಪ್ರಶಂಸೆ ಮಾಡಬೇಕೆಂದು ನಾನು ಕೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ ಅಬ್ಕಾರಿ ಇಲಾಖೆ ಏನಾಗಿದೆ, ಯಾವ ರೀತಿಯಲ್ಲಿ ಬೆಳೆದಿದೆ, ಅದರ ಸ್ವರೂಪ ಹೇಗಿದೆ ಮತ್ತು ಅದರಲ್ಲಿರತಕ್ಕ ವಿಚಾರಗಳು ಯಾವ ದಿಸೆಯಲ್ಲಿ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಡೆದಿವೆ. ಅದರಿಂದ ಸಮಾಜಕ್ಕೆ ಏನು ಪರಿಣಾಮವಾಗಿದೆ, ಇದರಬಗ್ಗೆ ಸರ್ಕಾರದ ದೃಷ್ಟಿ ಏನು ಎಂದು ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ೧೯೬೪–೬೫ ರಿಂದ ೧೯೬೯–೭೦ರ ವರೆಗೆ ಅಬ್ಕಾರಿ ಬಾಬಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಎಷ್ಟು ಆದಾಯ ಬರುತ್ತಿತ್ತು ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಹತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ೬೪–೬೫ ರಲ್ಲಿ ೧೯೦ ಕೋಟಿ ರೂಪಾಯಿ ಆದಾಯ ಇತ್ತು. ಅದೇ ರೀತಿ ೧೧ ಕೋಟಿ ರೂಪಾಯಿ ವೆಚ್ಚ ಮಾಡಿದ್ದಕ್ಕೆ ೬೫–೬೬ರಲ್ಲಿ ೧೯೦ ಕೋಟಿ ರೂಪಾಯಿ ಆದಾಯ ಬಂತು ೬೬–೬೭ರಲ್ಲಿ ೨೧೪ ಕೋಟಿ ರೂಪಾಯಿ ಆದಾಯ ಬಂತು, ೬೭–೬೮ರಲ್ಲಿ ೨೭೧ ಕೋಟಿ ರೂಪಾಯಿ ಆದಾಯ ಬಂತು, ೬೮–೬೯ರಲ್ಲಿ ೨೫೮–೮೯ ಕೋಟಿ ರೂಪಾಯಿ ಆದಾಯ ಬಂತು, ೬೯–೭೦ರಲ್ಲಿ ೩೨೭.೫೭ ಕೋಟಿ ರೂಪಾಯಿ ಆದಾಯ ಬಂತು. ೭೦–೭೧ರಲ್ಲಿ ನಿರೀಕ್ಷೆ ಮಾಡಿರುವುದು ಸುಮಾರು ೩೬೫—೪೨೫ ಕೋಟಿ ರೂಪಾಯಿಗಳು. ರಿವೈಸ್ಡ್ ಬಡ್ಜೆಟ್‌ನಲ್ಲಿ ೫೨೭.೩ ಕೋಟಿ ರೂಪಾಯಿಗಳನ್ನು ನಾವು ಅಂದಾಜು ಮಾಡಿದ್ದೇವೆ. ಬಹುಶಃ ಶ್ರೀಮಾನ್ ಬೈರೇಗೌಡರು ಒಂದು ವಿಷಯ ಹೇಳಿದ್ದುದು ನನಗೆ ನೆನಪಿಗೆ ಬರುತ್ತಿದೆ. ಕಳೆದ ಅಧಿವೇಶನದಲ್ಲಿ ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ಬರತಕ್ಕ ಅಬ್ಕಾರಿ ಆದಾಯದ ಬಾಬಿನಲ್ಲಿ ೧ ಕೋಟಿ ರೂಪಾಯಿ ಆದಾಯ ಸೋರಿಹೋಗುತ್ತಿದೆ ಎಂದು ಆಗ ಹೇಳಿದ್ದು ಇವತ್ತು ಸತ್ಯ ಅನ್ನಿಸುತ್ತಿದೆ ೩೫೦ ಕೋಟಿ ರೂಪಾಯಿ ಒಟ್ಟು ಸೋರಿಹೋಗುತ್ತಿತ್ತು ಎಂದು ಅವರು ಏನು ಹೇಳುತ್ತಿದ್ದರೋ ಅದನ್ನು ಬಿಗಿಮಾಡಿ ರಾಜ್ಯದ ಬೊಕ್ಕಸಕ್ಕೆ ತಂದಿದ್ದಾರೆಂದು ನಾನಾದರೂ ಸಂತೋಷ ದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ೫೨೭ ರಿಂದ ೬೦೦ಕೋಟಿ ರೂಪಾಯಿ ಆದಾಯ ಬಂದರೂ ಕೂಡ ಆದಾಯವೇ ಮುಖ್ಯ ಗುರಿ ಎಂದು ನಮ್ಮ ಸರ್ಕಾರ ತಿಳಿದುಕೊಂಡಿಲ್ಲ. ಆದರೆ ನಾವು ಸರಬರಾಜು ಮಾಡತಕ್ಕ ಗ್ರಾಹಕರಿಗೆ ಕೊಡತಕ್ಕ ಪದಾರ್ಥ ಏನಿದೆ ಅದು ಒಳ್ಳೆಯ ಗುಣಮಟ್ಟದ್ದಾಗಿರ ಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅರಾಕ್‌ನಲ್ಲಿ ೧೯೬೮–೬೯ರಲ್ಲಿ ೩೩ ಕೋಟಿ ರೂಪಾಯಿ ಆದಾಯ ಬಂದಿದೆ. ೧೯೬೯–೭೦ರಲ್ಲಿ ೫೪ ಕೋಟಿ ರೂಪಾಯಿ ಆದಾಯ ಬಂದಿದೆ. ೧೯೭೦–೭೧ ರಲ್ಲಿ ಸುಮಾರು ೭೦ ಕೋಟಿ ರೂಪಾಯಿ ಆದಾಯವನ್ನು ಗಳಿಸುತ್ತಿದ್ದೇವೆ. Consumption of alcohal ಎಷ್ಟು ಖರ್ಚಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಯೋಚನೆ ಮಾಡಿದಾಗ ೪೨೨.೨ ಲಕ್ಷ ಲೀಟರ್ ೬೮–೬೯ರಲ್ಲಿ ಆಗಿದೆ, ೧೯೬೯–೭೦ರಲ್ಲಿ ೫೩೬.೨೧ ಲಕ್ಷ ಲೀಟರ್ ಆಗಿದೆ. ಅದೇ ರೀತಿ ಐ. ಎಂ. ಎಲ್. ಕೂಡ ೧೯೬೮–೬೯ರಲ್ಲಿ ೭೬.೬೨ ಲಕ್ಷ ಲೀಟರ್ ಇದ್ದರೆ ೧೯೬೯–೭೦ರಲ್ಲಿ ೧೩೭.೧೨ಲಕ್ಷ ಲೀಟರ್ ಇದೆ, ಅದೇ ರೀತಿ ಬೀರ್‌ನಲ್ಲಿ ೧೯೬೮ ೬೯ರಲ್ಲಿ ೭೨.೪೬ ಲಕ್ಷ ಲೀಟರ್ ಇದ್ದರೆ ೧೯೬೯–೭೦ ರಲ್ಲಿ ೩೩೦.೫೩ ಲಕ್ಷ ಲೀಟರ್ ಇದೆ. ಏತಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ ಎಂದರೆ ಬಹುಶಃ ವರ್ಷದಿಂದ ವರ್ಷಕ್ಕೆ ಮದ್ಯಪಾನಿಯರ ಸಂಖ್ಯೆ ಹೆಚ್ಚಾಗಿರುವುದರಿಂದ ನಾವು ಒಳ್ಳೆಯ ಗುಣಮಟ್ಟದ ಮದ್ಯಪಾನವನ್ನು ಕೊಡಬೇಕೆಂದು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಂಟ್ರಾಕ್ಟರುಗಳಿಗೆ ಜಿಲ್ಲೆಗಳನ್ನು ಜಹಗೀರ್ ಕೊಡುವುದು ಸರಿಯಲ್ಲ. ಹಿಂದೆ ಪ್ರತಿಯೊಂದು ಗ್ರಾಮದಲ್ಲಿ ಸಾರಾಯಿ ಅಂಗಡಿಯನ್ನು ಹರಾಜು ಮಾಡುತ್ತಿದ್ದರು. ಕೆಲವು ವರ್ಷದ ನಂತರ ತಾಲ್ಲೂಕು ಮಟ್ಟಕ್ಕೆ ಬಂದಿರಿ. ಈಗ ಜಿಲ್ಲಾ ಮಟ್ಟಕ್ಕೆ ಬಂದಿದ್ದೀರಿ. ನಾನು ಹೇಳುತ್ತಿದ್ದೇನೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಈ ಒಂದು ಕೆಲಸಕ್ಕೆ ಕೈಹಾಕುವುದರಿಂದ ಅತ್ಯುತ್ತಮವಾದ ಗುಣಮಟ್ಟದ ಶರಾಬನ್ನು ನಾವು ಕೊಡ ಬೇಕಾಗಿದೆ. ಮತ್ತು ಕಾಂಪಿಟಿಷನ್ ಇರುವಂತೆ ಮಾಡಬೇಕಾಗಿದೆ. ಗ್ರಾಮ ಮಟ್ಟದಲ್ಲಿ ಅಗದಿದ್ದರೂ ಸಹ ಮಂಡಲ ಮಟ್ಟದಲ್ಲಿ ಸಾರಾಯಿ ಹರಾಜು ಮಾಡಬೇಕು. ನಮ್ಮಲ್ಲಿ ೨೫೪೨ ಮಂಡಲಗಳಿವೆ. ಈ ಮಟ್ಟದಲ್ಲಿ ಹರಾಜು ಮಾಡಿದರೆ ಈಗ ಏನು ಆದಾಯ ನಿರೀಕ್ಷಣೆ ಮಾಡುತ್ತೀರಿ ಅದರ ಹತ್ತು ಪಟ್ಟು ಜಾಸ್ತಿಯಾಗುತ್ತದೆ. ದಯಮಾಡಿ ಇದನ್ನು ಮಾಡಬೇಕು. ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಕಾಂಟ್ರಾಕ್ಟ್ ಕೊಟ್ಟು, ಅವರ ಪ್ರಭಾವಕ್ಕೆ ಒಳಗಾಗುವ ಸ್ಥಿತಿಗೆ ನಾವು ಬರುವುದು ಬೇಡ. ಹತ್ತಾರು ಜನ ಇದರಲ್ಲಿ ಭಾಗಿಯಾಗಬೇಕು. ದಯಮಾಡಿ ಮುಂದಿನ ಸಲ ಪ್ರಯೋಗಾರ್ಥವಾಗಿ ಒಂದು ಜಿಲ್ಲೆಯಲ್ಲಿಯಾದರೂ ಕೂಡ ಗ್ರಾಮ ಮಟ್ಟದಲ್ಲಿ ಹರಾಜು ಮಾಡಬೇಕೆಂದು ಹೇಳುತ್ತೇನೆ. ಈ ಕೆಲಸ ಮಾಡಿದರೆ ಒಳ್ಳೆಯ ಗುಣಮಟ್ಟ ಕೊಡುವುದರ ಜೊತೆಗೆ ಹೆಚ್ಚಿನ ಆದಾಯವನ್ನೂ ನಿರೀಕ್ಷಣೆ ಮಾಡ ಬಹುದು. ಹಿಂದೆ ಶರಾಬಗಲೀ ಹೆಂಡ ಆಗಲೀ ಹರಾಜು ಮಾಡುವಾಗ ಸರ್ಕಾರಕ್ಕೆ ಗುತ್ತಿಗೆದಾರರಿಂದ ಎಷ್ಟು ಬಾಕಿ ಬರಬೇಕಾಗಿದೆಯೋ ಅದನ್ನು ವಸೂಲು ಮಾಡಬೇಕು. ಕೆಲವರು ಕೋರ್ಟಿನಲ್ಲಿ ಹೋಗಿ ತಡೆ ತಂದಿದ್ದಾರೆ. ಅದುಬಿಟ್ಟು ಬೇರೆಬೇರೆಯವರು ಯಾರು ಉಳಿಸಿಕೊಂಡಿದ್ದಾರೆ, ದಯಮಾಡಿ ಅದನ್ನು ವಸೂಲು ಮಾಡಬೇಕು. ಮತ್ತೆ ಕೆಲವರು ಸರ್ಕಾರಕ್ಕೆ ಹಣ ಬಾಕಿ ಕೊಡಬೇಕಾದ್ದರಿಂದ ತಾವು ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಇರುವುದಿಲ್ಲವೆಂದು ಬೇರೆ ಬೇನಾಮಿ ಹೆಸರಿನಲ್ಲಿ ಅವರೇ ಬಂದುಕೂಗಿ ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ. ಇದರಿಂದಸರ್ಕಾರಕ್ಕೆ ಬೇಕಾದಷ್ಟು ನಷ್ಟವಾಗುತ್ತಿದೆ. ಇಂಥದನ್ನು ನೋಡಿ ಸೋರಿಹೋಗುತ್ತಿರುವ ಆದಾಯ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ಮೊದಲು ಒಂದು ರೀತಿ ಮಾಡುತ್ತಿದ್ದರು. ಹರಾಜಿನಲ್ಲಿ ಏನು ಕೊಡಬೇಕೋ ಆ ಮೊತ್ತವನ್ನು ನಾಲ್ಕು ತಿಂಗಳವರೆಗೆ ಬ್ಯಾಂಕ್ ಗ್ಯಾರಂಟಿ ಅಥವಾ ಬೇರೆ ರೀತಿಯಲ್ಲಿ ಅವಕಾಶ ಕೊಟ್ಟು ಉಳಿದ ಹಣವನ್ನು ಪ್ರತಿ ತಿಂಗಳು ಇಂಥ ದಿವಸ ಕೊಡಬೇಕೆಂದು ದಿನ ನಿಗದಿ ಮಾಡುತ್ತಿದ್ದರು. ಆದರೆ ಅಂಥವರು ಎರಡು ಮೂರು ತಿಂಗಳಾದರೂ ಕೊಡದಿದ್ದಾಗ ತಾವು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ವಸೂಲು ಮಾಡದೆ ಬಾಕಿ ಬಿಟ್ಟರೆ ಸಂಶಯಕ್ಕೆ ಅವಕಾಶವಾಗುತ್ತದೆ ತಾವು ಅಧಿಕಾರಕ್ಕೆ ಬಂದಮೇಲೆ ತಮ್ಮ ಕೈಗೆ ಈ ಬಾಬು ಸಿಕ್ಕಿದಮೇಲೆ ನಮ್ಮ ಸರ್ಕಾರಕ್ಕೆ ಈ ಬಾಬಿನಿಂದ ಏನೇನು ಬರಬೇಕೋ, ಅದೆಲ್ಲವನ್ನೂ ತಾವು ವಸೂಲು ಮಾಡುತ್ತೀರಿ ಎಂಬ ಭರವಸೆಯಿಂದ ಆ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ಸರ್ಕಾರದ ವತಿಯಿಂದ ಇದರ ಬಗ್ಗೆ ವೈಜ್ಞಾನಿಕವಾದ ಅಂಕಿ ಅಂಶಗಳನ್ನು ಒದಗಿಸಿಕೊಡಬೇಕೆಂದು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ೫೦೦ ರಿಂದ ೬೦೦ಕೋಟಿ ಈ ಬಾಬಿನಿಂದ ಆದಾಯ ನಮ್ಮ ಸರ್ಕಾರಕ್ಕೆ ಬರುತ್ತಿರಬೇಕಾದರೆ, ಬಹುಶಃ ನಮ್ಮ ಕಂಟ್ರಾಕ್ಟುದಾರರಿಗೆ ಎಷ್ಟು ಲಾಭ ಬರಬಹುದು ? ಮಾರಾಟ ಮಾಡತಕ್ಕ ವೆಂಡರ್ಸ್‌ಗೆ ಎಷ್ಟು ಹೋಗಬಹುದು ಎಂಬುವನ್ನು ವಿಚಾರ ಮಾಡಬೇಕು. ೧೦೦ ರೂಪಾಯಿ ಮೌಲ್ಯದ ಪದಾರ್ಥವಾದ ಶರಾಬಾಗಲಿ, ಜಿನ್ನಾಗಲಿ, ವಿಸ್ಕಿಯಾಗಲಿ ಮಾರಾಟ ಮಾಡಿದಾಗ ರಾಜ್ಯಸರ್ಕಾರದ ಖಜಾನೆಗೆ ಎಷ್ಟು ಬರುತ್ತದೆ ? ಕಂಟ್ರಾಕ್ಟ್ ದಾರರಿಗೆ ಎಷ್ಟು ಹೋಗುತ್ತದೆ ? ಅದೇ ರೀತಿ ಗ್ರಾಹಕನಿಗೆ ಎಷ್ಟು ಹೋಗುತ್ತದೆ ? ಮಾರಾಟ ಮಾಡತಕ್ಕ ವೆಂಡರ್ಸ್‌ಗೆ ಎಷ್ಟು ಹೋಗುತ್ತದೆ ಎಂಬುದರ ಬಗ್ಗೆ ವೈಜ್ಞಾನಿಕವಾದ ಅಂಕಿ ಅಂಶಗಳ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮೊಲಾಸಿಸ್ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಎಷ್ಟು ಮೊಲಾಸಿಸ್ ಉತ್ಪಾದನೆಯಾಗುತ್ತಿದೆ ಎಂಬುದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ. ಸಮಗ್ರವಾದ ಒಂದು ಸ್ಟೋರೇಜ್ ವ್ಯವಸ್ಥೆ ಮಾಡಿಲ್ಲ. ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಎಷ್ಟು ಮೊಲಾಯಿಸ್ ಉತ್ಪಾದನೆಯಾಗುತ್ತಿದೆ ಎಂಬುದರ ಬಗ್ಗೆ ಕೂಡ ಸರ್ಕಾರಕ್ಕೆ ಮಾಹಿತಿ ಇಲ್ಲ. ಉತ್ಪಾದನೆಯ ಮೇಲೂ ಸಹ ತಮ್ಮ ನಿಯಂತ್ರಣವಿಲ್ಲ. ಅದರ ಮೇಲೆ ತಾವು ನಿಯಂತ್ರಣವನ್ನು ಸ್ಥಾಪನೆಮಾಡಬೇಕು. ಒಂದೇಕಡೆ ಸ್ಟೋರೇಜ್ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಏಕೆಂದರೆ ಅವರವರ ಮಟ್ಟದಲ್ಲೇ ಮೊಲಾಸಿಸ್ ಅನ್ನು ಡೈವರ್ಟ್ ಮಾಡುತ್ತಾರೆ. ನಮ್ಮ ಸರ್ಕಾರಕ್ಕೆ ಅವರಮೇಲೆ ನಿಯಂತ್ರಣವಿಲ್ಲದಿದ್ದಾಗ ಯಾವ ಹಂತದಲ್ಲಿ ಎಷ್ಟು ಸೋರಿಹೋಗುತ್ತದೆಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರವರ ಮಟ್ಟದಲ್ಲೇ ಡೈವರ್ಟ್ ಮಾಡುತ್ತಿದ್ದಾರೆ. Excise Commissioner himself functions as the molasses controller in the molasses controller in the State. ಅವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಬಹುಶಃ ಅವರು ಸಹ ಇದರ ವಿವರವನ್ನು ಸರ್ಕಾರಕ್ಕೆ ಕೊಡುವುದಿಲ್ಲ ಮತ್ತು ಸಕ್ಕರೆ ಕಾರ್ಖಾನೆಯವರು ಸಹ ನಿಮ್ಮ ಗಮನಕ್ಕೆ ತರುವುದಿಲ್ಲ. ಅವರವರ ಮಟ್ಟದಲ್ಲೇ ಹಲವಾರು ಕಡೆ ಮೊಲಾಸಿಸ್‌ನ್ನು ನೇರವಾಗಿ ಡೈವರ್ಟ್ ಮಾಡುತ್ತಿದ್ದಾರೆ. ಆದ್ದರಿಂದ ನಿಮ್ಮ ಅಧಿಕಾರಿಗಳು ಸಕ್ಕರೆ ಕಾರ್ಖಾನೆಗಳ ಮಾಲೀಕರ ಜೊತೆ ಶಾಮೀಲಾಗಿದ್ದಾರೆಂದು ನನಗನ್ನಿಸುತ್ತಿದೆ. ತಾವು ಬಂದ ಮೇಲಾದರೂ ಇದರ ನಿಯಂತ್ರಣವನ್ನು ಮಾಡಬೇಕು. Most of the sugar factories generate their private funds out of this blackmarketing of molasses. ಇದನ್ನು ಪ್ರವೇಟ್ ಫಂಡ್ ಆಗಿ ಕ್ರಿಯೇಟ್ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ತಾವು ಅವಕಾಶ ಕೊಡಬಾರದು. ಇದರ ಬಗ್ಗೆ ಬಹಳ ನಿಗಾವಹಿಸಿ ಅದನ್ನು ಆದಷ್ಟು ಒಂದು ನಿಯಂತ್ರಣಕ್ಕೆ ತರಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಬ್ರಾಂದಿ ಇದೆ, ವಿಸ್ಕಿ ಇದೆ, ಜಿನ್ ಇದೆ. ಹೀಗೆ ಬೇರೆ ಬೇರೆ ಪದಾರ್ಥಗಳು ಇದ್ದರೂ ಕೂಡ ಅದನ್ನು ಪ್ರಯೋಗಾಲಯದಲ್ಲಿ ಅದು ಒಳ್ಳೆಯ ಬ್ರಾಂದಿಯೋ, ಒಳ್ಳೆಯ ವಿಸ್ಕಿಯೋ ಎಂಬುದನ್ನು ಟೆಸ್ಟ್ ಮಾಡುವಂತಹ ಉಪಕರಣಗಳು ನಮ್ಮಲ್ಲಿ ಇಲ್ಲ. ಬಹುಶಃ ಅದನ್ನು ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಟನ್ ಕಬ್ಬು ಅರೆದರೆ ಸುಮಾರು ೪೦–೪೨ ಕೆ. ಜಿ. ಮೊಲಾಸಿಸ್ ಬರುತ್ತದೆ. ಈ ೪೨ ಕೆ. ಜಿ. ಮೊಲಾಸಿಸ್‌ನಲ್ಲಿ ಕನಿಷ್ಟ ೧೦ ಲೀಟರ್ ಸ್ಪಿರಿಟ್ ಅನ್ನು ತೆಗೆಯಬಹುದು. ಇದಕ್ಕೆ ಬೇರೆ ಎಲ್ಲವನ್ನು ಮಿಶ್ರಣವನ್ನು ಮಾಡಿದರೆ ೫೦ ರಿಂದ ೬೦ ಲೀಟರ್ ಸಾರಾಯಿ ಆಗುತ್ತದೆ. ಆದರೆ ಮೊಲಾಸಿಸ್‌ನ್ನು ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ. ಅದನ್ನು ತೆಗೆದುಕೊಂಡು ಖಾಸಗಿಯವರು ಹೆಚ್ಚಿನ ಲಾಭವನ್ನು ಸಂಪಾದನೆ ಮಾಡುವಂತಹದ್ದಕ್ಕೆ ಅವಕಾಶ ಇದೆ. ದಯಮಾಡಿ ಆ ಒಂದು ಕೆಲಸಕ್ಕೆ ಕಡಿವಾಣ ಹಾಕಬೇಕು. ಹೆಚ್ಚಿನ ಲಾಭ ಸರ್ಕಾರದ ಖಜಾನೆಗೆ ಬರುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು

ತಮ್ಮನ್ನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ನಾವು ಅಧಿಕಾರವನ್ನು ವಹಿಸಿಕೊಂಡಾಗ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಹೇಗಿತ್ತು ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿತ್ತು. ಬಹಳ ಹೀನಾಯ ಪರಿಸ್ಥಿತಿಯಲ್ಲಿತ್ತು. ಆಗ ಅನೇಕ ಸಂದರ್ಭಗಳಲ್ಲಿ ಅನೇಕ ಚುಕ್ಕಿಗಳು ಬೌನ್ಸ್ ಆಗಿದ್ದವು. ಟ್ರಜರಿ ಆಫೀಸರ್ಸ್‌ಗಳಿಗೆ ಕೆಲವು ನಿಬಂಧನೆಗಳನ್ನು ಹಾಕಿದ್ದರು. ಇಂತಹವರಿಗೆ ಮಾತ್ರ ಕೊಡಬೇಕು. ಇಂತಿಂಥವರಿಗೆ ಕೊಡಬಾರದು ಎಂದು ಹೇಳಿ. ಅನೇಕ ಜನ ಗುತ್ತಿಗೆದಾರರು ಈ ಒಂದು ನಿಯಮಗಳಿಂದ ಬಹಳಷ್ಟು ಪರಿತಾಪ ಪಟ್ಟಿದ್ದಾರೆ. ಬಹಳಷ್ಟು ಕಷ್ಟಪಟ್ಟಿದ್ದಾರೆ. ಕೆಲವರು ಹೊರಗಡೆಯಿಂದ ಬಂದಂತಹ ಗುತ್ತಿಗೆದಾರರು ಅದರಲ್ಲೂ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು ಈ ರಾಜ್ಯವನ್ನು ಬಿಟ್ಟು ಹೋಗುವ ಸ್ಥಿತಿಗೆ ಬಂದಿದ್ದರು. ಕೆಲವರು ಓಡಿ ಹೋಗಿದ್ದಾರೆ. ಆದ್ದರಿಂದ ಈಗ ನಮ್ಮ ಆರ್ಥಿಕಸ್ಥಿತಿ ಸ್ವಲ್ಪ ಸುಧಾರಿಸಿದೆ. ಪೂರ್ಣವಾಗಿ ಸುಧಾರಿಸಿದೆ ಎಂದು ಹೇಳುವುದಕ್ಕಾಗದಿದ್ದರೂ ಸ್ವಲ್ಪಮಟ್ಟಿಗೆ ಸುಧಾರಿಸಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೇಗೆಂದರೆ, ನಮಗೆ ಇವತ್ತಿನ ದಿವಸ ವಾಣಿಜ್ಯ ತೆರಿಗೆಯ ಮೂಲಕ ೧೫೫೫ ಕೋಟಿ ರೂಪಾಯಿಗಳ ಆದಾಯ ಬಂದಿದೆ. ಹಿಂದೆ ೧೧೮೬ ಕೋಟಿ ರೂಪಾಯಿಗಳು ಬರುತ್ತಿತ್ತು. ಈಗಸುಮಾರು ೧೪೫೫ ಕೋಟಿ ರೂಪಾಯಿಗಳ ವರಮಾನವನ್ನು ನಿರೀಕ್ಷಣೆ ಮಾಡಿದರೂ, ಬಹುಶಃ ಅದಕ್ಕಿಂತ ಜಾಸ್ತಿ ಬಂದರೂ ಬರಬಹುದು. ಹಿಂದೆ ಈ ರಾಜ್ಯದ ವರಮಾನ ೩೧೦೦ ಕೋಟಿ ರೂಪಾಯಿಗಳ ಬರುತ್ತಿತ್ತು. ಆದರೆ ಇವತ್ತು ಎಲ್ಲಾ ಮೂಲಗಳಿಂದ ಸುಮಾರು ೬೦೦೦ ಕೋಟಿ ರೂಪಾಯಿಗಳ ಆದಾಯ ರಾಜ್ಯ ಸರ್ಕಾರಕ್ಕೆ ಬರುತ್ತಿದೆ. ಶ್ರೀಮಾನ್ ಚಂದ್ರೇಗೌಡರು ೯ನೇ ಹಣಕಾಸಿನ ಆಯೋಗದ ೨ನೇ ವರದಿಯ ಬಗ್ಗೆ ನಾವು ಅನ್ಯಾಯ ಮಾಡಿಲ್ಲ. ಹಿಂದೆ ಇದ್ದಂತಹ ಕೇಂದ್ರ ಸರ್ಕಾರದ ನೀತಿಯಿಂದಾಗಿ ಇದು ಆಯಿತು ಎಂಬುದಾಗಿ ಹೇಳಿದರು. ಬಹುಶಃ ಯಾರದೇ ನೀತಿಯಿಂದ ಆಗಿರಲಿ, ಇದು ನಮ್ಮ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನನಗೆ ತಿಳಿದಮಟ್ಟಿಗೆ ೩೬ ಕೋಟಿ ರೂಪಾಯಿ ನಮಗೆ ವಂಚನೆ ಆಗಿದೆ. ಈ ೩೬ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆಂದು ಪ್ರೊ|| ಮಧು ದಂಡವತೆಯವರು ಹೇಳಿದ್ದಾರೆ ಎಂದು ತಾವು ಹೇಳಿದ್ದೀರಿ. ಅದನ್ನು ಯಾವರೀತಿ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ ಎಂದು ಹೇಳಿ, ಕೇಂದ್ರ ಸರ್ಕಾರದವರು ತಮ್ಮ ನೌಕರರಿಗೆ ಡಿಎ ಅನೌನ್ಸ್ ಮಾಡಿದಮೇಲೆ ನಾವು ನಮ್ಮ ಸರ್ಕಾರಿನೌಕರರಿಗೆ ಡಿಎ ಕೊಟ್ಟ ಪ್ರಯುಕ್ತ ೫೦ ಕೋಟಿ ರೂಪಾಯಿಗಳ ಭಾರ ನಮ್ಮ ಖಜಾನೆಗೆ ಆಗಿದೆ. ಆದರೂ ಕೂಡಾ ಇವತ್ತಿನದಿವಸ ನಾವು ಕೊಟ್ಟಿದ್ದೇವೆ. ಮತ್ತೆ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾಪರಿಷತ್ತುಗಳಿಗೆ ನಾವು ೫೫೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಷ್ಟು ಕೊಟ್ಟರೂ ಕೂಡ ಒಬ್ಬೊಬ್ಬ ಶಾಸಕರಿಗೆ ತನ್ನ ಕ್ಷೇತ್ರದಲ್ಲಿರುವ ರಸ್ತೆ ದುರಸ್ತಿ ಮಾಡುವುದಕ್ಕೆ ೧೨ ಲಕ್ಷ ರೂ. ಕೊಟ್ಟಿದ್ದಾರೆ. ಗಡಿ ಜಿಲ್ಲೆಯ ರಸ್ತೆ ದುರಸ್ತಿ ಮಾಡುವುದಕ್ಕೆ ೫ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇವೆಲ್ಲಾ ಹೊಸ ಯೋಜನೆಗಳು. ಮತ್ತೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ೪೦ ಕೋಟಿ ರೂ. ಕೊಟ್ಟಿದ್ದಾರೆ. ಹಿಂದಿನ ಸರ್ಕಾರಕ್ಕೆ ಹೋಲಿಸಿ ನೋಡಿದರೆ ಹಿಂದೆ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನಗಳನ್ನು ೩ ಅಥವಾ ೪ ತಿಂಗಳಿಗೆ ಒಂದು ಸಾರಿ ಕಳುಹಿಸಿಕೊಡುತ್ತಿದ್ದರು. ಆದರೆ ನಮ್ಮ ಸರ್ಕಾರ ಆಡಳಿತ ಸೂತ್ರವನ್ನು ಹಿಡಿದಮೇಲೆ ಕರಾರುವಾಕ್ಕಾಗಿ ಎಲ್ಲವನ್ನೂ ಒಂದನೇ ತಾರೀಖು ಬಟವಾಡೆ ಮಾಡುತ್ತಿದ್ದೇವೆ. ಮತ್ತೆ ಅರಿಯರ್ಸ್ ಏನು ಇದೆಯೋ ಅದನ್ನೂ ಕೂಡಾ ಕೊಡುತ್ತಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮತ್ತೆ ೮೪-೮೫ನೇ ಸಾಲಿನಿಂದ ೧೯೮೯-೯೦ರ ಏಪ್ರಿಲ್ ವರೆಗೆ ಸುಮಾರು ೨೫.೨ ಕೋಟಿ ವ್ಯವಸಾಯ ಆದಾಯ ತೆರಿಗೆ ಬರಬೇಕಾಗಿದೆ. ದಯಮಾಡಿ ಅದನ್ನು ವಸೂಲು ಮಾಡಬೇಕಾಗಿದೆ ಮತ್ತೆ ಮನೋರಂಜನಾ ತೆರಿಗೆ ೮.೫ ಕೋಟಿ ಬರಬೇಕಾಗಿದ್ದು ಅದನ್ನು ವಸೂಲಿ ಮಾಡಬೇಕೆಂದು ಮಾನ್ಯ ಅರ್ಥಮಂತ್ರಿಗಳಿಗೆ ಹೇಳುತ್ತೇನೆ. ಮತ್ತೆ ಈಗ ಅತೀ ಮುಖ್ಯವಾದುದು ರೇಷ್ಮೆ ಮೇಲೆ ಹಾಕಿರತಕ್ಕ ಟರ್ನ್ ಓವರ್ ಟ್ಯಾಕ್ಸ್. ಇದರಿಂದ ರೇಷ್ಮೆ ಉದ್ಯಮಕ್ಕೆ ಕೊಡಲಿಪೆಟ್ಟು ಬೀಳುವುದರಿಂದ ದಯವಿಟ್ಟು ಇದನ್ನು ಕೈಬಿಡಬೇಕೆಂದು ನಾನು ಮನವಿ ಮಾಡುತ್ತೇನೆ. ಬೇಕಾದರೆ ಇವತ್ತು ಏನು ರೇಷ್ಮೆ ವಿನಿಮಯ ಕೇಂದ್ರದಲ್ಲಿ ಶೇಕಡ ೨ ರಷ್ಟು ಸುಂಕ ಹಾಕುತ್ತೀರಿ, ಅದನ್ನು ಶೇಕಡ ೩ ಮಾಡಿ, ಅದನ್ನು ಕೊಡಲು ಅವರು ರೆಡಿ ಇದ್ದು ಈ ಟಿಒಟಿಯನ್ನು ಮೊದಲು ರದ್ದು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಈ ಟಿಒಟಿನಿಂದಾಗಿ ರೇಷ್ಮೆ ವಿನಿಮಯ ಕೇಂದ್ರಕ್ಕೆ ರೇಷ್ಮೆಯೇ ಬರುತ್ತಾ ಇಲ್ಲ. ನಾನು ರೇಷ್ಮೆ ಇಲಾಖೆ ಬೇಡಿಕೆ ಬಗ್ಗೆ ಮಾತನಾಡುವಾಗ ಕಳೆದ ಹಾಗೂ ಈ ವರ್ಷ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಎಷ್ಟು ಪ್ರಮಾಣದ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬಂತು ಹಾಗೂ ಎಷ್ಟು ಪ್ರಮಾಣ ಕಡಿಮೆ ಆಗಿದೆ ಎಂದು ವಿವರವಾಗಿ ಹೇಳಿದ್ದೇನೆ. ಈದಿನ ಟಿಒಟಿಯಿಂದಾಗಿ ಸುಮಾರು ೧೫ ಲಕ್ಷ ರೂಪಾಯಿಯಷ್ಟು ಶುಲ್ಕ ಇವತ್ತು ಹೋಗಿದೆ. ಇವತ್ತು ಹೊರಗಡೆ ಹೊಸೂರಿನಲ್ಲಿ ಕದ್ದು ರೇಷ್ಮೆ ಕೊಂಡುಕೊಳ್ಳತಕ್ಕದ್ದು, ರೇಷ್ಮೆ ವಿನಿಮಯ ಕೇಂದ್ರಕ್ಕಿಂತಾ

೧೦೦ ರೂ. ಹೆಚ್ಚಿಗೆ ಹೊರಗಡೆ ಮಾರಾಟ ಆಗುತ್ತಿರುತಕ್ಕದ್ದರ ಬಗ್ಗೆ ನಾನು ಹೇಳಿದ್ದೇನೆ. ಇದು ಹೀಗೆ ಮುಂದುವರೆದರೆ ಈ ಉದ್ಯಮಕ್ಕೇ ಕೊಡಲಿ ಪೆಟ್ಟು ಬೀಳುತ್ತದೆ. ಈ ಕಾಮಧೇನು ಕಲ್ಪವೃಕ್ಷಕ್ಕೆ ಏನು ಪುರಸ್ಕಾರ, ಒತ್ತಾಸೆ ಕೊಡಬೇಕೋ ಆ ಬಗ್ಗೆ ಗಮನ ಹರಿಸಿ ಟಿಬಿಟಿಯನ್ನು ರದ್ದು ಮಾಡಿ ಆ ಆದಾಯವನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ. ಇವತ್ತು ಅವರು ಕೊಡುತ್ತಿರುವ ಶುಲ್ಕ ೨ ಪರ್ಸೆಂಟ್ ಬದಲು ೩ ಪರ್ಸೆಂಟ್ ಕೊಡುವುದಕ್ಕೆ ತಯಾರು ಇದ್ದಾರೆ. ಇವತ್ತು ಈ ೩ ತಿಂಗಳಲ್ಲಿ ಟಿಬಿಟಿಯಿಂದಾಗಿ ೧೫ ಲಕ್ಷ ರೂ. ಸರ್ಕಾರಕ್ಕೆ ಬರುವುದು ಹೋಗಿದೆ. ಈ ಬಗ್ಗೆ ರೇಷ್ಮೆ ವ್ಯವಹಾರಸ್ಥರು, ರೇಷ್ಮೆ ಉದ್ದಿಮೆದಾರರನ್ನು ಹಾಗೂ ನಮ್ಮನ್ನು ತಮ್ಮ ಕೊಠಡಿಗೆ ಕರೆದು ಮಾತನಾಡಿ. ಯಾವ ಹಂತದಲ್ಲಿ ತೆರಿಗೆ ಮೂಲಕ ಇದನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡೋಣ. ದಯವಿಟ್ಟು ಈ ಟಿಬಿಟಿಯನ್ನು ಕೈಬಿಡಬೇಕು. ಇಲ್ಲದಿದ್ದರೆ ಹೀಗೆ ಮುಂದುವರೆದರೆ ವರ್ಷದಲ್ಲಿ ಅನೇಕ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆಂದು ಮನನೊಂದು ಹೇಳುತ್ತಿದ್ದೇನೆ, ಇವತ್ತು ಈ ರೇಷ್ಮೆ ಲಾಬಿ, ಶುಗರ್ ಹಾಗೂ ಸಿಮೆಂಟ್ ಲಾಬಿಗಿಂತ ಪ್ರಮುಖವಾಗಿದೆ. ಈ ರೇಷ್ಮೆ ಉತ್ಪತ್ತಿ ಮಾಡತಕ್ಕ ೬ ಸಾವಿರ ರೀಲರ್ಸ್‌ನ್ನು ತಮ್ಮ ವಶಕ್ಕೆ ತೆಗೆದುಕೊಂಡು ಒಂದು ಸಾರಿ ಸ್ಟ್ರೈಕ್ ಮಾಡಿಸಿದ್ದರಿಂದ ನೂರಾರು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಯಿತು. ಇದರ ಬಗ್ಗೆ ವಿವರವನ್ನು ನಾನು ತಮ್ಮ ಚೇಂಬರ್‌ನಲ್ಲಿ ಕೊಡುತ್ತೇನೆ ಆದ್ದರಿಂದ ರೇಷ್ಮೆ ವಿನಿಮಯ ಕೇಂದ್ರದಲ್ಲಿನ ಟಿಬಿಟಿ ಕೈಬಿಡಬೇಕೆಂದು ಹೇಳುತ್ತೇನೆ. ಇನ್ನು ರಾಜ್ಯದಲ್ಲಿ ಸುಮಾರು ೨೧ ಜಿಲ್ಲಾ ಖಜಾನೆಗಳು ಇವೆ. ಹಾಗೂ ೧೯೭ ಸಬ್ ಟ್ರಸರಿಗಳು ಇವೆ. ಹಾಗೇ ತಾಲ್ಲೂಕು ಕೇಂದ್ರ ಬಿಟ್ಟು ಸುಮಾರು ೧೨ ಸಬ್ ಟ್ರಸರಿಗಳನ್ನು ಮಾಡಿದ್ದೀರಿ. ಇವತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಬಹಳ ದೊಡ್ಡದು ಇದ್ದು, ಹನೂರಿನಲ್ಲಿ ಒಂದು ಸಬ್ ಟ್ರೆಜರಿ ಮಂಜೂರು ಮಾಡಬೇಕೆಂದು ನಾನು ಬಹಳ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ನ್ಯಾಯಾಂಗದ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಯಾವುದೇ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಹಾಗೂ ಪತ್ರಿಕಾಂಗಗಳು ಒಂದಕ್ಕೊಂದು ಪರಸ್ಪರ ಹೊಂದಿಕೊಂಡು ಒಂದರ ಕಾರ್ಯಕ್ಷೇತ್ರಕ್ಕೆ ಇನ್ನೊಂದು ಹಸ್ತಕ್ಷೇಪ ಮಾಡದೇ ಹೋದರೆ ಆಡಳಿತ ಸುಲಲಿತವಾಗಿ ನಡೆದುಕೊಂಡು ಹೋಗುತ್ತದೆ. ಬಹುಶಃ ನಮ್ಮಲ್ಲಿ ನ್ಯಾಯ ಪರಿಪಾಲನೆ ಬಗ್ಗೆ ಜನಗಳಿಗೆ ಬಹಳ ವಿಶ್ವಾಸವಿದೆ. ಅದರ ಬಗ್ಗೆ ಒಂದೇ ಒಂದು ಕೊರತೆ ಏನೆಂದರೆ, ನ್ಯಾಯ ಕೊಡತಕ್ಕ ವಿಚಾರದಲ್ಲಿ ವಿಳಂಬವಾಗುತ್ತಿದೆ. ಅಪ್ಪನ ಕಾಲದಲ್ಲಿ ಕೊಟ್ಟ ಕೇಸು ಮಗನ ಕಾಲದಲ್ಲಿ ಇತ್ಯರ್ಥವಾಗುತ್ತಿದೆ. ಹಳ್ಳಿಯ ನಾಣ್ಣುಡಿಯ ಪ್ರಕಾರ ''ಗೆದ್ದವನು ಸೋತ ಸೋತವನು ಸತ್ತ'' ಎಂಬಂತೆ ಆಗಿದೆ. ಆದ್ದರಿಂದ ಖಾಲಿಯಿರತಕ್ಕ ಜಡ್ಜ್ ಹುದ್ದೆಗಳನ್ನು ಅವುಗಳನ್ನು ಪೂರಾ ಭರ್ತಿ ಮಾಡಬೇಕು. ಒಂದು ತಿಂಗಳಿನಲ್ಲಿ ಇಷ್ಟೇ ಕೇಸ್‌ಗಳನ್ನು ಮುಗಿಸಬೇಕೆಂದು ತಾವು ನಿರ್ಣಯ ಮಾಡಬೇಕು. ಮತ್ತೊಂದು ಮನವಿ ಏನೆಂದರೆ ಯಾರು ಕಕ್ಷಿದಾರರು ಇದ್ದಾರೆ ಅವನಿಗೆ ಕೋರ್ಟ್‌ನಿಂದ ಸಮೊನ್ಸ್ ಹೋಗುವಾಗ ಸಮೊನ್ಸ್ ಹೋದ ತಕ್ಷಣ, ಆತ ಕೋರ್ಟ್‌ಗೆ ಬಂದ ತಕ್ಷಣ ಆ ಕೇಸನ್ನು ಮೂರ್ನಾಲ್ಕು ದಿವಸಗಳಲ್ಲಿ ಮುಗಿಸಬೇಕು. ಆ ಕೇಸನ್ನು ಮುಂದುವರಿಸುವುದು, ಮುಂದಿನ ತಿಂಗಳ ೧೫ನೇ ತಾರೀಖಿಗೆ ಹಾಕುವುದು, ನಂತರ ಅದರ ಮುಂದಿನ ತಿಂಗಳ ೨೦ನೇ ತಾರೀಖಿಗೆ ಹಾಕುವುದರಿಂದ ಬಹಳ ತೊಂದರೆಯಾಗುತ್ತದೆ ಮತ್ತು ಬಹಳ ಬೇಜಾರು ಆಗುತ್ತದೆ. ದಯಮಾಡಿ ಯಾವ ಕೇಸಿಗೆ ಸಮೊನ್ಸ್ ಕಳುಹಿಸುತ್ತಾರೆ, ಆ ಸಮೊನ್ಸ್ ಜಾರಿಯಾದ ತಕ್ಷಣ ಆ ಕೇಸನ್ನು ಇಷ್ಟು ದಿವಸಗಳಲ್ಲಿ ಮುಗಿಸಬೇಕೆನ್ನುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಆ ಕೆಲಸವನ್ನು ಯಾವುದೇ ಕಾರಣದಿಂದ ಮುಂದಕ್ಕೆ ಹಾಕಬಾರದೆಂದು ನಾನು ತಮ್ಮ ಮೂಲಕ ಭಿನ್ನವಿಸಿಕೊಳ್ಳುತ್ತೇನೆ. ಬಹಳ ದಿವಸಗಳಿಂದ ಖಾಲಿಯಿರತಕ್ಕ ಹುದ್ದೆಗಳನ್ನು ತುಂಬಬೇಕು. ಕೊಳ್ಳೇಗಾಲಕ್ಕೆ ಅಡಿಶನಲ್ ಮುನ್ಸಿಫ್ ಕೋರ್ಟ್ ಬೇಕೆಂದು ಕೇಳಿದ್ದೇವೆ. ಹಿಂದೆ ನಮ್ಮ ಮಂತ್ರಿಗಳು ಅದಕ್ಕೆ ಒಪ್ಪಿಕೊಂಡಿದ್ದಾರೆ. ದಯಮಾಡಿ ಆ ಕೆಲಸವನ್ನು ಮಾಡಿಕೊಡಬೇಕು. ಪ್ರತಿಯೊಂದು ನ್ಯಾಯಾಲಯಕ್ಕೂ ಒಂದು ದೂರವಾಣಿಯ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ದೂರವಾಣಿಯ ಸೌಲಭ್ಯ ಎಲ್ಲೂ ಇಲ್ಲ. ಮುಖ್ಯವಾಗಿ ನ್ಯಾಯಾಧೀಶರುಗಳಿಗೆ ದೂರವಾಣಿ ಸೌಲಭ್ಯವನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೋರ್ಟ್‌ನಲ್ಲಿ ಕೇಸುಗಳ ರಾಜಿ ಮಾಡಿದಾಗ, ಕೋರ್ಟ್ ಫೀ ಅನ್ನು ವಾಪಸ್ಸು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜಿ ಮಾಡಿದ ತಕ್ಷಣ ಕೋರ್ಟ್ ಫೀ ವಾಪಸ್ಸು ಮಾಡುವ ಕಡೆಗೆ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯದ ಎಲ್ಲ ಕಡೆ ಫ್ಯಾಮಿಲಿ ಕೋರ್ಟ್ ಎಂದು ಏನು ಹೇಳುತ್ತೇವೆ, ಆ ಫ್ಯಾಮಿಲಿ ಕೋರ್ಟ್‌ಗಳನ್ನು ಮಾಡಬೇಕು. ಬೆಂಗಳೂರು ನಗರದಲ್ಲಿ ಅಂತಹ ಒಂದು ಕೋರ್ಟ್ ಇದೆ. ಅಂತಹ ಕೋರ್ಟ್ ಸ್ಥಾಪನೆ ಮಾಡಬೇಕಾದರೆ ೫ ಲಕ್ಷದಿಂದ ೧೦ ಲಕ್ಷ ಜನಸಂಖ್ಯೆ ಇರಬೇಕೆಂದೂ ಅಂತಹ ಕಡೆ ಮಾತ್ರ ಫ್ಯಾಮಿಲಿ ಕೋರ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಆ ತರಹ

ಕೋರ್ಟ್‌ನ್ನು ಬೆಂಗಳೂರು ನಗರದಲ್ಲಿ ಮಾತ್ರ ಮಾಡುವುದಕ್ಕೆ ಸಾಧ್ಯವಿದೆ. ಈಗ ಬೆಂಗಳೂರು ನಗರದಲ್ಲಿ ಅಂತಹ ಕೋರ್ಟ್ ಇದೆ ಅದು ಚೆನ್ನಾಗಿ ನಡೆಯುತ್ತಿದೆ. ಜಿಲ್ಲಾ ಕೇಂದ್ರಗಳಲ್ಲೂ ಇಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅತ್ಯಾಚಾರ ವರದಕ್ಷಿಣೆ ಪಿಡುಗು ಮತ್ತೆ ದಲಿತರ ಮೇಲೆ ನಡೆಯತಕ್ಕ ದೌರ್ಜನ್ಯಗಳನ್ನು ವಿಚಾರಣೆ ಮಾಡುವುದಕ್ಕೆ ಜಿಲ್ಲಾಮಟ್ಟದಲ್ಲಿ ಒಂದು ನ್ಯಾಯಾಲಯವನ್ನು ತೆರೆಯುವುದಾದರೆ ಬಹಳ ಅನುಕೂಲವಾಗುತ್ತದೆ. ಬೇಗ ನ್ಯಾಯ ಸಿಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೌಲಭ್ಯಗಳ ಬಗ್ಗೆ ಮಾತನಾಡುವಾಗ ಇನ್ನೊಂದು ಮಾತನ್ನು ಹೇಳುತ್ತೇನೆ. ತಾಲ್ಲೂಕು ಮಟ್ಟಗಳಲ್ಲಿ ಇರತಕ್ಕ ಕೋರ್ಟ್‌ಗಳಲ್ಲಿ ಎರಡು ಕೋರ್ಟ್‌ಗಳಿಗೆ ಅನ್ವಯವಾಗುವಂತೆ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ಮಾಡುತ್ತಿದ್ದಾರೆ. ಬಹುಶಃ ತಮಗೆ ಗೊತ್ತಿರುವ ಹಾಗೆ ಟಿ.ನರಸೀಪುರ ಕೊಳ್ಳೇಗಾಲ, ಕೊಳ್ಳೇಗಾಲ–ಚಾಮರಾಜನಗರ ತಾಲ್ಲೂಕುಗಳಿಗೆ ಒಬ್ಬರೇ ಪಬ್ಲಿಕ್ ಪ್ರಾಸಿಕ್ಯೂಟರ್ ಇದ್ದರೆ ಕೇಸುಗಳನ್ನು ನೋಡಿಕೊಳ್ಳುವುದು ಕಷ್ಟವಾಗುತ್ತದೆ. ದಯವಿಟ್ಟು ಪ್ರತಿಯೊಂದು ತಾಲ್ಲೂಕಿಗೂ ಫುಲ್‌ಟೈಮ್ ಕೆಲಸಮಾಡತಕ್ಕ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಕಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾವು ಸದನದಲ್ಲಿ ಚರ್ಚೆಮಾಡತಕ್ಕ ವಿಷಯಗಳ ಬಗ್ಗೆ ಒಂದು ಎರಡು ಪ್ರತಿ ಬೇಕು ಎಂದಾಗ ನಮ್ಮ ಕೈಗೆ ಬೇಗ ಸಿಗುವುದಿಲ್ಲ. ಆ ಪ್ರತಿ ಸಿಗಬೇಕಾದರೆ ನಾಲ್ಕೈದು ದಿವಸಗಳು ಆಗುತ್ತವೆ. ದಯಮಾಡಿ ಬೇಗ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಶಾಸಕರ ಭವನದ ದೂರವಾಣಿಗಳ ಬಗ್ಗೆ ಹೇಳಿದ್ದಾರೆ. ನಾನು ಮತ್ತೆ ಅದನ್ನು ಹೇಳುವುದಿಲ್ಲ ನಾನು ಹೇಳತಕ್ಕದ್ದು ಏನೆಂದರೆ, ನಮ್ಮ ಮಾಜಿ ಶಾಸಕರುಗಳಿಗೆ ಕೊಡತಕ್ಕ ಭತ್ಯೆ ತಿಂಗಳಿಗೆ ಮುನ್ನೂರು ರೂಪಾಯಿ ಏನಿದೆ ಅದನ್ನು ಐನೂರು ರೂಪಾಯಿ ಮಾಡಬೇಕು. ಏಕೆಂದರೆ ಅವರು ವೃತ್ತಿಯನ್ನು ಬಿಟ್ಟಿರುತ್ತಾರೆ. ವೃತ್ತಿಯನ್ನು ಬಿಟ್ಟು ರಾಜಕೀಯಕ್ಕೆ ಬಂದಿದ್ದಾರೆ. ಮೊದಲನೆಯ ಸಾರಿ ಗೆದ್ದವರಿಗೆ ೫೦೦ ರೂಪಾಯಿ ಪೆನ್‌ಷನ್ ಮಾಡಿ. ಎರಡನೆಯ ಸಾರಿ ಗೆದ್ದವರಿಗೆ ೧೦೦೦ ರೂಪಾಯಿ ಪೆನ್‌ಷನ್ ಸಿಗುವಂತೆ ಮಾಡಬೇಕೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ. ದಯಮಾಡಿ ಅವರು ಕೂಡ ತಮ್ಮ ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾದರೆ ಈ ಸೌಲಭ್ಯವನ್ನು ಕಲ್ಪಿಸಿಕೊಡಬೇಕು ವಕೀಲಿ ವೃತ್ತಿ ಮಾಡುತ್ತಿದ್ದರೆ ಅದನ್ನು ಬಿಟ್ಟು ರಾಜಕೀಯಕ್ಕೆ ಬಂದಿರುತ್ತಾರೆ. ವೃತ್ತಿ ಬಿಟ್ಟು ಬಂದಮೇಲೆ ಮತ್ತೆ ಆ ವೃತ್ತಿಗೆ ಹೋದಿಕೊಳ್ಳುವುದಕ್ಕೆ ಆಗುವುದಿಲ್ಲ, ಅವರಿಗೆ ೫೦೦ ರೂಪಾಯಿ ಕೊಟ್ಟು ಅವರ ಜೀವನವನ್ನು ಹಸನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೇ ಸಾರಿ ಗೆದ್ದವರಿಗೆ ಸಾವಿರ ರೂಪಾಯಿ ಪೆನ್‌ಷನ್ ಕೊಡುವ ಏರ್ಪಾಡು ಮಾಡಬೇಕು. ಶಾಸಕರುಗಳಿಗೆ ಕಾರು ಕೊಂಡುಕೊಳ್ಳಲಿಕ್ಕೆ ೩೫ ಸಾವಿರ ರೂಪಾಯಿ ಅಡ್ವಾನ್ಸ್ ಕೊಡುತ್ತಿದ್ದಾರೆ. ಈಗ ಕಾರುಗಳ ಬೆಲೆ ಜಾಸ್ತಿಯಾಗಿದೆ. ಹೊಸ ಅಂಬಾಸಿಡರ್ ಕಾರು ಬೆಲೆ ಒಂದೂವರೆ ಲಕ್ಷ ರೂಪಾಯಿ ಆಗಿದೆ, ಸೆಕೆಂಡ್ ಹ್ಯಾಂಡಲ್ ಕೊಂಡುಕೊಳ್ಳಬೇಕಾದರೂ ೬೫–೭೦ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಶಾಸಕರುಗಳಿಗೆ ಕೊಡತಕ್ಕ ಅಡ್ವಾನ್ಸನ್ನು ಜಾಸ್ತಿಮಾಡಬೇಕೆಂದು ಹೇಳುತ್ತೇನೆ. ಇವತ್ತು ತಾಲ್ಲೂಕು ಮಟ್ಟಗಳಲ್ಲಿ ಭೂನ್ಯಾಯ ಮಂಡಳಿಗಳನ್ನು ಸ್ಥಾಪನೆ ಮಾಡಿದ್ದಾರೆ.

೩.೧೫ ಪಿ.ಎಂ.

ಈ ಭೂನ್ಯಾಯ ಮಂಡಳಿಗಳಲ್ಲಿ ಬರತಕ್ಕಂಥ ಗೇಣಿದಾರರಿಗೆ, ಟೆನೆಂಟ್ಸ್‌ಗೆ ಉಚಿತ ಕಾನೂನು ಸಲಹೆಗಳನ್ನು ಜಿಲ್ಲಾಮಟ್ಟದಿಂದ ತಾಲ್ಲೂಕು ಮಟ್ಟದಲ್ಲಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಶ್ರೀ ವೀರಪ್ಪ ಮೊಯಿಲಿಯವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಮೇಲೆ ಜನತಾ ನ್ಯಾಯಾಲಯಗಳನ್ನು ಮಾಡಿ ಒಳ್ಳೆಯ ಕೆಲಸ ಮಾಡಿದ್ದಾರೆ. ನಾವಂತೂ ಬಹಳ ಸಂತೋಷ ಪಡುತ್ತಿದ್ದೇವೆ. ಒಂದು ತಿಂಗಳಿಗೆ ಎರಡು–ಮೂರು ಶಿಬಿರಗಳನ್ನು ಮಾಡಿ ಅನೇಕ ಕೇಸುಗಳನ್ನು ರಾಜಿಮಾಡಿ, ಇಡೀ ದೇಶಕ್ಕೆ ಕರ್ನಾಟಕ ರಾಜ್ಯ ಒಂದು ಮಾದರಿಯಾಗಿದೆ ಎಂಬುದನ್ನು ಎಲ್ಲರೂ ತಿಳಿದುಕೊಂಡಿದ್ದಾರೆ, ಜನರು ಕೂಡ ತುಂಬ ಮೆಚ್ಚಿಕೊಂಡಿದ್ದಾರೆ. ಈ ಕಾರ್ಯವ್ಯಾಪ್ತಿಯನ್ನು ಹೆಚ್ಚು ಬೆಳೆಸಿಕೊಂಡು ಹೋಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಎಷ್ಟು ಮುನ್ಸಿಫ್ ಕೋರ್ಟುಗಳನ್ನು ಈ ವರ್ಷದಲ್ಲಿ ತೆರೆಯಲಿಕ್ಕೆ ಶಿಫಾರಸ್ಸು ಮಾಡಿದ್ದೀರಿ ಎಂಬುದನ್ನು ತಿಳಿಸಿದ್ದೀರಿ. ಹಾಗೆಯೇ ತಾವು ಅನೇಕ ಸಾರಿ ಹೇಳಿದ್ದೀರಿ. ಹೆಣ್ಣುಮಕ್ಕಳಿಗೆ ಸಮಾನ ಆಸ್ತಿ ಹಕ್ಕುಗಳನ್ನು ಕೊಡುತ್ತೇವೆ ಎಂದು. ಈ ಕಾನೂನು ಯಾವಾಗ ಬರುತ್ತದೆ, ಇದನ್ನು ಯಾವಾಗ ಜಾರಿ ಮಾಡುತ್ತೀರೆಂದು ದಯವಿಟ್ಟು ಹೇಳಬೇಕು. ಅದನ್ನು ಆದಷ್ಟು ಬೇಗ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ, ನಿವೇಶನರಹಿತರಿಗೆ, ನಿವೇಶನ ಒದಗಿಸಲಿಕ್ಕೆ ಈ ಭೂಸ್ವಾಧೀನ ಕಾಯಿದೆ ಏನಿದೆ, ಇದು ಬಹಳ ಕ್ಲಿಷ್ಟವಾಗಿದೆ. ಒಬ್ಬ ಬಡವನಿಗೆ ನಿವೇಶನ ಕೊಡಬೇಕೆಂದು

ಪ್ರಯತ್ನಪಟ್ಟಾಗ, ಈಗಿನ ಕಾನೂನು ಪ್ರಕಾರ ನಾವು ಹೋದಾಗ ಸುಮಾರು ಎರಡು ವರ್ಷಗಳಾದರೂ ಅವರಿಗೆ ನಿವೇಶನ ಒದಗಿಸುವುದಕ್ಕೆ ಆಗುವುದಿಲ್ಲ. ದಯವಿಟ್ಟು ನೀವು ಗೆಜೆಟ್ ನೋಟಿಫಿಕೇಶನ್ ಏನು ಬರಬೇಕೆಂದು ಮಾಡಿದ್ದೀರಿ ಅದನ್ನು ಸಣ್ಣಪುಟ್ಟ ಸ್ಥಳೀಯ ಪತ್ರಿಕೆಗಳಲ್ಲಿ ಕೂಡ ಬರುವಂತೆ ಮಾಡಿ, ಅದು ಮೂವತ್ತು ದಿವಸಗಳೊಳಗೆ ಅಬ್ಜೆಕ್ಷನ್ಸ್ ಕಾಲ್‌ಫಾರ್ ಮಾಡಿದರೆ ಬಡವರಿಗೆ ಬೇಗನೆ ನಿವೇಶನಗಳನ್ನು ಕೊಡಬಹುದು ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಹಾಗೆಯೇ ಮಾಜಿ ಶಾಸಕರುಗಳಿಗೆ ಬಸ್‌ಪಾಸ್ ಕೊಡಬೇಕು, ನಾವುಗಳು ಹೇಗೆ ಇನ್ನೊಬ್ಬರನ್ನು ಜೊತೆಯಲ್ಲಿ ಕರೆದುಕೊಂಡುಹೋಗಿ ಪ್ರಯಾಣ ಮಾಡುತ್ತೇವೆ, ಅದೇ ರೀತಿ ಈ ಮಾಜಿ ಶಾಸಕರಿಗೆ ಈ ಸೌಲಭ್ಯವನ್ನು ಒದಗಿಸಿಕೊಡಬೇಕು. ಜೊತೆಗೆ ವೈದ್ಯಕೀಯ ಸೌಲಭ್ಯವನ್ನು ಅವರಿಗೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ತಾವು ದಯವಿಟ್ಟು ಈ ಕೆಲಸವನ್ನು ನಿಧಾನ ಮಾಡಕೂಡದು. ತಕ್ಷಣವೇ ಈ ವ್ಯವಸ್ಥೆಯನ್ನು ಮಾಡಬೇಕು. ಈವಾಗ ಮಂತ್ರಿಗಳಿಗೆ ಸುಮಾರು ೨೫೦೦ ರೂಪಾಯಿ ಸಂಭಾವನೆ ಬರುತ್ತದೆ, ಬೇರೆ ಅಧಿಕಾರಿಗಳಿಗೆ ಹೋಲಿಸಿದರೆ ಮಂತ್ರಿಗಳ ಸಂಬಳ ಬಹಳ ಕಡಿಮೆ. ಇದನ್ನು ತಾವುಗಳೇ ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ ಅಂದೆನಿಸುತ್ತದೆ. ತಾವು ಇರತಕ್ಕಂಥ ಸ್ಟ್ಯಾಂಡರ್ಡ್ ಮತ್ತು ಬೇರೆಯವರು ತೆಗೆದುಕೊಳ್ಳತಕ್ಕಂಥ ಪಗಾರ ನೋಡಿದಾಗ, ಇದನ್ನು ಹೆಚ್ಚಿಸಿಕೊಳ್ಳುವಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ, ನಿವೇಶನಗಳನ್ನು ಒದಗಿಸಲಿಕ್ಕೆ ಏನು ಪ್ರಯತ್ನಪಟ್ಟಿದ್ದೇನೆ, ಅಂತಹ ಸಂದರ್ಭಗಳಲ್ಲಿ ಭೂಮಾಲೀಕರು ಕೊನೆಯ ಹಂತದಲ್ಲಿ ಫೈನಲ್ ೬ (೧) ನೋಟಿಫಿಕೇಶನ್ ಆದ ಮೇಲೆ ಕೂಡ ಹೈಕೋರ್ಟಿಗೆ ಬಂದು ತಡೆಯಾಜ್ಞೆ ಪಡೆದುಕೊಳ್ಳುತ್ತಾರೆ. ತಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಏನು ಮಾಡುತ್ತಾರೆ ಎಂದು ಗೊತ್ತಿಲ್ಲ. ೫–೧೦–೧೨ ವರ್ಷಗಳಿಂದ ಬಾಕಿ ಉಳಿದಿರುವ ಇಂತಹ ಪ್ರಕರಣಗಳಿವೆ. ತಾವು ಮಂತ್ರಿಗಳಾಗಿ ಬಂದು ತಮ್ಮ ಕೈಯಿಂದ ಪಟ್ಟ್ ವಿತರಣೆಮಾಡಿ, ಜನರು ಗುಡಿಸಲು ಕಟ್ಟಿಕೊಂಡಿದ್ದರೆ. ನಂತರ ಸ್ಟೇ ತೆಗೆದುಕೊಂಡುಬರುತ್ತಾರೆ. ಅಂತಹ ಸಂದರ್ಭಗಳಲ್ಲಿ ಭೂಮಾಲೀಕರು ತಮ್ಮ ಪ್ರಭಾವದಿಂದ, ಪೋಲೀಸರ ಮುಖಾಂತರ ಆ ಗುಡಿಸಲುಗಳನ್ನು ಕೆಡವಿದ್ದಾರೆ. ಬಹುಶಃ ಸ್ಟೇ ಆದರೆ ಅದನ್ನು ವೆಕೇಟ್ ಮಾಡುವುದಕ್ಕೆ ವ್ಯವಸ್ಥೆ ಬೇಡವೆ ? ನಮ್ಮ ರಾಜ್ಯದಲ್ಲಿ ಎಷ್ಟು ಇಂತಹ ಪ್ರಕರಣಗಳು ಇವೆ, ಹೈಕೋರ್ಟಿನಲ್ಲಿ ಎಷ್ಟು ತಡೆಯಾಜ್ಞೆ ಬಂದಿದೆ ಎನ್ನುವ ಯಥಾರ್ಥವನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ತಿಂಗಳಿಗೊಂದು ಸಾರಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ಕರೆದು ಮೀಟಿಂಗ್ ಮಾಡಿ, ಹೈಕೋರ್ಟಿನಲ್ಲಿ ಎಷ್ಟು ಪ್ರಕರಣಗಳಲ್ಲಿ ಸ್ಟೇ ಆಗಿದೆ, ಅದನ್ನು ಬೇಗನೆ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಈ ಜನರ ಹಿತವನ್ನು ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ. ಅನೇಕ ಪ್ರಕರಣಗಳಲ್ಲಿ ಈ ತಡೆಯಾಜ್ಞೆಗಳು ಬಂದು ಈ ಬಡ ಜನರಿಗೆ ಬಹಳ ತೊಂದರೆಯಾಗಿದೆ. ಈ ಕಡೆಗೆ ತಾವು ದಯವಿಟ್ಟು ಗಮನಹರಿಸಬೇಕು ಮತ್ತು ಸ್ಟೇ ವೆಕೇಟ್ ಮಾಡುವುದಕ್ಕೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ನಾನು ನನಗೆ ತಿಳಿದಮಟ್ಟಿಗೆ ಎಲ್ಲ ವಿಷಯಗಳನ್ನು ಹೇಳಿದ್ದೇನೆ ಎಂದೆನಿಸುತ್ತದೆ. ದಯವಿಟ್ಟು ನಮ್ಮ ಮಾನ್ಯ ಅರ್ಥ ಮಂತ್ರಿಗಳು ಈ ಟಿ.ಒ.ಟಿ. ಟ್ಯಾಕ್ಸ್ ಬಗ್ಗೆ ಗಮನಿಸಬೇಕು, ಈಗ ಇರತಕ್ಕಂಥ ರೇಷ್ಮೆ ಮಾರಾಟಗಾರರು, ರೇಷ್ಮೆ ವ್ಯಾಪಾರಸ್ಥರು ಮತ್ತೆ ನಮ್ಮನ್ನು ಕರೆದು ಮತ್ತು ಸಂಬಂಧಪಟ್ಟವರನ್ನು ಕರೆದು ಯಾವರೀತಿ ಎರಡೂವರೆ ಕೋಟಿ ರೂಪಾಯಿಗಳನ್ನು ಅವರ ಮೂಲಕ ನಾವು ತೆಗೆದುಕೊಳ್ಳಬೇಕು ಎಂದು ಅದಕ್ಕೆ ಒಂದು ವ್ಯವಸ್ಥೆ ಮಾಡೋಣ. ಟಿ.ಒ.ಟಿ. ಎನ್ನತಕ್ಕಂಥ ಪದವನ್ನು ತಾವು ಬಳಸದೆ ಮತ್ತೆ ಅವರು ಬಂದು ರೇಷ್ಮೆ ವಿನಿಮಯ ಕೇಂದ್ರದಲ್ಲಿ ವ್ಯಾಪಾರ ಮಾಡತಕ್ಕಂಥ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಉದ್ಯಮದ ಬಗ್ಗೆ ತಾವು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಅತ್ಯಂತ ಪ್ರಮುಖವಾದಂಥ ಬೇಡಿಕೆಗಳ ಬಗ್ಗೆ ಇವತ್ತು ಚರ್ಚೆ ನಡೆಯುತ್ತಿದೆ. ಪ್ರಾರಂಭದಲ್ಲಿ ಒಂದು ಮಾತನ್ನು ನಾನು ಹೇಳಬೇಕು. ಅತಿ ಕಡಿಮೆ ಅವಧಿಯಲ್ಲಿ ಹಣಕಾಸಿನ ಸಚಿವರು ವಿಶೇಷವಾದಂಥ ಪ್ರಯತ್ನ ಮಾಡಿ, ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ, ಸೋರಿ ಹೋಗುತ್ತಿದ್ದ ತೆರಿಗೆ ಹಣವನ್ನು ಸರಿಪಡಿಸಿ, ರಾಜ್ಯದ ಜನತೆ ಉಸಿರಾಡುವಂತಹ ಸ್ಥಿತಿಗೆ ತಂದಿದ್ದಾರೆ. ಅದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಯಾವ ದಿಟ್ಟ ನಿಲುವಿನ ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಈ ದಿಕ್ಕಿನಿಂದ ಹಿಂದೆ ಸರಿಯದೇ, ಇನ್ನೂ ಹೆಚ್ಚಿನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಾಮಾಣಿಕ ಪ್ರಯತ್ನ ಮಾಡಿದರೆ, ಗ್ರಾಮೀಣ ಪ್ರದೇಶದಲ್ಲಿರುವಂಥ ಜನ ಕಣ್ಣೀರಿನಲ್ಲಿ ಕೈ ತೊಳೆಯುವುದನ್ನು ತಪ್ಪಿಸಬಹುದು ಮತ್ತು ಅವರೂ ಕೂಡ ನೆಮ್ಮದಿಯ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ದಿಕ್ಕಿನಲ್ಲಿ ವಿಶೇಷ ಪ್ರಯತ್ನ ಮಾಡಿ, ಇದಕ್ಕೆ ಸರ್ವರೆಲ್ಲರ ಸಹಕಾರ ಇದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ದುಃಖದ ಮಾತು ಹೇಳಲೇಬೇಕು, ಮಾನ್ಯ ರಾಜಶೇಖರಮೂರ್ತಿಯವರು ಇತ್ತೀಚಿನ ದಿವಸಗಳಲ್ಲಿ ಗ್ರಾಮೀಣ ಪ್ರದೇಶಗಳಿಗೆ ಹೋಗತಕ್ಕ ಅವಕಾಶಗಳು ಕಡಿಮೆ ಇರಬಹುದು. ಅವರಿಗೆ ಬೇರೆ ಬೇರೆ ಜವಾಬ್ದಾರಿ ಇರುವ ದೃಷ್ಟಿಯಿಂದ, ಇವತ್ತಿನ ಗ್ರಾಮೀಣ ಪ್ರದೇಶದ ಜನತೆಯ ಪರಿಸ್ಥಿತಿಯನ್ನು ತಿಳಿಯುವುದಕ್ಕೆ ತಮಗೆ ಸಾಧ್ಯವಾಗದಿರಬಹುದು ಅಥವಾ ರಾಜ್ಯದ, ಗ್ರಾಮೀಣ ಜನತೆ ನೆಮ್ಮದಿಯಿಂದ ಇದ್ದಾರೆಂಬ ಭಾವನೆ ಇದೆಯೋ ಗೊತ್ತಿಲ್ಲ. ಈ ರೀತಿ ಹಣಕಾಸಿನ ಸ್ಥಿತಿ ಸುಧಾರಣೆ ಆಗುವ ಸಂದರ್ಭದಲ್ಲಿ, ರೈತರ ಬಗ್ಗೆ ಚಿಂತನೆ ಸಾಲುತ್ತಾ ಇಲ್ಲ. ಈ ದಿಕ್ಕಿನಲ್ಲಿ ವಿಶೇಷ ಪ್ರಯತ್ನ ಮಾಡುವಂತಹ ಅಗತ್ಯವಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ರೈತರ ಸಾಲ ಮನ್ನಾ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ನಾನು ರಾಜ್ಯದ ಉದ್ದಗಲಕ್ಕೂ ರೈತನಿಗೆ ನ್ಯಾಯ ಸಿಕ್ಕಬಹುದೆಂದು ಹೋರಾಟ ಮಾಡಿರುವುದು ತಮಗೂ ಗೊತ್ತಿದೆ. ಈ ರೈತರ ಸಾಲದ ವಿಚಾರದಲ್ಲಿ ಕೇಂದ್ರ ಸರ್ಕಾರದ ಯೋಜನೆಯಿಂದ, ಹಾಗೂ ರಾಜ್ಯ ಸರ್ಕಾರದ ನಿಲುವಿನಿಂದ ಈ ದೇಶದ ರೈತ ಅದರಲ್ಲೂ ವಿಶೇಷವಾಗಿ, ನಮ್ಮ ರಾಜ್ಯದ ರೈತನಿಗೆ, ಕೇಂದ್ರ ಸರ್ಕಾರ ಕೊಟ್ಟಿರುವಂಥ ಯೋಜನೆಯಿಂದ ಅನುಕೂಲವಾಗುವುದಿಲ್ಲವೆಂದು ಮನದಟ್ಟಾಗಿದ್ದರೆ, ಮನವರಿಕೆಯಾಗಿದ್ದರೆ, ನೀವು ನಿಮ್ಮದೇ ಆದಂಥ ಯೋಜನೆಯನ್ನು ತಯಾರು ಮಾಡಿಕೊಂಡು, ಇದಕ್ಕೆ ಅನುಮತಿ ಕೊಡಬೇಕೆಂಬ ಒತ್ತಾಯವನ್ನು ಕೇಂದ್ರ ಸರ್ಕಾರದ ಮೇಲೆ ಹಾಕಬೇಕೆಂದು ನಾನು ಅನೇಕ ಸಲ ಹೇಳಿದರೂ ಸಹ ರೈತರ ದೃಷ್ಟಿಯಿಂದ ಯಾವುದೇ ರೀತಿಯ ಕಾಳಜಿಯನ್ನು ತಾವು ವಹಿಸುತ್ತಿಲ್ಲ. ಇದರಿಂದ ಈ ರಾಜ್ಯದ ರೈತ ನಿಜವಾಗಿಯೂ ನಿಮ್ಮನ್ನು ಕ್ಷಮಿಸುವುದಿಲ್ಲ. ಯಾವ ಗ್ರಾಮೀಣ ಪ್ರದೇಶದ ರೈತ ಈ ಸರ್ಕಾರ ಬರುವುದಕ್ಕೆ ಕಾರಣಕರ್ತನಾಗಿದ್ದಾನೆ. ಅವನ ಕಣ್ಣೀರನ್ನು ಒರೆಸುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ ರೈತರ ಸಾಲ ಮನ್ನಾ ಬಗ್ಗೆ ಇಡೀ ದೇಶದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ, ಭಾರತೀಯ ಜನತಾ ಪಾರ್ಟಿ, ಮಧ್ಯಪ್ರದೇಶದಲ್ಲಿ, ಅಲ್ಲಿರುವ ರೈತರ ಸಾಲ ಮನ್ನಾ ಮಾಡುವ ಬಗ್ಗೆ ೪೮೩ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದಕ್ಕಾಗಿ ಬಡ್ಜೆಟ್ ಅಲೋಕೇಷನ್‌ನಲ್ಲಿ ೩೫೦ ಕೋಟಿ ರೂಪಾಯಿ ತೆಗೆದಿಟ್ಟಿರುವುದು ತಮಗೆಲ್ಲರಿಗೂ ಗೊತ್ತಿದೆ. ಇದೂ ಕೂಡ ನನಗೆ ಸಮಾಧಾನ ತಂದಿಲ್ಲ. ಕಾರಣ ಏನೆಂದರೆ, ಕೇಂದ್ರ ಸರ್ಕಾರದ ಈ ಯೋಜನೆಯಿಂದ ೨ನೇ ಅಕ್ಟೋಬರ್ ೧೯೮೯ಕ್ಕೆ ಯಾರು ಡಿಫಾಲ್ಟರ್ ಆಗಿದ್ದಾರೆ. ಅವನಿಗೆ ಮಾತ್ರ ಅನ್ವಯವಾಗುತ್ತದೆಂದು ಹೇಳುವುದಾದರೆ, ಆಣೆವಾರಿ ಲೆಕ್ಕದಲ್ಲಿ, ಎಂಟಾಣೆಗಿಂತ ಕಡಿಮೆ ಬೆಳೆ ಬೆಳೆದವರಿಗೆ ಅನ್ವಯವಾಗುವುದಾದರೆ, ಇದರಿಂದ ಇಡೀ ರಾಜ್ಯದ ಶೇಕಡ ೫ ಜನಕ್ಕೂ ಅನುಕೂಲವಾಗುವುದಿಲ್ಲ. ಒಂದೆರಡು ಸಾವಿರ ಸಾಲ ತೆಗೆದುಕೊಂಡು ವಾಪಸ್ ಕೊಡುವಂಥವನಿಗೆ ಸಹ ಅನುಕೂಲವಾಗುವುದಿಲ್ಲ. ಒಂದು ವೇಳೆ ಈ ಯೋಜನೆಯನ್ನು ಒಪ್ಪಿ ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಂಡರೆ ನಮ್ಮ ರಾಜ್ಯ ಸರ್ಕಾರಕ್ಕೆ ೨೫–೩೦ ಕೋಟಿ ಭಾರ ಸಹ ಬೀಳುವುದಿಲ್ಲ. ತಾವು ೫ ವರ್ಷ ಅಧಿಕಾರದಲ್ಲಿ ಮುಂದುವರಿಯಬೇಕೆಂದು ನಮ್ಮ ಅಪೇಕ್ಷೆ ಇರುವುದರಿಂದ, ದಯಮಾಡಿ, ಈಗಲೂ ರೈತರು ಬರಗಾಲಕ್ಕೆ ತುತ್ತಾಗಿ ಈ ವಿಚಿತ್ರ ಪರಿಸ್ಥಿತಿಗೆ ಬಂದಿದ್ದಾನೆ ಎಂಬುದನ್ನು ಮಾನ್ಯ ಹಣಕಾಸಿನ ಸಚಿವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಕಾರಣಕ್ಕಾಗಿ ಈ ಅಧಿವೇಶನ ಮುಗಿಯುವುದರೊಳಗಾಗಿ, ದಿಟ್ಟ ನಿಲುವನ್ನು ತೆಗೆದುಕೊಳ್ಳದೇ ಹೋದರೆ, ಈ ರಾಜ್ಯದಲ್ಲಿ ಕ್ರಾಂತಿಯಾಗುತ್ತದೆ, ರೈತ ಬೀದಿಗೆ ಇಳಿಯುತ್ತಾನೆ. ಅಂತಹ ಕೆಟ್ಟ ವಾತಾವರಣಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ತಾವು ತಮ್ಮ ಉತ್ತರದ ಸಂದರ್ಭದಲ್ಲಿ ಹೇಳಬೇಕು. ಕೇಂದ್ರ ಸರ್ಕಾರದ ಯೋಜನೆಯನ್ನು ಅಳವಡಿಸಿಕೊಂಡರೆ ನಮ್ಮ ರಾಜ್ಯ ಸರ್ಕಾರಕ್ಕೆ ಎಷ್ಟು ಖರ್ಚು ಬರುತ್ತದೆ, ಅರ್ಧ ಗ್ರಾಂಟ್ ಮೂಲಕ, ಅರ್ಧ ಸಾಲದ ಮೂಲಕ ಕೇಂದ್ರ ಸರ್ಕಾರ ಕೊಡುವುದಕ್ಕೆ ಸಿದ್ಧರಿರುವುದರಿಂದ ನೀವು ಬೇರೆ ಯೋಜನೆಯನ್ನು ಮಾಡಿ ಕಳುಹಿಸಿ, ಕೇಂದ್ರದ ಮೇಲೆ ಒತ್ತಾಯ ಮಾಡದೇ ಇರುವುದರಿಂದ, ಇನ್ನೇನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಕಳೆದ ೧೦–೧೫ ದಿವಸಗಳಿಂದ ನಾನು ಈ ಸದನದ ಒಳಗಡೆ ಬಂದಿರಲಿಲ್ಲ. ಮಾತನಾಡಬೇಕೆಂಬ ಉತ್ಸಾಹ ನನಗೆ ಇಲ್ಲ. ಯಾವುದೇ ಪ್ರಚಾರಕ್ಕಾಗಿ ನಾನು ಈ ಮಾತನ್ನು ಆಡುತ್ತಿಲ್ಲ. ರೈತರ ಪರವಾಗಿ ಹೋರಾಟ ಮಾಡಿ ಅವರಿಗೆ ನ್ಯಾಯ ಸಿಗಬೇಕೆನ್ನುವ ಕಾಲದಲ್ಲಿ. ಇವನಿಗೆ ನ್ಯಾಯ ಸಿಗಲಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನನ್ನ ಮನಸ್ಸಿಗೆ ಸಮಾಧಾನ ಇಲ್ಲ. ಯಾವರೀತಿ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಬೇಕೆನ್ನುವ ವಾತಾವರಣ ಇರಬೇಕಾದರೆ, ಅದು ಸರಕಾರಕ್ಕೆ ಅಗೌರವ

ತರುವಂತಹ ವಿಚಾರ. ಇನ್ನೂ ನಾಲ್ಕೂವರೆ ವರ್ಷ ಇದೆ, ನಮ್ಮನ್ನು ಅಧಿಕಾರಕ್ಕೆ ತರುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆದುದರಿಂದ ನೀವು ರೈತರ ನೆರವಿಗೆ ಬರಬೇಕೆಂದು ಒತ್ತಾಯ ಮಾಡುತ್ತೇನೆ. ತಾವು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಒಂದೊಂದು ರಾಜ್ಯದಲ್ಲಿ ವಿಭಿನ್ನವಾದ ವಾಣಿಜ್ಯ ತೆರಿಗೆ ಇದೆ. ನಮಗೆಲ್ಲಾ ಗೊತ್ತಿರುವಂತೆ ಕಡಿಮೆ ತೆರಿಗೆ ಇರುವ ರಾಜ್ಯಗಳತ್ತ ಸಂಪತ್ತು ಸರಿದು ಹೋಗುವುದು ಸ್ವಾಭಾವಿಕ. ಈ ಹಿನ್ನೆಲೆಯಲ್ಲಿ ತಾವು ದಕ್ಷಿಣದ ಎಲ್ಲಾ ರಾಜ್ಯಗಳ ಹಣಕಾಸಿನ ಸಚಿವರ ಒಂದು ಸಭೆ ಕರೆಯಬೇಕೆಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಿರಿ. ಆ ಸಭೆ ಏನಾದರೂ ಆಗಿದ್ದರೆ ಅಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ತಾವು ದೊಡ್ಡ ತೀರ್ಮಾನ ತೆಗೆದುಕೊಳ್ಳುತ್ತಿದ್ದೀರಿ ಎಂದು ನನಗನ್ನಿಸುತ್ತದೆ. ದಕ್ಷಿಣದ ಎಲ್ಲಾ ರಾಜ್ಯಗಳ ಹಣಕಾಸಿನ ಸಚಿವರುಗಳ ಮನಸ್ಸನ್ನು ತಾವು ಒಲಿಸಿ, ಎಲ್ಲಾ ದಕ್ಷಿಣ ರಾಜ್ಯಗಳಲ್ಲೂ ಏಕರೀತಿಯ ಒಂದು ವಾಣಿಜ್ಯ ತೆರಿಗೆ ಇರುವ ವ್ಯವಸ್ಥೆ ಮಾಡುವುದರಲ್ಲಿ ನೀವು ಸಫಲರಾದರೆ, ಎಲ್ಲಾ ದಕ್ಷಿಣ ರಾಜ್ಯಗಳಿಗೂ ಇದರಿಂದ ಅನುಕೂಲವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದ ಬೊಕ್ಕಸಕ್ಕೂ ಹೆಚ್ಚಿನ ಆದಾಯ ಬರುವುದರಲ್ಲಿ ಯಾವುದೇ ಸಂಶಯ ಇಲ್ಲ. ಈ ನಿಟ್ಟಿನಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಏನು ಮಾಡುತ್ತಿದ್ದೀರಿ ಅದರಲ್ಲಿ ಯಶಸ್ವಿಯಾಗಿ, ಮಾತುಕತೆ ಮುಂದುವರಿಸಿ. ಇದರಿಂದ ಎಲ್ಲಾ ರಾಜ್ಯಗಳಿಗೂ ಅನುಕೂಲವಾಗುತ್ತದೆ, ಇದರ ಬಗ್ಗೆ ವಿಶೇಷ ಪ್ರಯತ್ನ ತಾವು ಮಾಡಬೇಕೆಂದು ನಾನು ತಮ್ಮಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಸರಕಾರದ ಬೊಕ್ಕಸಕ್ಕೆ ಆದಾಯ ಬರುವಂತಹ ಮೂರು ಪ್ರಮುಖ ಮೂರು ಇಲಾಖೆಗಳು ಯಾವುವು ಎಂಬುದು ನಮಗೆಲ್ಲಾ ಗೊತ್ತಿರುವಂತಹ ಸಂಗತಿ. ಈ ಎಕ್ಸೈಸ್ ಇಲಾಖೆಯಲ್ಲಿ ತಾವು ಬಿಗಿಯನ್ನು ತಂದು ಹೆಚ್ಚಿನ ಆದಾಯ ತರುವಂತಹ ಪ್ರಯತ್ನ ಮಾಡುತ್ತಿದ್ದೀರಿ. ಇನ್ನೂ ಸೋರಿ ಹೋಗುತ್ತಿರುವಂತಹದು ಬೇಕಾದಷ್ಟು ಇದೆ. ಈ ದಿಕ್ಕಿನಲ್ಲಿ ಇದನ್ನು ತಡೆಯಲು ತಾವು ವಿಶೇಷ ಪ್ರಯತ್ನಗಳನ್ನು ಮಾಡಬೇಕು. ಈ ಉದ್ಯಮ ಹಾಳಾಗದಂತೆಯೂ ಸಹ ತಾವು ವಿಶೇಷ ಗಮನ ಕೊಡಬೇಕು. ಮಾನ್ಯ ಚಂದ್ರೇಗೌಡರು ಇದರ ಬಗ್ಗೆ ಹೇಳಿದ್ದಾರೆ. ಕೊನೆಯಲ್ಲಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಸೇಲ್ಸ್ ಟ್ಯಾಕ್ಸ್‌ನಲ್ಲಿ ಹಣ ಸೋರಿ ಹೋಗುತ್ತಿದೆ. ನಿಮ್ಮ ಅಪೇಕ್ಷೆಗೆ ತಕ್ಕಂತೆ ನಿಮ್ಮ ಬೊಕ್ಕಸಕ್ಕೆ ಹರಿದು ಬರುತ್ತಿದೆ ಎನ್ನುವುದಕ್ಕೆ ಸಾಧ್ಯವಿಲ್ಲ ನಮ್ಮ ಕ್ಷೇತ್ರಗಳಲ್ಲಿ ಓಡಾಡುವಂತಹ ಸಂದರ್ಭದಲ್ಲಿ ಯಾವರೀತಿ ಸೇಲ್ಸ್‌ಟ್ಯಾಕ್ಸ್ ಕೊಡದಂಥ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಶಾಮೀಲಾಗಿ ಈ ರೀತಿಯ ಅವ್ಯವಹಾರದಲ್ಲಿ ತೊಡಗಿರುತ್ತಾರೆ ಎಂಬುದನ್ನು ಪತ್ತೆ ಹಚ್ಚಿ ಇದನ್ನು ತಡೆಗಟ್ಟಲು ದಿಟ್ಟ ನಿಲುವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿದರೆ ಇನ್ನೂ ಹೆಚ್ಚಿನ ಆದಾಯ ತರುವುದಕ್ಕೆ ಸಾಧ್ಯ ಇದೆ ಅದೇ ರೀತಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಿಚಾರದಲ್ಲೂ ವಿಶೇಷ ಪ್ರಯತ್ನವನ್ನು ತಾವು ಮಾಡಬೇಕು. ತಮಗೆ ಈಗಾಗಲೇ ಗೊತ್ತಿರುವಂತೆ ಅನೇಕ ದೊಡ್ಡ ದೊಡ್ಡ ಕಾರ್ಖಾನೆಯ ಮಾಲೀಕರುಗಳು, ಬೇರೆ ಬೇರೆ ಪ್ರಭಾವಿ ವ್ಯಕ್ತಿಗಳು ಕೋಟ್ಯಾಂತರ ರೂಪಾಯಿ ತೆರಿಗೆ ಹಣವನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ಸೇಲ್ಸ್ ಟ್ಯಾಕ್ಸ್‌ನಲ್ಲಿ ನನಗೆ ಗೊತ್ತಿರುವ ಹಾಗೆ ೧೦೦ ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ. ಇನ್ನು ಎಕ್ಸೈಸ್‌ನಲ್ಲಿ ೪೦ ರಿಂದ ೫೦ ಕೋಟಿ ರೂಪಾಯಿಗಳ ಬಾಕಿ ಇರಬಹುದು. ಕೆ. ಇ. ಬಿ. ಗೆ ಕೊಡಬೇಕಾದ ಬಾಕಿ ದುಡ್ಡು ಇರಬಹುದು. ಈ ರೀತಿ ಯಾವ ಯಾವ ಬಾಬಿನಲ್ಲಿ ಸರಕಾರಕ್ಕೆ ತೆರಿಗೆ ಕೊಡಬೇಕಾದುದನ್ನು ಕೊಡದೇ ಏನೋ ಕಾಲ ಕಳೆಯುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ಇದರ ಬಗ್ಗೆ ತಾವು ಬಿಗಿ ನೀತಿಯನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬೆಂಗಳೂರು ಮಹಾನಗರ ಬೆಳೆಯುತ್ತಿದೆ. ಬೆಂಗಳೂರು ನಗರಕ್ಕೆ ಎಲ್ಲಾ ಕಡೆಯಿಂದ ವಾಹನಗಳು ಬರುವ ಕಡೆ ಚೆಕ್‌ಪೋಸ್ಟ್‌ಗಳು ಇವೆ. ಒಂದು ಉದಾಹರಣೆ ಕೊಡಬೇಕೆಂದರೆ. ನೆಲಮಂಗಲದ ಕಡೆಯಿಂದ ವಾಹನಗಳು ಬರುತ್ತವೆ. ಅಲ್ಲಿ ಚೆಕ್‌ಪೋಸ್ಟ್ ಇರುವಂತಹ ಸಂದರ್ಭದಲ್ಲಿ ಅದು ಮೊದಲು ಬೆಂಗಳೂರು ನಗರದ ಹೊರಗಡೆ ಇತ್ತು. ಆದರೆ ಅದು ಇವತ್ತು ಒಳಗಡೆ ಬಂದು ಸೇರಿಕೊಂಡು ಬಿಟ್ಟಿದೆ. ನೆಲಮಂಗಲದಿಂದ ಹೊರಗಡೆ ಚೆಕ್‌ಪೋಸ್ಟ್ ಹಾಕಬೇಕು, ಎಲ್ಲಾ ಕಡೆ ಚೆಕ್‌ಪೋಸ್ಟ್‌ಗಳನ್ನು ನಗರದ ಹೊರಗಡೆ ಹಾಕುವುದರಿಂದ ಹೆಚ್ಚು ಬಿಗಿ ತರುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಯಾವರೀತಿ ದುರುಪಯೋಗವಾಗುತ್ತಿದೆ ಎಂಬುದು ತಮಗೆ ಗೊತ್ತಿರುವ ಸಂಗತಿ. ಈ ಚೆಕ್‌ಪೋಸ್ಟ್‌ಗಳು ಬೆಂಗಳೂರು ನಗರವನ್ನು ಬಿಟ್ಟು ಹೊರಗಡೆ ಹಾಕಬೇಕಾಗಿದೆ. ಇನ್ನು ಸೇಲ್ಸ್ ಟ್ಯಾಕ್ಸ್ ಅಸೆಸ್‌ಮೆಂಟ್ ತುಂಬಾ ನಿಧಾನವಾಗುತ್ತಿದೆ. ಇದಕ್ಕೆ ಏನಾದರೂ ಬಿಗಿ ನಿಲುವನ್ನು ತೆಗೆದುಕೊಂಡು ಈ ರೀತಿ ಆಗದ ರೀತಿಯಲ್ಲಿ

ಮಾಡಬೇಕು. ಸೇಲ್ಸ್ ಟ್ಯಾಕ್ಸ್ ಅಸೆಸ್‌ಮೆಂಟ್ ಬೇಗ ಆಗುವ ರೀತಿ ನಿಮ್ಮ ಕಾಲದಲ್ಲಿ ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇನ್ನು ನಮಗೆಲ್ಲರಿಗೂ ಅನುಭವಕ್ಕೆ ಬಂದಿರುವುದು ಎಂದರೆ, ಮಾರ್ಚಿಯಲ್ಲಿ ಬಜೆಟ್ ಮಂಡನೆಯಾದ ನಂತರ, ಮೂರು ತಿಂಗಳ ಬಜೆಟ್‌ಗೆ ಮಂಜೂರಾತಿ ತೆಗೆದು ಕೊಂಡು ಅಧಿಕಾರಿಗಳು ಕೆಲಸ ಕಾರ್ಯಗಳನ್ನು ಮಾಡಲು ಅಧಿಕಾರಿಗಳು ತಾಂತ್ರಿಕ ಮಂಜೂರಾತಿಯನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಅದು ಆಗುತ್ತದೆ. ಆದರೆ ನಮಗೆ ತಿಳಿದು ಬಂದಿರುವ ಹಾಗೆ, ಏನಾಗುತ್ತಿದೆ ಎಂದರೆ, ಅಲ್ಲಿ ಕೆಲಸ ಕಾರ್ಯಗಳು ಪ್ರಾರಂಭವಾಗುವುದು ಫೆಬ್ರುವರಿ ನಂತರ. ಮಾರ್ಚ್ ೩೧ರ ಒಳಗೆ ಕೆಲಸ ಕಾರ್ಯಗಳು ಮುಗಿಯುತ್ತವೆ. ಈ ರೀತಿ ಪರಿಸ್ಥಿತಿಯಿಂದ ಫೆಬ್ರುವರಿ ನಂತರ ಮಾರ್ಚ್ ೩೧ ರೊಳಗೆ ಕೊನೆಗಾಲದಲ್ಲಿ ಬಜೆಟ್ ಹಣವನ್ನು ಪೂರ್ತಿಯಾಗಿ ಖರ್ಚು ಮಾಡು ತ್ತಾರೆ. ಇಂತಹ ಪ್ರಯತ್ನವನ್ನು ಸಂಬಾಧಪಟ್ಟ ಎಲ್ಲಾ ಇಲಾಖೆಗಳಲ್ಲಿ ಮಾಡುತ್ತಿರುವುದರಿಂದ ಅನೇಕ ಅವ್ಯವಹಾರಗಳಿಗೆ ಅವಕಾಶವಾಗುತ್ತದೆ. ಕೊನೆಯ ದಿವಸಗಳಲ್ಲಿ ಕೋಟ್ಯಂತರ ರೂಪಾಯಿಗಳ ಬಿಲ್ ಪಾವತಿ ಆಗುವಂತಹ ಸಂದರ್ಭದಲ್ಲಿ ಕೈ ಬದಲಾಗುವುದು ನಮಗೆಲ್ಲಾ ಗೊತ್ತಿರುವ ಸಂಗತಿ.

(ಮಾನ್ಯ ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣ ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಈಗ ತಾವು ಪ್ರಯತ್ನ ಮಾಡಿ. ಮೂರು ತಿಂಗಳಿಗೊಮ್ಮೆ ಒಂದು ಅಧಿಕಾರಿಗಳ ಸಭೆ ಕರೆದು ಇದಕ್ಕೆ ಸಂಬಂಧಪಟ್ಟ ಹಣ ತಾವು ಎಷ್ಟು ಖರ್ಚು ಮಾಡಿದ್ದೀರಿ? ಒಂದು ವೇಳೆ ಹಣ ಖರ್ಚು ಮಾಡ ದಿದ್ದರೆ ಆ ಹಣವನ್ನು ಖರ್ಚು ಮಾಡುವ ರೀತಿಯಲ್ಲಿ ಸೂಚನೆಗಳನ್ನು ಕೊಡಿ. ಹಿಂದೆ ಒಂದು ಕಾಲದಲ್ಲಿ ಲೋಕೋಪಯೋಗಿ ಇಲಾಖೆ ಅಥವಾ ಇನ್ನಿತರೆ ಇಲಾಖೆಗಳಲ್ಲಿ ಇರುವಂತಹ ಅಸಿಸ್ಟೆಂಟ್ ಇಂಜಿನೀಯರ್ಸ್ ಮತ್ತು ಎಕ್ಸಿಕ್ಯುಟೀವ್ ಇಂಜಿನೀಯರ್‌ಗಳನ್ನು ಕರೆದು ಅವರ ಜೊತೆ ಅಧಿಕಾರಿಗಳನ್ನು ಕರೆದು ಒಂದು ಸಭೆ ಮಾಡಿ ಆ ಸಭೆಯಲ್ಲಿ ಆಯಾಯಾ ಬಾಬುಗಳಲ್ಲಿ ಕೊಟ್ಟಿರುವಂತಹ ಹಣವನ್ನು ಖರ್ಚು ಮಾಡುವಂತೆ ನೋಡಿಕೊಳ್ಳುವ ಒಂದು ಪದ್ಧತಿ ಇತ್ತು. ಆದರೆ ಈಗ ಏನಾಗಿದೆ ಎಂದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದೆ ಇರುವ ಕಾರಣ ಆ ಹಣವನ್ನು ತಾವು ಏತಕ್ಕೆ ಖರ್ಚು ಮಾಡಿದಿರಿ ಎಂದು ಪತ್ರ ಬರೆದು ಕೇಳಿದ್ದನ್ನು ಸಹ ನಾನು ನೋಡಿದ್ದೇನೆ. ಆದ್ದರಿಂದ ತಾವು ಆ ರೀತಿ ಮಾಡದೆ ಪ್ರತಿ ಮೂರು ತಿಂಗಳಿಗೊಮ್ಮೆ ಉನ್ನತ ಅಧಿಕಾರಿಗಳನ್ನು ಕರೆದು ಒಂದು ಸಭೆ ಮಾಡಿ ಬಜೆಟ್‌ನಲ್ಲಿ ಮಂಜೂರಾದ ಹಣವನ್ನು ತಕ್ಷಣ ಖರ್ಚು ಮಾಡಲು ಅವರಿಗೆ ತಾಂತ್ರಿಕ ಮಂಜೂರಾತಿ ಕೊಟ್ಟು ಅವರಿಗೆ ಕಿರುಕುಳಗಳು ಆಗದ ರೀತಿಯಲ್ಲಿ ತಾವು ವಿಶೇಷವಾದ ಗಮನಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಸರ್ಕಾರಕ್ಕೆ ಬರುವ ಆದಾಯದಲ್ಲಿ ನಾನ್ ರೆವಿನ್ಯೂ ಎಕ್ಸ್‌ಪೆಂಡೀಚರ್ ಜಾಸ್ತಿಯಾಗುತ್ತಿದೆ. ಈ ರೀತಿ ನಾನ್ ರೆವಿನ್ಯೂ ಎಕ್ಸ್‌ಪೆಂಡೀಚರ್ ಜಾಸ್ತಿಯಾಗುತ್ತಿರುವುದನ್ನು ಹತೋಟಿಗೆ ತರಲು - ತಾವು ಏನೇನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು. ತಾವು ಪ್ರಥಮದಲ್ಲಿ ಇವರ ಬಗ್ಗೆ ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಂತಹ ಕಾಲದಲ್ಲಿ ಯಾವ ರೀತಿ ಅಗತ್ಯಕ್ಕಿಂತ ಹೆಚ್ಚು ಅಧಿಕಾರಿಗಳು ಇದ್ದಾರೆ ಎನ್ನುವುದನ್ನು ತಿಳಿಸಿದ್ದು ಉಂಟು. ಒಬ್ಬ ಅಧಿಕಾರಿ ಕೆಲಸ ಮಾಡುವ ಕಡೆ ೩-೪ ಜನ ಉನ್ನತ ಅಧಿಕಾರಿಗಳು ಇದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಸಹ ಹೇಳಿದ್ದರು. ಈ ಒಂದು ವ್ಯವಸ್ಥೆಯಲ್ಲಿ ತಾವೆನಾದರೂ ಬದಲಾವಣೆ ತಂದಿದ್ದೀರಾ? ಬಹುಶಃ ತಾವು ಇದನ್ನು ತರಲು ಸ್ವಲ್ಪ ಸಮಯ ಆಗಬಹುದು. ಆ ದಿಕ್ಕಿನಲ್ಲಿ ತಾವು ವಿಶೇಷವಾದ ಪ್ರಯತ್ನವನ್ನು ಏನಾದರೂ ಮಾಡಿದ್ದೀರಾ? ಬಹುಶಃ ನಾನು ಈ ರೀತಿ ಹೇಳುವುದರಿಂದ ಉನ್ನತ ಅಧಿಕಾರಿಗಳು ತಪ್ಪು ತಿಳಿದುಕೊಳ್ಳಬಹುದು. ನಾನು ಈ ಸಲಹೆಯನ್ನು ಈ ಹಿಂದೆ ಸಹ ಮಾಡಿದ್ದೆ. ಯಾರಿಗೆ ಹೊರಗಡೆ ಬೆಂಗಳೂರು ಮಹಾನಗರ ಕೇಂದ್ರ ಬಿಟ್ಟು ಹೊರಗಡೆ ಹೋಗತಕ್ಕಂಥ ಅಧಿಕಾರಿಗಳು ಇದ್ದಾರೆ ಅವರಿಗೆ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಮಹಾನಗರಗಳಲ್ಲಿ ಅಧಿಕಾರಿಗಳು ಇದ್ದಾರೆ ಅವರಿಗೆ ತಾವು ಜೀಪ್ ಮತ್ತು ಕಾರುಗಳನ್ನು ಕೊಟ್ಟಿದ್ದೀರಿ. ಇವತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿ ಮತ್ತು ರಾಜ್ಯದ ಜನತೆಯ ಪರಿಸ್ಥಿತಿಯನ್ನು ನೋಡಿದಾಗ ಯಾರಿಗೆ ರಾಜ್ಯದಲ್ಲಿ ಪ್ರವಾಸ ಮಾಡುವ ಅಗತ್ಯ ಕಂಡು ಬರುವುದಿಲ್ಲವೋ, ಅಂತಹ ಉನ್ನತ ಅಧಿಕಾರಿಗಳಿಗೆ ಕೊಟ್ಟಿರುವ ಕಾರು ಮತ್ತು ಜೀಪ್‌ಗಳನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಿ ಎಂದು ನಾನು ಹೇಳುವುದಿಲ್ಲ. ಯಾರಿಗೆ ತಾವು ವೆಹಿಕಲ್ಸ್‌ನ್ನು ಕೊಟ್ಟು ಡ್ರೈವರ್ಸ್ ಕೊಟ್ಟಿದ್ದೀರೋ ಅವರಿಗೆ ಆ ವೆಹಿಕಲ್ಸ್‌ನ್ನು ಕೊಟ್ಟು, ನಾವು ಇನ್ನು ಮುಂದೆ ನಿಮಗೆ ಡ್ರೈವರ್ಸ್ ಕೊಡುವುದಿಲ್ಲ, ಪೆಟ್ರೋಲ್ ಕೊಡುವುದಿಲ್ಲ, ಡೀಜಲ್ ಕೊಡುವುದಿಲ್ಲ ನಿಮಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ ಕೊಟ್ಟುಬಿಡುತ್ತೇವೆ, ನೀವೆ ಆ ವೆಹಿಕಲ್ಸ್‌ನ್ನು ಇಟ್ಟುಕೊಂಡು ಮೇನ್‌ಟೆನೆನ್ಸ್ ಮಾಡಿಕೊಳ್ಳಿ ಎಂದು ಹೇಳಿ. ಈಗ ವಿಧಾನ

ಸೌಧಕ್ಕೆ ಕಾರುಗಳು ಬರುತ್ತವೆ. ಸಾವಿರಾರು ಕಾರುಗಳು ಬರುತ್ತವೆ ಅವರ ಜೊತೆಯಲ್ಲಿ ಡ್ರೈವರ್ಸ್ ಬರುತ್ತಾರೆ. ಅಧಿಕಾರಿಗಳನ್ನು ವಿಧಾನಸೌಧದಿಂದ ವಾಪಸ್ ಕರೆದುಕೊಂಡು ಹೋಗುವುದಕ್ಕೆ ಮಾತ್ರ ಡ್ರೈವರ್ಸ್ ಬರುತ್ತಾರೆ ಅದು ಬಿಟ್ಟರೆ ಡ್ರೈವರ್ಸ್‌ಗೆ ವಿಧಾನಸೌಧದಲ್ಲಿ ಏನು ಕೆಲಸ ಇದೆ ಹೇಳಿ? ಬೇಕಾದರೆ ಅಧಿಕಾರಿಗಳು ಆ ವೆಹಿಕಲ್ಸ್‌ನ್ನು ಇಟ್ಟುಕೊಂಡು ಅವರೇ ಮೇನ್‌ಟೆನೆನ್ಸ್ ಮಾಡಿಕೊಳ್ಳಲಿ ಅವರು ಕಚೇರಿಗಳಿಗೆ ಬರಬೇಕಾದಾಗ ಆ ವೆಹಿಕಲ್ಸ್‌ನ್ನು ಅವರ ಮಗ ಅಥವಾ ಇನ್ನಾರಾದರೂ ಇದ್ದರೆ ಅವರು ಕರೆದುಕೊಂಡು ಬಂದು ಬಿಟ್ಟು ಹೋಗಲಿ, ಆಮೇಲೆ ಸಾಯಂಕಾಲ ಬಂದು ಕರೆದುಕೊಂಡು ಹೋಗಲಿ, ಆಮೇಲೆ ಆ ಕಾರು ಮನೆಯ ಹತ್ತಿರ ಇಟ್ಟುಕೊಂಡು ತಮ್ಮ ಸ್ವಂತ ಕೆಲಸಕಾರ್ಯಗಳು ಇದ್ದರೆ ಮಾಡಿಕೊಳ್ಳಲಿ. ಅದು ಬಿಟ್ಟು ತಾವು ಈಗ ಒಬ್ಬರಿಗೆ ೩-೪ ಕಾರುಗಳನ್ನು ಕೊಟ್ಟು ಅವರು ವೈಭವದಿಂದ ಆನಂದವಾಗಿ ಜೀವನ ಮಾಡತಕ್ಕಂಥ ವಾತಾವರಣ ಇದೆ. ಇದನ್ನು ಯಾರೂ ವಿರೋಧ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಒಬ್ಬ ಶಾಸಕನಿಗೆ ಟ್ಯಾಕ್ಸಿ ಸಿಕ್ಕದೆ ಇರುವಂತಹ ವಾತಾವರಣದಲ್ಲಿ ಈ ಸಭೆಯಲ್ಲಿ ಇದರ ಬಗ್ಗೆ ಒಂದು ವಿಶೇಷವಾದ ಚರ್ಚೆ ಮಾಡಿ ಅಧಿಕಾರಿಗಳ ಮನಸ್ಸು ನೋಯಿಸದ ರೀತಿಯಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಮನಕ್ಕೆ ತಂದು ಅವರ ಮನಸ್ಸು ಒಲಿಸಿಕೊಂಡು ಬೇಗ ಇದನ್ನು ಜಾರಿಗೆ ತರತಕ್ಕಂಥ ಒಂದು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಇವತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಾವಿರಾರು ವೆಹಿಕಲ್ಸ್ ಬಿದ್ದಿವೆ. ಅವುಗಳನ್ನು ಯಾರೂ ಹೇಳುವವರು ಕೇಳುವವರು ಇಲ್ಲ. ಈಗ ಅಗ್ರೋ ಇಂಡಸ್ಟ್ರೀಸ್ ಮುಂದೆ ಸಾವಿರಾರು ವೆಹಿಕಲ್ಸ್ ಬಿದ್ದಿವೆ. ಅವುಗಳನ್ನು ನಾವ್ಯಾರಾದರೂ ಹೋಗಿ ನೋಡಿದರೆ ನಮಗೆ ಕಣ್ಣಿನಲ್ಲಿ ನೀರು ಬರುತ್ತದೆ. ಅದಕ್ಕೆ ನಮ್ಮ ಹಲವಾರು ನ್ಯೂನತೆಗಳು ಇರಬಹುದು, ಅದಕ್ಕೆ ತಾವು ಈ ದಿಕ್ಕಿನಲ್ಲಿ ಒಂದು ದಿಟ್ಟ ಹೆಜ್ಜೆ ಇಡತಕ್ಕಂಥಾದ್ದು ತುಂಬಾ ಅಗತ್ಯ ಇದೆ. ಮತ್ತು ವಿಧಾನ ಸೌಧಕ್ಕೆ ಬರುವಂತಹ ಅಧಿಕಾರಿಗಳಿಗೆ ಸಾಮಾನ್ಯವಾಗಿ ಒಂದು ವಿಶೇಷ ವ್ಯವಸ್ಥೆ ಮಾಡಿಕೊಡಿ ಅಥವಾ ಆ ಅಧಿಕಾರಿಗಳು ಬರುವಂತಹ ಏರಿಯಾಗಳಿಂದ ಲಗ್ಜುರಿ ಮಿನಿ ಬಸ್ಸುಗಳನ್ನು ಕೊಟ್ಟು ಈಗ ಕಾರ್ಖಾನೆಗಳಲ್ಲಿ ಯಾವ ರೀತಿ ವ್ಯವಸ್ಥೆ ಮಾಡಿದ್ದಾರೋ ಆ ರೀತಿ ಅಧಿಕಾರಿಗಳು ಬರುವಂತಹ ಏರಿಯಾಗಳಿಂದ ಒಂದೊಂದು ಮಿನಿ ಬಸ್ಸುಗಳನ್ನು ಕೊಡತಕ್ಕಂಥ ರೀತಿಯಲ್ಲಿ ತಾವು ಪ್ರಯತ್ನ ಮಾಡಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ತಾವು ನೋಡಿಕೊಂಡು ತಾವು ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಇನ್ನು ರೇಷ್ಮೆ ಉದ್ದಿಮೆ ಬಗ್ಗೆ ಒಂದು ಮಾತನ್ನು ನಾನು ಹೇಳುವುದಾದರೆ ಇತ್ತೀಚಿನ ದಿನಗಳಲ್ಲಿ ಈ ರೇಷ್ಮೆ ಉದ್ದಿಮೆಗೆ ಧಕ್ಕೆ ಬರತಕ್ಕಂಥ ಒಂದು ವಾತಾವರಣ ಇದೆ. ಬಹುಶಃ ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ಹಣ್ಣು ತಟ್ಟುವವರು ನೂಲು ಬಿಚ್ಚುವವರು ರೇಷ್ಮೆ ಟ್ವಿಸ್ಟ್ ಮಾಡುವವರು ಮತ್ತು ನೇಯುವವರು ಇರಬಹುದು, ಇವರಿಗೆಲ್ಲಾ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಮ್ಮ ಬೊಕ್ಕಸಕ್ಕೆ ಸುಮಾರು ೨ ಕೋಟಿ ರೂಪಾಯಿಗಳು ಬರಬಹುದು ಆದರೆ ಸುಮಾರು ೪-೫ ಕೋಟಿ ರೂಪಾಯಿಗಳು ಅಧಿಕಾರಿಗಳ ಒಂದು ಕಿರುಕುಳದಿಂದ ನಮ್ಮ ಕೈತಪ್ಪಿ ಹೋಗುತ್ತಿದೆ. ಅದಕ್ಕೆ ಲೆಕ್ಕ ಇಲ್ಲ. ಈ ಸಂದರ್ಭದಲ್ಲಿ ರೇಷ್ಮೆ ಉದ್ದಿಮೆ ಉಳಿಯುವ ದೃಷ್ಟಿಯಿಂದ ದಯಮಾಡಿ ಇವತ್ತು ತಾವು ಏನು ಒಂದು ತೆರಿಗೆಯನ್ನು ಹಾಕಿದ್ದೀರಿ. ಅದನ್ನು ಕೈಬಿಟ್ಟು ಈ ರೇಷ್ಮೆ ಉದ್ದಿಮೆ ರಾಜ್ಯದಲ್ಲಿ ಚೆನ್ನಾಗಿ ಬೆಳೆದು ರೈತರನ್ನು ಉಳಿಸಿಕೊಳ್ಳತಕ್ಕಂಥ ಒಂದು ಪ್ರಯತ್ನವನ್ನು ತಾವು ಮಾಡಬೇಕು ಎನ್ನತಕ್ಕಂಥ ಒತ್ತಾಯವನ್ನು ನಾನು ತಮ್ಮಲ್ಲಿ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೋರ್ಟ್ಸ್ ಬಗ್ಗೆ ಹೇಳುವುದಾದರೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನ್ಯಾಯಾಲಯಗಳ ಅಗತ್ಯ ಇದೆ ಹಳೆಯ ಮೈಸೂರಿನಲ್ಲಿ ಅನೇಕ ತಾಲ್ಲೂಕುಗಳಲ್ಲಿ ನ್ಯಾಯಾಲಯಗಳು ಇಲ್ಲ. ತಾವು ಇನ್ನು ಎರಡು ತಿಂಗಳಲ್ಲಿ ಒಂದು ಕಾರ್ಯಕ್ರಮ ರೂಪಿಸಿ. ಇಡೀ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕೋರ್ಟ್ಸ್‌ಗಳನ್ನು ತೆರೆಯಲು ಒಂದು ವಿಶೇಷವಾದ ಪ್ರಯತ್ನವನ್ನು ತಾವು ಮಾಡಬೇಕು. ಇನ್ನು ಹೈಕೋರ್ಟ್ ಮತ್ತು ಸಬಾರ್ಡಿನೇಟ್ ಕೋರ್ಟ್‌ಗಳಲ್ಲಿ ಪೆಂಡೆನ್ಸಿ ಬಹಳ ಇದೆ. ಬಹುಶಃ ಮಾನ್ಯ ಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿಯವರಿಗೆ ಆಸಕ್ತಿ ಇದೆ. ಕಳಕಳಿ ಇದೆ, ಅವರು ಇದನ್ನು ಸುಧಾರಣೆ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಳ್ಳುವರು. ಅವರು ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಕೆಲಸ ನಿರ್ವಹಣೆ ಮಾಡುತ್ತಾರೆ. ಕನಿಷ್ಟ ಒಬ್ಬ ಸಾಮಾನ್ಯ ರೈತ ಹೈಕೋರ್ಟಿಗೆ ಬಂದಾಗ ಅವನಿಗೆ ನ್ಯಾಯ ಸಿಗಲು ಅವನು ಲಾಯರ್ ಹತ್ತಿರ ಸುತ್ತಾಡಿ ಬೆಂಗಳೂರು ಎಲ್ಲಿದೆ ಎನ್ನುವುದು ಗೊತ್ತಾಗದೆ ರಸ್ತೆ ಎಲ್ಲಿದೆ ಎನ್ನುವುದು ಗೊತ್ತಾಗದೆ ಸಾಮಾನ್ಯ ಜನರಿಗೆ ತೊಂದರೆಗಳಾಗಿವೆ. ಆದ್ದರಿಂದ ನ್ಯಾಯಾಲಯಗಳಲ್ಲಿ ತಕ್ಷಣ ಅವರಿಗೆ ನ್ಯಾಯ ಸಿಗುವ ರೀತಿಯಲ್ಲಿ ಪೆಂಡೆನ್ಸಿ ಜಾಸ್ತಿಯಾಗದ ರೀತಿಯಲ್ಲಿ ವಿಶೇಷವಾದ ಒಂದು ಪ್ರಯತ್ನವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ರೈತರ ದೃಷ್ಟಿಯಿಂದ ಆರ್.ಎಂ.ಸಿ. ವಸೂಲು ಮಾಡುವಂಥ ಒಂದು ಪದ್ಧತಿ ಇದೆ.

ರೈತ ಏನಾದರೂ ಬೆಳೆ ಬೆಳೆದರೆ, ಒಂದು ಸಾರಿ ಬೆಳೆದಂಥವನಿಗೆ ಈ ಒಂದು ಆರ್.ಎಂ.ಸಿ., ವಸೂಲು ಮಾಡುವಂಥ ನೀತಿಯಿಂದ ಇದು ಪ್ರಾರಂಭವಾಯಿತು. ಆದರೆ ಇವತ್ತು ಏನಾಗಿದೆ? ನಾನು ಗಂಗಾವತಿಯಿಂದ ಒಂದು ಲಾರಿ ಲೋಡ್ ಭತ್ತ ತಂದು ಶಿಕಾರಿಪುರಕ್ಕೆ ತೆಗೆದುಕೊಂಡು ಬಂದರೆ ಇಲ್ಲಿ ಮತ್ತೆ ಆರ್.ಎಂ.ಸಿ., ಕೊಡಬೇಕು. ಭತ್ತವನ್ನು ಮಿಲ್ ಮಾಡಿ ಅಕ್ಕಿಯನ್ನು ಕೊಡುವಂಥ ಸಂದರ್ಭದಲ್ಲೂ ಸೇಲ್ಸ್ ಟ್ಯಾಕ್ಸ್ ಜೊತೆಗೆ ಆರ್.ಎಂ.ಸಿ., ಕೊಡಬೇಕು. ಈ ರೀತಿ ಮಲ್ಟಿ ಪಾಯಿಂಟ್ ಸಿಸ್ಟಮ್ ಇದೆ. ನಾನು ಹೇಳುವುದು, ಯಾವುದೋ ಮಿಲ್ ಓನರ್ ಬಗ್ಗೆ ಚಿಂತೆ ಮಾಡುತ್ತಿಲ್ಲ, ನನ್ನ ದೃಷ್ಟಿಯಿಂದ ನಾನು ಆಪತ್ತಿನಿಂದ ಇವತ್ತಿನವರೆಗೆ ಯೋಚನೆ ಮಾಡುತ್ತಿರುವಂಥಾದ್ದು ಲೆವಿ ನೀತಿ ಇರಬೇಕು, ಅಥವಾ ಆರ್.ಎಂ.ಸಿ., ಹಾಕುವಂಥಾದ್ದು ಇರಬಹುದು, ಎರಡು, ಮೂರು ಪಟ್ಟು ಮಲ್ಟಿ ಪಾಯಿಂಟ್ ಆಗುವುದರಿಂದ ಕೊನೆಗೆ ತೊಂದರೆ ಆಗುವಂತಾದ್ದು ರೈತನ ಮೇಲೆ. ಅವನಿಗೆ ೧೦ ರೂಪಾಯಿ ಜಾಸ್ತಿ ಕೊಟ್ಟು ಕೊಳ್ಳುವಂತಾದ್ದು, ಈ ರೀತಿ ಬೇರೆ ಬೇರೆ ತೆರಿಗೆ ಕೊಡುವ ದೃಷ್ಟಿಯಿಂದ ರೈತನು ಕಡಿಮೆ ಕೊಳ್ಳುತ್ತಾನೆ ಎನ್ನುವುದಕ್ಕೋಸ್ಕರ, ಇಲ್ಲಿ ರೈತನಿಗೆ ಇದರಿಂದ ಏನೂ ಹಾನಿ ಆಗುವುದಿಲ್ಲ, ಸರ್ಕಾರ ಕೊಡುತ್ತಿರುವ ಬೆಂಬಲ ಬೆಲೆ ನಿಗದಿಯಾಗಿದೆ, ಅವನಿಗೆ ತೊಂದರೆಯಾಗುವುದಿಲ್ಲ ಎಂದು ಇದ್ದರೆ ನಾನು ಈ ಮಾತನ್ನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಇವತ್ತು ಆ ರೀತಿ ತೊಂದರೆ ಇರುವುದರಿಂದ ತಾವು ಈ ಕಡೆ ಗಮನ ಕೊಡಬೇಕು. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಸಹಕಾರ ಸಂಘ ಮತ್ತು ಬೇರೆ ಬೇರೆ ಕಡೆಯಿಂದ ನಮ್ಮ ರೈತ ತೆಗೆದು ಕೊಳ್ಳುವಂಥ ಸಾಲದ ಬಗ್ಗೆ ಇರುವಂಥ ಸ್ಟ್ಯಾಂಪ್ ಡ್ಯೂಟಿ ರಿಯಾಯಿತಿ ಬಹಳ ಕಡಿಮೆ ಇದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಈ ೧೫ ಸಾವಿರದ ಲಿಮಿಟೇಷನ್ ಏನಿದೆ, ಅದು ಸರಿಯಲ್ಲ, ಕನಿಷ್ಟ ಇದನ್ನು ೫೦ ಸಾವಿರ ರೂಪಾಯಿ ಸಾಲದವರೆಗೂ ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪ್ಷನ್ ಕೊಡಬೇಕು. ರೈತನು ತನ್ನ ರೈತಾಪಿ ಕೆಲಸಕ್ಕಾಗಿ ಏನು ಸಾಲ ಪಡೆಯುತ್ತಾನೋ ಅದಕ್ಕೆ ಅನುಕೂಲವಾಗುವಂತಹ ವ್ಯವಸ್ಥೆ ಮಾಡಬೇಕು. ಇನ್ನು ಕಾರ್ಖಾನೆಗಳ ಬಗ್ಗೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಇರಬಹುದು, ಮತ್ತೊಂದು ಇರಬಹುದು, ಕಾರ್ಖಾನೆ ಪ್ರಾರಂಭ ಮಾಡುತ್ತೇವೆಂದು ಮುಂದೆ ಬರುವವರಿಗೆ ಸಬ್ಸಿಡಿಯನ್ನು ಸರ್ಕಾರ ಕೊಡುತ್ತದೆ. ಮೆಷನರಿ ಕೊಂಡುಕೊಳ್ಳುವುದಕ್ಕೆ ಮತ್ತು ಬೇರೆ ಎಲ್ಲಾ ದೃಷ್ಟಿಯಿಂದ ಸರ್ಕಾರದವರು ಸಹಾಯ ಮಾಡುತ್ತಾರೆ. ಆದರೆ ನಮ್ಮ ರೈತ ಏನು ಪಾಪ ಮಾಡಿದ್ದಾನೆ? ನಾನು ಟ್ರಾಕ್ಟರ್ ತೆಗೆದುಕೊಂಡೆ, ಟಿಲ್ಲರ್ ತೆಗೆದುಕೊಂಡೆ ಎಂದು ಇಟ್ಟುಕೊಳ್ಳಿ, ರೈತಾಪಿ ಕೆಲಸಕ್ಕೆ ಅದನ್ನು ಉಪಯೋಗ ಮಾಡುವುದಿದ್ದರೆ ಗ್ರಾಮೀಣ ಜನತೆಯ ಅಭಿವೃದ್ಧಿ ದೃಷ್ಟಿಯಿಂದ ಸಹಾಯ ಮಾಡಬೇಕು. ರೈತರುಗಳಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಎಕ್ಸೆಂಪ್ಷನ್ ಕೊಡುವುದರಲ್ಲಿ ತಪ್ಪೇನಿದೆ? ಸಬ್ಸಿಡಿ ಕೊಡುವುದರಿಂದ ಅನುಕೂಲವಾಗುವುದಿಲ್ಲವೆ? ಸಾಮಾನ್ಯ ರೈತನಿಗೆ ಸಹಾಯ ಮಾಡಿದರೆ ಅವನು ಮುಂದೆ ಬರುವುದಿಲ್ಲವೆ? ಆದ್ದರಿಂದ, ರೈತರುಗಳು ಟ್ರಾಕ್ಟರ್ ಮತ್ತು ಟಿಲ್ಲರ್‌ಗಳನ್ನು ಕೊಂಡುಕೊಂಡರೆ ಅವರಿಗೆ ಸಹಾಯ ಮಾಡಬೇಕು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಸರಿಯಾಗಿ ಬರುತ್ತಿಲ್ಲ. ಏನೋ ನಾವು ಭಿಕ್ಷೆ ಕೊಡುತ್ತಿದ್ದೇವೆ ಎನ್ನುವ ವಾತಾವರಣ ಇದ್ದ ಹಾಗೆ ಕಾಣುತ್ತದೆ. ಏಕೆಂದರೆ, ಪ್ರತಿ ತಿಂಗಳು ಅವರುಗಳಿಗೆ ಬರಬೇಕಾದ ಹಣ ೩-೪ ತಿಂಗಳಾದರೂ ಅವರುಗಳಿಗೆ ಸಂದಾಯವಾಗುವುದಿಲ್ಲ. ೫೦ ರೂಪಾಯಿ ಬರುತ್ತದೆ ಎಂದಾಗ ಸೊಸೆ ಒಂದಷ್ಟು ಊಟ ಹಾಕುತ್ತಾಳೆ. ಈ ಹಣ ಎರಡು ತಿಂಗಳು ಬರಲಿಲ್ಲ ಎಂದರೆ, ಆಗಲೇ ಅವಳು ನೋಡುವಂಥ ಕಣ್ಣು ವ್ಯತ್ಯಾಸವಾಗುತ್ತದೆ. ಈ ರೀತಿ ಪರಿಸ್ಥಿತಿ ಇದೆ. ಅದಕ್ಕೋಸ್ಕರ, ಇದು ಭಿಕ್ಷೆ ಅಲ್ಲ ಅವರು ಬದುಕಿಗೋಸ್ಕರ ಸರ್ಕಾರ ಕೊಡುತ್ತಿರುವಂಥ ಒಂದು ಕರ್ತವ್ಯ ದೃಷ್ಟಿ ಯಾವ ರೀತಿ ಸರ್ಕಾರಿ ನೌಕರರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಕೊಡುತ್ತೀರೋ, ಅದೇ ರೀತಿ ಅವರಿಗೂ ತಿಂಗಳಿಗೆ ಸರಿಯಾಗಿ ಪಾವತಿಯಾಗುವುದಕ್ಕೆ ಇರುವ ಅಡ್ಡಿ ಅಡಚಣೆಗಳನ್ನು ತೆಗೆದುಹಾಕಿ ಸಮಯಕ್ಕೆ ಸರಿಯಾಗಿ ಹಣ ಸಿಗುವ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ, ಇವತ್ತು ಎಕ್ಸೈಸ್ ವಿವರ ಕೊಡುವಂಥ ಸಂದರ್ಭದಲ್ಲಿ, ಈ ಕಾಕಂಬಿ ಬಗ್ಗೆ ತಾವು ಒಂದು ವಿವರವನ್ನು ಕೊಟ್ಟಿದ್ದೀರಿ ೧೯೮೮-೮೯ನೇ ಸಾಲಿನಲ್ಲಿ ಕಾಕಂಬಿ ಉತ್ಪಾದನೆ ೨.೭೭ ಲಕ್ಷ ಮೆಟ್ರಿಕ್ ಟನ್ ಎಂದು ಹೇಳಿದ್ದಾರೆ. ೧೯೮೯-೯೦ನೇ ಸಾಲಿನಲ್ಲಿ ೩.೧೪ ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುವ ನಿರೀಕ್ಷೆ ಇದೆಯೆಂದು ಹೇಳಿದ್ದೀರಿ. ನಾನು ಈ ಪಾಯಿಂಟ್ ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಕಾಕಂಬಿ ವಿಶೇಷವಾಗಿ ಸಿಕ್ಕುತ್ತಿರುವುದು ರೈತರುಗಳು ತಾವು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕೊಡುವುದರಿಂದ, ಬೇರೆ ರಾಜ್ಯದಲ್ಲಿ ಕಾಕಂಬಿ ಕೊರತೆ ಇರುವ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಇಲ್ಲ. ಆದರೂ ರೈತ ಬೆಳೆದಂಥ ಕಬ್ಬಿಗೆ ಸರಿಯಾದ ಬೆಲೆ ಇಲ್ಲ. ರೈತನಿಗೆ ಬೇಕಾದ ಅನುಕೂಲತೆಗಳು ಸಿಗುತ್ತಿಲ್ಲ. ಈ ರೀತಿ ಅವನು ಬೆಳೆದಂಥ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕೊಡುವುದರಿಂದ ಕಾಕಂಬಿ ಉತ್ಪಾದನೆಯಾಗುತ್ತಿದೆ. ಇದರ ಲಾಭಾಂಶದಲ್ಲಿ ರೈತನಿಗೂ ಸ್ವಲ್ಪ

ತಲುಪಬೇಕು. ಕಬ್ಬಿಗೆ ಜಾಸ್ತಿ ಬೆಲೆ ಕೊಡುವುದರ ಮೂಲಕವಾಗಲೀ ಅಥವಾ ಬೇರೆ ರೂಪದಲ್ಲಿ ಕೊಡುವುದರ ಮೂಲಕ ರೈತರುಗಳಿಗೆ ಸಹಾಯ ಮಾಡಬೇಕು. ರೈತರುಗಳಿಂದ ಬೇರೆ ಬೇರೆ ತರಹ ಅನುಕೂಲತೆಗಳು ಸರ್ಕಾರಕ್ಕೆ ಮತ್ತು ಜನತೆಗೆ ಆಗುತ್ತಿರುವ ಈ ಸಂದರ್ಭದಲ್ಲಿ ರೈತನ ನೆರವಿಗೆ ಬರುವಂಥ ಒಂದು ವಿಶೇಷವಾದಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಹೇಳುವುದಕೆ ಇಷ್ಟಪಡುತ್ತೇನೆ. ಆಮೇಲೆ ಈಗಾಗಲೇ ಎಕ್ಸ್ ಎಂ.ಎಲ್.ಎ.ಗಳ ಬಗ್ಗೆ ಕೆಲವರು ಮಾತನಾಡಿದ್ದಾರೆ ಅವರ ಬಗ್ಗೆ ಹೇಳುವುದಕ್ಕೆ ನನಗೇನೂ ಸಂಕೋಚವಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಯಾರು ಶ್ರೀಮಂತರಿದ್ದಾರೋ, ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಾಮಾಣಿಕ ಸೇವೆ ಮಾಡಬೇಕೆಂದು ಮುಂದೆ ಬಂದು ಒಂದು ಅಥವಾ ಎರಡು ಅವಧಿಯಲ್ಲಿ ಶಾಸಕರುಗಳಾಗಿ ಕೆಲಸ ಮಾಡಿ ನಿವೃತ್ತಿಯಾದ ಮೇಲೆ ಅವರುಗಳಿಗೆ ಸಹಜವಾಗಿ ಸಾರ್ವಜನಿಕ ಕೆಲಸ ಮಾಡಬೇಕೆಂದು ನಿರೀಕ್ಷೆ ಇರುತ್ತದೆ. ಈ ತರಹ ಅನೇಕ ಜನರನ್ನು ನಾವು ನೋಡಬಹುದು. ಇವತ್ತು ಬಹಳ ಜನ ಪ್ರಾಮಾಣಿಕರಿದ್ದಾರೆ. ಅವರ ಒಂದು ಬದುಕಿನ ದೃಷ್ಟಿಯಿಂದ ಅವರು ರಿಟೈರ್ಡ್ ಆದ ಮೇಲೆ ಕನಿಷ್ಟ ಒಂದು ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಹಾಗೂ ಅವರುಗಳಿಗೆ ಒಂದು ಬಸ್‌ಪಾಸ್ ಕೊಡಬೇಕು ಈ ವ್ಯವಸ್ಥೆಯನ್ನು ಮಾಡುವುದರಿಂದ ಅವನ ಒಂದು ಸಾರ್ವಜನಿಕ ಜೀವನವನ್ನು ಮುಂದುವರಿಸುವುದಕ್ಕೆ ಅನುಕೂಲವಾಗುತ್ತದೆ. ಮಾಜಿ ಶಾಸಕರುಗಳನ್ನು ಸಹ ಜನ ಬಿಡುವುದಿಲ್ಲ. ಅವರೂ ಕೂಡ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಮಾಜಿ ಶಾಸಕರುಗಳಿಗೂ ಕೂಡ ಒಂದು ಬಸ್ ಪಾಸನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದರ ಜೊತೆಗೆ ಅವರಿಗೆ ಕೊಡತಕ್ಕ ಪೆನ್ಷನ್ ಅನ್ನು ಒಂದು ಸಾವಿರ ರೂಪಾಯಿಗೆ ಏರಿಸುವ ವ್ಯವಸ್ಥೆಯನ್ನು ಮಾಡಬೇಕು. ಇದರ ಜೊತೆಗೆ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮತ್ತು ಶ್ರೀ ಬೈರೇಗೌಡರು ಹೇಳಿದಹಾಗೆ ಬೇರೆ ಬೇರೆ ರಾಜಕೀಯ ಪಕ್ಷದ ಶಾಸಕರುಗಳು ಇಲ್ಲಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಲೋಕಸಭೆಯಲ್ಲಿರತಕ್ಕ ವಿಶೇಷ ಸವಲತ್ತುಗಳನ್ನು ನಾವು ಕೇಳುವುದಿಲ್ಲ. ವಿರೋಧ ಪಕ್ಷದ ನಾಯಕರಿಗೆ ಈಗಾಗಲೇ ಒಂದು ಕೊಠಡಿ ಇದೆ. ಅದರ ಜೊತೆಗೆ ಬೇರೆ ಬೇರೆ ಪಕ್ಷಗಳವರಿಗೆ ವಿಧಾನಸೌಧದಲ್ಲೇ ಒಂದೆರಡು ರೂಮುಗಳನ್ನು ತಾವು ಕೊಡಬೇಕಾಗುತ್ತದೆ. ಇದನ್ನು ತಾವು ಮಾಡಬೇಕು. ಬಹಳ ವರ್ಷಗಳಿಂದ ನಾವು ಈ ಸಲಹೆಯನ್ನು ಕೊಡುತ್ತಾ ಬಂದಿದ್ದೇವೆ. ಹಿಂದಿನ ಸರ್ಕಾರದವರು ನಮ್ಮ ಈ ಸಲಹೆಯನ್ನು ಕೇಳಲಿಲ್ಲ. ತಾವಾದರೂ ಈ ನಮ್ಮ ಮನವಿಯನ್ನು ಗಮನಕ್ಕೆ ತೆಗೆದುಕೊಂಡು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳಿಗೆ ಹಣಕಾಸು ಸೌಲಭ್ಯ ಒದಗಿಸುವ ಬಗ್ಗೆ ಕೆ. ಎಸ್. ಎಫ್. ಸಿ. ನಲ್ಲಿ ಒಳ್ಳೆಯ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವತ್ತು ಅನೇಕ ಕೊರತೆಗಳಿಂದ ಅನೇಕ ಕೈಗಾರಿಕೆಗಳು ಬಾಗಿಲು ಹಾಕುವಂತಹ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಒಂದು ಅಧ್ಯಯನವನ್ನು ಮಾಡಬೇಕು. ಕೊನೆಯಪಕ್ಷ ರಾಜ್ಯ ಸರ್ಕಾರದವರು ಸಣ್ಣ ಕೈಗಾರಿಕೆಗಳಿಗೆ ಏನು ಸಬ್ಸಿಡಿ ಕೊಡಬೇಕಾಗಿದೆ, ಆ ಸಬ್ಸಿಡಿಯನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಎಕ್ಸೈಜ್ ಇಲಾಖೆಯಲ್ಲಿ ನೀವು ಸ್ವಲ್ಪ ಬಿಗಿ ತಂದು ಸ್ವಲ್ಪ ಹೆಚ್ಚಿನ ಆದಾಯವನ್ನು ತಂದಿದ್ದೀರಿ. ಅದಕ್ಕಾಗಿ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನೂ ಹೆಚ್ಚಿನ ಬಿಗಿ ಮಾಡಿ, ಅದಕ್ಕೆ ನಮ್ಮದು ಏನೂ ತಕರಾರು ಇಲ್ಲ. ಆದರೆ ಹೆಚ್ಚಿನ ಆದಾಯ ಎಕ್ಸೈಜ್ ಬಾಬಿನಲ್ಲಿ ಬಂದಿರುವುದಕ್ಕೆ ಎರಡು ಪ್ರಮುಖ ಕಾರಣಗಳು ಇರಬಹುದು. ಅರಾಕ್‌ನ ಮಾರಾಟದಲ್ಲಿ ಆಗುತ್ತಿದ್ದ ಅವ್ಯವಹಾರಗಳನ್ನು ನಿಲ್ಲಿಸಿರುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚು ಬಂದಿರಬಹುದು. ಒಂದು ಲೀಟರ್‌ನ್ನು ಲೆಕ್ಕದಲ್ಲಿ ವ್ಯವಹಾರ ಮಾಡಿ ಇನ್ನೊಂದು ಲೀಟರನ್ನು ತೆರಿಗೆ ಕೊಡದೆ ಹೊರಗಡೆ ತೆಗೆದುಕೊಂಡು ಹೋಗುತ್ತಿದ್ದರು. ಈಗ ಬಿಗಿ ಮಾಡಿರುವುದರಿಂದ ತೆರಿಗೆ ಜಾಸ್ತಿ ಬಂದಿರಬಹುದು, ಅದೇ ರೀತಿ ಹೆಂಡದ ಮಾರಾಟವನ್ನು ನಿಲ್ಲಿಸಿರುವುದರಿಂದ ಹೆಚ್ಚಿನ ಆದಾಯ ಸಹಜವಾಗಿ ಸರಾಯಿ ಮಾರಾಟದಿಂದ ಬಂದಿದೆ. ಈಗ ಕಳೆದ ಏಳು ತಿಂಗಳಿನಲ್ಲಿ ಅಬಕಾರಿ ಮಾರಾಟ ತೆರಿಗೆಯಿಂದ ಹೆಚ್ಚು ಆದಾಯ ಬಂದಿರಬಹುದು. ನೀವು ಈ ತೆರಿಗೆಯನ್ನು ಮನಬಂದಂತೆ ಏರಿಸಿದ್ದೀರಿ, ಅದರಿಂದ ಹೆಚ್ಚು ಹಣ ಬಂದಿರಬಹುದು ಬೇರೆ ರಾಜ್ಯಗಳಲ್ಲಿ ಒಂದು ರೂಪಾಯಿ–ಎರಡು ರೂಪಾಯಿ ತೆರಿಗೆ ಇದ್ದರೆ ಇಲ್ಲಿ ೨೦ ರೂಪಾಯಿವರೆಗೆ ಏರಿಸಿದ್ದೀರಿ, ಈ ಕಾರಣಕ್ಕೋಸ್ಕರ ಹೆಚ್ಚಿನ ಆದಾಯ ಬಂದಿದೆ ಎಂದು ನನಗನ್ನಿಸುವುದಿಲ್ಲ. ಕಳೆದ ಮೂರು ತಿಂಗಳಿನಲ್ಲಿ ೪ ಕೋಟಿ ಲೀಟರ್‌ನಷ್ಟು ಉತ್ಪಾದನೆ ಮಾಡಿ ಮೂರು ಕೋಟಿ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಅ[illegible] ಹೊರಗಡೆಗೆ ಡಿಸ್ಟಲರಿಗಳ ಮೂಲಕ ಮಾರಾಟ ಮಾಡಿದ್ದೀರಿ. ಇಲ್ಲಿ ಆಗುತ್ತಿದಂತಹ ಸೋ[illegible]ಕೆ[illegible] ತಡೆಗಟ್ಟಿರುವುದರಿಂದ ನಿಮಗೆ ಹಣ ಹೆಚ್ಚು

ಬಂದಿದೆ. ಆದರೆ ಮಾರಾಟ ತೆರಿಗೆಯನ್ನು ಏರಿಸಿರುವುದರಿಂದ ಈ ರೀತಿ ಹೆಚ್ಚು ಏರಿಕೆ ಬಂದಿರುವುದೆಂದು ಹೇಳುವುದು ಸರಿಯಲ್ಲ. ಇದನ್ನು ಮತ್ತೆ ಪುನರ್ ಪರಿಶೀಲನೆ ಮಾಡಲು ಅಗತ್ಯವಿದೆ.

ಇನ್ನು ಡಿ. ಎಂ. ಎಫ್. ಎಲ್. ಬಗ್ಗೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಸಿಂಗಲ್ ಪಾಯಿಂಟ್ ಮಾಡುವುದರಿಂದ ಏನೂ ಸಮಸ್ಯೆ ಇಲ್ಲ, ಇದರಿಂದ ನಿಮ್ಮ ಪರ್‌ಪಸ್ ಸರ್ವ್ ಆಗುವುದಿಲ್ಲ. ಇದರಿಂದ ಬಳಕೆದಾರರಿಗೂ ಸಹ ಕಡಿಮೆ ಬೆಲೆಯಲ್ಲಿ ವಿಸ್ಕಿ, ಬ್ರಾಂದಿ, ಬೀರು ಸಿಗಲು ಅನುಕೂಲವಾಗಬಹುದು. ತಾವು ಅಧಿಕಾರಕ್ಕೆ ಬಂದಮೇಲೆ ಅರಾಕ್ ಮೇಲೆ ಮಲ್ಟಿಪಾಯಿಂಟ್ ಶೇಕಡ ೧೩ ಇದ್ದಿದ್ದನ್ನು ಸಿಂಗಲ್ ಪಾಯಿಂಟ್ ಶೇಕಡ ೨೦ ಎಂದು ಮಾಡಿ ತೆರಿಗೆ ಹಾಕಿದ್ದೀರಿ. ಅರಾಕ್‌ಗೆ ಒಂದು ನಿಲುವು ತೆಗೆದುಕೊಂಡು ಐ. ಎಂ. ಎಫ್. ಎಲ್. ಗೆ ಮತ್ತೊಂದು ನಿಲುವು ತೆಗೆದುಕೊಂಡಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಇನ್ನು ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಆದರೆ ಸಮಯ ಅಭಾವದಿಂದ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ, ಲಕ್ಷಾಂತರ ಜನ ರೈತರು ಏನು ಹೋರಾಟ ಮಾಡುತ್ತಿದ್ದಾರೆ, ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಈ ಸದನದಲ್ಲಿರುವವರೆಲ್ಲರೂ ರೈತರ ಮಕ್ಕಳಾಗಿದ್ದಾರೆ ಮತ್ತು ಎಲ್ಲರೂ ಗ್ರಾಮೀಣ ಹಿನ್ನೆಲೆಯಲ್ಲಿ ಬಂದಿರುವವರೇ ಆಗಿರುತ್ತಾರೆ. ಆದರೆ ಹೆಚ್ಚಿನವರು ಆಡಳಿತ ಪಕ್ಷದಲ್ಲಿರುವುದರಿಂದ ಅವರು ಇಲ್ಲಿ ಮಾತನಾಡಲು ಸಾಧ್ಯವಾಗದೇ ಇರಬಹುದು. ಆದರೆ ತಮ್ಮ ಪಾರ್ಟಿ ಸಭೆಯಲ್ಲಿ ಈ ಸರ್ಕಾರದ ಮನಸ್ಸನ್ನು ಒಲಿಸಿಕೊಂಡು ಲಕ್ಷಾಂತರ ಜನ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸೂಚಿಸುತ್ತಾರೆಂದು ನಾನು ಭಾವಿಸಿದ್ದೇನೆ. ಇದರಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಎಂಬ ಭೇದ ಬರುವುದಿಲ್ಲ. ರೈತರ ಪರವಾಗಿ ನಾವೆಲ್ಲರೂ ಒಂದಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ.

೩-೪೫ ಪಿ. ಎಂ.

ಅದಕ್ಕಾಗಿ ನಮ್ಮ ಸರಕಾರದ್ದೇ ಒಂದು ಯೋಜನೆಯನ್ನು ಕೇಂದ್ರಕ್ಕೆ ಕಳುಹಿಸಿಕೊಟ್ಟು ಈ ರಾಜ್ಯದಲ್ಲಿ ೧೦ ಸಾವಿರ ರೂ. ಗಳ ವರೆಗೆ ಯಾರು ಸಾಲವನ್ನು ಪಡೆದಿದ್ದಾರೆ ಅಂದರೆ ೨ನೇ ಅಕ್ಟೋಬರ್ ೧೯೮೯ ರ ವರೆಗೆ ಹಾಗೆ ಸಾಲ ಪಡೆದ ಎಲ್ಲರಿಗೂ ಇದು ಅನ್ವಯವಾಗುವ ಹಾಗೆ ಮಾಡಬೇಕು ಮತ್ತು ಅಣಿವಾರು ಪದ್ಧತಿಯನ್ನು ಕೈಬಿಡುವುದರಿಂದ ನಾನು ಅಂದುಕೊಂಡಿದ್ದೇನೆ, ಇವೊತ್ತು ಮಧ್ಯಪ್ರದೇಶ ಸರಕಾರದವರು ೪೯೦ ಕೋಟಿ ರೂಪಾಯಿಗಳ ಭಾರವನ್ನು ಹೊತ್ತುಕೊಂಡರೆ ನಾವೂ ಸ್ವಲ್ಪ ಭಾರವನ್ನು ಆ ಒಂದು ಉದ್ದೇಶಕ್ಕಾಗಿ ಹೊರಬೇಕಾಗುತ್ತದೆ. ಇದು ಬಹಳ ಕಡಿಮೆ ಮೊತ್ತ ಎಂದು ನಾನು ಹೇಳುವುದಿಲ್ಲ. ಬಹುಶಃ ಈ ರೀತಿ ೧೦ ಸಾವಿರ ರೂ. ಗಳ ವರೆಗಿನ ಬೆಳೆ ಸಾಲವನ್ನು ಮನ್ನಾ ಮಾಡಿದರೆ ಅದು ೨೦೦ ಕೋಟಿ ರೂ. ಗಳನ್ನು ಮೀರುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅದರಲ್ಲಿ ರಾಜ್ಯ ಸರಕಾರಗಳಿಗೆ ಅರ್ಧ ಭಾಗವನ್ನು ಕೇಂದ್ರ ಸರಕಾರದವರು ಕೊಡುವವರಿದ್ದಾರೆ, ಮತ್ತು ಸಾಲದ ರೂಪದಲ್ಲಿ ಬೇರೆ ರೂಪದಲ್ಲಿ ಅವರು ಹಣವನ್ನು ಕೊಡುವುದಕ್ಕೆ ತಯಾರಾಗಿರುವುದರಿಂದ ತಾವುಗಳು ರಾಜ್ಯದ ರೈತರಿಗೆ ಅನುಕೂಲವಾಗುವಂಥ ಒಂದು ಯೋಜನೆಯನ್ನು ಮಾಡಬೇಕು, ತಮ್ಮ ಮೇಲೆ ರಾಜ್ಯದ ರೈತರುಗಳು ಇಟ್ಟುಕೊಂಡಿರುವ ವಿಶ್ವಾಸವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಒಂದು ನಿರ್ದಿಷ್ಟ ಭರವಸೆಯನ್ನು ಕೊಡುವುದು ನಿಮ್ಮ ಸರಕಾರದ ಕರ್ತವ್ಯವಾಗಿದೆ. ರೈತರು ಇದೊಂದು ಸಾರಿ ಮಾತ್ರ ಸಾಲ ಮನ್ನಾ ಮಾಡುವಂತೆ ಕೇಳಿಕೊಂಡಿದ್ದಾರೆ. ಈ ರೀತಿ ಮಾಡಿದರೆ ಇನ್ನು ಮುಂದೆ ಅವರು ಹಾಗೆ ಕೇಳುವುದಿಲ್ಲ, ನಾವೂ ಸಹ ಒತ್ತಾಯಿಸುವುದಿಲ್ಲ. ಬೇರೆ ಬೇರೆ ರಾಜ್ಯ ಸರಕಾರಗಳು ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಿವೆ. ನಮ್ಮ ರಾಜ್ಯದ ರೈತರು ನಮ್ಮೆಲ್ಲ ಮಾತುಗಳನ್ನು ಕೇಳಿಕೊಂಡಿದ್ದು ಸಾಲ ಮನ್ನಾ ಆಗುತ್ತದೆ ಎಂದು ಆಶೆಯನ್ನು ಇಟ್ಟುಕೊಂಡಿದ್ದಾರೆ. ಅವರನ್ನು ಬೀದಿಗೆ ಇಳಿಯುವಂಥ ಪರಿಸ್ಥಿತಿಗೆ ನೂಕದೆ ಈ ಒಂದು ಮಹತ್ಕಾರ್ಯವನ್ನು ಮಾಡಿಕೊಟ್ಟು ರೈತರನ್ನು ಕಾಪಾಡಬೇಕು. ಆ ಒಂದು ಗೌರವ ಕೂಡ ತಮ್ಮ ಸರಕಾರಕ್ಕೆ ಬರುತ್ತದೆ ಈ ದಿಕ್ಕಿನಲ್ಲಿ ಮಾನ್ಯ ಅರ್ಥ ಮಂತ್ರಿಯವರು, ಮಾನ್ಯ ಮುಖ್ಯ ಮಂತ್ರಿಯವರು ಒಂದು ನಿಲುವನ್ನು ತೆಗೆದುಕೊಂಡು ರೈತರಿಗೆ ಒಳಿತನ್ನು ಮಾಡಬೇಕು. ಅಣಿವಾರು ಪದ್ಧತಿಯನ್ನು ಕೈಬಿಟ್ಟು ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಿ ಹೇಳಿ, ಈ ದಿಶೆಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು).—ಮಾನ್ಯ ಅಧ್ಯಕ್ಷರೆ, ನಾನು ಈ ಅವಕಾಶವನ್ನು ಉಪಯೋಗಿಸಿಕೊಂಡು ಕೇವಲ ಅಬಕಾರಿ ಇಲಾಖೆಯ ಬಗ್ಗೆ ಮಾತ್ರ ನಾಲ್ಕು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ಟಾಡಿಯ ಬಗ್ಗೆ ನಮ್ಮ ರಾಜ್ಯದಲ್ಲಿ ಈಗ ಪ್ರಾಹಿಬಿಶನ್ ಮಾಡಿರುವುದು ಮತ್ತು ಆ ಕುರಿತು ಕೆಲವು ಅಭಿಪ್ರಾಯಗಳಿವೆ. ಪ್ರಾಹಿಬಿಶನ್ ಮಾಡಬಾರದಿತ್ತು ಎಂದು ಹಲವರು ಹೇಳಿದರೆ ಮಾಡಿದ್ದು ಒಳ್ಳೆಯದಾಯಿತು ಎಂದು ಹಲವರು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಮಾಡಿದ್ದಾರೆ. ಟಾಡಿ ಅಂದರೆ, ಹೆಂಡ, ಕಳ್ಳು, ಶೇಂದಿ ಎಂದು ಬೇರೆ ಬೇರೆಯಾಗಿ ಕರೆದರೂ ಇದು ಒಂದೇ ಬಗೆಯದ್ದು. ಆದರೆ ಸೇಂದಿಯಲ್ಲಿ ನಾಲ್ಕು ವಿಧಗಳು ಇವೆ. ಈಚಲು ಸೇಂದಿ, ತೆಂಗಿನ ಸೇಂದಿ, ತಾಳೆ ಸೇಂದಿ ಮತ್ತು ಬಗನಿಸೇಂದಿ ಎಂದು ಇದೆ. ಇದು ಆಯಾಯ ಪ್ರದೇಶವನ್ನು ಅನುಸರಿಸಿಕೊಂಡು ಕರೆಯಲ್ಪಡುತ್ತದೆ. ಮಂಗಳೂರಿನ ಕಡೆಯ ನಮ್ಮ ಶಾಸಕ ಮಿತ್ರರು ಇದರಲ್ಲಿ ಫುಡ್‌ವ್ಯಾಲ್ಯು ಇದೆ ಎಂದು ಹೇಳುತ್ತಾರೆ, ಇದನ್ನು ಆಹಾರ ಪದಾರ್ಥಗಳ ಮೂಲಕವಾಗಿ ತೆಗೆದುಕೊಳ್ಳುತ್ತಾರೆ ಎಂದೂ ಹೇಳುತ್ತಾರೆ. ಇದನ್ನು ನಿರ್ಬಂಧಿಸಬಾರದು ಎಂಬುದು ಅವರ ಅಭಿಪ್ರಾಯ. ಟಾಡಿಯಲ್ಲಿ ಫುಡ್‌ವ್ಯಾಲ್ಯು ಇದೆ. ಇದರಲ್ಲಿ ೪೭ ಪರ್‌ಸೆಂಟ್ ಪ್ರೊಟಿನ್ ಕಂಟೆಂಟ್ಸ್ ಇದೆ. ಸ್ಟಾರ್ಚ್ ಇದೆ ಹಾಗೂ ಫ್ರೆಶ್ ಟಾಡಿ ಇದ್ದಾಗ it contains vitamin 'B'. Fresh toddy is vitamin 'B'. When the toddy is old, it is vitamin 'C'.

MR. SPEAKER.—Whether the Minister for Excise is will to get enlightened or not, I would like to get enlightened about it. What is this NEERA?

SRI RAVINDRANATH BABU.—Neera is only a fresh juice.

ಅಧ್ಯಕ್ಷರು.—ನೀರಾದಲ್ಲಿ ಏನೇನಿದೆ ?

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ನೀರಾದಲ್ಲಿ ಬಿ. ವಿಟಮಿನ್ ಇದೆ, ಗ್ಲೂಕೋಸ್ ಇರುತ್ತದೆ. Sugar ಇದೆ. It is a healthy drink. In the morning, before sunrise it is called Neera. After that fermentation starts and it becomes toddy.

ಅಧ್ಯಕ್ಷರು.—ವಂದನೆಗಳು.

ಶ್ರೀ ಕೆ. ವಿ. ರವೀಂದ್ರನಾಥಬಾಬು.—ಇದರಲ್ಲಿ ನಾಲ್ಕು ವೆರೈಟಿ ಟಾಡೀಸ್ ಇದೆ. ಹೀಗೆ ಫುಡ್ ವ್ಯಾಲ್ಯು ಇಟ್ಟುಕೊಂಡು, ಬಡ ಜನರು ಹಗಲೆಲ್ಲಾ ಕೆಲಸ ಮಾಡಿ ಮನೆಗೆ ಬಂದ ಮೇಲೆ ಒಂದೆರಡು ಬಾಟಲ್ ಕುಡಿಯುತ್ತಿದ್ದರು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು ಅವರ ತಂದೆ ದಿನಕ್ಕೆ ೨೦ ಬಾಟಲು ಕುಡಿಯುತ್ತಿದ್ದರೆಂದು ಇದು ನಿಜ, ಸುಳ್ಳಲ್ಲ. ಬಡವರು ಕಷ್ಟಪಟ್ಟು ಬಂದು ಒಂದೆರಡು ಬಾಟಲು ಸೇಂದಿ ಕುಡಿದರೆ ಮಂಗಳೂರು ಕಡೆಯವರು ಇದರ ಜೊತೆಗೆ ನಾಲ್ಕು ಮೀನು ತಿಂದುಬಿಟ್ಟರೆ ಅವರಿಗೆ ಅದೇ ಫುಡ್. ಈಚಲು ಸೇಂದಿಯಲ್ಲಿ ಆಲ್ಕೋಹಾಲ್ ಕಂಟೆಂಟ್ಸ್ ೬ ಪರ್ಸೆಂಟ್ ಇದೆ, coconut toddy, it goes up to 7.5 per cent ಹೀಗೆ ಇದಕ್ಕೆ ಫುಡ್ ವಾಲ್ಯು ಬರುತ್ತದೆ. ದುಡಿದ ಅವರು ಇದನ್ನು ಕುಡಿದು ಮಲಗಿ ಬೆಳಿಗ್ಗೆ ಎದ್ದಾಗ ಫ್ರೆಶಾಗುವರು. ಬ್ರಿಟೀಷ್ ಕಾಲದಲ್ಲಿ they used to make toddy bread. ರೂರಲ್ ಏರಿಯಾದಲ್ಲಿ ಇವರಿಗೆ ಯೀಸ್ಟ್ ಸಿಗುತ್ತಿರಲಿಲ್ಲ, ಸ್ಪೆನ್ಸರ್ ಕಡೆ ಮಾತ್ರ ಸಿಗುತ್ತಿತ್ತು. In the interior villages it was called toddy bread. ಕ್ರಿಸ್‌ಮಸ್ ಸೆಲೆಬ್ರೇಟ್‌ಗೆ ಅವರು ಯೀಸ್ಟ್ ಹಾಕಿ ಬ್ರೆಡ್ ಮಾಡುತ್ತಿದ್ದರು These are the food values and qualities in the toddy. ಆದರೆ ನಮಗೆ ಇಂಡಿಪೆಂಡೆನ್ಸ್ ಬಂದ ನಂತರ ಪಾನನಿರೋಧ ಬಂತು ಆಮೇಲೆ ಸಾಕಷ್ಟು ವರ್ಷ ಟಾಡಿ ಸೇಲ್ಸ್ ಇಲ್ಲದೆ ನೀರಾಕೇಂದ್ರಗಳನ್ನು ಆಗ ಮಾಡಿದರು. ಅವು ನಡೆದುವು ಆಗ ಅದನ್ನು ಕೆಲವರು ದುರುಪಯೋಗ ಮಾಡಿ ಸೇಂದಿ ಹಾಗೆ ಮಾರಾಟ ಮಾಡಲು ಪ್ರಾರಂಭ ಮಾಡಿದರು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಗ ಸರ್ಕಾರ ಸಹ ಸ್ವಲ್ಪ ಕಟ್ಟುನಿಟ್ಟಾಗಿ ಅಬ್ಸರ್ವ್ ಮಾಡಿದಾಗ, ಮರಗಳನ್ನು ಗ್ರಾಮಸ್ಥರು ಕಡಿದು ಕೃಷಿಗೆ ಬಳಕೆ ಮಾಡಿಕೊಳ್ಳ ತೊಡಗಿದರು ಮತ್ತು ಆ ಮರಗಳನ್ನು ಮನೆ ಕಟ್ಟಲು ಬಳಸ ತೊಡಗಿದರು. finally in 1968 when excise was liberalised. ಪ್ರಾಹಿಬಿಷನ್ ತೆಗೆದರೂ ಕೂಡ ಮರಗಳು ಇಲ್ಲದಹಾಗಾಯಿತು. ಅದನ್ನು ಫುಡ್ ವ್ಯಾಲ್ಯು ಮೇಲೆ ಲೆಕ್ಕಾಚಾರ ಮಾಡಲಿಲ್ಲ, ಆಗ ಕಮರ್ಷಿಯಲೈಜ್ ಆಯಿತು. For want of toddy, there was more commercialisation and then the idea of dilutionstarted. They used to dilute they todday by adding water. ವಾಟರ್ ಜಾಸ್ತಿಯಾಗಿ ಅದರಲ್ಲಿ ಆಲ್ಕೊಹಾಲ್ ಕಂಟೆಂಟ್ಸ್ ಕಡಿಮೆಯಾಗಿ, ನಿಶಾ ಕಡಿಮೆಯಾಗುತ್ತಿತ್ತು. That effect was not there. Then they found a chemical called Chloral hydrate. Chloral hydrate ಅದರಲ್ಲಿ ಮಿಕ್ಸ್ ಮಾಡುತ್ತಾ ಬಂದಾಗ, ನಿಶಾವನ್ನು ಜಾಸ್ತಿ ಮಾಡಿ ಸೇಂದಿಯೂ ಜಾಸ್ತಿಯಾಗುತ್ತಿತ್ತು, ಆದರೆ ನೋಡುವುದಕ್ಕೆ ಅದು ಸೇಂದಿ ತರಹ ಇರುತ್ತಿರಲಿಲ್ಲ They used to add some other chemical for formation of thickness in the toddy ಹೀಗೆಮಾಡಿ it became and industry of adulteration. ನೀರನ್ನು ಸೇಂದಿಗೆ ಹಾಕುತ್ತಿದ್ದರು, ಆಮೇಲೆ ಸೇಂದಿಯನ್ನೇ ನೀರಿಗೆ ಹಾಕುವುದಕ್ಕೆ ಶುರುವಾಯಿತು. it was the other way ಹೀಗಾಗಿ ಟಾಡಿ ಬಗ್ಗೆ ಅಡಲ್ಟರೇಷನ್ ಹೀಗೆ ಶುರುವಾಯಿತು, ಆದ್ದರಿಂದ ಏನೇನು ತೊಂದರೆಗಳು ಶುರುವಾದವು, ಆಮೇಲೆ ಕೆಮಿಕಲ್ annalysis on health ಮೇಲೆ ನೋಡಿದಾಗ it was a slow poison ಅನ್ನುದು It was proved. when this was proved ಇದು ಹೆಲ್ತ್‌ಗೆ ಒಳ್ಳೆಯದಲ್ಲ, ಕೆಟ್ಟದ್ದು ಎಂದು ಹೇಳಿ ಕೊನೆಗೆ ನಮ್ಮ ಸರ್ಕಾರದವರು ಅದನ್ನು ಬೇಡವೇ ಬೇಡ, ನಮಗೆ ಸೇಂದಿ ಕೊಡಲಿಕ್ಕೆ ಮರಗಳು ಇಲ್ಲ, ಸೇಂದಿ ಕಂಟ್ರಾಕ್ಟ್‌ಗೆ ಕೊಟ್ಟ ಮೇಲೆ ಅವನ್ನು ಡೈಲ್ಯೂಟ್ ಮಾಡಿ, ಅಡಲ್ಟ್ರೇಷನ್ ಮಾಡಿ ಜನಗಳನ್ನು ಸಾಯಿಸುವುದು ನಮಗೆ ಇಷ್ಟವಿಲ್ಲ ಎಂದು ಹೇಳಿ ನಮ್ಮ ಸರ್ಕಾರದವರು ಅದನ್ನು ತೆಗೆದು ಹಾಕಿದರು. It was a good move. ಆದರೆ ಎಲ್ಲಿ ಮರಗಳು ಇವೆ, ಉದಾಹರಣೆಗೆ ಭಗಿನಿ, ತೆಂಗು ಇಂಥ ಮರಗಳು ಮಂಗಳೂರು ಸೈಡ್ ಮತ್ತು ಕೆರಸ್ತಲ್ ಏರಿಯಾ ಇರುವ ಕಡೆ They also use toddy. ಆದ್ದರಿಂದ ಅಂತಹ ಜಾಗಗಳನ್ನು ಪರಿಶೀಲಿಸಬಹುದು. ಮತ್ತೆ ಈ ಮರಗಳನ್ನು ಬೆಳೆಸುವುದಕ್ಕೆ, ಆಗ ಮರಗಳು ಕಡಿಮೆ ಇದ್ದಾಗ ರೀಹಾಬಿಲಿಟೇಷನ್ ಪ್ರೋಗ್ರಾಮ್ ಎಂದು ಹೇಳಿ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಪ್ರೊಗ್ರಾಮ್ ಇತ್ತು. ರೀಹಾಬಿಲಿಟೇಷನ್ ಪ್ರೊಗ್ರಾಮ್ ಪ್ರಕಾರ ಎಲ್ಲೆಲ್ಲಿ ವೇಸ್ಟ್ ಲ್ಯಾಂಡ್ಸ್ ಇದೆ, ಎಲ್ಲೆಲ್ಲಿ ಮಹರಾಜರ ಅಮೃತಮಹಲ್ ಕಾವಲು ಇದೆ ಅಲ್ಲಿ ದನಕರುಗಳನ್ನು ಏನು ಅಲ್ಲಿ ಬಿಡುತ್ತಿದ್ದರು, ಆ ಒಂದು ಭಾಗದಲ್ಲಿ ಈಚಲು ಮರಗಳನ್ನು ಬೆಳೆಸಿ ಅಲ್ಲಿ ಟ್ಯಾಪ್ ಮಾಡಿಸಿ, ಅಲ್ಲಿಂದ ಸೇಂದಿ ಹೆಚ್ಚಿಗೆ ಬರಲಿಕ್ಕೆ ಮಾಡಿ, ನಮ್ಮ ಸ್ಟೇಟ್ ರೆವಿನ್ಯೂವನ್ನು ಹಾಗೆ ಉಳಿಸಿಕೊಳ್ಳಬೇಕೆಂದು ರಿಹಾಬಿಲಿಟೇಷನ್ ಸ್ಕೀಮ್ ಅನ್ನು ತಯಾರು ಮಾಡಿದರು. ಆದರೆ ಇದು ಕೂಡಾ failure. ಆಯಿತು ಈಗ ಪ್ರೊಹಿಬಿಷನ್ ಬಂದಮೇಲೆ ಅಲ್ಲಿ ಮರಗಳೂ ಇಲ್ಲ ಮತ್ತು ರಿಹಾಬಿಲಿಟೇಷನ್ ಪ್ರೊಗ್ರಾಮ್ ಕೂಡಾ ಇಲ್ಲ ಎಂದು ಕಾಣುತ್ತದೆ. ಈಗ ಟಾಡಿ ಟ್ಯಾಪರ್ಸ್ ಆಗಲಿ ಮತ್ತೆ ಅವರ ಕೆಳಗೆ ಇರುವ ಸಿಬ್ಬಂದಿ ಕೆಲವರು ಇರುತ್ತಾರೆ. ಟಾಡಿವೆಂಡರ್ಸ್ ಕೂಡ ಇರುತ್ತಾರೆ ಅವರಗಳಿಗೆ ಕೊಡಬೇಕಾದರೆ, ಅವರಿಗೆ ಈ ಲ್ಯಾಂಡ್ಸ್‌ನ್ನು ಎಕ್ಸೈಜ್‌ಗೆ ಎಂದು ಹೇಳಿ ಏನು ಕೊಟ್ಟಿದ್ದರೋ, ನಾವು ಕೆಲಸವನ್ನು ಅದು ರೆವಿನ್ಯೂಗೆ ವಾಪಸ್ ಕೊಟ್ಟು, ಮತ್ತೆ ರೆವಿನ್ಯೂ ಕಡೆಯಿಂದ ಅವರಿಗೆ ಮತ್ತೆ ರಡೆರಡು ಎಕರೆಯನ್ನು ಅಲಾಟ್‌ಮೆಂಟ್ ಮಾಡಿದರೆ ಅದರಲ್ಲಿ ಸ್ವಲ್ಪ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಎರಡನೆಯದು ಅರಾಕ್‌ಷಾಪ್ಸ್ ಈಗ ಏನಿವೆ, ಅವು ಒಂದಕ್ಕೆ ಎರಡರಷ್ಟು ಜಾಸ್ತಿ ಬರುತ್ತಿವೆ. ಷಾಪ್ಸ್‌ಗಳನ್ನು ತೆರೆಯಲು ಅರ್ಜಿಗಳನ್ನು ಅಪ್ಲೈ ಮಾಡುತ್ತಿದ್ದಾರೆ. ಆಗ they require more vendors. ಅಂಥ ಒಂದು ಜಾಗಕ್ಕೂ ಕೂಡಾ ಈ ಟಾಡಿ ಟ್ಯಾಪರ್ಸ್‌ಗೆ ಫಸ್ಟ್ ಪ್ರಿಫರೆನ್ಸ್‌ನ್ನು ಕೊಡಬಹುದು. ಈಗ ಸುಮಾರು ೨೦-೨೫ ಲೈಸೆನ್ಸ್‌ನ್ನು ಫೆನ್ನಿ ಮಾರಾಟ ಮಾಡಲು ಕೊಡಲಾಗಿದೆ. Fenny is nothing but coconut toddy or cashewnut toddy. Coconut toddy has to be tapped from coconut trees. ಅದನ್ನು ತೆಗೆದು ಫೆನ್ನಿ ಪ್ರೊಸೆಸಿಂಗ್ ಮಾಡಿ ಬಾಟಲ್‌ಗೆ ಫಿಲ್-ಅಪ್ ಮಾಡಿ it gives a better taste then todday. ಈರೀತಿ ಮಾಡುತ್ತಾರೆ ಈಗ ಟ್ಯಾಪಿಂಗ್ ಮಾಡಬೇಕಾದರೆ they require more People. There again same toddy tappershad to be engaged ಈ ರೀತಿ ಮಾಡಿದರೆ ಅದಷ್ಟು ಇದನ್ನೆಲ್ಲಾ ಫಿಲ್-ಅಪ್ ಮಾಡಲಿಕ್ಕೆ ಸಾಧ್ಯಉಂಟು ಅದನ್ನೂ ಮಾಡಬಹುದು. We dan give employmen to the toddaytappers.

Coming to Arrack, ಅರ್ರ್ಯಾಕ್ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಹಿಂದಿನ ಸರ್ಕಾರದಲ್ಲಿ ಬಜೆಟ್ ಮಂಡನೆ ಆದಾಗ ಈ ಬಗ್ಗೆ ರಿಪೋರ್ಟನ್ನು ಕೊಟ್ಟಿದ್ದರು. ಆ ರಿಪೋರ್ಟ್‌ನಲ್ಲಿ they had given the statistics, ಅದು ಹಾಗೆ, ಇದು ಹೀಗೆ, ಅದು ಅಷ್ಟಾಗುತ್ತದೆ, ಅದು ಇಷ್ಟಾಗುತ್ತದೆ ಎಂದು ಹೇಳಿಕೆ ಕೊಟ್ಟಿದ್ದರು But the important thing was the opening balance of molasses, That was not there. It is based on that, ಅಲ್ಲಿ ಮೊಲಾಸೀಸ್ ಇಲ್ಲ, ಮೊಲಾಸೀಸ್ ಕ್ವಾಂಟಿಟಿ ಕೂಡಾ ಇಲ್ಲ, ಸ್ಟಾಕೂ ಇಲ್ಲ. ಅದರ ಮೇಲೆ ಎಷ್ಟು ಬರುತ್ತದೆ ? ಎಷ್ಟು ಡೈಲ್ಯೂಟ್ ಆಗುತ್ತದೆ? ಎಷ್ಟು ಕ್ವಾಂಟಿಟಿ ಆಫ್ ಅರ್ರ್ಯಾಕ್ ಬರುತ್ತದೆ ? ಅದರ ಮೇಲೆ ಎಷ್ಟು ಸೇಲ್ ಆಗುತ್ತದೆ ? It is based on molasses. ಅದೇ ರೀತಿ ಮೊಲಾಸಿಸ್‌ನ್ನು ನೀವು ಏನು ಡಿಸ್ಟಿಲರಿಗಳಿಗೆ ಕೊಡತ್ತಿದ್ದೀರಿ, you are giving to the distlrieis ಅಲ್ಲಿ ಹಿಡಿಯಬೇಕು, ಚೆಕ್ ಪೋಸ್ಟ್‌ನಲ್ಲಿ ಹಿಡಿಯಬೇಕು, ಅದು ಮಾಡಬೇಕು, ಇದು ಮಾಡಬೇಕು ಎಂದು ಹೇಳುವ ಬದಲು you can do one thing. At the source itself you can restrict. ಅವರವರ ಕೆಪಾಸಿಟಿ ಇದ್ದವರು ಪರ್ಮಿಟ್ ಮೇಲೆ ಏನು ಸೇಲ್ ಮಾಡಿದ್ದಾರೊ ? according to that you can issue raw matirials from the sugar factory. ಮೊಲಾಸಿಸ್‌ನ್ನು ಡೈಲೂಟ್ ಮಾಡಿ ಡೈಲೂಟ್ ಮಾಡಿದ ನಂತರ ಅದು 1/1½ ಆಗ ಅದು ಅರ್ರ್ಯಾಕ್ ಆಗುತ್ತದೆ. ಅರ್ರ್ಯಾಕ್ ಆದಮೇಲೆ It coms to about 35 to 40 U.P. 34-5 to 35 U.P. This is the procedure where we can withhold the problem. at the source it self. ಇನ್ನು ನಮ್ಮ ಸರ್ಕಾರ ಬಹಳ ಹುಷರಾಗಿ ಇರಬೇಕು ಎನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಏನು ರೆಂಟಲ್ಸ್ ಇತ್ತು, ಅದು, ೧೫೫ ಆಗಿದೆ. ಮೂರು ಲಕ್ಷ ಇಪ್ಪತ್ತು ಒಂದು ತಿಂಗಳಿಗೆ ೧೫೫ ಲಕ್ಷ ಆಗಿದೆ ಒಂದು ದಿನ ಏನಾದರೂ ನಾವು ರೆಂಟಲ್ಸ್ ಕಲೆಕ್ಟ್ ಮಾಡುವುದು ಷೆಡ್ಯೂಲ್ ಟೈಮ್‌ನಲ್ಲಿ ತಪ್ಪಿದರೆ, for example it is Bangalore about Rs. 6 crores for a day they have to collect Rs- 20 lakhs. contractors collections ಆಮೇಲೆ ನಮ್ಮ ಕಿಸ್ತು ನಾವು ಕಲೆಕ್ಟ್ ಮಾಡದೇ ಇದ್ದರೆ imagine what would be throughout the State. per a day it goes in crores, ಕೋಟ್ಯಂತರ ರೂಪಾಯಿ ಹೋಗಿ ಬಿಡುತ್ತದೆ. ಬಾಕಿ ನಿಲ್ಲುವುದು, Your one months Earnest Money Deposit plus three months Bank guarantee. 3+1=4, solvency is covered only on the value of the contractor and not the entire amount solvency of contractor may be 10 lakhs, 5 lakhs, 15 lakhs crores. ಆಗ ಏನು ಆಗುತ್ತದೆ ? The balance of this amount to be covered and not cannot be held by the Government. ಅದಕ್ಕೆ ಏನು ಮಾಡಬೇಕು? ಅವರ ಲಿಮಿಟ್ಸ್ ಏನು ಇದೆ, ಆ ಒಂದು ಸ್ಟೇಜ್‌ನಲ್ಲಿ ಅವರು ಕಲೆಕ್ಟ್ ಮಾಡಬೇಕು ? ಗ್ರಾಂಟ್ ಆಫ್ ಟೈಮ್ಸ್ ಏನಾದರೂ ಕೊಟ್ಟರು ಎಂದರೆ, ಮತ್ತೆ ಕಂಟ್ರಾಕ್ಟರ್ಸ್ ಮೇಲೆ ಇನ್ನೂರು ಮುನ್ನೂರು ಕೋಟಿ ರೂಪಾಯಿ ಬಾಕಿ ನಿಂತು ಹೋಗಿ ಬಿಡುತ್ತದೆ, that has to be checked and it has to be looked carefully. ಆಮೇಲೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ when the rentals are too high, the cheaper drink like today ಅದೂ ಇಲ್ಲ ಎಂದ ಮೇಲೆ there are possibilities of illicit liquor to be rampant. ಅದು ಮಾತ್ರ ಬಹಳ ಕೇರ್‌ಫುಲ್ ಆಗಿ ನಾವು ಚೆಕ್ ಮಾಡಬೇಕಾಗುತ್ತದೆ. ಆಮೇಲೆ The staff has to be equipped well for that. ಇದು ಮಾಡದೇ ಇದ್ದರೆ ಬಹಳ ತೊಂದರೆ ಆಗುತ್ತದೆ. ಆಮೇಲೆ ಅರ್ರ್ಯಾಕ್ ಸೇಲ್ ಕೂಡ ಫೇಲ್ ಆಗುತ್ತದೆ, ಗವರ್ನ್‌ಮೆಂಟ್ ರೆವಿನ್ಯೂ ಫೇಲ್ ಆಗುತ್ತದೆ, ಕಂಟ್ರಾಕ್ಟರ್ಸ್ ಮಧ್ಯದಲ್ಲಿ ಕೈ ಎತ್ತಿ ಬಿಡುತ್ತಾರೆ. Then again reaction strats. Rentals will fall. All those problems & chain reaction ಶುರುವಾಗುತ್ತದೆ ....

ಶ್ರೀ ಕೆ. ಶಿವಮೂರ್ತಿ.—ಈಗ ಮಾನ್ಯ ಸದಸ್ಯ ಮಿತ್ರರು ಇಲ್ಲಿಸಿಟ್ ಲಿಕ್ಕರ್ ಎಂದು ಹೇಳುತ್ತಾರೆ. ಲಂಬಾಣಿ ತಾಂಡಾಗಳಲ್ಲಿ ಇಲ್ಲಿಸಿಟ್ ಲಿಕ್ಕರ್ ಮಾಡತಕ್ಕದ್ದನ್ನು ಮೊದಲು ಉದ್ಧರಿಸಿದ್ದಾರೆ. ಇಲ್ಲಿಸಿಟ್ ಲಿಕ್ಕರ್ ಏಕೆ ಕುಡಿಯುತ್ತಾರೆ ಎಂದರೆ ಯಾವಾಗ ಜಾಸ್ತಿಯಾಗುತ್ತದೆ ಅಂದರೆ ಸರ್ಕಾರದಿಂದ ಮಾರತಕ್ಕ ಸಾರಾಯಿ ಬೆಲೆ ಜಾಸ್ತಿ ಆದಾಗ ಈ ರೀತಿ ಚೀಫ್ ಕಮಾಡಿಟಿ ಇರತಕ್ಕ ಎರಡು ರೂಪಾಯಿಗೆ

ಒಂದು ಬಾಟಲ್ ಸೇಂದಿ ಸಿಗದೇ ಇದ್ದಾಗ ಅವರು ಅನಿವಾರ್ಯವಾಗಿ ಇಲ್ಲಿಸಿಟ್ ಲಿಕ್ಕರ್ ಕುಡಿಯುವುದಕ್ಕೆ ಹೋಗತಕ್ಕದ್ದು ಜಾಸ್ತಿ. ಅದರ ಬೆಲೆ ಬಹಳ ಲೋಯೆಸ್ಟ್ ಇರುತ್ತದೆ ಇದನ್ನು ಕುಡಿಯುತ್ತಾರೆ ಅದಕ್ಕೋಸ್ಕರ ಇಂತಹ ಸಮಯದಲ್ಲಿ ಬಡವರಿಗೆ ಹೋಗತಕ್ಕಂಥಾದ್ದು ಜಾಸ್ತಿ ಆದ್ದರಿಂದ ಪ್ರೋತ್ಸಾಹದಾಯಕ ಆಗಿರುವಂಥಾದ್ದರ ಬಗ್ಗೆ ಡಿಪಾರ್ಟ್‌ಮೆಂಟ್‌ನವರು ನಿಗಾ ಇಡುವುದಿಲ್ಲ. ಹಾಗಾಗಿ ಈ ರೀತಿ ಚೀಫ್ ಕಾಸ್ಟ್ ಎಂದು ಹೇಳಿಬಿಟ್ಟು ಇಲ್ಲಿಸಿಟ್ ಲಿಕ್ಕರ್‌ಗೆ ಹೋಗಿ ಬಿಡುತ್ತಾರೆ ಅದು ಈಗ ಹೆಚ್ಚಿಗೆ ಆಗುತ್ತದೆ. ಮೊದಲಿಗಿಂತ ಈಗ ರ್‍ಯಾಂಪಾರ್ಟ್ ಆಗಿ ನಡೆಯುತ್ತಿದೆ.

ಅಧ್ಯಕ್ಷರು.—ಅದಕ್ಕೆ ನೀವು ಏನಾದರೂ ಸಬ್ಸಿಡಿ ಕೊಡಿ ಎಂದು ಸರ್ಕಾರಕ್ಕೆ ಹೇಳುತ್ತೀರಾ ? I fully understood your apprehension and your question also...

(ಸದನದಲ್ಲಿ ನಗು)

ಶ್ರೀ ಕೆ. ಶಿವಮೂರ್ತಿ.—ಈಗ ಲಂಬಾಣಿ ತಾಂಡಾದಲ್ಲಿ ಸಾರಾಯಿ ಇಳಿಸುತ್ತಾರೆ. It is very good quality. ಈ ರೀತಿ ಇಳಿಸುವ ಸಾರಾಯಿಗೆ ಕೆಮಿಕಲ್ಸ್ ಹಾಕುವುದಿಲ್ಲ. ಯಾವುದೋ ಒಂದು ಚಕ್ಕೆ, ಬೆಲ್ಲ ತರಕಾರಿ, ಹಣ್ಣುಹಂಪಲು ಹಾಕುತ್ತೇವೆ. ಇದು ಒಳ್ಳೆಯ ಕ್ವಾಲಿಟಿ ತಾವು ಬೇಕಾದರೆ ಅನ್‌ಲಿಸಿಸ್ ಮಾಡಬಹುದು.

MR. SPEAKER.—I appreciate the certificate which you are giving.

SRI K. SHIVAMURTHY.—It is low cost. When the adulteration comes, it affects on health.

(Interruptions)

ಶ್ರೀ ಎಲ್. ಆರ್. ಶಿವರಾಮೇಗೌಡ.—ಶಿವಮೂರ್ತಿಯವರಿಗೆ ಬಹಳ ಅನುಭವ ಇದೆ ಎಂದಾಯಿತು,

ಶ್ರೀ ಕೆ. ಶಿವಮೂರ್ತಿ.—ಈಗ ಏನು ಅಡಲ್ಟರೇಷನ್ ಸ್ಟಾರ್ಟ್ ಆಗಿದೆ, ಅಡಲ್ಟರೇಷನ್‌ನಿಂದ ಆರೋಗ್ಯಕ್ಕೆ ಎಫೆಕ್ಟ್ ಆಗುತ್ತದೆ. It is a traditional industry ಅದನ್ನೇ ಇಲ್ಲಿಸಿಟ್ ಲಿಕ್ಕರ್ ಎಂದು ನಾನಾ ತರಹ ಆಗುತ್ತಿದೆ. I have to clarify myself.

(ಗೊಂದಲ)

ಶ್ರೀ ಕೆ.ವಿ. ರವೀಂದ್ರನಾಥ್ ಬಾಬು.—ನಮ್ಮ ಶಾಸಕ ಮಿತ್ರರು ಹೇಳಿದ ಹಾಗೆ ಕಂಟ್ರಾಕ್ಟರ್‌ಗೆ ಕೊಡುವ ರೇಟ್ ಏನು ಆಗುತ್ತದೆ ಎಂದರೆ The rentals have gone to the sky limits. One quarter is about 180ML ನ ಒಂದು ಕ್ವಾರ್ಟರ್‌ಗೆ ೧೦ ರಿಂದ ೧೨ ರೂಪಾಯಿ ಇಡಬೇಕಾಗುತ್ತದೆ. ಬ್ರಾಂದಿಗೂ ಸಹ ೧೦ ರಿಂದ ೧೨ ರೂಪಾಯಿ ಇಡಬೇಕಾಗುತ್ತದೆ. ಐಎಂಎಫ್‌ಎಲ್ ಕಾಸ್ಟ್ ೧೨ ರಿಂದ ೧೩ ರೂಪಾಯಿಗಳ ಪ್ರಕಾರ ಚೀಫ್ ಲಿಕ್ಕರ್ ಎಂದು ಬರುತ್ತದೆ, ಬಡವರು ಅಷ್ಟು ದುಡ್ಡು ಕೊಟ್ಟು ಕುಡಿಯುವುದಕ್ಕಾಗುವುದಿಲ್ಲ. ಸೇಂದಿ ಎರಡು ಬಾಟಲ್ ಕುಡಿಯುತ್ತಿದ್ದವನು, ಇಷ್ಟು ಕುಡಿಯಬೇಕು ಎಂದರೆ ಅವರಿಗೆ ಹೊಟ್ಟೆ ತುಂಬಿದ ಹಾಗೆ ಆಗುವುದಿಲ್ಲ. ಫುಡ್ ವ್ಯಾಲ್ಯೂ ಅಷ್ಟರಲ್ಲೇ ಇದೆ. ಇದರಲ್ಲಿ ಏನೂ ಇಲ್ಲ. ಬರೀ ಇಂಟಾಕ್ಸಿಕೇಶನ್ ಜಾಸ್ತಿ ಇದೆ. ಆದ್ದರಿಂದ Automatically the people will go for ilicit liquor. ಇಲ್ಲಿಸಿಟ್ ಲಿಕ್ಕರ್ ಅಂದರೆ ಅವರು ಹೇಳಿದ್ದ ಹಾಗೆ ಬೆಲ್ಲ ಹಾಕುತ್ತಾರೆ, ಕೊಳೆತ ಹಣ್ಣು ಹಾಕುತ್ತಾರೆ. ಅಂಥವೆಲ್ಲ ಹಾಕಿ ಏನೋ ಮಾಡುತ್ತಾರೆ. ಅವರಿಗೆ ಕ್ವಾಂಟಿಟಿ ಹೆಚ್ಚಾಗಿ ಬೇಕಾಗಿದ್ದಾಗ ಅಲ್ಲಿ ಅಡಲ್ಟರೇಷನ್ ಸ್ಟಾರ್ಟ್ ಆಗುತ್ತದೆ. ಆಗ ಬ್ಯಾಟರಿ ಸೆಲ್, ಮೆಟಲ್—ಇಂಥವನ್ನು ಹಾಕುತ್ತಾರೆ. ಇವೆಲ್ಲ ಪಾಯ್ಸನಸ್ ತಿಂಗ್ಸ್, ಇವನ್ನೆ ಸೇರಿಸಿ ಮಾಡುತ್ತಾರೆ. ಅದನ್ನು ತೆಗೆದುಕೊಂಡಾಗ when the fermentation becomes toxic, people drink and die. dirty things they put. That gives bad effect on the health.

ಶ್ರೀ ಕೆ. ಶಿವಮೂರ್ತಿ.—ಬ್ಯಾಟರಿ ಸೆಲ್ ಒಂದೇ ಅಲ್ಲ ಹಳೆಯ ಚಪ್ಪಲಿಗಳನ್ನು ಕೊಳೆ ಹಾಕುತ್ತಾರೆ.

ಶ್ರೀ ಕೆ. ವಿ ರವೀಂದ್ರನಾಥಬಾಬು.—ಆಲ್ ಡರ್ಟಿ ಥಿಂಗ್ಸ್ ಹಾಕಿ ಮಾಡುವುದರಿಂದ it gives very bad effect. That is very important. ಮುಖ್ಯವಾಗಿ rentals ಬಗ್ಗೆ ಒಂದು ಮಾತನ್ನು ಹೇಳಬೇಕು ಅಂದರೆ, rentals have gone up by 1:5–6 times ಹೋಗಿರಬಹುದು ಒಂದು ಉದಾಹರಣೆ ಹೇಳುತ್ತೇನೆ. ನಮ್ಮಲ್ಲಿ ಕೆಲವು ಕಡೆ ೩ ಲಕ್ಷ ಇದ್ದದ್ದು ೧೫ ಲಕ್ಷವಾಗಿದೆ. How far they will coutinue in contract, I do not know. ಸರ್ಕಾರದವರು ಯಾರೂ ಹೇಳಲಿಲ್ಲ. ಇಷ್ಟು ಕೂಗಿರಿ ಎಂದು ಆದರೆ ಅವರೇ ಕಾಂಪಿಟಿಷನ್ ಮೇಲೆ ಕೂಗಿಕೊಂಡಿದ್ದಾರೆ, ಮಾಡಿಕೊಂಡಿದ್ದಾರೆ. ಆದರೆ ಅವರು ಫೇಲ್ ಆದರೆ ಅದಕ್ಕೆ ತಕ್ಕಹಾಗೆ ಯು ಮಸ್ಟ್ ಬಿ ಕೇರ್‌ಫುಲ್. ಅದರಲ್ಲಿ ಒಂದು ತಿಂಗಳಿನದ್ದು ಅರ್ನೆಸ್ಟ್ ಮನಿ ಡಿಪಾಸಿಟ್ ಪ್ಲಸ್ ೩ ಮಂತ್ಸ್ ಬ್ಯಾಂಕ್ ಗ್ಯಾರಂಟಿ ಕೊಡಬೇಕು. ಬ್ಯಾಂಕ್ ಗ್ಯಾರಂಟಿಯನ್ನು ಬ್ಯಾಂಕ್‌ನವರು ಕೊಡಬೇಕಾದರೆ ಅವರು ಹಿಂದುಮುಂದು ನೋಡುತ್ತಾ ಇದ್ದಾರೆ We must be careful ಒಂದು ತಿಂಗಳು ಅಮೌಂಟ್ ಕಟ್ಟುತ್ತಾರೆ, ೩ ತಿಂಗಳ ಬ್ಯಾಂಕ್ ಗ್ಯಾರಂಟಿ ತೆಗೆದುಕೊಳ್ಳುತ್ತಾರೆ. Solvency does not cover full year's amount ಒನ್ ಆರ್ ಟೂ ಡೇಸ್ ಅಂದರೂ ಕೂಡ ಕೋಟ್ಯಾಂತರ ರೂಪಾಯಿ ನಿಂತುಹೋಗುತ್ತದೆ, ಸರ್ಕಾರಕ್ಕೆ ಏಟಾಗುತ್ತದೆ, ಅದಕ್ಕೆ ನಾವು ಕೇರ್‌ಫುಲ್ ಆಗಿರಬೇಕು ಎಂದು ಹೇಳುತ್ತೇನೆ. ನಾನು ಟಾಡಿ ಬಗ್ಗೆ ಮುಖ್ಯವಾಗಿ ಹೇಳಬೇಕು ಎಂದು ಇದ್ದದ್ದು. ಮಂಗಳೂರು ಕಡೆ ಈ ಮಾರಗಳು ಇರುವುದರಿಂದ ಮತ್ತು ಜನಗಳಿಗೆ ತೊಂದರೆಯಾಗಿರುವುದರಿಂದ ಮತ್ತು ಫುಡ್‌ವಾಲ್ಯೂ ಬಗ್ಗೆ ತಮಗೆ ಹೇಳಿರುವುದರಿಂದ ಇದನ್ನು ಸರ್ಕಾರ ಕನ್ಸಿಡರ್ ಮಾಡಿದರೆ ಅಲ್ಲಿರುವವರಿಗೆ ಮಾತ್ರ ಅನುಕೂಲ ವಾಗುತ್ತದೆ ಎಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ಮೇಮಂಗಲ್).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಸದನದ ಮುಂದೆ ಇರತಕ್ಕ ಹಣಕಾಸು, ಅಬ್ಕಾರಿ ಕಾನೂನು ಮತ್ತು ಸಂಸದೀಯ ಇಲಾಖೆಗಳಿಗೆ ಸಂಬಂಧ ಪಟ್ಟಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಪ್ರಾರಂಭದಲ್ಲಿ ಮಾನ್ಯ ಹಣಕಾಸು ಮಂತ್ರಿಗಳ ಗಮನಕ್ಕೆ ತರತಕ್ಕ ಒಂದು ವಿಚಾರವೇನೆಂದರೆ, ಆಟೋಮೊಬೈಲ್ಸ್ ಮೇಲೆ, ಮೋಟಾರು ವಾಹನಗಳು ಮತ್ತು ಬಿಡಿ ಭಾಗಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ಹಾಕಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಸ್ನೇಹಿತರು ಒಬ್ಬರಿಗೆ ಒಂದು ಕಾರನ್ನು ಕೊಂಡುಕೊಳ್ಳಬೇಕಾಗಿದ್ದರೆ ಇಂದು ಕರ್ನಾಟಕದಲ್ಲಿರತಕ್ಕಂಥ ಕಾರಿನ ಬೆಲೆ ಎಷ್ಟು ಮತ್ತು ಪಕ್ಕದ ಪಾಂಡಿಚೆರಿಯಲ್ಲಿರತಕ್ಕ ಕಾರಿನ ಬೆಲೆ ಎಷ್ಟು ಎನ್ನತಕ್ಕಂಥ ಕ್ವೊಟೇಷನ್ ತರಿಸುವುದಕ್ಕೆ ಹೇಳಿದ್ದೆ. ಆದರೆ ಅದು ನನ್ನ ಕೈಯಲ್ಲಿ ಆಗಲಿಲ್ಲ. ಆದುದರಿಂದ ನನ್ನದೇ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಕಳೆದ ವರ್ಷ ನನ್ನ ಕ್ಷೇತ್ರದ ನನ್ನ ಅಭಿಮಾನಿಗಳೆಲ್ಲ ಸೇರಿ ನನಗೆ ಒಂದು ಹೊಸ ಕಾರನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ಆ ಕಾರನ್ನು ನಾವು ಬೆಂಗಳೂರಿನಲ್ಲಿ ಕೊಂಡು ಕೊಳ್ಳಲಿಲ್ಲ, ಪಾಂಡಿಚೆರಿಯಿಂದ ಆ ಕಾರನ್ನ ತರಿಸಿದ್ದು. ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ ಸುಮಾರು ೧೦ ಸಾವಿರ ರೂಪಾಯಿಗಳು. ಕರ್ನಾಟಕಕ್ಕೂ ಮತ್ತು ಪಾಂಡಿಚೆರಿಗೂ ಕಾರಿನ ಬೆಲೆಯಲ್ಲಿ ವ್ಯತ್ಯಾಸ ಸುಮಾರು ೧೦ ಸಾವಿರ ರೂಪಾಯಿಗಳು. ಈರೀತಿ ನಾನೊಬ್ಬನೇ ಬೇರೆ ಕಡೆಯಿಂದ ಕೊಂಡು ಕೊಂಡಿದ್ದೇನೆಂದು ಹೇಳುತ್ತಾ ಇಲ್ಲ. ಶೇಕಡ ೬೦ ರಿಂದ ೭೦ ರಷ್ಟು ಜನ ಇವತ್ತು ಹೊರಗಡೆಯಿಂದ ಹೊಸ ಕಾರುಗಳನ್ನು ಕೊಂಡು ಕೊಂಡು ಬರುತ್ತಾ ಇದ್ದಾರೆ. ಒಂದು ವರ್ಷದಲ್ಲಿ ನೂರಾರು, ಸಾವಿರಾರು ಕಾರುಗಳು ಕರ್ನಾಟಕ ರಾಜ್ಯದಲ್ಲಿ ಮಾರಾಟ ಆಗುತ್ತಾ ಇವೆ. ಇದರಲ್ಲಿ ಶೇಕಡ ೫೦ ರಷ್ಟನ್ನು ಬೇರೆ ಕಡೆಯಿಂದ ತಂದರೆ ಈ ಸೇಲ್ಸ್ ಟ್ಯಾಕ್ಸ್‌ನಲ್ಲಿ ಎಷ್ಟರಮಟ್ಟಿಗೆ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತಾ ಇದೆ ಎನ್ನುವುದನ್ನು ಅವರೇಲೆಕ್ಕ ಹಾಕಬೇಕು. ಕೇವಲ ಪಾಂಡಿಚೆರಿಯಿಂದ ಕಾರುಗಳನ್ನು ತರಿಸುತ್ತಾ ಇದ್ದಾರೆಂದಲ್ಲ, ಬೇರೆ ವಹಿಕಲ್‌ಗಳನ್ನು ಅಂದರೆ ಲಾರಿಗಳನ್ನು ಬೇರೆ ಕಡೆಯಿಂದ ಪಾಂಡಿಚೆರಿಯಿಂದ ತರಿಸುತ್ತಾ ಇದ್ದಾರೆ. ಈ ಕಡೆ ಗೋವ ಮತ್ತು ಬೇರೆ ಡೆಕಯಿಂದ ಕಾರುಗಳನ್ನು ಮತ್ತು ಲಾರಿಗಳನ್ನು ತಂದು ನಮ್ಮ ರಾಜ್ಯದಲ್ಲಿ ಉಪಯೋಗಿಸತಕ್ಕದ್ದು ಇವತ್ತಿನ ದಿವಸ ನಡೆಯುತ್ತಾ ಇದೆ. ಇದರಿಂದ ಸೇಲ್ಸ್ ಟ್ಯಾಕ್ಸ್ ಬಾಬಿನಲ್ಲಿ ನಮ್ಮ ರಾಜ್ಯಕ್ಕೆ ಬರತಕ್ಕಂಥ ಕೋಟ್ಯಾಂತರ ರೂಪಾಯಿ ಹಣ ಬೇರೆ ಕಡೆ ಹೋಗುತ್ತಾ ಇದೆ. ಇದಕ್ಕೆ ಕಾರಣ ಏನೆಂದರೆ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆ ರಾಜ್ಯಗಳಲ್ಲಿರತಕ್ಕ ಮಾರಾಟ ತೆರಿಗೆಗೂ, ನಮ್ಮ ರಾಜ್ಯದಲ್ಲಿರತಕ್ಕ ಮಾರಾಟ ತೆರಿಗೆಗೂ ಸಾಕಷ್ಟು ವ್ಯತ್ಯಾಸ ಇದೆ. ಆದ್ದರಿಂದ ಇದನ್ನು ಸ್ವಲ್ಪ ಹಿಂದಕ್ಕೆ ವಾಪಸ್ಸು ಪಡೆದುಕೊಳ್ಳಿ. ಏಕೆಂದರೆ ಹೆಚ್ಚಿನ ಹಣವನ್ನು ನಷ್ಟ ಮಾಡುವುದು ಉಚಿತವೂ ಅಲ್ಲ, ಜಾಣತನವೂ ಅಲ್ಲ. ಇದನ್ನು ಯಾವ ರೀತಿ ಸರಿದೂಗಿಸಬೇಕು, ನಷ್ಟವನ್ನು ಯಾವರೀತಿ ತಡೆಗಟ್ಟಬೇಕೆಂಬುದು ಅರ್ಥಮಂತ್ರಿಗಳಿಗೆ ಬಿಟ್ಟದ್ದು ಇದು ಅವರ ಕರ್ತವ್ಯವೂ ಕೂಡ ಎಂದು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಅನೇಕ ಜನ ನನ್ನ ಸ್ನೇಹಿತರು ಈ ರೇಷ್ಮೆ ಮೇಲೆ ಹಾಕಿರತಕ್ಕ ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ನಮ್ಮ ಜಿಲ್ಲೆ ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದರಿಂದ ನೇರವಾಗಿ ಅನಾನುಕೂಲ ವಾಗಿರುವುದು ನಮ್ಮ ಜಿಲ್ಲೆಯ ರೈತರಿಗೆ. ಇವತ್ತು ರೇಷ್ಮೆ ಬೆಳೆಯುತಕ್ಕ ರೈತರು ಕಷ್ಟ ನಷ್ಟವನ್ನು ಅನುಭವಿಸುತ್ತಿದ್ದಾರೆ. ಗೂಡಿನಿಂದ ಮುಂದಕ್ಕೆ ಏನಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದು ನನ್ನ ತಲೆಗೂ ಕೂಡ ಹೋಗುವುದಿಲ್ಲ. ಅವರು ಹೇಳುತ್ತಿರುವುದು ನಮ್ಮ ರಾಜ್ಯದಲ್ಲಿ ಒಂದು ಕೆ.ಜಿ. ರೇಷ್ಮೆಗೆ ೬೦-೭೦ ರೂಪಾಯಿ ಟ್ಯಾಕ್ಸ್ ನಮ್ಮ ರಾಜ್ಯದಲ್ಲಿ ಬೀಳುತ್ತದೆ, ಆದ್ದರಿಂದ ಬೇರೆಯವರ ಜೊತೆ ಪೈಪೋಟಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಅದರ ಬಗ್ಗೆ ವಿವರವಾಗಿ

(ಶ್ರೀ ಟಿ. ವಿ. ಜಯಚಂದ್ರ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಹೇಳುವುದಕ್ಕೆ ಹೋಗುವುದಿಲ್ಲ. ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಇದು ಕೇವಲ ೨-೩ ಕೋಟಿ ರೂಪಾಯಿಗಳ ವ್ಯವಹಾರ ಆಗಿರುವುದರಿಂದ ತಾವು ಉತ್ತರ ಕೊಡುವಾಗ ತೆರಿಗೆಯನ್ನು ವಜಾ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬೇಕೆಂದು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಹೇಳಿದರು, ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಮಾನ್ಯತೆ ಪಡೆದಂಥ ಪಕ್ಷಗಳು ಇವೆ. ಪಾರ್ಲಿಮೆಂಟಿನಲ್ಲಿ ಈ ಪಕ್ಷಗಳಿಗೆ ಯಾವ ರೀತಿಯ ಸವಲತ್ತುಗಳನ್ನು ಕೊಡುತ್ತಾರೋ, ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಜಾರಿಗೆ ಕೊಡಬೇಕೆಂದು ಹೇಳುತ್ತೇನೆ. ಶಾಸಕರುಗಳಿಗೆ ಟೆಲಿಫೋನ್ ಕೊಡತಕ್ಕ ಸೌಲಭ್ಯ ಇದೆ. ಇವತ್ತು ಪರ್‌ಕಾಲ್ ಬೆಲೆ ಜಾಸ್ತಿಯಾಗಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಕೆಲವು ಶಾಸಕರುಗಳಿಗೆ ೧೫೦೦ ರಿಂದ ೨೦೦೦ದ ವರೆಗೆ ಟೆಲಿಫೋನ್ ಬಿಲ್ ಬರುತ್ತದೆ. ಅವರಿಗೆ ಬರತಕ್ಕ ೩,೦೦೦ ಸಂಬಳದಲ್ಲಿ ಒಂದು ಸಾವಿರದಿಂದ ೧೫೦೦ ರೂಪಾಯಿ ಟೆಲಿಫೋನ್‌ಗೆ ಹೋಗುತ್ತದೆ. ಆದ್ದರಿಂದ ಪ್ರತಿ ಶಾಸಕರಿಗೂ ಒಂದು ಸಾವಿರ ರೂಪಾಯಿ ಆದರೂ ಟೆಲಿಫೋನ್ ಬಿಲ್ ಕೊಡುವಂತಾದ್ದು ಸೂಕ್ತ, ಇದರಿಂದ ಅನೇಕ ಶಾಸಕರುಗಳಿಗೆ ಅನುಕೂಲ ವಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನನಗೆ ಪ್ರಿಯವಾಗಿರತಕ್ಕ ವಿಚಾರ ಅಬಕಾರಿ ವಿಚಾರ, ಇದರ ಬಗ್ಗೆ ಮಾತನಾಡುವುದಕ್ಕೆ ಬಹಳ ಸಂತೋಷವಾಗುತ್ತದೆ. ಮಾನ್ಯ ರಾಜಶೇಖರಮೂರ್ತಿಯವರು ನಗುವುದನ್ನು ನಾನು ಸದನಲ್ಲಿ ನೋಡಿದ್ದು ಮೊದಲನೇ ಸಾರಿ.

ಶ್ರೀ ವಾಟಾಳ್ ನಾಗರಾಜ್.—ಆಶ್ಚರ್ಯ ಅಂದರೆ, ಅದನ್ನು ಗಿನ್ನೀಸ್ ಬುಕ್‌ನಲ್ಲಿ ಹಾಕಬೇಕು.

೪-೧೫ ಪಿ. ಎಂ.

ಈ ವಿಚಾರದಲ್ಲಿ ನಾನು ಪ್ರಥಮವಾಗಿ ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರೊಳಗೆ ಹಿಂದು ಮುಂದು ನೋಡುವುದಿಲ್ಲ. ಒಳ್ಳೆಯ ಕೆಲಸ ನಡೆದರೆ, ಅದನ್ನು ಮೆಚ್ಚಬೇಕಾಗಿರತಕ್ಕಂತಾದ್ದು ಅದಕ್ಕೆ ಕೃತಜ್ಞತೆ ಸೂಚಿಸಬೇಕಾಗಿರತಕ್ಕಂತಾದ್ದು, ನನ್ನ ದೃಷ್ಟಿಯಿಂದ ಅಲ್ಲ. ಜನತೆಯ ದೃಷ್ಟಿಯಿಂದ ರಾಜ್ಯದದೃಷ್ಟಿಯಿಂದ ನನ್ನಕರ್ತವ್ಯಎಂದು ನಾನುಭಾವಿಸಿದ್ದೇನೆ. ಸರ್ಕಾರ ಈವಿಚಾರದಲ್ಲಿ ತೆಗೆದುಕೊಂಡಿರತಕ್ಕ ಕ್ರಮಕ್ಕೆ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಅಷ್ಟಕ್ಕೆ ಮುಗಿಯುವುದಿಲ್ಲ. ಇವೊತ್ತು ಮಾನ್ಯ ಮಂತ್ರಿಗಳು ಇಲ್ಲಿ ಪ್ರಶ್ನೆಗೆ ಉತ್ತರ ಕೊಟ್ಟಿರುವ ಪ್ರಕಾರ ಸುಮಾರು ೩೧೪ ಅಥವಾ ೩೧೫ ಕೋಟಿ ರೂಪಾಯಿಗಳು ಸಾರಾಯಿ ಬಾಬ್ತು ಒಂದರಲ್ಲೇ ಹೆಚ್ಚಿಗೆ ಆದಾಯ ಬಂದಿದೆ, ನನಗಂತೂ ಕೂಡ ಸಂತೋಷ. ಏಕೆಂದರೆ ಒಂದುಕಾಲದಲ್ಲಿ ಈಬಾಬಿನಲ್ಲಿ ಒಂದು ದಿವಸಕ್ಕೆ ಒಂದು ಕೋಟಿರೂಪಾಯಿಯಷ್ಟು ಹಣ ಸೋರಿ ಹೋಗುತ್ತಿದೆ ಎನ್ನತಕ್ಕದ್ದನ್ನು ನಾನು ಸಾರ್ವಜನಿಕವಾಗಿ ಹೇಳಿದ್ದು ಅಷ್ಟೆ. ಅಲ್ಲದೆ ಅದರಬಗ್ಗೆ ಯಾವ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಯಾರು ಯಾರಿಗೆ ಬರೆಯಲಿಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನೂ ಕೂಡ ನಾನು ಮಾಡಿದ್ದೇನೆ, ನಾನು ಆರ್ಥಿಕ ತಜ್ಞನಲ್ಲ ನಾನು ಒಬ್ಬಬ ಹಳ್ಳಿಯಿಂದ ಬಂದಿರತಕ್ಕ ಒಬ್ಬ ರೈತನ ಮಗ ಅಷ್ಟೆ. ಇದಕ್ಕೆ ಯಾವ ಥಿಂಕ್ ಟ್ಯಾಂಕ್ ಇದರ ಬಗ್ಗೆ ಹೇಳಿಲ್ಲ, ಈ ಬಾಬಿನಲ್ಲಿ ಯಾವರೀತಿ ಹಣ ಸೋರಿ ಹೋಗುತ್ತಿದೆ ಎಂದು ಯಾವ ಥಿಂಕ್‌ಟ್ಯಾಂಕ್ ಕೂಡ ಏನೂ ಹೇಳಲಿಲ್ಲ. ಈ ದೇಶದಲ್ಲಿ ಆರ್ಥಿಕ ತಜ್ಞರು ಇದ್ದಾರೆ, ಆ

ಆರ್ಥಿಕತಜ್ಞರು ಯಾರೂ ಈ ವಿಚಾರದಲ್ಲಿ ಅಷ್ಟು ಕರಾರುವಾಕ್ ಆಗಿ ಹೇಳಲಿಲ್ಲ, ಈ ಸಾರಾಯಿ ಜೊತೆಗೆ ಐಎಂಎಫ್‌ಎಲ್ ಸಹ ಸೇರಿಸಿದರೆ ಒಂದು ವರ್ಷದಲ್ಲಿ ೩೬೫ ಕೋಟಿ ರೂಪಾಯಿ ಹೋಗುತ್ತಿದೆ ಎಂದು ಹೇಳಿದ್ದೆ. ಅದಕ್ಕಿಂತ ಸ್ವಲ್ಪ ಮುಂದಕ್ಕೆ ಹೋಗುತ್ತದೆ, ಆ ಸಂದರ್ಭದಲ್ಲಿ ಇದನ್ನು ಕರಾರುವಾಕ್ಕಾಗಿ ಹೇಳಿದ್ದರೆ, ಅದು ನಾನು ಅಂತ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ ಮಾನ್ಯ ಸದಸ್ಯರುಗಳು ರಸ್ತೆಗಳ ಬಗ್ಗೆ ಹೇಳಿದ್ದಾರೆ, ಶಾಲೆಗಳ ಬಗ್ಗೆ ಹೇಳಿದ್ದಾರೆ, ಅನೇಕ ವಿಚಾರಗಳ ಬಗ್ಗೆ ಇಲ್ಲಿ ಚರ್ಚೆಯಾಗಿದೆ ಅದನ್ನು ಕಂಡಾಗ, ಉಪಾಧ್ಯಾಯರು ಇಲ್ಲದೇ ಇರತಕ್ಕ ಶಾಲೆಗಳನ್ನು ಕಂಡಾಗ, ಈ ಸೈಕಲ್ ಸಹ ಹೋಗದೆ ಇರತಕ್ಕ ರಸ್ತೆಗಳನ್ನು ಕಂಡಾಗ ರಿಪೇರಿ ಇಲ್ಲದ ಕೆರೆಗಳನ್ನು ಕಂಡಾಗ ವೃದ್ಧಾಪ್ಯವೇತನ ಕೊಡಲು ತಿಂಗಳುಗಟ್ಟಲೆ ಹಣ ಇಲ್ಲ ಎಂದು ಹೇಳಿದಾಗ, ರಾಜ್ಯಕ್ಕೆ ಬರಬೇಕಾದಂಥ ಹಣ ಎಲ್ಲಿ ಹೋಯಿತು ಎಂದು ಸಹಜವಾಗಿ ಯೋಚನೆಯನ್ನು ಮಾಡಬೇಕಾಗುತ್ತದೆ, ಆ ರೀತಿಯಲ್ಲಿ ಯೋಚನೆಯನ್ನು ಮಾಡುವಾಗ ನಮ್ಮ ಸ್ನೇಹಿತರ ಹತ್ತಿರ ಚರ್ಚೆ ಮಾಡುವಾಗ ಎಷ್ಟರಮಟ್ಟಿಗೆ ಈ ಬಾಬಿನಲ್ಲಿ ಹಣ ಸೋರಿ ಹೋಗುತ್ತಿದೆ ಎಂದು ನನ್ನ ಮಿತ್ರರ ಜೊತೆ, ಸ್ನೇಹಿತರ ಜೊತೆ ಚರ್ಚೆ ಮಾಡುವಾಗ ಈ ವಿಷಯ ಹೊರಕ್ಕೆ ಬಂತು. ಕಳೆದ ಆರು ವರ್ಷಗಳಲ್ಲಿ ೩೬೫ ಕೋಟಿ ರೂಪಾಯಿ ಲೆಕ್ಕದಲ್ಲಿ ಈಗ ನಾನು ೬೫ ಕೋಟಿ ರೂಪಾಯಿ ಬಿಟ್ಟು ಬಿಡಲಿಕ್ಕೆ ತಯಾರಾಗಿದ್ದೇನೆ. ಒಂದು ವರ್ಷಕ್ಕೆ ೩೦೦ ಕೋಟಿ ರೂಪಾಯಿ ಪ್ರಕಾರ ಲೆಕ್ಕ ಇಟ್ಟುಕೊಂಡರೆ ೬ ವರ್ಷಗಳಲ್ಲಿ ೧೮೦೦ ಕೋಟಿ ರೂಪಾಯಿ ಆಗುತ್ತದೆ. ಇಷ್ಟು ಹಣ ಬೊಕ್ಕಸಕ್ಕೆ ಬರಬೇಕಾದ್ದಂಥ ಹಣ ಎಲ್ಲಿ ಹೋಯಿತು ಇವೊತ್ತಿನದಿವಸ ಕಣ್ಣಿಗೆ ಕಾಣುವಂತಹದ್ದು ನಾನು ಏನು ಒಗಟು ಸಹ ಹೇಳುತ್ತಿಲ್ಲ. ಕಣ್ಣಿಗೆ ಕಾಣದ್ದು ಇಲ್ಲಿ ಹೇಳುತ್ತಿಲ್ಲ. ಆಧಾರ ಇಲ್ಲದೇ ಹೇಳುತ್ತಿಲ್ಲ. ಆಧಾರವನ್ನು ಇಟ್ಟುಕೊಂಡು ಇವೊತ್ತಿನದಿವಸ ಎಲ್ಲರ ಕಣ್ಣು ಮುಂದೆ ಇರತಕ್ಕಂಥ ವಿಚಾರವನ್ನು ಹೇಳುತ್ತಿದ್ದೇನೆ. ೧೮೦೦ ಕೋಟಿ ರೂಪಾಯಿ ಕಳೆದ ಆರು ವರ್ಷಗಳಲ್ಲಿ ಜನರಿಗೆ ಸೇರಬೇಕಾಗಿರತಕ್ಕ ಹಣ ಸರ್ಕಾರಕ್ಕೆ ಬಂದಿಲ್ಲ. ಇಂದು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ. ತಮಗೆ ಒಂದೇ ಒಂದು ಉದಾಹರಣೆ ಹೇಳಬೇಕೆಂದರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಒಂದು ಕಾಲೇಜಿಗೆ ಸಂಬಂಧಪಟ್ಟಂತೆ ಹೇಳಬೇಕಾದರೆ ಚಿಂತಾಮಣಿಯಲ್ಲಿ ಸರ್ಕಾರೀ ಕಾಲೇಜು ಇದೆ ಇವೊತ್ತು ನನ್ನ ಹತ್ತಿರ ಪಟ್ಟಿ ಇದೆ. ೨೩ ಜನ ಲೆಕ್ಚರರ್ಸ್ ಬೇಕಾಗಿದ್ದಾರೆ. ವಿದ್ಯಾರ್ಥಿಗಳು ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲದಂಥ ಕಾಲೇಜುಗಳಾಗಿವೆ. ಇವೊತ್ತು ಜೆಂಕ್ಷೀಟ್ ಹಾಕಿರತಕ್ಕ ಕಟ್ಟಡಗಳಲ್ಲಿ ಕಾಲೇಜುಗಳು ನಡೆಯುತ್ತಿವೆ. ಇದು ಅವಮಾನಕರ ಇಂತಹ ಪರಿಸ್ಥಿತಿಗೆ ನಮ್ಮ ರಾಜ್ಯವನ್ನು ದೂಡಿರತಕ್ಕಂತಾದ್ದಕ್ಕೆ ಮೂಲ ಎಲ್ಲಿದೆ ಅಂದರೆ. ಈ ಇಲಾಖೆಯಲ್ಲಿಯೇ ಮೂಲ ಇದೆ, ೧,೮೦೦ ಕೋಟಿ ರೂಪಾಯಿಯಷ್ಟು ಹಣ ರಾಜಕೀಯದಲ್ಲಿದ್ದವರು ಇದಕ್ಕೆ ಕಾರಣಕರ್ತರು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಅಧಿಕಾರಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಎಕ್ಸೈಸ್ ಇಲಾಖೆಗೆ ಸತತವಾಗಿ ನೀವು ಐ. ಎ. ಎಸ್. ಅಧಿಕಾರಿಗಳನ್ನು ಹಾಕಿದ್ದೀರಿ. ಅವರು ಏನು ಮಾಡಿದ್ದಾರೆ ? ಈ ಕೆಲಸವನ್ನು ಮಾಡುವುದಕ್ಕೆ ಐ. ಎ. ಎಸ್. ಅಧಿಕಾರಿಗಳೇ ಬೇಕೆ ? ಈ ಇಲಾಖೆಗೆ ಐ. ಎ. ಎಸ್, ಅಧಿಕಾರಿಗಳನ್ನು ಬಿಟ್ಟರೆ ಬೇರೆಯವರನ್ನು ಯಾರನ್ನೂ ಕೂಡ ಮುಖ್ಯಾಧಿಕಾರಿಗಳನ್ನಾಗಿ ಹಾಕಿಲ್ಲ. ನಮ್ಮ ರಾಜ್ಯದಲ್ಲಿ ಇರತಕ್ಕ ಐ. ಎ. ಎಸ್. ಅಧಿಕಾರಿಗಳ ವೃಂದ ಏನಿದೆ, ಅವರೆಲ್ಲರಿಗೂ ಅಪಮಾನವಾಗುವಂಥ ರೀತಿಯಲ್ಲಿ ಎಕ್ಸೈಸ್ ಇಲಾಖೆ ಕಳೆದ ಹಲವಾರು ವರ್ಷಗಳಿಂದ ಕೆಲಸಮಾಡಿದೆ. ೧೮೦೦ ಕೋಟಿ ರೂ. ಹಣ ಏನು ಹೋಗಿದೆ, ಅದರ ಬಗ್ಗೆ ತೀವ್ರ ತನಿಖೆಯಾಗಬೇಕು. ಆಗ ನಾನು ತಮಗೆ ಅಭಿನಂಧಿಸುತ್ತೇನೆ. ಒಂದು ವೇಳೆ ನೀವು ಈ ವಿಚಾರದಲ್ಲಿ ತನಿಖೆಯನ್ನು ನಡೆಸದಿದ್ದರೆ ಈ ಹಿಂದೆ ನಡೆದಿರತಕ್ಕಂಥ ಎಲ್ಲ ಪ್ರಕರಣಗಳನ್ನೂ ಮುಚ್ಚತಕ್ಕ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ ಇದರಲ್ಲಿ ನೀವೂ ಶಾಮೀಲಾಗುತ್ತೀರಿ ಎಂಬ ಆಪಾದನೆಯನ್ನು ನಿಮ್ಮ ಮೇಲೆ ನಾನು ಮಾಡಬೇಕಾಗುತ್ತದೆ. ಕೇವಲ ೫–೧೦ ಲಕ್ಷ ರೂಪಾಯಿಗಳಾಗಿದ್ದಿದ್ದರೆ ನಾನು ಅದರ ಬಗ್ಗೆ ಇಲ್ಲಿ ಮಾತನಾಡುತ್ತಿರಲಿಲ್ಲ ಕಳೆದ ೬ ವರ್ಷಗಳಲ್ಲಿ ಸುಮಾರು ೧೮೦೦ ಕೋಟಿ ರೂಪಾಯಿಗಳ ಮೋಸ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕದ್ದು ಹೋಗಿದೆ. ದೊಡ್ಡ ಮೋಸ ನಡೆದಿದೆ. ಇದು ಒಂದು ದೊಡ್ಡ ಸ್ಕ್ಯಾಂಡಲ್. ಇಂಥ ದರೋಡೆ ಪ್ರಪಂಚದಯಾವ ಮೂಲೆಯಲ್ಲಾದರೂ ಆಗಿದೆಯೇ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಇಡೀ ಪ್ರಪಂಚದಲ್ಲೇ ಇಂಥ ದರೋಡೆ ಎಲ್ಲೂ ಆಗಿಲ್ಲ. ಇದನ್ನು ತಾವು ತನಿಖೆ ನಡೆಸಲೇಬೇಕು. ತಪ್ಪಿತಸ್ಥರು ಅಧಿಕಾರದಲ್ಲಿ ಇಲ್ಲದಿರುವವರೂ ಇರಬಹುದು, ಅಧಿಕಾರದಲ್ಲಿ ಇರುವವರೂ ಇರಬಹುದು. ಆದರೆ ಈ ಬಗ್ಗೆ ತನಿಖೆಯನ್ನು ನಡೆಸಬೇಕಾದುದು, ಮತ್ತು ಅವರಿಗೆ ಶಿಕ್ಷೆಯನ್ನು ಕೊಡತಕ್ಕದ್ದು ಈ ದೇಶದ ಕಾನೂನು. That is the law of the land. If the law of the land demands that all persons responsible for swindling this Rs. 1800 crores, they most be punished.

ಶ್ರೀ ವಾಟಾಳ್ ನಾಗರಾಜ್.—ನೀವು ಎಷ್ಟು ವರ್ಷಗಳಕಾಲ ಮಂತ್ರಿಗಳಾಗಿದ್ದೀರಿ ?

ಶ್ರೀ ಸಿ. ಬೈರೇಗೌಡ.—ಅದಕ್ಕೆ ನಾನು ಜವಾಬ್ದಾರನಾಗಿದ್ದರೆ, ಮೊದಲನೆಯವನಾಗಿ ನಾನು ಆ ಶಿಕ್ಷೆಗೆ ಗುರಿಯಾಗುತ್ತೇನೆ. ನಾನೂ ಕೂಡ ಸುಮಾರು ೨೧–೨೨ ತಿಂಗಳಕಾಲ ಮಂತ್ರಿ ಆಗಿದ್ದೆ. ಒಂದುವೇಳೆ ನಾನೇನಾದರೂ ಅದಕ್ಕೆ ಜವಾಬ್ದಾರನಾಗಿದ್ದರೆ ಪ್ರಥಮ ಶಿಕ್ಷೆಗೆ ಗುರಿಯಾಗುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಾನು ಮಂತ್ರಿಯಾಗಿದ್ದಾಗ ಈ ವಿಚಾರವನ್ನು ಮಂತ್ರಿಮಂಡಲದಲ್ಲಿ ನಾನೇ ಚರ್ಚೆ ಮಾಡಬೇಕೆಂದು ಹೇಳಿದ್ದುಂಟು. ನಾನೇ ಮಂತ್ರಿಮಂಡಲದ ಸಭೆಯಲ್ಲಿ ಹೇಳಿದ್ದೇನೆ. ಆದರೆ ಅವತ್ತು ಮಂತ್ರಿಮಂಡಲ ನನ್ನ ಮಾತಿಗೆ ಬೆಲೆ ಕೊಡತಕ್ಕ ಪರಿಸ್ಥಿತಿಯಲ್ಲಿರಲಿಲ್ಲ. ನಂತರ ಮಂತ್ರಿ ಮಂಡಲದಲ್ಲಿ ಇದು ಚರ್ಚೆಮಾಡಿದಮೇಲೆ ಮಂತ್ರಿಮಂಡಲದ ಒಂದು ಉಪಸಮಿತಿಯನ್ನು ರಚನೆ ಮಾಡಿದರು. ಮೊಬಿಲೈಸೇಷನ್ ಆಫ್ ರಿಸೋರ್ಸಸ್ ಎಂದು ಒಂದು ಸಮಿತಿಯು ರಚನೆ ಆಯಿತು. ಆದರೆ ಆ ಸಮಿತಿ ಭೇಟಿಯೇ ಆಗಲಿಲ್ಲ. ನಾನು ಹೇಳಿದಂಥ ವಿಚಾರ ಅಲ್ಲಿ ಪರಿಶೀಲನೆಯೇ ಆಗಲಿಲ್ಲ. ಇದು ವಾಸ್ತವಾಂಶ. ಈ ವಿಚಾರವನ್ನು ನೆನಪು ಮಾಡಿಕೊಟ್ಟಿದ್ದಕ್ಕೆ ಮಾನ್ಯ ವಾಟಾಳ್ ನಾಗರಾಜ್ ರವರಿಗೆ ಅಭಿನಂದಿಸುತ್ತೇನೆ. ನಮ್ಮ ಶಾಸಕಾಂಗ ಪಕ್ಷದ ನಾಯಕರಿಗೆ ನಾನು ಒಂದು ಮಾತನ್ನು ಹೇಳಿದ್ದೆ. ನಾನು ಅವರಿಗೆ ಒಂದು ಲೆಕ್ಕವನ್ನು ಕೊಟ್ಟೆ. ಯಾವ ಯಾವ ಡಿಸ್ಟಿಲರಿಗಳಲ್ಲಿ ಎಷ್ಟೆಷ್ಟು ಲೀಟರ್ಸ್ ಸೆಕೆಂಡ್ಸ್ ರೂಪದಲ್ಲಿ ಹೊರಗಡೆ ಹೋಗುತ್ತಿದೆ ಎಂಬುದನ್ನು ಹೇಳಿದೆ. ತಮಗೆ ತಾಕತ್ತು ಇದ್ದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳಿ ಎಂದು ಹೇಳಿದೆ. ಆದರೆ ಅವರು ತಾಕತ್ತು ತೋರಿಸಿದ್ದು ಯಾರಮೇಲೆ ಅಂದರೆ ನನ್ನಮೇಲೆ ನನ್ನ ಬಗ್ಗೆ ತನಿಖೆಯಾಯಿತು. ನನಗೆ ಎಷ್ಟು ಆಸ್ತಿ ಇದೆ, ಭೂಮಿ ಎಷ್ಟಿದೆ ಎಂದು ತನಿಖೆಯಾಯಿತು. ನಮ್ಮಲ್ಲಿ ಒಂದು ಗಾದೆ ಇದೆ. ಬೆಟ್ಟ ಅಗೆದು ಇಲಿ ಹಿಡಿದರು ಅಂತ. ಈ ತನಿಖೆಯ ಸಾರಾಂಶ ಏನಾಯಿತು ಅಂದರೆ. ಬೆಟ್ಟವನ್ನು ಅಗೆದಾಗ ಇಲಿಯೂ ಕೂಡ ಸಿಗಲಿಲ್ಲ. ಇಲಿ ಸಿಕ್ಕದಿದ್ದರೆ ಹಾಳಾಗಿ ಹೋಗಲಿ, ಅದರ ಬಾಲವೂ ಸಹ ಸಿಕ್ಕಲಿಲ್ಲ. ಇದು ಅದರ ಪ್ರತಿಫಲ. ನಾನು ಇದರಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ೧೮೦೦ ಕೋಟಿ ರೂಪಾಯಿಗಳ ದುರ್ವ್ಯವಹಾರ ಏನು ಅವತ್ತು ನಡೆದಿದೆ. ಅದರಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳೂ ಮತ್ತು ಅಧಿಕಾರೇತರರು ಶಾಮೀಲಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ತೀವ್ರ ತನಿಖೆಯನ್ನು ಮಾಡಿಸಬೇಕು. ವೃದ್ಧಾಪ್ಯ ವೇತನ ಹಳ್ಳಿಯ ಜನರಿಗೆ ಏತಕ್ಕೆ ಸಿಕ್ಕಲಿಲ್ಲ ಎಂಬುದು ಅವರಿಗೂ ಗೊತ್ತಾಗಬೇಕು. ತಮಗೆ ಹೇಳುವುದಾದರೆ ಹಳ್ಳಿಶಾಲೆಗಳಲ್ಲಿ ಇವತ್ತು ಉಪಾಧ್ಯಾಯರೇ ಇಲ್ಲ. ಇದೂ ಕೂಡ ಏತಕ್ಕೆ ಎಂಬುದು ಜನರಿಗೆ ಗೊತ್ತಾಗಬೇಕು. ನನ್ನ ಕ್ಷೇತ್ರದಲ್ಲಿ ಹಳ್ಳಿಯ ಜನರೇ ದುಡ್ಡನ್ನು ವಸೂಲ್ಮಾಡಿಕೊಂಡು ಒಬ್ಬೊಬ್ಬ ಉಪಾಧ್ಯಾಯರಿಗೆ ೧೦೦೦ ರೂ.ಗಳಂತೆ ಸಂಬಳವನ್ನು ಕೊಡುತ್ತಿದ್ದಾರೆ. ೫೬ ಹಳ್ಳಿಗಳಲ್ಲಿ ಉಪಾಧ್ಯಾಯರಿಲ್ಲದೆ ಗ್ರಾಮಸ್ಥರೇ ತಮ್ಮ ವಂತಿಗೆಯ ಮೂಲಕ ಉಪಾಧ್ಯಾಯರುಗಳನ್ನು ನೇಮಿಸಿಕೊಂಡು ಆ ಉಪಾಧ್ಯಾಯರುಗಳಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಹಳ್ಳಿಯವರೇ ಕೊಟ್ಟು ನೇಮಿಸಿಕೊಳ್ಳತಕ್ಕಂಥ ಪರಿಸ್ಥಿತಿಗೆ ಹೋಗಿದೆ. ಇವತ್ತು ನನ್ನ ಕ್ಷೇತ್ರದಲ್ಲಿರ ತಕ್ಕಂಥವರಿಗೆ ಇದು ಗೊತ್ತಾಗಬೇಕು. ಏತಕ್ಕೆ ಈ ಪರಿಸ್ಥಿತಿಗೆ ಬಂತು ಎಂದು. ಮರದ ಕೆಳಗಡೆ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದ್ದಾರೆ. ಏತಕ್ಕೆ ಈರೀತಿ ಶಾಲೆಗಳನ್ನು ನಡೆಸುತ್ತಿದ್ದಾರೆಂಬುದು ಜನರಿಗೆ ಗೊತ್ತಾಗಬೇಕು. ಇದು ಡೆಲ್ಲಿಯಲ್ಲಿ ಕುಳಿತಿರುವವರಿಗೆ ಗೊತ್ತಾಗಬೇಕಾಗಿಲ್ಲ. ಆದರೆ ಜನ ನಾಯಕರಿಗೆ ಗೊತ್ತಾಗಬೇಕಾಗಿಲ್ಲ. ಈ ವಿಚಾರ ಹಳ್ಳಿಯಲ್ಲಿರುವ ಜನರಿಗೆ ತಿಳಿಯಬೇಕು. ಈ ವಿಚಾರ ಸಾರ್ವಜನಿಕರಿಗೆ ತಿಳಿಯಬೇಕಾದ್ದು ಬಹಳ ಅವಶ್ಯಕತೆ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ಹಿಂದಿನ ಜನನಾಯಕರು ದುಡ್ಡು ಇಲ್ಲದಂತೆ ಮಾಡಿದ್ದಾರೆ. ಅದು ಜನತೆಗೆ ಗೊತ್ತಾಗಬೇಕು.

ಶ್ರೀ ಸಿ. ಬೈರೇಗೌಡ.—ಅದೆಲ್ಲಾ ಜನರಿಗೆ ಗೊತ್ತಾಗುತ್ತದೆ. ಪ್ರಾರಂಭದಲ್ಲಿ ಒಂದು ಕೋಟಿ ರೂಪಾಯಿ ಎಂದು ಹೇಳಿದೆ. ಎಲ್ಲ ಪತ್ರಿಕೆಗಳವರೂ ಕೂಡ ಒಂದು ಕೋಟಿ ರೂಪಾಯಿ ಹೋಗುತ್ತಿದೆ. ಎಂದು ಹೇಳಿದರು. ಇದು ಪತ್ರಿಕೆಗಳ ಮೂಲಕ ಹೇಳಿದ ಲೆಕ್ಕ. ನಾನೇ ಕುಳಿತು ಬರದಂಥ ಲೆಕ್ಕದ ಪ್ರಕಾರ ಇಪತ್ತು ಎರಡು ಕೋಟಿ ರೂಪಾಯಿಗಳು ಹೋಗುತ್ತಿದೆ ಎನ್ನುವ ಮಾತನ್ನು ಹೇಳಿದೆ ಆನಂತರ ಅದನ್ನೇ ಎಲ್ಲ ಪತ್ರಿಕೆಗಳವರು ಎರಡು ಕೋಟಿ ರೂಪಾಯಿಗಳೆಂದು ಹೇಳಿದರು. ಆದರೆ ಈ ವಿಚಾರದಲ್ಲಿ ಯಾವ ಪತ್ರಿಕೆಯವರೇ ಆಗಲಿ ಆಕಡೆ ಕುಳಿತವರೇ ಆಗಲಿ, ಈ ಕಡೆ ಕುಳಿತವರೇ ಆಗಲಿ ಯಾರೂ ಕೂಡ ತಲೆ ಕೆಡೆಸಿಕೊಳ್ಳುವುದಕ್ಕೆ ಹೋಗಲಿಲ್ಲ. ಇಲ್ಲಿ ಕುಳಿತಿರುವ ನಮ್ಮ ಸ್ನೇಹಿತರು ಈ ವಿಚಾರದಲ್ಲಿ ಚಕಾರ ಶಬ್ದ ಎತ್ತಲಿಕ್ಕೆ ಹೋಗಲಿಲ್ಲ. ನಾನು ಅದಕ್ಕಿಂತ ಮುಂದೆ ಹೋಗದೆ ಇಷ್ಟು

ಮಾತ್ರ ಹೇಳುತ್ತಿದ್ದೇನೆ. ಈಗ ಏನು ನಡೆಯುತ್ತಿದೆ ಎನ್ನುವುದು ಬಹಳ ಮುಖ್ಯ. ಈ ಎಕ್ಸೈಸ್ ಇಲಾಖೆಯಲ್ಲಿ ಇವತ್ತಿಗೂ ಕೂಡ ಕೇವಲ ಮಾಮೂಲಿಯಮೇಲೆ ನಡೆಯುತ್ತಿದೆ. ಇದು ಕಾನೂನು ಬದ್ಧವಾಗಿ ನಡೆಯುತ್ತಿರತಕ್ಕಂಥ ಇಲಾಖೆಯಲ್ಲ. ಇದರ ಬಗ್ಗೆ ಒಂದು ದೊಡ್ಡ ಪುಸ್ತಕವಿದೆ. ಎಕ್ಸೈಸ್ ಮ್ಯಾನ್ಯುಯಲ್ ಎಂದು. ಆ ಪುಸ್ತಕದ ಪ್ರಕಾರ ನಿಮ್ಮ ಎಕ್ಸೈಸ್ ಇಲಾಖೆಯು ನಡೆಯುತ್ತಿಲ್ಲ. ಇದು ನಡೆಯುತ್ತಿರತಕ್ಕಂಥದ್ದು ಮಾಮೂಲಿಗಳ ಮೇಲೆ. ಇದರ ಬಗ್ಗೆ ವಿವರಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ, ಕೆಳಗಡೆಯಿಂದ ಮೇಲುಗಡೆಯವರೆಗೆ ಮಾಮೂಲಿ. ಇದು ಮಾಮೂಲಿಯ ಮೇಲೆ ನಡೆಯುತ್ತಿರತಕ್ಕಂಥ ಇಲಾಖೆ. ಆಗಲೇ ಮಾತನಾಡುತ್ತಾ ಹೇಳಿದರು. ಈ ಮೊಲಾಸಿಸ್‌ಗೆ ಸಂಬಂಧಪಟ್ಟಂತೆ ಎಲ್ಲೂ ಕೂಡ ತೂಕ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಎಷ್ಟು ತಯಾರಾಗುತ್ತಿದೆ, ಎಷ್ಟು ಹೋಗುತ್ತಿದೆ ಎನ್ನುವ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಏತಕ್ಕೆಂದರೆ ಮೂಲ ಅಲ್ಲಿಂದಲೇ ಬರುವುದು. ಇದೆನ್ನು ಶುಗರ್ ಫ್ಯಾಕ್ಟರಿಯವರು ಒಂದು ಹಳ್ಳಕ್ಕೆ ಬಿಟ್ಟು ಬಿಡುತ್ತಾರೆ. ಕೆಲವುಕಡೆ ಟ್ಯಾಂಕ್ ಇರುತ್ತದೆ. ಆ ಟ್ಯಾಂಕ್‌ನಲ್ಲಿ ಎಷ್ಟಿದೆ, ಏನಿರುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ಅದರಲ್ಲಿ ಏನೇನು ಬಿದ್ದಿರುತ್ತದೆಂಬುದು ಹೇಳುವುದಕ್ಕಾಗುವುದಿಲ್ಲ. ಅದನ್ನು ನೋಡುವುದಕ್ಕೆ ಒಂದು ರೀತಿ ಅಸಹ್ಯವಾಗಿರುತ್ತದೆ. ಎಲ್ಲೂ ಕೂಡ ಮೊಲಾಸಿಸ್ ಕರಾರುವಾಕ್ಕಾಗಿ ಅಳತೆ ಮಾಡುವ ವ್ಯವಸ್ಥೆಯಾಗಲಿ ತೂಕ ಮಾಡುವ ವ್ಯವಸ್ಥೆಯಾಗಲಿ ಇಲ್ಲ. ಈ ಬೇಸಿಸ್ ರಾಮೆಟೀರಿಯಲ್ ಅನ್ನು ಮುಂದೆ ಡಿಸ್ಟಿಲ್ ಮಾಡಿದಾಗ ಸ್ಪಿರಿಟ್ ಆಗುತ್ತದೆ. ಅಲ್ಲಿಂದ ಪ್ರಾರಂಭವಾಗುತ್ತದೆ. ಹಣ ಸೋರಲಿಕ್ಕೆ ಮೈ ಶುಗರ್ ಫ್ಯಾಕ್ಟರಿಯಲ್ಲಿ ಮಾತ್ರ, ಕರಾರುವಾಕ್ ಆಗಿ ಲೆಕ್ಕವನ್ನಿಡುತ್ತಾರೆ. ಬೇರೆ ಶುಗರ್ ಫ್ಯಾಕ್ಟರಿಯವರು ಯಾರು ಲೆಕ್ಕವನ್ನಿಡುವುದಾಗಲಿ, ಅಕೌಂಟ್ ಮಾಡುವುದಾಗಲಿ ಇವತ್ತಿಗೂ ಕೂಡ ಇಲ್ಲ. ಆದ್ದರಿಂದ ಈ ವಿಚಾರವನ್ನು ಸರ್ಕಾರದ ಗಮನಕ್ಕೆ

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ತರುತ್ತಿದ್ದೇನೆ. ಅಲ್ಲಿಂದ ಇದು ಒಂದು ರೆಕ್ಟಿಫೈಡ್ ಸ್ಪಿರಿಟ್ ಆಗುತ್ತದೆ. ಮಂಡ್ಯದಲ್ಲಿರತಕ್ಕ ಶುಗರ್ ಫ್ಯಾಕ್ಟರಿಯಲ್ಲಿ ಸ್ಪಿರಿಟ್ ತಯಾರಿಸುತ್ತಾರೆ, ಅರೇಕಾ ತಯಾರಾಗುತ್ತದೆ. ಆ ವಿಚಾರ ಬೇರೆ. ಅಲ್ಲಿ ಈ ತರಹದ ಒಂದೆರಡು ಡಿಸ್ಟಿಲರಿಗಳನ್ನು ಬಿಟ್ಟರೆ ಉಳಿದದ್ದು ಕೃಷ್ಣನ ಲೆಕ್ಕ. ಮಾನ್ಯ ಅಧ್ಯಕ್ಷರು ನನ್ನ ಲೆಕ್ಕ ಎಲ್ಲಿ ಬರುತ್ತದೆಂದು ಕೇಳಬೇಡಿ.

ಅಧ್ಯಕ್ಷರು.—ನೀವು ಹೇಳುತ್ತಿರುವುದು ಶ್ರೀಕೃಷ್ಣನಿಗೆ.

ಶ್ರೀ ಸಿ. ಬೈರೇಗೌಡ.—ಇದು ಆ ಲೆಕ್ಕ. ಅದಕ್ಕೆ ಹೇಳಿದ್ದು ಈ ಇಲಾಖೆ ಯಾವ ಮಾದರಿಯಲ್ಲಿ ನಡೆಯುತ್ತಿದೆ ಎಂದು. ಡಿಸ್ಟಿಲರಿಗಳಲ್ಲಿ ಎಷ್ಟು ಕರೆಂಟ್ ಖರ್ಚಾಗುತ್ತದೆ ಕಲ್ಲಿದ್ದಲು ಎಷ್ಟು ಖರ್ಚಾಗುತ್ತದೆಂದು ಲೆಕ್ಕ ಸಿಗುವುದಕ್ಕೆ ಸಾಧ್ಯತೆ ಇದೆ. ಅಲ್ಲಿ ಕರೆಂಟ್ ಎಷ್ಟು ಕದಿಯುತ್ತಾರೆಂಬುದನ್ನು ನೋಡಿ.

ಅಧ್ಯಕ್ಷರು.—ಕರೆಂಟ್ ಕದಿಯುತ್ತಾರಲ್ಲ ಆದಕ್ಕೆ ಆಲ್ಟರ್‌ನೇಟಿವ್ ಸಲ್ಯೂಷನ್ ಏನಾದರು ಹೇಳಿ.

ಶ್ರೀ ಸಿ. ಬೈರೇಗೌಡ.—ಆ ಇಲಾಖೆ ಬೇಡಿಕೆಗಳು ಚರ್ಚೆ ಬಂದಾಗಲೇ ಹೇಳಿದ್ದೆ. ಎರಡು ಕಡೆ ಮೀಟರ್‌ಗಳನ್ನು ಹಾಕಬೇಕು. ಪ್ರಿಮಿಸಿಸ್‌ನಲ್ಲಿ ಒಂದು, ಇನ್ನೊಂದು ನಿಮ್ಮ ಕಸ್ಟಡಿಯಲ್ಲಿ ಹಾಕಿ. ಅದು ಪೋಲ್ ಮೇಲೆ ಇರಬೇಕು. ಅಧಿಕಾರಿಗಳು ಬರುತ್ತಾರೆಂದರೆ ಪುನಃ ಸರಿಪಡಿಸುವುದಕ್ಕೆ ಅವಕಾಶ ನಿಲ್ಲದ ರೀತಿಯಲ್ಲಿ ಬೇರೆ ಕಡೆ ಮೀಟರ್ ಇಡಬೇಕು. ಇದನ್ನು ಡಿಸ್ಟಿಲರಿಗಳಿಗೆ ಮಾತ್ರ ನಾನು ಹೇಳುತ್ತಿಲ್ಲ, ಎಲ್ಲಾ ಕನ್‌ಸ್ಯೂಮರ್‌ಗಳಿಗೂ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಆಗ ಈ ಕದಿಯತಕ್ಕ ವ್ಯವಸ್ಥೆಯನ್ನು ನಿಲ್ಲಿಸುವುದಕ್ಕೆ ಅವಕಾಶ ಆಗುತ್ತದೆ. ಆಗಲೂ ಇದು ಪೂರ್ತಿ ನಿಲ್ಲುತ್ತವೆಂದು ಹೇಳುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಬಹಳ ಜನ ಜನರೇಟರ್‌ಗಳನ್ನು ಉಪಯೋಗಿಸುತ್ತಾರೆ.

ಶ್ರೀ ಸಿ. ಬೈರೇಗೌಡ.—ದೊಡ್ಡ ದೊಡ್ಡ ಉದ್ದಿಮೆಗಾರರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜನರೇಟ್‌ಗಳನ್ನು ಇಟ್ಟಿದ್ದಾರೆ ನಿಜ. ಆದರೆ ಪ್ರತಿಯೊಂದಕ್ಕೂ ಮಿತಿ ಇರುತ್ತದೆ. ಮಿತಿ ಮೀರಿದ ಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಮಾಡಬೇಕೆಂದರೆ ಏನು ಬೇಕಾದರೂ ಮಾಡಬಹುದು. ಈ ಕೆಲವು ವಿಧಾನಗಳನ್ನು ಜಾರಿಗೆ ತರುವುದರಿಂದ ಸ್ವಲ್ಪಮಟ್ಟಿಗಾದರೂ ಪರಿಣಾಮ

ಬರುತ್ತದೆ, ನನಗೆ ಬರತಕ್ಕ ಆದಾಯ ಜಾಸ್ತಿ ಆಗಿ, ಸೋರಿಕೆ ಕಡಿಮೆಯಾಗುತ್ತದೆಂದು ಹೇಳುತ್ತೇನೆ. ಇಲ್ಲಿ ಒಂದು ಮೆಚ್ಚಿಗೆ ಮಾತನ್ನು ಹೇಳುತ್ತೇನೆ. ಐ ಎಂ ಎಫ್ ಎಲ್. ನಲ್ಲಿ ಸಾಕಷ್ಟು ಸೆಕೆಂಡ್ಸ್ ಬರತಕ್ಕದ್ದು ಈಗ ನಿಂತಿದೆ. ಆದರೆ ಆಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಹೊರಗಡೆಯಿಂದ ಸಾಕಷ್ಟು ಬರುತ್ತಿದೆ. ನಾನು ಒಂದು ಸಾರಿ ಇದರ ಬಗ್ಗೆ ಕರಾರುವಕ್ಕಾಗಿ ಲೆಕ್ಕ ಲೆಕ್ಕ ಕೊಡುತ್ತೇನೆಂದು ಹೇಳಿದ್ದೆ. ಆದರೆ ಅದನ್ನು ಇನ್ನೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಕೈಯಲ್ಲಿ ಅದು ಇನ್ನೂ ಸಾಧ್ಯವಾಗಿಲ್ಲ. ಆದರೆ ಕೆಲವು ಕಡೆಯಿಂದ ಲೇಬಲ್ಸ್ ಮಾತ್ರ ತಂದಿದ್ದೇನೆ. ಬಾಟಲ್ಸ್ ಈ ಮನೆಗೆ ತರಬಾರದೆಂದು ಲೇಬಲ್ಸ್ ಮಾತ್ರ ತಂದಿದ್ದೇನೆ. ಡಾಕ್ಟರ್ಸ್ ಇಂಪೀರಿಯಲ್ ಬ್ರಾಂಡಿ, ಇದು ನಮ್ಮ ರಾಜ್ಯದಲ್ಲಿ ಅಪ್ರೂವ್ಡ್ ಅಲ್ಲ. ಸಾಮಾನ್ಯವಾಗಿ ಅದರ ಮೇಲೆ ನಾಟ್ ಫಾರ್ ಸೇಲ್ ಎಂದು ಹಾಕುತ್ತಾರೆ. ಪ್ರತಿ ರಾಜ್ಯದಲ್ಲೂ ಬ್ರಾಂಡ್ ಲೇಬಲ್ ಅನ್ನು ಅಪ್ರೂವ್ ಮಾಡಬೇಕಾಗುತ್ತದೆ. ಆದರೆ ಇದು ಆಗಿಲ್ಲ. ಡಾಕ್ಟರ್ಸ್ ಪೀಸಾ ಬ್ರಾಂಡಿ, ಇದು ಗೋವಾದಲ್ಲಿ ತಯಾರಾಗತಕ್ಕದ್ದು. ಇದು ನಮ್ಮ ರಾಜ್ಯದಲ್ಲಿ ಅಪ್ರೂವ್ಡ್ ಬ್ರಾಂಡ್ ಅಲ್ಲ. ರಾಯಲ್ Scotch Whisky, ಶಶಿ ಡಾಕ್ಟರ್ಸ್ ಬ್ರಾಂಡಿ ಅನ್ನು ಈ ಕಂಪೆನಿಯವರು ತಯಾರಿಸಿ ನಮ್ಮ ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದಕ್ಕೂ ಅಪ್ರೂವಲ್ ಇಲ್ಲ. Doctor Charles Brandy, Distilled, filled and bottled by Sunny Gold, for sale in Mahe only. Doctors Select Brandy, by Jupiter Industries, Daman. ಇಂಥದ್ದು ಸಾಕಷ್ಟು ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಮಾರಾಟವಾಗುತ್ತಿದೆ. Doctor's Select Brandy, ಇದೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಮಾರಾಟವಾಗುತ್ತಿದೆ. ಬ್ಯಾಚ್ ನಂಬರ್ ಎಲ್ಲಾ ಇದೆ. ಆದರೆ ಆ ವಿವರಗಳನ್ನು ಹೇಳುವುದಿಲ್ಲ. Jupiter Industries Daman, ಎಂದು ಇದೆ, ಇದು ಏಪ್ರಿಲ್ ೧೯೮೦ರಲ್ಲಿ ಆಗಿರುವುದು. ಲೇಬಲ್ ಮೇಲೆ ಬ್ಯಾಚ್ ನಂಬರ್ ಇದೆ, ಒಂದು ಬ್ಯಾಚ್ ನಂಬರ್ ೧೭೪. ಇನ್ನೊಂದು ಬ್ಯಾಚ್ ನಂಬರ್ ೧೭೭. ಎಷ್ಟು ಪ್ರಮಾಣದಲ್ಲಿ ಹೀಗೆ ಬರುತ್ತಿದೆ ಎಂಬುದಕ್ಕೆ ಉದಾಹರಣೆಯಾಗಿ ಹೇಳುತ್ತಿದ್ದೇನೆ ಬಹಳ ದೊಡ್ಡ ಪ್ರಮಾಣದಲ್ಲೇ ಬರುತ್ತಿದೆ ಎಂಬುದು ಇದರಿಂದ ನಮಗೆ ತಿಳಿಯುತ್ತದೆ. Haywards Fine Whisky Not for sale in Maharashtra ಇದು ಮಹಾರಾಷ್ಟ್ರದಲ್ಲಿ ತಯಾರಾಗತಕ್ಕದ್ದು. ಇದೂ ಕೂಡ ಅಪ್ರೂವ್ಡ್ ಅಲ್ಲ. Shaw Wallace ಇದೂ ಕೂಡ Old Monk Dry XXX rum, not for sale in Madhya Pradesh ಅಂದರೆ ಅಲ್ಲಿ ತಯಾರಾಗುತ್ತಿದೆ. ಇದು ಇಲ್ಲಿ ಮಾರಾಟವಾಗುತ್ತಿದೆ. ಕೇವಲ ಒಂದೆರಡು ಸ್ಯಾಂಪಲ್ ತರುವುದಕ್ಕೆ ನನಗೆ ಸಾಧ್ಯವಾಯಿತು. ಅಂದರೆ ಈಗಲೂ ಕೂಡ ದೊಡ್ಡ ಪ್ರಮಾಣದಲ್ಲಿ ಹೊರಗಡೆಯಿಂದ ಲಿಕ್ಕರ್ಸ್ ಬರುತ್ತಿದೆ. ೩೧೪-೩೧೫ ಕೋಟಿ ರೂಪಾಯಿ ಎಂದು ಏನು ಹೇಳುತ್ತಿದ್ದಾರೆ, ಈ ಹಣ ಇನ್ನೂ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಅರಾಕ್ ಬಗ್ಗೆ ನಾನು ಹೇಳಬೇಕಾಗಿದೆ. ಕಾರಣ ಏನೆಂದರೆ ನನ್ನ ಅನೇಕ ಸ್ನೇಹಿತರು ಏನನ್ನು ನಿನ್ನ ಕಾಟದಿಂದ ೧೦ ರೂಪಾಯಿ ೧೨ ರೂಪಾಯಿಗೆ ಒಂದು ಬಾಟಲ್ ರಮ್ ಸಿಗುತ್ತಿದ್ದುದು ಈಗ ೨೫-೨೪ ರೂಪಾಯಿ ಆಗಿದೆ ಎಂದು ಹೇಳುತ್ತಾರೆ. ರಮ್‌ಗೂ ಸಾರಾಯಿಗೂ ಹತ್ತಿರ ಆಗಿದೆ. ಈಗ ರಮ್ ಬೆಲೆ ಜಾಸ್ತಿಯಾಗಿರುವುದರಿಂದ ರಮ್ ಬಿಟ್ಟು ಸಾರಾಯಿ ಕುಡಿಯುವುದಕ್ಕೆ ಹೋಗಬೇಕು ಎಂಬ ಮಾತನ್ನು ಹೇಳಿದರು. ಆದ್ದರಿಂದ ಸಾರಾಯಿ ಉಪಯೋಗಿಸತಕ್ಕವರು ಜಾಸ್ತಿಯಾಗಿದ್ದಾರೆ. ಇದು ಬೆಂಗಳೂರಿನದ್ದು ಮಾತ್ರ ನಾನು ಹೇಳುತ್ತಿದ್ದೇನೆ, ಇದು ಬೃಹದಾಕಾರವಾದ ವ್ಯವಸ್ಥೆಯಾಗಿರುವುದರಿಂದ ಎಲ್ಲಾ ತಿಳಿದುಕೊಳ್ಳುವುದಕ್ಕೆ ನನಗೆ ಸಾಧ್ಯವಿಲ್ಲ. ಬೆಂಗಳೂರು ಒಂದರಲ್ಲೇ ನನ್ನ ಅಂದಾಜಿನ ಪ್ರಕಾರ ಹಿಂದೆ ಎಷ್ಟು ಖರ್ಚಾಗುತ್ತಿತ್ತು, ಈಗ ಎಷ್ಟು ಒಂದು ತಿಂಗಳಿಗೆ ಖರ್ಚಾಗುತ್ತಿದೆ ಅಂದರೆ ಹಿಂದೆ ೬.೫ ರಿಂದ ೭.೫ ಲಕ್ಷ ಲೀಟರ್. ಇದು ನನ್ನ ಲೆಕ್ಕದಲ್ಲಿ. ಆದರೆ ನಿಮ್ಮ ಲೆಕ್ಕದಲ್ಲಿ ಕಮ್ಮಿ ತೋರಿಸುತ್ತಾರೆ. ಅದಕ್ಕೆ ಆಮೇಲೆ ಬರುತ್ತೇನೆ. ಕನ್‌ಸಂಪ್‌ಷನ್ ತೋರಿಸಬೇಕು ಎಂಬುದು ಕಾನೂನಿನಲ್ಲಿದೆ. ಎಷ್ಟು ಅಂಗಡಿಗಳಲ್ಲಿ ತೋರಿಸಿದ್ದಾರೆ ಎಂಬುದನ್ನು ತಾವು ಹೇಳಬೇಕು. ಆದರೆ ಬೆಂಗಳೂರಿನಲ್ಲಿ ಆರ... ರೆ ಲಕ್ಷದಿಂದ ೭ ಲಕ್ಷ ಲೀಟರ್‌ವರೆಗೆ ಹಿಂದೆ ಖರ್ಚಾಗುತ್ತಿತ್ತು. ಈಗ ಅದರ ಎರಡರಷ್ಟಾಗಿದೆ. ೧೪ರಿಂದ ೧೫ ಲಕ್ಷ ಲೀಟರ್ ಸಾರಾಯಿ ಬೆಂಗಳೂರಿನಲ್ಲಿ ಇವತ್ತಿನ ದಿವಸ ಖರ್ಚಾಗುತ್ತಿದೆ. ವಾಸ್ತವವಾಗಿ ತೋರಿಸತಕ್ಕದ್ದು ಕೇವಲ ೮ರಿಂದ ೮.೬ ಲಕ್ಷ ಲೀಟರ್ ಮಾತ್ರ. ಬೆಂಗಳೂರು ಒಂದರಲ್ಲೇ ೪ ರಿಂದ ೫ ಲಕ್ಷ ಲೀಟರ್ ಸಾರಾಯಿ ಅನ್‌ಅಕೌಂಟೆಡ್ ಆಗಿ ಖರ್ಚಾಗುತ್ತಿದೆ. ಸೆಕೆಂಡ್ಸ್ ಎಂಬುದು ನಡೆಯುತ್ತಿದೆ. ಅದು ಯಾವ ತರಹ ಸೆಕೆಂಡ್ಸ್ ಅಂದರೆ, ರೆಕ್ಟಿಫೈಡ್ ಸ್ಪಿರಿಟ್ ತಯಾರಾಗುತ್ತದೆ. ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ಗೆ ಒಂದೂವರೆ ಲೀಟರ್ ನೀರು ಬೆರೆಸಿದರೆ ೩೫ ಯು.ಪಿ. ಅರಾಕ್ ಆಗುತ್ತದೆ. ಅದು ನಾರ್ಮಲ್. ಇದು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ಅದು ಎಲ್ಲಿಂದ

ಬರುತ್ತದೆ ಎಂಬುದನ್ನು ಆಮೇಲೆ ಹೇಳುತ್ತೇನೆ. ಈಗ ಸಾರಾಯಿಗೆ ಸಂಬಂಧಿಸಿದ್ದುದ್ದನ್ನು ಮಾತ್ರ ಹೇಳುತ್ತಿದ್ದೇನೆ. ಇದೂ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟವಾಗುತ್ತಿದೆ. ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನ ಬೆಲೆ ೨೨ ರೂಪಾಯಿ ಇದೆ, ಅದು ಧಾರಾಳವಾಗಿ ಮಾರಾಟವಾಗುತ್ತದೆ. ಅದರ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ರೆಕ್ಟಿಫೈಡ್ ಸ್ಪಿರಿಟ್ ಎಷ್ಟು ಬೇಕಾದರೂ ಸಿಗುತ್ತದೆ. ಒಂದು ಲೀಟರ್ ಅಸಲೀ ರೆಕ್ಟಿಫೈಡ್ ಸ್ಪಿರಿಟ್‌ಗೆ ಮೂರು ಮೂರುವರೆ ಲೀಟರ್‌ವರೆಗೆ ನೀರು ಬೆರೆಸುತ್ತಾರೆ. ಆಗ ಅದು ಮೂರುವರೆ ನಾಲ್ಕು ಲೀಟರ್ ಸಾರಾಯಿ ಆಗುತ್ತದೆ. ಒಂದು ಲೀಟರ್ ಸಾರಾಯಿ ಬೆಲೆ ಎಷ್ಟು ನಿಗಧಿ ಪಡಿಸಿದ್ದಾರೆಂದರೆ ೫೫ ರೂಪಾಯಿಗಳು ಇರಬೇಕು ಎಂದು, ಅದು ಎಷ್ಟಿದೆಯೋ ಸರಿಯಾಗಿ ನನಗೆ ಗೊತ್ತಿಲ್ಲ. ಅದು ಅಪ್ರಕೃತ. ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ಗೆ ೨೨ ರೂಪಾಯಿ ಅಸಲು ಬೆಲೆ, ಅದಕ್ಕೆ ಮೂರು ಲೀಟರ್ ನೀರು ಸೇರಿಸಿದರೆ ನೂರು ರೂಪಾಯಿ ಲಾಭ ಸಿಗುತ್ತದೆ. ಮೂರು ಲೀಟರ್ ಸಾರಾಯಿಯ ಬೆಲೆ ೧೫೦ ರೂಪಾಯಿ ಆಗುತ್ತದೆ. ಖರ್ಚೆಲ್ಲಾ ತೆಗೆದರೂ ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನಿಂದ ೧೦೦ ರೂಪಾಯಿ ಲಾಭ ಸಿಗುತ್ತದೆ. ಸೇಂದಿಯ ಮಾರಾಟವನ್ನು ನಿಲ್ಲಿಸಲಾಗಿದೆ. ಅದಕ್ಕೆ ಕಾರಣ ಏನೆಂದರೆ ಸೇಂದಿಗೆ ಹೈಡ್ರೋಕ್ಲೋರೈಡ್ ಬೆರೆಸುವುದರಿಂದ ಆರೋಗ್ಯಕ್ಕೆ ತೊಂದರೆಯಾಗುತ್ತಿದ್ದುದು ನಿಜ, ಅದನ್ನು ನಾನು ಒಪ್ಪುತ್ತೇನೆ. ಆದರೆ ಈಗ ಸಾರಾಯಿಗೂ ಕೂಡ ಹೈಡ್ರೋಕ್ಲೋರೈಡ್ ಬೆರೆಸುತ್ತಿದ್ದಾರೆ. ಏಕೆಂದರೆ ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ಗೆ ಮೂರು ಲೀಟರ್ ನೀರು ಬೆರೆಸುವುದರಿಂದ ಅದರ ಸ್ಟ್ರೆನ್ತ್ ಹೋಗುತ್ತದೆ. ನಿಶ ಬರಬೇಕಾದರೆ ಪುನಃ ವಿಷವನ್ನು ಬೆರಸುತ್ತಾರೆ. ಹೈಡ್ರೋಕ್ಲೋರೈಡ್ ಬೆರಸುವುದರಿಂದ ಸಾರಾಯಿ ಕುಡಿದಾಗ ನಿಶ ಬರುತ್ತದೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಇದು ಸಾಕಷ್ಟು ನಡೆಯುತ್ತಿದೆ. ಹೈಡ್ರೋಕ್ಲೋರೈಡ್‌ನ್ನು ಸಾರಾಯಿಗೆ ಬೆರೆಸಿ ಸಾರಾಯಿ ಮಾರಾಟ ಮಾಡುವಂತಹದ್ದು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ ಎಂದೂ ಇಲ್ಲದಂತಹ ರೀತಿಯಲ್ಲಿ ಇದು ಈಗ ನಡೆಯುತ್ತಿದೆ. ಸೇಂದಿಯ ಮಾರಾಟವನ್ನು ನಿಲ್ಲಿಸುವುದಕ್ಕೆ ಏನು ಕಾರಣವನ್ನು ಕೊಡುತ್ತಿದ್ದೀರಿ, ಅದನ್ನು ಬೇರೆ ರೀತಿಯಲ್ಲಿ ಸಾರಾಯಿಗೆ ಬೆರೆಸುವಂತಹ ಕೆಲಸ ನಡೆಯುತ್ತಿದೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನೀವು ಸೇಂದಿಯ ಮಾರಾಟ ನಿಲ್ಲಿಸಬೇಕೆಂದು ಏನು ಹೊರಟಿದ್ದೀರಿ ಅದು ಸಾಧ್ಯವಿಲ್ಲವೆನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ. ತಾವು ಅಧಿಕಾರಕ್ಕೆ ಬಂದ ಮೇಲೆ ಕಳೆದ ೧೦ ತಿಂಗಳಿನಿಂದ ಬೆಂಗಳೂರಿನಲ್ಲಿ ಸಾರಾಯಿ ಮಾರಾಟ ಜಾಸ್ತಿಯಾಗಿದೆ. ಎಷ್ಟು ಮಾರಾಟವಾಗಿದೆ ಎಂಬುದನ್ನು ತಾವು ಉತ್ತರ ಕೊಡುವಾಗ ದಯುವಿಟ್ಟು ತಿಳಿಸಬೇಕು. ಉತ್ತರ ಹೇಳುವಾಗ ತಕ್ಷಣ ವಿವರ ಸಿಗದಿದ್ದರೆ, ನನಗೆ ಪತ್ರದ ಮುಖಾಂತರ ಬರೆದು ನನಗೆ ತಿಳಿಸಬೇಕು. ಏಕೆಂದರೆ, ಏನಾಗುತ್ತಿದೆ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ, ಅದು ನನ್ನ ಕರ್ತವ್ಯವಿದೆ. ನಾನು ಬೇರೆ ಯಾವ ದೃಷ್ಟಿಯಿಂದ ಹೇಳುತ್ತಿಲ್ಲ. ವಿಷಯವನ್ನು ನಾನು ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಆದ್ದರಿಂದ ದಯುವಿಟ್ಟು ಆ ವಿವರವನ್ನು ತಿಳಿಸಬೇಕು. ನಾನು ಹೇಳತಕ್ಕದ್ದು ಎಷ್ಟರಮಟ್ಟಿಗೆ ನಿಜ, ಅಥವಾ ಇಲ್ಲವೇ ಎಂಬುದನ್ನು ನಾನು ವೈರಿಫೈ ಮಾಡಿಕೊಳ್ಳಬೇಕಾಗುತ್ತದೆ. ಆದಕ್ಕ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ. ತಾವು ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ.—ನಾನು ಇನ್ನು ಹೇಳಬೇಕಾದ್ದು ಬಹಳ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾತನಾಡುತ್ತಿದ್ದರೆ ನನಗೆ ನಿಶ ಬರುತ್ತಾ ಇದೆ.

ಶ್ರೀ ಸಿ. ಬೈರೇಗೌಡ.—ಬೇರೆ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ರೆಕ್ಟಿಫೈಡ್ ಸ್ಪಿರಿಟ್‌ನ ಬೆಲೆಯನ್ನು ಫಿಕ್ಸ್ ಮಾಡುತ್ತವೆ. ಆದರೆ ನಮ್ಮಲ್ಲಿ ಇಷ್ಟಕ್ಕೇ ಸ್ಪಿರಿಟ್‌ನ್ನು ಮಾರಾಟ ಮಾಡಬೇಕೆಂದು ಬೆಲೆಯನ್ನು ನಿಗದಿ ಮಾಡುತ್ತಿಲ್ಲ. ಖುಷಿ ಬಂದಷ್ಟಕ್ಕೆ ಮಾರಾಟ ಮಾಡುತ್ತಿದ್ದಾರೆ. ಈಗ ನಾನು

೪–೪೫ ಪಿ. ಎಂ.

ಏನು ಹೇಳುತ್ತಿದ್ದೇನೆ ಅದು ನಿಜ ಇರಬಹುದು ಅಥವಾ ನಿಜ ಇಲ್ಲದೇ ಇರಬಹುದು. ನನಗೆ ಗೊತ್ತಿರುವ ಪ್ರಕಾರ ನಾನು ಹೇಳುತ್ತಿದ್ದೇನೆ. ಈ ಬಗ್ಗೆ ತಾವು ಉತ್ತರ ಹೇಳಬೇಕೆಂದು ಪ್ರಾರ್ಥನೆ. ನಾನು ಆಗಲೇ ಹೇಳಿದೆ ಏನೆಂದರೆ, ಕಾನೂನು ಎನ್ನುವುದು, ಎಕ್ಸೈಸ್ ಕೋಡ್ ಎನ್ನುವುದು ಯಾವತ್ತೂ ಜಾರಿ ಆಗುತ್ತಾ ಇಲ್ಲ ಎಂದು, ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ಒಂದೇ ಒಂದನ್ನು

ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಬಾಟ್ಲಿಂಗ್ ನಡೆಯುತ್ತಿದೆ. ಇದಕ್ಕೆ ಏಜೆಂಟ್‌ರನ್ನು ನಿಗದಿ ಮಾಡಿದ್ದೀರಿ. ಆ ವಿಚಾರದಲ್ಲಿ ಹಿನ್ನೆಲೆಗೆ ನಾನು ಹೋಗುವುದಿಲ್ಲ. ಇವತ್ತು ಬಾಟ್ಲಿಂಗ್ ತಂದ ಉದ್ದೇಶ ದೇಸಾಯಿ ಆಯೋಗದ ವರದಿ ಆಧಾರದ ಮೇಲೆ ಸರಿಯಾದ ಪ್ರಮಾಣದಲ್ಲಿ ಮತ್ತು ಕ್ವಾಲಿಟಿ ಏನು ಇದೆ ಅದು ಇರಬೇಕು ಎನ್ನುವ ಮೂಲ ಉದ್ದೇಶದಿಂದ ತಂದಿದ್ದು. ಇವತ್ತು ಅದು ಎರಡೂ ಕೂಡಾ ಇಲ್ಲ. ನಾನು ಈ ಬಗ್ಗೆ ಬೇಕಾಗಿದ್ದರೆ ನಿಮಗೆ ಸವಾಲು ಹಾಕುತ್ತೇನೆ. ಮಾನ್ಯ ರಾಜಶೇಖರಮೂರ್ತಿಯವರಿಗೆ ಇದು ಸವಾಲು. ಇದರಲ್ಲಿ ಅದು ಎರಡೂ ಕೂಡಾ ಇಲ್ಲ. ಅದರಲ್ಲಿ ೧೮೦ ಮಿಲಿ ಏನೋ ಇರಬೇಕೆಂದು ಇದೆ. ಆದರೆ ಅದರಲ್ಲಿ ೧೬೦ ಅಥವಾ ೧೭೦ ಮಿಲಿ ಮಾತ್ರ ಇರುತ್ತದೆ. ೭೫೦ ಅಥವಾ ೭೬೦ ಮಿಲಿ ಒಂದು ಫುಲ್ ಬಾಟಲ್ ಎಂದು ಇರುತ್ತದೆ. ಆದರೆ ಅಷ್ಟು ಪ್ರಮಾಣದಲ್ಲಿ ಅದು ಇರುವುದಿಲ್ಲ. ಮತ್ತೆ ೩೫ ಪ್ರಮಾಣ ಏನು ಇರಬೇಕೆಂದಿದೆ, ಅದು ಕೂಡಾ ಇರುವುದಿಲ್ಲ. ಖುಷಿ ಬಂದಹಾಗೆ ಇವತ್ತು ನಡೆಯುತ್ತಿದೆ. ಒಂದು ಅಥವಾ ಎರಡು ಬಾಟಲ್ ವಿಷಯವಾಗಿದ್ದರೆ ನಾನು ಇದನ್ನು ಹೇಳುತ್ತಾ ಇರಲಿಲ್ಲ. ಇವತ್ತು ಲಕ್ಷಾಂತರ ಬಾಟಲ್‌ಗಳು ಖರ್ಚು ಆಗುತ್ತಿವೆ. ಇವರು ಹರಾಜು ಮಾಡತಕ್ಕ ನೋಟಿಫಿಕೇಷನ್‌ನಲ್ಲಿ 'Arrack must be sold only in bottles.' ಎಂದು ಹೇಳುತ್ತಾರೆ. ಸೀಲ್ಡ್ ಬಾಟಲ್ ಎಂದು ಹೇಳುತ್ತಾರೆ. "Arrack will be supplied only in bottles. Locations of bottling units and areas to be covered by them as under." ಎಂದು ಹೇಳಿ, ಎಲ್ಲಿಂದ ಸಾರಾಯಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಒಂದು ಮುಖ್ಯ ಪದವನ್ನು ತಮ್ಮ ಗಮನಕ್ಕೆ ತರುತ್ತೇನೆ. "Arrack will be supplied only in bottles." ಎಂದು ಇದೆ. ಸ್ವಾಮಿ, ಇವತ್ತಿನ ದಿವಸ ಇದು ನಿಜವಾದರೆ ನೀವು ಏನು ಶಿಕ್ಷೆಗೆ .. ಸ್ವಾಮಿ, ಇವತ್ತು ಎಕ್ಸೈಸ್ ಕಮೀಷನರ್‌ದ್ದು ಒಂದು ಆಜ್ಞೆ ಇದೆ. ತಾರೀಖು ೭-೭-೯೦ರಲ್ಲಿ ಈ ಆಜ್ಞೆ ಹೊರಟಿದೆ. ಎಂದರೆ ಇವತ್ತು ೧೦ನೇ ತಾರೀಖು ಇದ್ದು ೩ ದಿವಸಗಳ ಹಿಂದೆ ಹೊರಟಿರತಕ್ಕ ಆಜ್ಞೆ. ಇದನ್ನು ತಮ್ಮ ಅಪ್ಪಣೆ ಪಡೆದು ಓದುವುದಕ್ಕೆ ಇಷ್ಟಪಡುತ್ತೇನೆ.

"To

The Superintendent of Excise of all Districts.

Sir,

SUB : Supply of bulk arrack – regarding.

With reference to the above I am to inform you to see that smooth flow of arrack to the arrack contractors is maintained without any hindrance. Further you are hereby instructed that whenever the bottles are not ready to supply the increased demand in bottles they should supply in bulk duly recording the reasons. Also see that under no circumstances supply of arrack is supplied. Whenever it is supplied in bulk, bottling charges should not be collected.

Draft approved by the Excise Commissioner.

Yours faithfully,

Sd/- for Excise Commissioner."

ಎಂದು ಮೂರು ದಿವಸಗಳ ಹಿಂದೆ ಈ ಆಜ್ಞೆಯನ್ನು ಹೊರಡಿಸಿದ್ದಾರೆ. ಇದು ತಮಗೆ ಗೊತ್ತಿದೆಯೋ ಏನೋ ಗೊತ್ತಿಲ್ಲ. ಇದು ತಮಗೆ ಗೊತ್ತಿರುತ್ತದೆ. ಈ ಕಾನೂನು ಏನು ಹೇಳುತ್ತದೆ ? "It must be supplied in sealed bottles." ಎಂದು ಹೇಳುತ್ತದೆ. ಆದರೆ ಇದು ಏನು ಹೇಳುತ್ತದೆ ಈ ಆಜ್ಞೆ ? ಯಾರಿಗೆ ಯಾವ ರೀತಿ ಖುಷಿ ಬಂದ ಹಾಗೆ ಮಾಡಬಹುದೆಂದು ಇದೆ. ಲೂಸ್ ಎಂದರೆ ಏನು ?

ಶ್ರೀ ಎಸ್. ಬಂಗಾರಪ್ಪ.—ಎಲ್ಲವನ್ನೂ ಬಾಟ್ಲ್‌ನಲ್ಲೇ ಮಾರಬೇಕು ಅಂತ ಅದರಲ್ಲಿ ಎಲ್ಲಿದೆ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಬಂಗಾರಪ್ಪನವರೇ ನಿಮಗೆ ನಾನು ಹೇಳಿಕೊಡಬೇಕೇ ? ನಾನು ನಿಮಗೆ ಹೇಳಬೇಕಾದುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವೇ ಓದಿದ್ದೀರಿ. ನೀವೇ ಓದಿ ಹೇಳಿದ್ದರಿಂದ ನಾನು ನಿಮಗೆ ಹೇಳಬೇಕಾಗುತ್ತದೆ. ಬಾಟ್ಲ್‌ನಲ್ಲಿ ಕೊಡಬೇಕು. ಅದು ಆಗದಿದ್ದರೆ ಬಲ್ಕ್‌ನಲ್ಲಿ ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಖುಷಿ ಬಂದ ಹಾಗೆ ಮಾರಬಹುದು ಅಂತ ಅವರಲ್ಲಿ ಇಲ್ಲ. ಆ ರೀತಿ ಇದೆಯೇ ?

ಶ್ರೀ ಸಿ. ಬೈರೇಗೌಡ.—ಹಾಗಿದ್ದರೆ ಕಾನೂನು ಏನು ಹೇಳುತ್ತದೆ ? It must be supplied in sealed bottles. ಅಂತ ಇದೆ. ಅದನ್ನೇ ನಾನು ಹೇಳುತ್ತಿದ್ದೇನೆ. ಏನು ಹೇಳುತ್ತದೆ ಕಾನೂನು ? ಹಾಗಾದರೆ ಈ ಕಾನೂನನ್ನು ತೆಗೆದು ಹಾಕಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಒಂದೇ ಸಾರಿ ಜಂಪ್ ಆದಾಗ, ರೆಡಿ ಮಾಡಿಕೊಳ್ಳದಿದ್ದರೆ, ನೀವು ಸಿದ್ಧತೆಗಳನ್ನು ಮಾಡಿಕೊಳ್ಳದಿದ್ದರೆ that is the only way out for the Government... ಬೇರೆ ದಾರಿ ಯಾವುದೂ ಉಳಿಯುವುದಿಲ್ಲ. ಹಾಗಾದರೆ ನೀವೇ ಇದ್ದಿದ್ದರೆ ಏನು ಮಾಡುತ್ತಿದ್ದೀರಿ ? ಬಾಟ್ಲ್ ಸರಿಯಾದ ಪ್ರಮಾಣದಲ್ಲಿಲ್ಲ, ಮತ್ತೊಂದು ಇಲ್ಲ. ಒಂದೇ ಸಾರಿ ಜಂಪ್ ಆಗಿ, ಸೇಲ್ಸ್ ಕಡಿಮೆಯಾದರೆ, ಗೌರ್ನಮೆಂಟ್‌ಗೆ ರೆವಿನ್ಯೂ ಹೊರಟು ಹೋಗುವುದಿಲ್ಲವೇ ?

ಶ್ರೀ ಸಿ. ಬೈರೇಗೌಡ.—ನಾನು ಒಪ್ಪುತ್ತೇನೆ, ಹಾಗಾದರೆ ಕಾನೂನಿನಲ್ಲಿ ಏಕೆ ಆ ತರಹ ಬರೆದು ಕೊಂಡಿದ್ದೀರಿ ? ನೋಟಿಫಿಕೇಷನ್‌ನ್ನು ಆ ತರಹ ಹೊರಡಿಸಿದ್ದೀರಿ ? ಈ ವರ್ಷದ ನೋಟಿಫಿಕೇಷನ್ ಇದೆ ಯಾವ ವರ್ಷದ್ದು, ಎಂಬುದಾಗಿ ಇರುತ್ತದೆ. ಅದನ್ನು ಹೊರಡಿಸಿದ್ದು ಯಾವ ತಾರೀಖು. ಯಾವ ವರ್ಷಕ್ಕೆ ಸಂಬಂಧಪಟ್ಟದ್ದು ಎಂಬುದು ಇದೆ. ನೀವೇ ಆ ಮಾತನ್ನು ಹೇಳಿದ್ದರಿಂದ ಈ ಮಾತನ್ನು ನಾನು ಹೇಳಬೇಕಾಗಿದೆ. ಇದು ನೋಟಿಫಿಕೇಷನ್ ಡೇಟೆಡ್ ೨೬ ಏಪ್ರಿಲ್ ೧೯೯೦. ಈ ವರ್ಷದಲ್ಲೇ ಹೊರಡಿಸಿರತಕ್ಕ ನೋಟಿಫಿಕೇಷನ್, ಇದು ಈ ವರ್ಷಕ್ಕೇ ಸಂಬಂಧಪಟ್ಟಿದ್ದು. ಆ ಒಂದು ಪುಸ್ತಕವನ್ನೂ ಕೂಡ ತಂದಿದ್ದೇನೆ. ಕಾನೂನು ಏನು ಹೇಳುತ್ತದೆ ಎಂಬುದನ್ನು ನೋಡುವುದಕ್ಕೆ ಪುಸ್ತಕವನ್ನೂ ಕೂಡ ತಂದಿದ್ದೇನೆ. ಹಾಗಾದರೆ, ಇದನ್ನು ತೆಗೆದು ಹಾಕಿ. ನಾವು ಬಾಟ್ಲ್‌ನಲ್ಲಿ ಸಪ್ಲೈ ಮಾಡುವುದಕ್ಕಾಗುವುದಿಲ್ಲ, ನಾವು ಇದನ್ನು ನಿಲ್ಲಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿ ಆದರೆ ಈಗ ಕಾನೂನಿನಲ್ಲಿರತಕ್ಕಂತಹದ್ದು ಒಂದು. ನೀವು ಮಾಡತಕ್ಕಂತಹದ್ದು ಮತ್ತೊಂದು. ಏನು ಇದರ ಉದ್ದೇಶ ಎಂಬುದಕ್ಕೆ ಇದಕ್ಕಿಂತ ಮುಂದೆ ಹೋಗಿ ಹೇಳತಕ್ಕಂತಹದ್ದು ಅನಾವಶ್ಯಕ. ಅದಕ್ಕೇ ನಾನು ಹೇಳುತ್ತಿರತಕ್ಕಂತಹದು. ಹಿಂದೆ ಯಾವ ರೀತಿ ಶ್ರೀಮಾನ್ ಬಂಗಾರಪ್ಪನವರು ಇಲ್ಲಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿದ್ದನ್ನು ನಾನೂ ಕೂಡ ನೋಡಿದ್ದೇನೆ. ಆದರೆ ನಿಮ್ಮ ಕೈಯಲ್ಲಿ ಏನೂ ಆಗಲಿಲ್ಲ. ಗಂಟಲಿಗೆ ಅಷ್ಟೊಂದು ಶ್ರಮ ಕೊಟ್ಟಿರಿ.

ಶ್ರೀ ಎಸ್. ಬಂಗಾರಪ್ಪ.—ಪ್ರಯತ್ನ ಪಟ್ಟಿರಬೇಕು. ನಿಜ,

ಶ್ರೀ ಸಿ. ಬೈರೇಗೌಡ.—ಏನೇನು ಪ್ರಯತ್ನ ಪಟ್ಟರು ಎಂಬುದನ್ನು ನೋಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುವುದು ಬೇರೆ. ದೊಡ್ಡ ವಾಯ್ಸ್‌ನಲ್ಲಿ ಅಲ್ಲಿ ಕುಳಿತು ಕೊಂಡು ಹೇಳಿದ್ದರೆ, ನೀವು ಏನು ಆರ್ಗ್ಯುಮೆಂಟ್ ಮಾಡುತ್ತಿದ್ದೀರಲ್ಲಾ, ಅಂತಹ ಪಾಯಿಂಟ್ಸ್ ನಾನು ಹೇಳಿಲ್ಲ. ನಾನು ಟೆಂಡರ್ ವಿಚಾರವನ್ನು ಎತ್ತಿದ್ದೇನೆ. ಏನೇನು ಟೆಂಡರ್ ಕರೆಯದೆ ಬರೀ ಅಪ್ಲಿಕೇಷನ್‌ಗಳನ್ನು ಕರೆದು ೮ ಪರ್ಸನ್ಸ್‌ಗೆ ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟಿದ್ದಾರಲ್ಲಾ, ಅದನ್ನು ನಾನು ಮಾತನಾಡಿದ್ದೇನೆ. ನಿಮ್ಮ ಪಾಯಿಂಟ್ಸ್ ಅಲ್ಲ. ನೀವು ಒಂದಕ್ಕೊಂದು ಜೋಡಿಸುವುದಕ್ಕೆ ಹೋಗ ಬೇಡಿ. ಆದರೆ ಈಗಲೂ ಕೂಡ ಹೇಳುತ್ತೇನೆ. ಅದರ ಬಗ್ಗೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಇದೆ. ಹಾಗೂ ಹೈಕೋರ್ಟಿನಿಂದ ಬಂದಿರತಕ್ಕಂತಹದ್ದು ಇದೆ. I stand by my statement—what I have said while sitting there......

ಶ್ರೀ ಸಿ. ಬೈರೇಗೌಡ.—ಅದು ಈ ದೇಶದ ಮುಂದೆ ಇದೆ. ಅದರ ಬಗ್ಗೆ ಏಕೆ ಚರ್ಚೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ನಾನು ಹೇಳಿದ್ದು, ನೀವು ಅಷ್ಟೊಂದು ಶ್ರಮ ಪಟ್ಟಿರಲ್ಲಾ, ಅಷ್ಟೊಂದು ಶ್ರಮ ವಹಿಸಿದ್ದೀರಲ್ಲಾ ಎಂದು ಅಷ್ಟಕ್ಕೆ ಮಾತ್ರ ನಾನು ಸೀಮಿತಗೊಳಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶ್ರಮ ನಾವು ಪಟ್ಟೆವು. ನೀವು ಏನು ಮಾಡಿದ್ದೀರಿ. ನೀವು ನಿಮ್ಮ ಮುಖ್ಯ ಮಂತ್ರಿಗಳು ಏನು ಮಾಡಿದ್ದೀರಿ?

ಶ್ರೀ ಸಿ. ಬೈರೇಗೌಡ.—ಮಾನ್ಯ ಬಂಗಾರಪ್ಪನವರೆ, ಅದನ್ನು ಮಾಡಿದ್ದರಿಂದಲೇ ನೀವು ಇವತ್ತಿನ ದಿವಸ ಅಲ್ಲಿ ಕುಳಿತುಕೊಂಡಿರುವುದು, ತಿಳಿದುಕೊಳ್ಳಿ. ಆಗ ಮಾಡಿರತಕ್ಕ ಅವ್ಯವಹಾರಗಳೆಲ್ಲ ವನ್ನೂ ನೀವು ಇಲ್ಲಿ ಕುಳಿತುಕೊಂಡು ಹೇಳಲಿಲ್ಲ. ನೀವು ಬಾಟ್ಲಿಂಗ್ ವಿಚಾರ ಒಂದರಲ್ಲೇ ಹೇಳಿದ್ದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ನಿಮಗೆ ಏನು ಗೊತ್ತಿದೆ ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ. ಎಲ್ಲಾ ಗೊತ್ತಿದೆ.

ಶ್ರೀ ಸಿ. ಬೈರೇಗೌಡ.—ಹತ್ತಿ ತೂಗುವ ಕಡೆ ನೊಣಕ್ಕೆ ಏನು ಕೆಲಸ? ಸುಮ್ಮನೆ ಕುಳಿತು ಕೊಳ್ಳಿ. ಯಾರಾದರೂ ಕೂಡ ಈ ವಿಚಾರದಲ್ಲಿ ತಾಕತ್ತು ಇದ್ದರೆ ನೀವು ಕ್ರಮವನ್ನು ತೆಗೆದುಕೊಳ್ಳಿ ಎನ್ನತಕ್ಕ ಪದವನ್ನು ಯಾರಾದರೂ ಉಪಯೋಗಿಸಿದ್ದರೆ ಈ ಬೈರೇಗೌಡ ಮಾತ್ರ. ಅದು ಯಾರಿಗೆ ಸಂಬಂಧ ಇದೆಯೋ ಅವರನ್ನು ಎದುರುಗಡೆ ಕೂಡಿಸಿಕೊಂಡು, ಅವರ ಎದುರೇ ಹೇಳಿರತಕ್ಕ ಮಾತು ಇದು. ಅದಕ್ಕೋಸ್ಕರ ಇವತ್ತು ಇಲ್ಲಿ ಕುಳಿತುಕೊಂಡಿರುವುದು. ಇಲ್ಲದಿದ್ದರೆ ನೀವು ನಿಮ್ಮಷ್ಟಕ್ಕೆ ನೀವು ಬಂದು ಕುಳಿತುಕೊಂಡಿದ್ದೇವೆಂದು ಹೆಮ್ಮೆ ಪಟ್ಟುಕೊಳ್ಳಬೇಕಾದುದಲ್ಲ. ನೀವು ಅಲ್ಲಿಗೆ ಬಂದು ಕುಳಿತುಕೊಳ್ಳಬೇಕಾದರೆ ಇದೂ ಕೂಡ ಒಂದು ಕಾರಣ ಇದೆ.

ಶ್ರೀ ಎಸ್. ಬಂಗಾರಪ್ಪ.—ನಾವೇ ಬಂದು ಕುಳಿತುಕೊಂಡಿದ್ದೇವೆಂದು ಹೇಳಲಿಲ್ಲ. ಜನ ಕಳುಹಿಸಿದ್ದಾರೆ. ಇಲ್ಲಿಗೆ ಬಂದು ಕುಳಿತುಕೊಂಡಿದ್ದೇವೆ. ಅಷ್ಟನ್ನು ಮಾತ್ರ ಹೇಳಬೇಕ್ಲಿ. ಅದಕ್ಕೆ ಬಹಳ ಸಂತೋಷ.

ಶ್ರೀ ಸಿ. ಬೈರೇಗೌಡ.—ಅದನ್ನೇ ನಾನು ಹೇಳತಕ್ಕಂತಹದು. ಏನೆಂದರೆ ಈ ಒಂದು ವಿಚಾರ ದಲ್ಲಿ ಬಿಟ್ಟರೆ ಬೇರೆ ವಿಚಾರಗಳಲ್ಲಿ ಇಲ್ಲಿ ಕುಳಿತು ನಾವು ಎತ್ತಿರತಕ್ಕ ವಿಚಾರಗಳು ಏನು ಇವೆ, ಈ ಬಗ್ಗೆ ನೀವು ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಇಲ್ಲೇ ಒಂದು ಸಾರಿ ಹೇಳಿದ್ದೇನೆ. ವಿರೋಧ ಪಕ್ಷದ ಕಡೆ 2ನೇ ಸಾಲಿನಲ್ಲೋ ಅಥವಾ 3ನೇ ಸಾಲಿನಲ್ಲೋ ಶ್ರೀಮಾನ್ ಸ್ವಾಮಿರಾವ್ ಕುಳಿತುಕೊಳ್ಳುತ್ತಿದ್ದರು. ಇವತ್ತು ಅವರು ಸಭೆಯಲ್ಲಿಲ್ಲ. ಆಗ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನ ಬೇಡಿಕೆ ಚರ್ಚೆಗೆ ಬಂತು. ಅವರು ಇನ್ನಿಯೇಟ್ ಮಾಡಿದರು ಆಗ ಮೊದಲ ಬೆಂಚುಗಳ ಸಾಲುಗಳು ಪೂರ್ತಿ ಖಾಲಿಯಾಗಿದ್ದವು. ಆಗ ನೀವು ವಿರೋಧ ಪಕ್ಷದಿಂದ ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಆದರೆ ಆ ಕೆಲಸವನ್ನು ನಾವು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಲಾರಿಗಟ್ಟಲೆ, ಎಷ್ಟು ಲಾರಿ ಲೋಡ್ ಈ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿರತಕ್ಕಂಥ ಸಾರಾಯಿ ಬೇಕು? ಈಗ ಹೇಳಿದರೆ ಇನ್ನೊಂದು ಐದು ನಿಮಿಷದಲ್ಲಿ ಸರಬರಾಜು ಆಗುತ್ತದೆ ನಿಮಗೆ ಕಾನೂನು ಎಲ್ಲ ಗೊತ್ತಿದೆ. ಪ್ಲಾಸ್ಟಿಕ್ ಚೀಲದಲ್ಲಿ ಸಾರಾಯಿ ತುಂಬಿಸಿ ಮಾರಾಟ ಮಾಡಬಹುದು ಎಂದು ಈ ಪುಸ್ತಕದಲ್ಲಿ ಎಲ್ಲಿದೆ ತಾವು ಹೇಳಿ? 'ಎಕ್ಸೈಸ್ ಮ್ಯಾನ್ಯುಯಲ್'— ಈ ಪುಸ್ತಕದಲ್ಲಿ ಇದು ಎಲ್ಲಿದೆ, ಹೇಳಿ ನೋಡೋಣ. ಆದರೆ ಇವತ್ತು ಲಾರಿಗಟ್ಟಲೆ, ನಮ್ಮ ಕಡೆ ಬೂಸಾ ಮೂಟೆ ಅಂತ ಕರೆಯುತ್ತಾರೆ. ಕೆಲವು ಕಡೆ ಯೂರಿಯಾ ಮೂಟೆ ಅಂತ ಕರೆಯುತ್ತಾರೆ. ಯಾರ್ಯಾರಿಗೆ ಏನೇನು ಖುಷಿ ಇದೆಯೋ ಆ ರೀತಿ ಅದನ್ನು ಕರೆಯುತ್ತಾರೆ......

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಪದವನ್ನು ಏಕೆ ಉಪಯೋಗಿಸುತ್ತೀರಿ?

ಶ್ರೀ ಸಿ. ಬೈರೇಗೌಡ.—ನಿಮ್ಮ ಬೂಸಾ ಎಲ್ಲಿಯವರೆಗೆ ಬಂದಿದೆ ನೋಡಿ. ಆ ಬೂಸಾ ಮೂಟೆ ಯಿಂದ ಈ ಬೂಸಾ ಮೂಟೆಯವರಿಗೆ ಬಂದಿದೆ. ಇವತ್ತಿನ ದಿವಸ ಈ ಬೂಸಾ ಮೂಟೆಗಳು ಲಾರಿ ಗಟ್ಟಲೆ ಖರ್ಚಾಗುತ್ತವೆ, ಈ ಬೂಸಾ ಮೂಟೆಗಳು ಬೀಡಿ, ಸಿಗರೇಟು ಮಾರತಕ್ಕ ಅಂಗಡಿಗಳಲ್ಲಿ ಕೂಡ ಮಾರಾಟವಾಗುತ್ತಿದೆ. ಹಳ್ಳಿಗಳಲ್ಲಿ ನಮ್ಮ ಎದುರಿನಲ್ಲೇ ಸಣ್ಣ ಸಣ್ಣ ಹುಡುಗರು ಜೋಬಿನಲ್ಲಿ

ಇಟ್ಟುಕೊಂಡು ಓಡಾಡುತ್ತಾರೆ. ಏಕಪ್ಪ ಹೀಗೆ? ಎಂದು ನಾವು ಕೇಳಿದರೆ ನಾವು ಇನ್ನೊಂದು ಸಾರಿ ಆ ಊರಿಗೆ ಹೋಗುವ ಹಾಗಿಲ್ಲ. ಈ ಪರಿಸ್ಥಿತಿಗೆ ನಮ್ಮನ್ನು ತಂದಿಟ್ಟಿದ್ದೀರಿ. ಕಾನೂನಿನಲ್ಲಿ ಇವತ್ತಿನ ದಿವಸ ಇದಕ್ಕೆ ಅವಕಾಶ ಇಲ್ಲ. ಬೆಂಗಳೂರಿನಲ್ಲಿ ಮಾತ್ರವಲ್ಲ, ರಾಜ್ಯಾದ್ಯಂತ ಇದು ಮಾರಾಟವಾಗುತ್ತಿದೆ. ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀನೆ ಎಂದರೆ, ಎಲ್ಲಿ ಏನೇನು ನಡೆಯುತ್ತಿದೆ ಎನ್ನತಕ್ಕದ್ದನ್ನು ತಮಗೆ ನಾನು ಖಾಸಗಿಯಾಗಿ ಹೇಳಬಲ್ಲೆ. ನೇರವಾಗಿ ಹೇಳಬೇಕೆಂದರೂ ಹೇಳುತ್ತೇನೆ. ಯಾರ ಮುಲಾಜಿಗೂ ಒಳಗಾಗಿ ನಾನು ಇಲ್ಲಿಗೆ ಬಂದಿಲ್ಲ. ನನ್ನ ಕ್ಷೇತ್ರದ ಜನರ ಮುಲಾಜಿಗೆ ಮಾತ್ರ ಇದ್ದೇನೆ ಹೊರತು, ಬೇರೆಯವರ ಮುಲಾಜಿಗೆ ನಾನು ಬಿದ್ದಿಲ್ಲ. ಇದಕ್ಕೆ ಏನು ಕಾರಣ? ನಾನು ಮುಂದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಸಾರಾಯಿ ಅಂಗಡಿಗಳು ಕೂಡ, ಕಾನೂನಿನಲ್ಲಿ ಲೈಸೆನ್ಸ್ ಕೊಡಬೇಕು ಅಂತ ಇದೆ. ಎಷ್ಟು ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ? ಇಲ್ಲಿ ಓದಬೇಕಾದರೆ ನಾನು ಓದುತ್ತೇನೆ. ರೂಲ್ಸ್ ಏನು ಹೇಳುತ್ತದೆ ಎಂದರೆ— Karnataka Excise License General Rules, 1967 - it reads :

> "The License shall except in towns and cities and other places where more than one shop is not sanctioned select a suitable site outside but adjacent to village for locating his shop. The Deputy Commissioner shall after consulting the Village Panchayats or the Local Authorities concerned and making such enquiry as he thinks fit may approve the site so selected''......

ಎನ್ನತಕ್ಕಂಥ ಮಾತಿದೆ. ಎಷ್ಟು ಮಂಡಲ ಪಂಚಾಯತಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ಅಥವಾ ಮುನಿಸಿಪಾಲಿಟಿಗಳಲ್ಲಿ ಈ ಕಾನೂನು ಇವತ್ತಿನ ದಿವಸ ಜಾರಿಯಾಗಿದೆ? ಬೀದಿ ಪಕ್ಕದಲ್ಲಿ, ರಸ್ತೆ ಪಕ್ಕದಲ್ಲಿ, ಇವತ್ತಿನ ದಿವಸ ಇದು ಸೌತೆಕಾಯಿ ಮಾರಾಟ ಮಾಡುವ ಜಾಗದಲ್ಲಿ ಕೂಡ ಇದೆ. ಇಷ್ಟೇ ಅಲ್ಲ, ಇವತ್ತು ಅನ್‌ಆಥರೈಸ್ಡ್ ಶಾಪ್ಸ್ ಏನಿವೆ, ಇವು ನಮ್ಮ ತಲೆಯಲ್ಲಿ ಕೂದಲು ಎಷ್ಟಿವೆ, ಅಷ್ಟು ಈ ಅನ್‌ಆಥರೈಸ್ಡ್ ಶಾಪ್‌ಗಳು ಎಲ್ಲ ಕಡೆ ಇವೆ. ಇವುಗಳಿಗೆ ಲೈಸೆನ್ಸ್ ಇಲ್ಲ, ಮತ್ತೊಂದು ಇಲ್ಲ. ನೀವು ಏನೋ ಇವತ್ತು ದೊಡ್ಡ ಸಾದನೆ ಸಾಧಿಸಿದ್ದೀವೆ ಎಂದು ಹೇಳಿದ್ದೀರಿ. ಈ ವಿಚಾರದಲ್ಲಿ ನನ್ನ ಮೆಚ್ಚುಗೆ ಕೂಡ ಇದೆ......

ಅಧ್ಯಕ್ಷರು.—ಶ್ರೀ ಬೈರೇಗೌಡರೇ, ನಿಮ್ಮ ತಲೆಯಲ್ಲಿ ಕೂದಲು ಎಷ್ಟು ಇದೆ ಅಂತಲೋ ಅಥವಾ ಶ್ರೀ ಅನಂತಕೃಷ್ಣ ಅವರ ತಲೆಯಲ್ಲಿ ಎಷ್ಟು ಇದೆ ಅಂತಲೋ?

ಶ್ರೀ ಸಿ. ಬೈರೇಗೌಡ.—ಅಷ್ಟಾದರೂ ಪರವಾಗಿಲ್ಲ. ಅವರ ತಲೆಯಲ್ಲಿ ಎಷ್ಟು ಕೂದಲು ಇದೆಯೋ, ಅಷ್ಟಾದರೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಇವತ್ತಿನ ದಿವಸ ನಿಮ್ಮ ಕಾನೂನಿನಲ್ಲಿ ಏನಿದೆ ಎಂದರೆ, ಯಾರೋ ಒಬ್ಬರು ಆಗಲೇ ಹೇಳುತ್ತಿದ್ದರು, ದೊಡ್ಡ ದೊಡ್ಡವರಿಗೇ, ಕೋಟ್ಯಾಧಿಪತಿಗಳಿಗೇ ಹೋಗುತ್ತಿದೆ ಎಂದು ನಿಜ. ಇದನ್ನು ತಪ್ಪಿಸಬೇಕೆಂದರೆ ದಯಮಾಡಿ ಒಂದು ಕೆಲಸ ಮಾಡಿ, ಸಣ್ಣ ಪರೀಕ್ಷೆ ಮಾಡಿ. ಮಾರಾಟ ಮಾಡುವ ಅಂಗಡಿಗಳು ಬೆಂಗಳೂರು ನಗರದಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲೂ ಏನಿವೆ, ಇವೆಲ್ಲವನ್ನೂ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೆ ಕಾನೂನಿನಲ್ಲಿ ಅವಕಾಶ ಮಾಡಿಕೊಂಡು, ರಿಕ್ವಿಜಿಷನ್ ಮಾಡಿ. ಇದು ಸರ್ಕಾರದ ಜಾಗ ಎಂದು ತೆಗೆದುಕೊಳ್ಳಿ. ಈ ರೀತಿ ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ನೂರಾರು ಕೋಟಿ ವ್ಯವಹಾರ ಏನು ಮಾಡುತ್ತಾರೆ, ಅವರನ್ನು ಮುರಿಯುವುದಕ್ಕೆ ಸಾಧ್ಯವಿದೆ. ಅಂಗಡಿ ಪ್ರಕಾರ ಹರಾಜು ಹಾಕಿದರೆ, ೫-೧೦ ಸಾವಿರಹೂ ಇರುವವರೂ ಈ ವ್ಯವಹಾರದಲ್ಲಿ ಕೈಹಾಕುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಸಾವಿರಾರು ಸಣ್ಣಪುಟ್ಟ ಜನರನ್ನು ಎನ್‌ಕರೇಜ್ ಮಾಡುವುದಕ್ಕೆ ಅವಕಾಶ ಆಗುತ್ತದೆ. ಮಾರಾಟ ಮಾಡುವ ಜಾಗ ಏನಿದೆ. ಅದು ಸರ್ಕಾರದ್ದು ಎಂದು ರಿಕ್ವಿಸಿಷನ್ ಮಾಡತಕ್ಕ ಅಧಿಕಾರವನ್ನು ತಾವು ಪಡೆದುಕೊಳ್ಳಿ. ಇದರಿಂದ ನಿಮ್ಮ ಆದಾಯವು ಜಾಸ್ತಿಯಾಗುತ್ತದೆ, ಇದನ್ನು ದಯವಿಟ್ಟು ಆಲೋಚನೆ ಮಾಡಿ. ಇವತ್ತು ಅನೇಕರು ಹೇಳಿದ್ದಾರೆ. ಈ ಸಾರಾಯಿ ಅಂಗಡಿಗಳು ಅನೇಕ ಕಡೆ ಇವೆ, ಅಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ, ಟಾಯ್ಲೆಟ್ ಇಲ್ಲ, ಏನೇನೂ ಅನುಕೂಲಗಳು ಇಲ್ಲ. ಒಂದು ರೀತಿಯ ಡಂಜನ್ ಇದ್ದ ಹಾಗೆ ಇವೆ. ನಿಮಗೆ ಇವರು ೩೧೪ ಕೋಟಿ ಆದಾಯ ಕೊಡುತ್ತಿದ್ದಾರೆ, ಈ ಆದಾಯವನ್ನು ಕೊಡುತ್ತಿರತಕ್ಕವರಿಗೆ ನೀವು ಏನು ಅನುಕೂಲ ಮಾಡಿ ಕೊಟ್ಟಿದ್ದೀರಿ ಕುಳಿತುಕೊಳ್ಳುವುದಕ್ಕೆ

ಅನುಕೂಲ ಮಾಡಿಕೊಟ್ಟಿದ್ದೀರಿ ಅಂದರೆ ಏನೂ ಇಲ್ಲ. ಈ ವಿಚಾರದಲ್ಲಿ ಅಲ್ಲಿ ಕನಿಷ್ಟ ಸೌಲಭ್ಯಗಳನ್ನಾದರೂ ಮಾಡಿಕೊಡುವುದಕ್ಕೆ ನಿಮ್ಮ ಕಾನೂನನ್ನು ಎನ್‌ಫೋರ್ಸ್ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಐ.ಎಂ.ಎಫ್.ಎಲ್. ಗೆ ಮತ್ತೆ ಸಾರಾಯಿಗೆ ಲೇಬಲ್ಸ್ ಹಾಕುತ್ತಿದ್ದಾರೆ. ಇದು ಒಂದು ದೊಡ್ಡ ಕರ್ಮಕಾಂಡ. ಈ ವಿಚಾರದಲ್ಲಿ ಮಾಜಿ ಎಕ್ಸೈಜ್ ಕಮೀಷನರ್ ಆದ ಆದಿರಾಜಯ್ಯ ಎಂಬುವರು ಸರ್ಕಾರಕ್ಕೆ ಒಂದು ಪತ್ರ ಬರೆದು ಸವಾಲು ಹಾಕಿದ್ದಾರೆ. ಲೇಬಲ್ಸ್ ಪ್ರಿಂಟ್ ಮಾಡುವ ವಿಚಾರದಲ್ಲಿ ಈ ರೀತಿಯಾಗಿ ಕೆಲಸ ನಡೆಯುತ್ತಿದೆ ಎಂದು ತಿಳಿಸಿದ್ದಾರೆ, ಇದು ನಿಮ್ಮ ಗಮನಕ್ಕೂ ಬಂದಿರಬಹುದು, ತಾವೂ ಆ ಪತ್ರವನ್ನೂ ಓದಿರಬಹುದು. ಅವರು ನನಗೂ ಕೂಡ ಪತ್ರ ಕಳುಹಿಸಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ, ನಾನು ಹೇಳಿರತಕ್ಕ ಅಂಶಗಳು ತಪ್ಪಾಗಿದ್ದರೆ, ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಅವರು ಹೇಳಿದ್ದಾರೆ. ಏಷ್ಟರಮಟ್ಟಿಗೆ ನಡೆಯುತ್ತದೆ ಎಂದರೆ, ಒಂದು ಸಂದರ್ಭದಲ್ಲಿ ಒಂದು ಸಾವಿರ ಲೇಬಲ್ಸ್ ಪ್ರಿಂಟ್ ಮಾಡಬೇಕಾದರೆ ೪೫ ರೂಪಾಯಿ ಚಿಲ್ಲರೆ, ಅದು ಇಂತಹವರಿಗೇ ಕೊಡಬೇಕು ಎನ್ನುವುದು. ಬೇರೆ ಕಂಪನಿಗಳವರು ೩೦ ರೂಪಾಯಿ ತೆಗೆದುಕೊಂಡು ಲೇಬಲ್ಸ್ ಪ್ರಿಂಟ್ ಮಾಡುವುದಕ್ಕೆ ತಯಾರು ಇದ್ದರೂ ಸಹ ಅವರಿಗೆ ಕೊಟ್ಟಿಲ್ಲ. ೪೫ ರೂಪಾಯಿ ಚಿಲ್ಲರೆಗೆ ನೂರು ಮಾಡುತ್ತಾರೆ, ಅವರಿಗೇ ಕೊಟ್ಟಿರುತ್ತಾರೆ. ಇದು ಈಗ ಏಷ್ಟಕ್ಕೆ ಬಂದಿದೆ ಎಂದರೆ, ೨೨ ರೂಪಾಯಿಗೆ ಬಂದಿದೆ. ಇದು ಮೂರು ವರ್ಷದ ಅವಧಿಯಲ್ಲಿ ನಡೆದಿದೆ. ಇದು ಬಹಳ ಸ್ವಾರಸ್ಯವಾಗಿದೆ. ಇದನ್ನು ಮಾಜಿ ಎಕ್ಸೈಸ್ ಕಮೀಷನರ್ ಸರ್ಕಾರಕ್ಕೆ ಬರೆಯುತ್ತಾರೆ. ಇದನ್ನು ಓದುತ್ತೇನೆ.—

> "Further there were many number of printers/who would print and supply fraud lables and there was no guarantee that these labels cannot be duplicated. The Department agrees with this view"...NO.DEP.DSL/11/83–84 dt.8–9–84 ...

ಇದರಲ್ಲಿ ಏನು ಹೇಳುತ್ತಾರೆ ಎಂದರೆ, ಲೇಬಲ್ ಡೂಪ್ಲಿಕೇಟ್ ಆಗುತ್ತದೆ, ಇದನ್ನು ಮಾಡತಕ್ಕಂಥಾದ್ದು ಸೂಕ್ತ ಅಲ್ಲ ಎಂಬ ಮಾತನ್ನು ಇಲಾಖೆ ಒಪ್ಪುತ್ತದೆ ಎಂಬ ವಿಚಾರವನ್ನು ಅಂದಿನ ಎಕ್ಸೈಸ್ ಕಮಿಷನರ್ ಹೇಳಿದ್ದಾರೆ. ಲೇಬಲ್ ಪ್ರಿಂಟ್ ಮಾಡುವುದರಲ್ಲಿ ದೊಡ್ಡ ಫ್ರಾಡ್ ನಡೆದಿದೆ. ಇದಕ್ಕೆ ಒಂದು ಕಡೆ ಎಕ್ಸೈಸ್ ಲೇಬಲ್ ಎನ್ನುತ್ತಾರೆ, ಇನ್ನೊಂದು ಕಡೆ ಸಕ್ಯೂರಿಟಿ ಲೇಬಲ್ ಎನ್ನುತ್ತಾರೆ. ಎಕ್ಸೈಸ್ ಲೇಬಲ್, ಸೆಕ್ಯೂರಿಟಿ ಲೇಬಲ್ ಬೇರೆ ಬೇರೆ. ಕರೆನ್ಸಿ ನೋಟನ್ನು ಪ್ರಿಂಟ್ ಮಾಡುವುದಕ್ಕೆ ಏನು ಪ್ರೊಸೀಜರ್ ಇದೆ, ಛಾಪಾಕಾಗದ ಅಂದರೆ ಸ್ಟಾಂಪ್ ಪೇಪರ್‌ಗಳನ್ನು ಪ್ರಿಂಟ್ ಮಾಡುವುದಕ್ಕೆ ಏನೇನು ನಿಬಂಧನೆಗಳು ಇದೆ. ಆ ನಿಬಂಧನೆಗಳನ್ನು ಇದಕ್ಕೂ ಅನುಸರಿಸಬೇಕಾಗುತ್ತದೆ. ಅದನ್ನು ಅನುಸರಿಸಿ ಎಂದು ಎಕ್ಸೈಸ್ ಕಮಿಷನರ್ ಹೇಳತಕ್ಕದ್ದು. ಇದನ್ನು ಈಗ ಮಾಡುತ್ತಿರುವ ರೀತಿ ಪ್ರಿಂಟ್ ಮಾಡಿಸಿದರೆ ಡೂಪ್ಲಿಕೇಟ್ ಮಾಡುವುದಕ್ಕೆ ಅವಕಾಶ ಇದೆ ಎಂಬ ಮಾತನ್ನು ಎಕ್ಸೈಸ್ ಕಮಿಷನರ್ ಹೇಳಿದ್ದಾರೆ. ಇದು ಇವತ್ತಿನವರೆಗೂ ರೆಕ್ಟಿಫೈ ಆಗಿಲ್ಲ. ಡೂಪ್ಲಿಕೇಟ್ ಎಕ್ಸೈಸ್ ಲೇಬಲ್ ಎಷ್ಟು ಲಾರಿ ಲೋಡ್ ಬೇಕು ಹೇಳಿ, ಸಾರೋದ್ಧಾರವಾಗಿ ಇದು ಕೂಡಾ ಬರುತ್ತಿದೆ. ನಾನೇ ಮೊನ್ನೆ ವೈನ್ ಷಾಪ್ ಕಡೆ ಹೋಗಿ ಅಲ್ಲೇ ಪಕ್ಕದಲ್ಲೇ ಕುಳಿತುಕೊಂಡು ಎರಡು ಬಾಟಲ್ ತರಿಸಿದೆ. ಒಂದು ಜೆನ್ಯೂನ್ ಲೇಬಲ್. ನೇಕೆಡ್ ಐ ನಿಂದ ಇದನ್ನು ಕಂಡು ಹಿಡಿಯಬಹುದು. ಜೆನ್ಯೂನ್ ಲೇಬಲ್‌ನ್ನು ತೆಗೆದರೆ ಪಕ್ಕದಲ್ಲಿರುವ ಭಾಗ ಅಲ್ಲೇ ಅಂಟಿಕೊಳ್ಳುತ್ತದೆ. ಅದು ಹೊರ ಬರುವುದಿಲ್ಲ. ಇದಕ್ಕೆ ಉಪಯೋಗಿಸಿರುವಂತಹ ಪೇಪರ್ ಹಾಗೂ ಎಲ್ಲವೂ ಕೂಡಾ ಬೇರೆ. ನೋಡಿದ ತಕ್ಷಣ ಹೇಳಬಹುದು ಇದು ಜೆನ್ಯೂನ್ ಲೇಬಲ್ ಇದು ಡೂಪ್ಲಿಕೇಟ್ ಲೇಬಲ್ ಎಂದು. ಡೂಪ್ಲಿಕೇಟ್ ಲೇಬಲ್ ಹರಿದರೆ ಪ್ರತಿಯೊಂದು ತುಂಡು ತುಂಡಾಗಿ ಬರುತ್ತದೆ. ಇವತ್ತು ಲಾರಿಗಟ್ಟಲೆ ಡೂಪ್ಲಿಕೇಟ್ ಎಕ್ಸೈಸ್ ಲೇಬಲ್ ಸರಬರಾಜಾಗುತ್ತದೆ. ಲಾರಿಗಟ್ಟಲೆ ಸಿಗುತ್ತದೆ, ಇದಕ್ಕೆ ಏನೂ ಬೇಕಾಗಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು, ಸೆಕೆಂಡ್ಸ್, ಥರ್ಡ್ಸ್ ಆಯಿತು. ಫೋರ್ಥ್ಸ್ ಬರುತ್ತಿದೆ ಎಂದು. ಅದೂ ಈಗಲೂ ನಡೆಯುತ್ತಿದೆ. ಹೊರಗಡೆಯಿಂದ ಬರುವುದು ಥರ್ಡ್ಸ್ ಆದರೆ ಇಲ್ಲೇ ಇವತ್ತು ಅನೇಕ ಕಡೆ ಏನು ನಡೆಯುತ್ತಿದೆ ಎಂದರೆ ಏನೋ ಒಂದು ತುಂಬು, ಯಾವುದೋ ಒಂದು ಲೇಬಲ್ ಹಾಕು, ಮಾರಾಟ ಮಾಡು. ಇದು ಯಥೇಚ್ಛವಾಗಿ ಸಾರೋದ್ಧಾರವಾಗಿ ಇವತ್ತಿನ ದಿವಸ ನಡೆಯುತ್ತಿದೆ. ಇದೆಲ್ಲಾ ನಿಮ್ಮ ಗಮನಕ್ಕೆ ಇಲಾಖೆಯ ಕಣ್ಣಿಗೆ ಕಾಣದೆ ನಡೆಯುವುದಕ್ಕೆ ಸಾಧ್ಯ ಇಲ್ಲ. ಇಲಾಖೆಯ ಕಣ್ಣೆದುರಿಗೆ ಇದೆಲ್ಲಾ ನಡೆಯುತ್ತಿದೆ. ಮತ್ತೆ ಹಿಂದೆ ಕೆಮಿಕಲ್ ಯೂನಿಟ್ಸ್‌ಗೆ ರೆಕ್ಟಿಫೈಡ್ ಸ್ಪಿರಿಟ್ ಕೊಟ್ಟಿರಲಿಲ್ಲ, ನನಗೆ ಕರಾರುವಾಕ್ಕಾದ ಮಾಹಿತಿ ಇಲ್ಲ.

ಈಗ ಸುಮಾರು ಒಂದು ವರ್ಷ ಅಥವಾ ಆರೇಳು ತಿಂಗಳಿಂದ ಈಚೆಗೆ ಸುಮಾರು ೫೦ಕ್ಕೂ ಮೇಲ್ಪಟ್ಟು ಕೆಮಿಕಲ್ ಯೂನಿಟ್‌ಗೆ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಿದ್ದೀರಿ ಕೊಡಿ, ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಕೊಟ್ಟಮೇಲೆ ಅದು ಯಾವರೀತಿಯಲ್ಲಿ ಉಪಯೋಗವಾಗುತ್ತಿದೆ ಎಂಬುದು ಮುಖ್ಯ. ಅಲ್ಲೂ ಕೂಡ ಇವತ್ತಿನ ದಿವಸ ಏನು ನಡೆಯುತ್ತಿದೆ ಎಂಬುದು ಮುಖ್ಯ. ನಾನು ಆಗಲೇ ಇವತದೆ ಪವರ್‌ಕನ್‌ಸಂಸ್‌ಷನ್ ಬಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ರಿಪೋರ್ಟ್ ತಮ್ಮ ಎದುರಿಗೆ ಇಲ್ಲ ಎಂದು ಹೇಳಿದ್ದೇನೆ. ಯಾವರೀತಿ ನಡೆಯುತ್ತದೆ ಎಂಬುದನ್ನು ಹೇಳಿದ್ದೇನೆ. ಪಿ.ಎ.ಸಿ. ರಿಪೋರ್ಟ್ ಇದೆ, ನೀವು ಇದನ್ನು ರಿನ್ಯೂ ಮಾಡಿದ್ದೀರಿ. ಯಾವ ಆಧಾರದ ಮೇಲೆ ರಿನ್ಯೂ ಮಾಡಿದ್ದೀರಿ? ಯಾವ ಕಾರಣಗೋಸ್ಕರ ಹಿಂದೆ ಕೊಟ್ಟಿರಲಿಲ್ಲ. ಯಾವ ಕಾರಣಕ್ಕೋಸ್ಕರ ಕೊಟ್ಟಿರಿ. ಕೆಮಿಕಲ್ ಯೂನಿಟ್‌ಗೆ ಹೋಗತಕ್ಕಂಥ ರೆಕ್ಟಿಫೈಡ್ ಸ್ಪಿರಿಟ್ ನೇರವಾಗಿ ಇವತ್ತಿನ ದಿವಸ ಸಾರಾಯಿ ಮಾರಾಟ ಮಾಡುವವರಿಗೆ ಬರುತ್ತಿದೆ. ದೂರ ಹೋಗುವೆಷ್ಟೇ ಇಲ್ಲ, ಅದೇ ಯೂರಿಯೂ ಮಾರಾಟ, ಅದೇ ಥರ್ಡ್ಸ್, ಫೋರ್ಥ್ಸ್ ಸಾರಾಯಿಗೆ ಬರುತ್ತಿರತಕ್ಕದ್ದು. ಕೆಮಿಕಲ್ ಯೂನಿಟ್ಸ್‌ನಿಂದ ಸ್ಪಿರಿಟ್ ಇಲ್ಲಿಗೆ ಬರುತ್ತಿರತಕ್ಕಂಥಾದ್ದು. ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ನಿಮ್ಮ ಇಲಾಖೆಯವರೂ ಹೇಳುತ್ತಾರೆ. ಇದು ಏತಕ್ಕೆ ಉಪಯೋಗವಾಗುತ್ತಿದೆ, ಏನು ಮಾಡುತ್ತಿದ್ದಾರೆ ಎಂಬುದನ್ನು ತಾವು ಹೇಳಬೇಕು. ಇದರ ಬಗ್ಗೆ ವರದಿ ಕೊಡಬೇಕು. ಎಷ್ಟು ಕೆಮಿಕಲ್ ಯೂನಿಟ್ಸ್ ಬಗ್ಗೆ ಇನ್‌ಸ್ಪೆಕ್ಷನ್ ಮಾಡಿರತಕ್ಕಂಥಾದ್ದು ಇದೆ, ವರದಿ ಕೊಟ್ಟಿರತಕ್ಕಂಥಾದ್ದು ಎಷ್ಟು ಇದೆ ಎಂಬುದನ್ನು ತಾವು ಹೇಳಬೇಕು ನಾನು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪಿ.ಎಸ್.ಎಸ್ ಕೆಮಿಕಲ್ಸ್ ಎಂದು ಒಂದು ಇದೆ. ಅದು ಮೈಸೂರು ರಸ್ತೆಯ ಬೆಂಗಳೂರಿನಲ್ಲಿ ಇದೆ. ಈ ಪಿ.ಎಸ್.ಎಸ್. ಕೆಮಿಕಲ್ಸ್‌ರವರಿಗೆ ತಾವು ಸ್ಪಿರೀಟ್‌ನ್ನು ಕೊಟ್ಟಿದ್ದೀರಿ. ಅಲ್ಲಿ ಮೆಷನರಿ ಇಲ್ಲ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಏನೇನೂ ಇಲ್ಲ. ಅಂತಹವರಿಗೆ ನೀವು ಸ್ಪಿರೀಟ್ ಕೊಟ್ಟಿದ್ದೀರಿ. ಅಲ್ಲಿಗೆ ಹೋದಂತಹ ಅಧಿಕಾರಿ ಯಾರು? ಅವರು ತಮಗೆ ಏನು ರಿಪೋರ್ಟ್ ಕೊಟ್ಟಿದ್ದಾರೆ. ಇದನ್ನು ತಾವು ಉತ್ತರ ಕೊಡುವಾಗ ದಯಮಾಡಿ ಹೇಳಬೇಕು.

ಶ್ರೀ ಎಂ. ರಾಜಶೇಖರಮೂರ್ತಿ.—ಅದನ್ನು ನಾವೀಗ ಸೀಜ್ ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಅದ್ದರಿಂದಲೇ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಒಂದು ಸಂದರ್ಭ ಬಂತು.

ಶ್ರೀ ಬಿ. ಸ್ವಾಮಿರಾವ್.—ಅವರಿಗೆ ಲೈಸನ್ಸ್ ಕೊಟ್ಟವರು ನೀವೇ ಇರಬೇಕು.

ಶ್ರೀ ಸಿ. ಬೈರೇಗೌಡ.—ನೀವು ಬನ್ನಿ ನಾಳೆ ನಿಮಗೂ ಕೊಡುತ್ತೇನೆ. ಆ ಮೇಲೆ ತಾವು ಇವತ್ತು ಕೆಲವು ನಾನ್ ಅಲ್ಕೋಹಾಲ್ ಬೇಸ್ಡ್ ಡಿಸ್ಟಿಲರೀಸಗಳಿಗೆ ಅನುಮತಿ ಕೊಟ್ಟಿದ್ದೀರಿ. ಈ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದೇವನಹಳ್ಳಿ ತಾಲ್ಲೂಕಿನಲ್ಲಿ M/s Suguna Distilleries, Virupakshapur, Bangalore South District. They have given a statement. Distilleries manufacturing pheny in the State. The following are the Distilleries manufacturing pheny out of coconut today. ಅದಕ್ಕೆ ಕೊಟ್ಟಿದ್ದೀರಿ. ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಕ್ಯಾಷ್ಯೂ ಪ್ಲಾಂಟೇಶನ್‌ಗಳಿವೆ? ಎಷ್ಟು ಕೋಕನಟ್ ಪ್ಲಾಂಟೇಶನ್‌ಗಳಿವೆ ಎಂಬುದನ್ನು ದಯಮಾಡಿ ತಾವು ತಿಳಿಸಬೇಕು? ಎಷ್ಟು ಮರಗಳಲ್ಲಿ ಶೇಂದಿ ತೆಗೆಯುತ್ತಿದ್ದಾರೆ ಎನ್ನುವ ಲೆಕ್ಕ ನನಗೆ ಹೇಳಬೇಕು. ಮೆಸಸ್ ಸುಗುಣ ವೀರೂಪಾಕ್ಷ ಡಿಸ್ಟಿಲರೀಸ್‌ರವರು ಏತಕ್ಕೆ ಇದನ್ನು ತೆಗೆದುಕೊಂಡಿದ್ದಾರೆ ಎಂದರೆ ರೆಕ್ಟಿಫೈರ್ ಸ್ಪಿರಿಟ್ ಅನ್ನು ಮೂಲವಾಗಿ ತೆಗೆದುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಬೇಕು. ಆ ರೀತಿ ಕಾನೂನಿನಲ್ಲಿ ಇದೆಯೋ ಏನೋ ನನಗೆ ಗೊತ್ತಿಲ್ಲ. ಇದನ್ನು ಅವಾಯ್ಡ್ ಮಾಡುವುದಕ್ಕಾಗಿ ಅವರು ನಾನ್ ಅಲ್ಕೋಹಾಲ್ ಬೇಸ್ಡ್ ಡಿಸ್ಟಿಲೀರಿಸ್ ಎಂದು ಹೇಳಿ ಲೈಸನ್ಸ್ ಪಡೆದುಕೊಂಡಿದ್ದಾರೆ. ಆದರೆ ಅಲ್ಲಿ ನೇರವಾಗಿ ಸ್ಪಿರೀಟ್ ಬೇಸ್ಡ್ ಡಿಸ್ಟಿಲರೀಸ್ ಅಲ್ಲಿ ನಡೆಯುತ್ತಿದೆ ಅಲ್ಲಿ ಆಗತಕ್ಕಂಥಾದ್ದು Distilleries based on non-molases. ಎಲ್ಲಾ ಸ್ಪಿರೀಟ್‌ನಿಂದಲೇ. ಅದಕ್ಕೆ ನಾನು ಒಂದು ಉದಾಹರಣೆ ಕೊಡುವುದಾದರೆ the proposed Sweet Potate based distillery. H. C. Dasappa and sons. ಗೆಣಸಿನ ಗಡ್ಡೆಯಿಂದ ಸ್ಪಿರೀಟ್ ತೆಗೆದು ಅದನ್ನು ಡಿಸ್ಟಿಲರೀಸ್ ಮಾಡತಕ್ಕಂಥಾದ್ದು ನನಗೆ ಗೊತ್ತಿರುವ ಹಾಗೆ ಮೂರು ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರೀಟ್ ಅನ್ನು ಒಂದು ತಿಂಗಳಿಗೆ ಅವರಿಗೆ ಕೊಟ್ಟಿದ್ದಾರೆ. ಅವರಿಗೆ ರೆಕ್ಟಿಫೈಡ್ ಸ್ಪಿರೀಟ್ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ.

ಆದರೂ ಯಾವ ಕಾರಣಗಳಿಂದ ಕೊಟ್ಟಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನೀವು ಹೇಳಿದ ರೀತಿಯಲ್ಲಿ ಕೆಲಸ ಮಾಡಿದ್ದರೆ ಸರ್ಕಾರಕ್ಕೆ ಇನ್ನೂ ಹೆಚ್ಚು ಆದಾಯ ಬರುತ್ತಿತ್ತು. ತಾವು ಸ್ವಲ್ಪ ಮಟ್ಟಿಗೆ ಐ.ಎಂ.ಎಫ್.ಎಲ್. ನಲ್ಲಿ ಏನೇನೂ ನಡೆಯುತ್ತಿತ್ತು ಅದನ್ನು ಸ್ವಲ್ಪ ನಿಲ್ಲಿಸಿದ್ದೀರಿ. ಅಷ್ಟಕ್ಕೆ ಮಾತ್ರ ನಾನು ತಮಗೆ ಮೆಚ್ಚುಗೆ ಸೂಚನೆ ಮಾಡುತ್ತೇನೆ. ಸಂತೋಷಪಡುತ್ತೇನೆ. ಒಳ್ಳೆಯ ಕೆಲಸ ಆಗಿದೆ. ನಮ್ಮ ರಾಜ್ಯದಲ್ಲಿ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಆದರೆ ಈಗ ಇಲ್ಲಿ ನಡೆಯುತ್ತಿರತಕ್ಕಂಥ ವ್ಯವಹಾರಗಳನ್ನು ನಾವು ಕಂಡಾಗ ಇದು ನಿಜ ಅಥವಾ ಅಲ್ಲವೆಂದು ತಾವು

೫-೧೫.ಪಿ.ಎ.

ಹೇಳಬೇಕು. ಇದನ್ನು ಕೇಳಿದಾಗ ನಮ್ಮ ಮನಸ್ಸಿಗೆ ಬರುತ್ತದೆ. ಅಂದರೆ ಮೊದಲು ಈ ರಾಜ್ಯವನ್ನು ಖೋಡೆ ದಾಸಪ್ಪ ಮತ್ತು ಬಸವರಾಜು ಅವರುಗಳು ಆಳ್ವಿಕೆ ಮಾಡುತ್ತಿದ್ದರು. ಏನು ಅದರಲ್ಲಿ ಮುಲಾಜು ಇಲ್ಲ. ಈಗ ಐ.ಎಂ.ಎಫ್.ಎಲ್. ಹೋಯಿತು, ಖೋಡೆ ಹೋದರು, ಸಾರಾಯಿ ದಾಸಪ್ಪ ಬಂದಿದ್ದಾರೆ. ಈಗ ಅವರ ರಾಜ್ಯ ನಡೆಯುತ್ತಿದೆಯೆಂದು ಈ ಕಾರಣಗಳಿಂದ ನಾನು ಹೇಳಲೇಬೇಕಾಗುತ್ತದೆ. ಏಕೆ ಎಂದರೆ, ಬೆಂಗಳೂರಿನಲ್ಲಿ ಎಷ್ಟರ ಮಟ್ಟಿಗೆ ಸಾರಾಯಿ ಮಾರಾಟ ವಾಗುತ್ತಿದೆ ಅಂದರೆ ೩ ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಇವರಿಗೆ ಕೊಡಲಾಗುತ್ತಿದೆ ಮತ್ತೆ ಈ ಬಾಟ್ಲಿಂಗ್ ಯಾವ ಉದ್ದೇಶದಿಂದ ತಂದರೋ ಅದನ್ನು ಬುಡಮೇಲು ಮಾಡತಕ್ಕ ಒಂದು ಪ್ರಯತ್ನ ನಡೆಯುತ್ತಿದೆ. ನಿಮ್ಮ ಎಕ್ಸೈಸ್ ಕಮಿಷನರ್‌ರವರ ಆರ್ಡರ್ ಇಲ್ಲಿದೆ. ಬೇಕಾದರೆ ಇದನ್ನು ಓದಿ ಹೇಳುತ್ತೇನೆ, ಇದನ್ನು ಗಮನಿಸಿದಾಗ ಆ ಒಂದು ದೊರೆಗಳ ಲಾಬಿ ಹೋಯಿತು, ಈಗ ಇನ್ನೊಂದು ಲಾಬಿ ಪ್ರಾರಂಭವಾಗಿದೆ. ಸರ್ಕಾರ ಚಕ್ರಗಳನ್ನು ತಿರುಗಿಸತಕ್ಕ ಆಯಕಟ್ಟಿನ ಜಾಗದಲ್ಲಿ ಇವರು ಬಂದು ಕುಳಿತಿದ್ದಾರೆ. ಆ ಆರೋಪವನ್ನು ನಾನು ಮಾಡದೆ ಹೋದರೆ ನಾನು ಕರ್ತವ್ಯ ಲೋಪ ಮಾಡಿದ ಹಾಗಾಗುತ್ತದೆ. ಮೈಸೂರು ಶುಗರ್ ಕಂಪನಿಯವರಿಗೆ ಹೆಚ್ಚು ಹಣ ಕೊಟ್ಟು ಈ ಕೆಲಸವನ್ನು ಅಲ್ಲಿಂದ ಮಾಡಿಸಬಹುದು. ಇವತ್ತಿನ ದಿವಸ ಎಲ್ಲ ಕಡೆಗೂ ಸಾರಾಯಿ ಸಪ್ಲೈ ಮಾಡುವ ಅಧಿಕಾರವನ್ನು ಅವರಿಗೆ ಕೊಡಿ. ಇದರಿಂದ ಸರ್ಕಾರ ೫-೬ ಕೋಟಿ ರೂಪಾಯಿ ಇಲ್ಲವೇ ೧೦ ಕೋಟಿ ಖರ್ಚು ಮಾಡಬೇಕಾಗಿ ಬರಬಹುದು. ಮೈಸೂರು ಶುಗರ್ ಕಂಪನಿಯ ಕೆಪಾಸಿಟಿ ಜಾಸ್ತಿ ಮಾಡಬೇಕಾದರೆ ಹಣವನ್ನು ಸರ್ಕಾರ ಕೊಡಬೇಕಾಗುತ್ತದೆ. ತಾವು ಏಕೆ ಈ ದಿಕ್ಕಿನಲ್ಲಿ ಯೋಚನೆ ಮಾಡುತ್ತಿಲ್ಲ ? ಇವತ್ತು ಸಾರಾಯಿಯನ್ನು ಬಲ್ಕ್ ಆಗಿ ಬೇರೆಯವರ ಕೈಯಿಂದ ಮಾರಾಟ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ಇಷ್ಟನ್ನು ನಾನು ಹೇಳದಿದ್ದರೆ ಕರ್ತವ್ಯ ಲೋಪ ವಾಗುತ್ತದೆ. ಮತ್ತೆ ನಾನು ಆಗಲೇ ಹೇಳಿದ್ದೇನೆ, ಲೇಬಲ್ ಪ್ರಿಂಟ್ ಬಗ್ಗೆ ಏನೇನು ನಡೆದಿದೆ ಎಂಬ ಬಗ್ಗೆ ದೊಡ್ಡ ಕಡತವೇ ಇದೆ. ಇದರ ಬಗ್ಗೆ ಅವರು ಸವಾಲು ಹಾಕಿದ್ದಾರೆ, ಆ ಸವಾಲನ್ನು ತಾವು ಸ್ವೀಕರಿಸಬೇಕು. ಈ ಲೇಬಲ್ ಪ್ರಿಂಟಿಂಗ್ ಬಗ್ಗೆ ವಿಚಾರಣೆಯಾಗಬೇಕು. ಮತ್ತು ೧೮೦೦ ಕೋಟಿ ರೂಪಾಯಿಯಷ್ಟು ಹಣ ಏನಿದೆ ಅದು ಕಡಿಮೆ ಮೊತ್ತ ಅಲ್ಲ. ಇದು ಈ ರಾಜ್ಯಕ್ಕೆ ಬರಬೇಕಾದ ಹಣ. ಇದು ಯಾರ ಯಾರ ಪಾಲೋ ಆಯಿತು. ಆ ಹಣ ಎಲ್ಲಿಗೆ ಹೋಯಿತೋ, ಈ ದೇಶದಲ್ಲಿ ಇದೆಯೋ, ಹೊರದೇಶದಲ್ಲಿ ಇದೆಯೋ ಎಂದು ಪತ್ತೆ ಮಾಡಬೇಕಾಗುತ್ತದೆ. ಈ ಕೆಲಸವನ್ನು ನಿಮಗೆ ವಹಿಸಿದ್ದಾರೆ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೆ ಲಾ ಮಾಡಿದ್ದಾರೆ. ಅದು ಇರತಕ್ಕಂತಾದ್ದು ಏಕೆ ? ಅವರು ಯಾವ ಸ್ಥಾನದಲ್ಲೇ ಕುಳಿತಿರಲಿ, ತಪ್ಪಿತಸ್ಥರಿಗೆ ದಂಡನೆಯಾಗಬೇಕು. ದಂಡನೆ ಮಾಡದಿದ್ದರೆ, ನೀವೂ ಕೂಡ ಹಿಂದೆ ಏನು ನಡೆಯಿತೋ ಅದಕ್ಕೆ ಶಾಮೀಲಾಗುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಅಷ್ಟೆ ಅಲ್ಲ, ಅದೇ ಜಾಡಿನಲ್ಲಿ ಹೋಗುತ್ತಿದ್ದೀರೆಂದು ಹೇಳಬೇಕಾಗುತ್ತದೆ. ಆಮೇಲೆ, ಇನ್ನೊಂದು ಮಹತ್ತರವಾದ ವಿಷಯ ಎಂದರೆ ನನ್ನದೇ ಕೊಶ್ಚನ್‌ಗೆ ಡಿಫಾಲ್ಟರ್ಸ್‌ಗಳು ಸಾರಾಯಿ ಹರಾಜಿನಲ್ಲಿ ಭಾಗವಹಿಸಿ ಕೂಗುವುದಕ್ಕೆ ಅಧಿಕಾರವಿಲ್ಲವೆಂದು ಹೇಳಲಾಗಿದೆ. ಆದರೆ ಎಷ್ಟು ಕಡೆ ಡಿಫಾಲ್ಟರ್ಸ್‌ಗಳು ಸಾರಾಯಿ ಹರಾಜಿನಲ್ಲಿ ಭಾಗವಹಿಸಿಲ್ಲ ? ಈ ವರ್ಷವೂ ಡಿಫಾಲ್ಟರ್ಸ್‌ಗಳು ಹರಾಜಿನಲ್ಲಿ ಭಾಗವಹಿಸುವುದು ನಡೆದಿದೆ. ಅನೇಕ ಕಡೆ ಹರಾಜಿನಲ್ಲಿ ಇವತ್ತಿನ ದಿವಸ ಭಾಗವಹಿಸಿದ್ದಾರೆ. ಏನು ಕಾರಣ ಅದಕ್ಕೆ ? ಆದಾಯ ಹೆಚ್ಚಿಗೆ ಬರಬೇಕು. ಎನ್ನುವ ದೃಷ್ಟಿಯಿಂದ ಅವರುಗಳಿಗೆ ಅವಕಾಶ ಮಾಡಲಾಗಿದೆಯೆಂದು ಇನ್ನೊಂದು ಕಡೆ ಹೇಳಿದ್ದೀರಿ. ನಾನು 'ಇನ್ನೊಂದು ಪದವನ್ನು' ಉಪಯೋಗಿಸಬೇಕಾಗುತ್ತದೆ. ಅದನ್ನು ಉಪಯೋಗಿಸಿದರೆ ಸರಿಯಾಗಿರುವುದಿಲ್ಲ. ಇನ್ನು ಏನೇನೋ ಮಾಡಿದರೆ ಆದಾಯ ಜಾಸ್ತಿ ಬರುತ್ತದೆ. ಅದನ್ನು ಮಾಡುವುದಕ್ಕೆ ತಾವು ತಯಾರಿದ್ದೀರಾ ? ಕಾನೂನು ಕಟ್ಟಳೆಯನ್ನು ಮೀರಿ ಕೆಲವರ ಮುಲಾಜಿಗೋಸ್ಕರ ಮತ್ತು ಅವರನ್ನು ಬೆಳೆಸುವುದಕ್ಕೋಸ್ಕರ, ಈ ಕಾನೂನು ಪುಸ್ತಕವನ್ನು ತಿಪ್ಪೆಗೆ ಬಿಸಾಕಿ, ಈ ಮನೆಯಲ್ಲಿ ಮಾಡಿರತಕ್ಕ ಕಾನೂನುಗಳನ್ನು ತಿಪ್ಪೆಗೆ ಬಿಸಾಕಿ ಬೇರೆ ಕಾರಣಗಳಿಗೆ ತಾವು ಅವಕಾಶ ಕೊಟ್ಟಿದ್ದೀರಿ ಇಲ್ಲಿದೆ, ಕಾನೂನು ಬೇಕಾದರೆ ಓದುತ್ತೇನೆ.

ಕಾನೂನಿನಲ್ಲಿ ಅವರು ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಅವರೂ ಕೂಡ ಅವರಿಗೆ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಸರಿಯಲ್ಲ. ಇವತ್ತು ೫೦–೬೦ ಕೋಟಿ ರೂಪಾಯಿ ಬಾಕಿದಾರರು ಯಾರಿದ್ದಾರೆ, ಅವರಲ್ಲಿ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಮತ್ತೆ ಕೆಲವರಿಗೆ ಇಂತಿಷ್ಟೆ ವಸೂಲು ಮಾಡಿ ಎಂದು ಕೋರ್ಟಿನಲ್ಲಿ ಆಜ್ಞೆಯಾಗಿದೆ. ಇದನ್ನು ಹೀಗೆ ಬಿಟ್ಟರೆ ಅದೇಗತಿ ಮತ್ತೆ ಬರುತ್ತದೆ. ಈ ವರ್ಷ ನೀವು ಏನು ಬೆನ್ನು ತಟ್ಟಿಕೊಳ್ಳುತ್ತಿದ್ದೀರಿ, ಯಾವ ಒಂದು ವಿಚಾರದಲ್ಲಿ ನನಗೆ ಖುಷಿಯನ್ನು ತಂದಿದೆಯೋ ಇದು ನೆರವೇರುವುದಿಲ್ಲ. ಕಾರಣವೇನೆಂದರೆ ಇವರು ಪ್ರತಿ ತಿಂಗಳು ಹಣ ಕೊಡಬೇಕೆಂದು ಕಾನೂನಿನಲ್ಲಿದೆ. ಆಯಾ ತಿಂಗಳ ಕಿಸ್ತನ್ನು ಇಷ್ಟೇ ತಾರೀಖಿನೊಳಗೆ ಕೊಡಬೇಕೆಂದು ಇದೆ. ಈಗಲಾದರೂ ನೀವು ಎಚ್ಚರಿಕೆಯನ್ನು ವಹಿಸಬೇಕು. ಇಲ್ಲವಿದ್ದರೆ ೬೦ ಕೋಟಿ ಬಾಕಿ ಇರುವುದು ೨೦೦–೨೫೦ ಕೋಟಿಗೆ ಹೋಗಿಬಿಡುತ್ತದೆ. ಮುಂದಿನ ವರ್ಷ ಇದೇ ಸದನದಲ್ಲಿ ನಾನು ತೀವ್ರವಾಗಿ ಅಪಾದನೆಯನ್ನು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈಗಿನಿಂದಲೇ ಪ್ರತಿ ತಿಂಗಳು ಕಿಸ್ತಿನ ಹಣ ಏನು ಬರಬೇಕು. ಅವನ್ನು ವಸೂಲಿ ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೆಲವು ಕಡೆ ಮರು ಹರಾಜು ಹಾಕಿದರೆ ಸ್ವಲ್ಪ ನಷ್ಟವಾಗಬಹುದು. ಈ ಮರು–ಹರಾಜಿನ ಬಗ್ಗೆ ಹೇಳಬೇಕಾದರೆ ಅದು ಒಂದು ದೊಡ್ಡ ಕತೆ. ಇದು ಹೇಗೆ ಆಗುತ್ತದೆ ಎಂದರೆ ಇವರಲ್ಲಿ ಬೇನಾಮಿ ಟ್ರಾನ್ಸ್‌ಯಾಕ್ಷನ್ಸ್ ಇದೆ. ಪೆಟ್ರೋಲ್ ಬಂಕ್‌ನಲ್ಲಿ ಕಾರಿಗೆ ಪೆಟ್ರೋಲ್ ಹಾಕತಕ್ಕ ಹುಡುಗ ದೊಡ್ಡ ಕಂಟ್ರಾಕ್ಟರ್ ಆಗುತ್ತಾನೆ. ಕಾರು ಮೆಕಾನಿಕ್, ಲಾರಿ ಮೆಕಾನಿಕ್ ದೊಡ್ಡ ಎಕ್ಸೈಜ್ ಕಂಟ್ರಾಕ್ಟರ್ ಆಗಿಬಿಡುತ್ತಾನೆ. ಇಂತಹ ಪವಾಡ ಇಲ್ಲಿ ನಡೆಯುತ್ತಿದೆ. ಒಂದು ಆಶ್ಚರ್ಯಕರವಾದ ಪವಾಡ ಇಲ್ಲಿ ನಡೆಯುತ್ತಿದೆ.

ಅಧ್ಯಕ್ಷರು.—ಏತಕ್ಕೆ ಸಾಧ್ಯ ಆಗಬಾರದು. ರ್‍ಯಾಗ್ಸ್ ಟು ರಿಚಸ್ಸ್ ಎಂದು ಇದೆ.

ಶ್ರೀ ಸಿ. ಬೈರೇಗೌಡ.—ಐದು ಜನ ಪೆಟ್ರೋಲ್ ಹಾಕುವ ಹುಡುಗರು ದೊಡ್ಡ ಕಂಟ್ರಾಕ್ಟರ್ ಆದರೆ ನಾನು ಬಹಳ ಸಂತೋಷ ಪಡುತ್ತೇನೆ. ಇವರು ಸುಮಾರು ೫–೬ ಸಾವಿರ ಜನರಿದ್ದಾರೆ. ಇವರಲ್ಲಿ ಕನಿಷ್ಠ ಪಕ್ಷ ಒಬ್ಬ ಹುಡುಗ ಹಾಗೂ ಒಬ್ಬ ಮೆಕ್ಯಾನಿಕ್ ಎಕ್ಸೈಜ್ ಕಂಟ್ರಾಕ್ಟರ್ ಆದರೆ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ಪರಿಸ್ಥಿತಿ ಏನೆಂದರೆ ಅದು ಆಗುತ್ತಿಲ್ಲ, ಅವರು ಹೆಸರಿಗೆ ಮಾತ್ರ ಎಕ್ಸೈಜ್ ಕಂಟ್ರಾಕ್ಟರ್ ಅಷ್ಟೆ.

ಇದು ತುಮಕೂರಿನಲ್ಲಿ ನಡೆದಿದೆ, ಬೆಂಗಳೂರಿನಲ್ಲಿ ನಡೆದಿದೆ. ದಾಸಪ್ಪ ಅಂಡ್ ಕಂಪನಿ. ಅವರು ಮೆಕ್ಯಾನಿಕ್‌ನ ಹೆಸರಿನಲ್ಲಿ ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ. ಅಫಿಶಿಯಲ್ ಆಗಿ ಕಾಗದದ ಮೇಲೆ ಇರತಕ್ಕ ಹೆಸರುಗಳು ಬೇರೆ, ಇದರ ಹಿಂದೆ ಇರತಕ್ಕ ಹೆಸರುಗಳು ಬೇರೆ. ಆದರೆ ಏತಕ್ಕೆ ವ್ಯಥೆಯಾಗುತ್ತದೆ ಎಂದರೆ ಕಾಗದದ ಮೇಲೆ ಪೆಟ್ರೋಲ್ ಬಂಕ್ ಹುಡುಗ, ಕಾರ್ ಮೆಕ್ಯಾನಿಕ್ ಹುಡುಗನ ಹೆಸರು ಇರುತ್ತದೆ, ಆದರೆ ವಾಸ್ತವಿಕವಾಗಿ ಈಗಲೂ ಅವರು ಕಾರು ಮೆಕಾನಿಕ್ ಪೆಟ್ರೋಲ್ ಹಾಕತಕ್ಕ ಹುಡುಗ ಪೆಟ್ರೋಲ್ ಹಾಕಿಕೊಂಡೇ ಇದ್ದಾನೆ. ಅವನಿಗೆ ಒಂದು ನೂರು ರೂಪಾಯಿಯೂ ಸಹ ಹೆಚ್ಚಿಗೆ ಸಿಕ್ಕಿಲ್ಲ. ಅವರು ಮೊದಲು ಹೇಗೆ ಇದ್ದರೋ ಹಾಗೆಯೇ ಮುಂದುವರಿಯುತ್ತಿದ್ದಾರೆ. ಆದರೆ ಇವರುಗಳ ಹೆಸರಿನಲ್ಲಿ ಬೇರೆಯವರ ಬೊಕ್ಕಸಕ್ಕೆ ಸಾವಿರಾರು ರೂಪಾಯಿಗಳು ಹೋಗಿ ಸೇರಿಕೊಳ್ಳುತ್ತಿದೆ. ಈಗಲಾದರೂ ಕೂಡ ತಾವು ಶ್ರದ್ಧೆ ವಹಿಸಿ ಇದರ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾದಂತಹ ಅವಶ್ಯಕತೆ ಇದೆ. ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್‌ಗೆ ತಾವು ಮಾರಾಟದ ಜವಾಬ್ದಾರಿಯನ್ನು ವಹಿಸಿದ್ದೀರಿ. ಸೆಕೆಂಡ್ಸ್ ಅನ್ನು ತಪ್ಪಿಸುವ ಬಗ್ಗೆ ಕ್ರಮ ಕೈಗೊಂಡಿದ್ದೀರಿ. ಬರೀ ಐ. ಎಂ. ಎಫ್. ಎಲ್. ನಲ್ಲಿ ಮಾತ್ರವಲ್ಲ. ಬೇರೆಯುದರಲ್ಲಿಯೂ ತಾವು ಕ್ರಮ ತೆಗೆದುಕೊಳ್ಳಬೇಕು. ಇದರಿಂದ ಹತ್ತು ಕೋಟಿ ರೂಪಾಯಿ ಕಡಿಮೆ ಬಂದರೂ ಚಿಂತೆ ಇಲ್ಲ. ಆದರೆ ನೀವು ಯೋಗ್ಯ ಬೆಲೆಯನ್ನು ನಿರ್ಧರಿಸಬೇಕು. ಹೆಚ್ಚಿನ ಹಣ ಬೇಕೆಂದು ಎಷ್ಟು ಬೇಕಾದರೂ ಹೆಚ್ಚು ಮಾಡಬಹುದು ಎಂಬುದನ್ನು ನಾನು ಒಪ್ಪುವುದಿಲ್ಲ. ಎಷ್ಟು ಬರಬೇಕು, ಅದು ಪೋಲಾಗದೆ ಸರ್ಕಾರಕ್ಕೆ ಬರಬೇಕು. ಹಣ ಬೇರೆಯವರ ಪಾಲಾಗದೆ ಅದು ಸರ್ಕಾರಕ್ಕೆ ಬರಬೇಕು. ಸರ್ಕಾರದವರು ಎಂಎಸ್‌ಐಎಲ್‌ಗೆ ಈ ಮಾರಾಟವನ್ನು ವಹಿಸಿದ್ದಾರೆ. ಇದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಕೇಸು ಇದೆ. ನಿಮ್ಮ ಅಡ್ವೋಕೇಟ್ ಜನರಲ್‌ರವರು ಎಷ್ಟು ಸಾರಿ ಹೋಗಿ ಅಲ್ಲಿ ಆರ್ಗ್ಯೂ ಮಾಡಿದ್ದಾರೆ ಎಂಬುದನ್ನು ತಾವು ತಿಳಿಸಬೇಕು. ಇವತ್ತು ಶಾಮೀಲು ಆಗತಕ್ಕದ್ದು ನಡೆಯುತ್ತಿದೆ. ನನಗೆ ಬಂದಿರುವ ಸುದ್ದಿಯ ಪ್ರಕಾರ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿನ ಕೇಸ್ ಬಗ್ಗೆ ಎಷ್ಟು ಶ್ರದ್ಧೆ ವಹಿಸಬೇಕಾಗಿತ್ತೋ ಅಷ್ಟು ಶ್ರದ್ಧೆ ವಹಿಸಿಲ್ಲವೆಂದು.

ಸಭಾಧ್ಯಕ್ಷರು.—ಸುಪ್ರೀಂ ಕೋರ್ಟಿಗೆ ಈಗ ರಜೆ ಇದೆ. The Supreme Court is on vacation now. The other day, the Law Minister with reference to Cauvery Tribunal, he made a statement on the Floor of this House that the Supreme Court is on vacation and it has reopened on 9th.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಯಾರು ಈ ಸದನದ ಮುಂದೆ ಇಲ್ಲ ಅವರೆಲ್ಲರ ಮೇಲೆ ಸಾರಸಗಟಾಗಿ ನಾವು ಚಾರ್ಜ್ ಮಾಡುತ್ತಾ ಬಂದರೆ, ಐ ಹ್ಯಾಮ್ ಸಾರಿ, ಶಾಮಿಾಲು ಎಂದರೆ ಸುಪ್ರೀಂ ಕೋರ್ಟ್ ಜಡ್ಜ್‌ಗಳ ಮೇಲೆ ಸಹ ರಿಫ್ಲೆಕ್ಟ್ ಆಗುತ್ತದೆ. ದಯಮಾಡಿ ಈ ತರಹ ಸಾರಾಸಗಟು ಆಗಿ ಚಾರ್ಜ್ ಮಾಡಲು ಅವಕಾಶ ಕೊಟ್ಟಕ್ಕೆ ಅದಕ್ಕೆ ಮಿತಿ ಇರುವುದಿಲ್ಲ.

MR. SPEAKER.—He is not making any allegation against the Supreme Court Judges. He is only attacking the Government to say that how many times the Advocate General has gone to the Supreme Court to make his appearance in this particular case but the point which I am driving home to make is that when the Supreme Court is not sitting, where is the question of Advocate General going and appearing?

SRI M. VEERAPPA MOILY.—How can he go?

ಶ್ರೀ ಸಿ. ಬೈರೇಗೌಡ.—ಮಾನ್ಯ ಮೊಯಿಲಿಯವರು ಮಿಸ್‌ಲೀಡ್ ಮಾಡುವುದರಲ್ಲಿ ಬಹಳ ನಿಪುಣರು. ಆದರೆ ತಾವುಗಳು ಅದನ್ನು ಕ್ಲಾರಿಫೈ ಮಾಡಿದ್ದೀರಿ, ಅದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ಹೇಳುತ್ತಾ ಇರುವುದು, ಏನೆಂದರೆ ಸುಪ್ರೀಮ್ ಕೋರ್ಟ್‌ಗೆ ರಜೆ ಬಂದಿರತಕ್ಕಂಥಾದ್ದು ಒಂದು ಅಥವಾ ಒಂದೂವರೆ ತಿಂಗಳಿಂದೀಚೆಗೆ. ಆದರೆ ಈ ಕೇಸ್ ಕಳೆದು ಒಂದೂವರೆ ವರ್ಷದಿಂದ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದ್ಯಕ್ಷರೆ ನಾನು ಲೀಡ್ ಮಾಡುತ್ತೇನೆ ಹೊರತು ಮಿಸ್‌ಲೀಡ್ ಮಾಡುತ್ತಿಲ್ಲ. ಮಿಸ್‌ಲೀಡ್ ಯಾರು ಮಾಡುತ್ತಿದ್ದಾರೆ ಎಂದು ಪ್ರಪಂಚಕ್ಕೇ ಗೊತ್ತಾಗಿದೆ .....

ಶ್ರೀ ಸಿ. ಬೈರೇಗೌಡ.— ನಮ್ಮಲ್ಲಿಯ ಸಂದಿಗ್ಧವನ್ನು ಮಾನ್ಯ ಅಧ್ಯಕ್ಷರು ಕರೆಕ್ಟ್ ಮಾಡಿದರು. ಅದು ಈಗಾಗಲೇ ವೇದ್ಯವಾಯಿತು. ಈ ಕೇಸ್ ಈಗ ನಡೆಯುತ್ತಾ ಇಲ್ಲ, ಅದಕ್ಕಿಂತ ಮೊದಲಿನಿಂದಲೂ ಅಪೀಲ್ ಹಾಕಿ ಸ್ಟೇ ತೆಗೆದುಕೊಂಡಿದ್ದಾರೆ. ಖೋಡೇಸ್ ಕಂಪನಿಯವರು ಸ್ಟೇ ತೆಗೆದುಕೊಂಡಿದ್ದಾರೆ. ಈ ಕೇಸ್‌ನಲ್ಲಿ ಯಾವರೀತಿಯಲ್ಲಿ ಸರಕಾರ ಶ್ರದ್ಧೆವಹಿಸಿ ಕೆಲಸ ಮಾಡಬೇಕಾಗಿತ್ತೊ ಅನನ್ನು ಮಾಡಿಲ್ಲ.

MR. SPEAKER.—Then it becoms sub-judice. You are leading me to come to the conclusion that it is sub-judice.

ಶ್ರೀ ಸಿ. ಬೈರೇಗೌಡ.—ಇವರು ಮಾಡಿರತಕ್ಕಂಥ ಕೆಲಸ. ತೆಗೆದುಕೊಂಡಿರತಕ್ಕಂಥ ಕ್ರಮ ಸರಿಯೆಂದಾದರೂ ನಾನು ಹೇಳ ಬೇಕಾಗಿಲ್ಲವೇ? ಅಷ್ಟಾದರೂ ತಮ್ಮ ವಾದವನ್ನು ಮಂಡಿಸತಕ್ಕಂಥ ಕೆಲಸ ಆಗಬೇಕಲ್ಲ? ಅದನ್ನು ಸರಕಾರ ಮಾಡುತ್ತಾ ಇಲ್ಲ, ಅದು ಆಗುತ್ತಾ ಇಲ್ಲ. ನಾಳೆ ಈ ನಿಮ್ಮ ಲಾಪ್ಸ್‌ನಿಂದಾಗಿ ಕೋರ್ಟ್‌ನಲ್ಲಿ ಒಂದು ವೇಳೆ ಸರಕಾರವು ಸೋತರೆ ನಾವೇನು ಮಾಡುವುದು, ಕೋರ್ಟ್‌ನ ತೀರ್ಮಾನ ಹೀಗೆ ಇದೆ ಎಂದು ಹೇಳಿ ಸುಲಭವಾಗಿ ತಪ್ಪಿಸಿಕೊಳ್ಳುತ್ತೀರಿ. ಹೀಗೆ ಹಿಂದೆಯೂ ಬೇಕಾದಷ್ಟು ಕೇಸ್‌ಗಳು ಆಗಿವೆ. ಇಂಥ ಒಂದು ಪ್ರಯತ್ನ ನಡೆಯುತ್ತಾ ಇದೆ. ಎಂಎಸ್‌ಐಎಲ್‌ನ ವಕೀಲರು ಮಾತ್ರ ಕೋರ್ಟ್‌ಗೆ ಹೋಗುತ್ತಾ ಇದ್ದಾರೆ. ಸರಕಾರದ ವಕೀಲರು ಸರಕಾರದ ಪರವಾಗಿ ಶ್ರದ್ಧೆಯಿಂದ ಕೆಲಸ ಮಾಡುತ್ತಾ ಇಲ್ಲ. ಈ ರೀತಿಯಿಂದಾಗಿ ಲ್ಯಾಪ್ಸ್ ಆಗಿದ್ದರೆ ಅದನ್ನು ಗಮನಿಸಬೇಕೆಂದು ಹೇಳಿ, ಒಟ್ಟಿನಲ್ಲಿ ನನಗೆ ತಾವುಗಳು ಸಾಕಷ್ಟು ವೇಳೆಯನ್ನು ಕೊಟ್ಟಿದ್ದೀರಿ. ನಾನು ಎತ್ತಿರತಕ್ಕಂಥಾದ್ದು ನನ್ನ ವೈಯಕ್ತಿಕ ದೃಷ್ಟಿಯಿಂದ ಅಲ್ಲ ಅಥವಾ ಯಾರನ್ನೋ ಪ್ರೊಟೆಕ್ಟ್ ಮಾಡುವುದಕ್ಕೂ ಹೊರಟಿಲ್ಲ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮಾತ್ರ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ಪರಿಣಾಮವಾಗಿ ೧೯೦೦ ಕೋಟಿ ರೂಪಾಯಿಗಳು ಏನು ನಷ್ಟ

ವಾಗಿದೆ, ಅದರ ಪರಿಣಾಮ ನಮ್ಮ ರಾಜ್ಯದ ಮೇಲೆ ಏನಾಗಿದೆಯೋ ಆ ದೃಷ್ಟಿಯಿಂದ ಮಾತ್ರ ನಾನು ಹೇಳಿದ್ದೇನೆ, ೨೦ ರೂ. ಗಳವರೆಗೆ ಟ್ಯಾಕ್ಸ್‌ನ್ನು ಐಎಂಎಫ್‌ಎಲ್‌ಗೆ ಏರಿಸಿದ್ದೀರಿ. ಅದನ್ನು ಇಳಿಸದಿದ್ದರೆ ಈ ಇಂಡಸ್ಟ್ರೀ ನಿರ್ನಾಮವಾಗುತ್ತದೆ. ಇದು ಜಾರಿಗೆ ಬಂದಮೇಲೆ ಎಷ್ಟು ಎಕ್ಸ್‌ಪೋರ್ಟ್ ಆಗಿದೆ ಎಂದು ತಾವುಗಳು ಹೇಳಬೇಕು. ಈ ಒಂದು ಟ್ಯಾಕ್ಸ್ ಜಾರಿಗೆ ಬಂದ ಮೇಲೆ ಆದ ಎಕ್ಸ್‌ಪೋರ್ಟ್ ಎಷ್ಟು ಎಂಬುದನ್ನು ತಾವು ಹೇಳಬೇಕು. ಏಕೆಂದರೆ ಈ ಇಂಡಸ್ಟ್ರೀಯನ್ನು ನಾವು ಉಳಿಸಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ ಸರ್‌ಪ್ಲಸ್ ಮೊಲಾಸಿಸ್ ಇದೆ, ರೆಕ್ಟಿಫೈಡ್ ಸ್ಪಿರಿಟ್ ಇದೆ, ಅದನ್ನು ನಮ್ಮ ಮಾನ್ಯ ವಿರೋಧಿಪಕ್ಷದ ನಾಯಕರೂ ಕೂಡ ಹೇಳಿದ್ದಾರೆ. ಅದಕ್ಕೆ ನನ್ನ ಧ್ವನಿಯನ್ನು ಸೇರಿಸಿ, ಇಷ್ಟನ್ನು ಹೇಳಿ ತಮಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಹಣಕಾಸು, ಅಬಕಾರಿ, ಯೋಜನೆ ಮತ್ತು ಕಾನೂನು—ಇವುಗಳ ಬೇಡಿಕೆಯ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಇದನ್ನು ಅನುಮೋದನೆ ಮಾಡುತ್ತಾ ನಮ್ಮ ರಾಜ್ಯದ ಬಜೆಟ್ ಮಂಡಣೆಯ ವಿಚಾರವಾಗಿ ಮತ್ತು ಈಗಿನ ರಾಜ್ಯದ ಆರ್ಥಿಕ ಪರಿಸ್ಥಿತಿಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ.

೧೯೯೦–೯೧ನೇ ಸಾಲಿನ ಬಜೆಟ್‌ನ್ನು ನಾವು ನೋಡಿದಾಗ ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿರತಕ್ಕಂಥದ್ದನ್ನು ನೋಡಿದಾಗ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಸುಮಾರು ವರ್ಷಗಳಿಂದ ಬಹಳ ಚೆನ್ನಾಗಿ ಇತ್ತು, ಪ್ರಗತಿಪರವಾದಂಥ ಯೋಜನೆಗಳನ್ನು ಹಾಕಿಕೊಂಡು ಮುಂದೆ ಸಾಗುತ್ತಿದ್ದ ಸಂದರ್ಭದಲ್ಲಿ ಕಳೆದ ಆರೇಳು ವರ್ಷಗಳಲ್ಲಿ ಅದು ಹೀನಸ್ಥಿತಿಗೆ ಹೋಗಿ ಈ ಕರ್ನಾಟಕ ರಾಜ್ಯದ ಪ್ರಗತಿ ಕುಂಠಿತವಾಯಿತೆನ್ನುವುದು ಪ್ರತಿಯೊಬ್ಬರಿಗೂ ಗೊತ್ತಿದೆ. ಈ ಪುಸ್ತಕವನ್ನು ನೋಡಿದಾಗ ಮತ್ತು ಅನೇಕ ಜನ ಮಾತನಾಡುವುದನ್ನು ಕೇಳಿದಾಗ ಇದು ಗೊತ್ತಾಗುತ್ತದೆ. ಯಾವುದೇ ಒಂದು ರಾಷ್ಟ್ರ ಅಥವಾ ಒಂದು ದೇಶ ಮುಂದುವರೆಯಬೇಕಾದರೆ ಅದರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಬೇಕು, ಇಂಟರ್‌ನಲ್ ರಿಸೋರ್ಸ್ ಅನ್ನು ಮೊಬಿಲೈಸ್ ಮಾಡುವ ಶಕ್ತಿ ಆ ಸರ್ಕಾರದಲ್ಲಿ ಯಾರೇ ಇದ್ದರೂ ಕೂಡ ಅದನ್ನು ಮಾಡಬೇಕು. ಅದನ್ನು ಮಾಡಿದ ಮೇಲೆ ಅದನ್ನು ಸದ್ವಿನಿಯೋಗ ಮಾಡುವುದು ಆ ಸರ್ಕಾರದ ಕರ್ತವ್ಯ ಎನ್ನುವುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಕಳೆದ ಆರೇಳು ವರ್ಷಗಳಲ್ಲಿ ಆರ್ಥಿಕಸ್ಥಿತಿ ಬಹಳಷ್ಟು ಹದಗೆಟ್ಟಿತ್ತೆಂದು ಅನೇಕರು ಹೇಳುತ್ತಿದ್ದರು. I do not want to make sarcastic remarks. ಅದು ನಮ್ಮ ಕರ್ನಾಟಕದ ಆರ್ಥಿಕಸ್ಥಿತಿ ಬಹಳ ಅಧೋಗತಿಗೆ ಇಳಿದಿತ್ತು ಎಂಬುದನ್ನು ಇವತ್ತು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ಅದಕ್ಕೆ ಸಾಕಷ್ಟು ಮಾಹಿತಿ ಕೂಡ ಇದೆ. ಆದ್ದರಿಂದ ಕರ್ನಾಟಕದಲ್ಲಿ ಯಾವುದೇ ಒಳ್ಳೆಯ ಕೆಲಸಗಳು ಆಗಲಿಲ್ಲವೆಂದು ಎಲ್ಲರಿಗೂ ಕಾಣುತ್ತಿದೆ. ಹೀಗೆ ಯೋಚನೆ ಮಾಡಿದಾಗ, ನಮ್ಮ ರಾಜ್ಯದಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಬಂದ ಮೇಲೆ ಅವುಗಳ ಕಾರ್ಯಕ್ರಮಗಳಿಂದ ನಮ್ಮಲ್ಲಿದ್ದ ಸಂಪನ್ಮೂಲವೆಲ್ಲಾ ಎಲ್ಲೋ ಸೋರಿಹೋಗಿದೆಯೆಂದು ವೇದ್ಯವಾಗುತ್ತದೆ. ಇಂತಹ ಕಷ್ಟಪರಿಸ್ಥಿತಿಯಲ್ಲಿ ಮಾನ್ಯ ಸಚಿವರು ಹಾಗೂ ಸಹೋದ್ಯೋಗಿಗಳು ಬಹಳ ಚೆನ್ನಾಗಿ ಯೋಚನೆ ಮಾಡಿ ಬಂದು ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸುವ ಕೆಲಸಕಾರ್ಯದಲ್ಲಿ ತೊಡಗಿದ್ದಾರೆಂದು ನನಗಾದರೂ ಅನಿಸುತ್ತದೆ ಏಕೆಂದರೆ ನಾವು ಈ ಚುನಾವಣೆ ಎದುರಿಸಿ ಬಂದ ಮೇಲೆ ಕರ್ನಾಕಟದಲ್ಲಿ ನಾವು ಏನೇನೂ ಮಾಡುವುದಕ್ಕೆ ಆಗುವುದಿಲ್ಲ, ಹಿಂದೆ ಮಾಡಿರುವ ಸಾಲ ಏನಿದೆಯೋ ಅದನ್ನು ತೀರಿಸಬೇಕಾಗುತ್ತದೆ, ಪ್ರಗತಿಪರ ಕಾರ್ಯ ಮಾಡಲು ಆಗುವುದಿಲ್ಲವೆಂಬ ಭಯ ಮತ್ತು ಭೀತಿ ಇತ್ತು. ಈಗ ಈ ಬಜೆಟ್‌ನ್ನು ನೋಡಿದಾಗ ಪ್ಲಾನ್ ಔಟ್‌ಲೇ ನೋಡಿದಾಗ ಬಹಳ ಚೆನ್ನಾಗಿ ಅಲೋಕೇಷನ್ಸ್ ಆಗಿದೆ. ಇದರಲ್ಲಿ ನೀರಾವರಿ, ವಿದ್ಯುಚ್ಛಕ್ತಿಗಳ ಕಡೆ ಸಾಕಷ್ಟು ಗಮನ ಸರ್ಕಾರ ಕೊಟ್ಟಿದೆ. ಇದರಿಂದ ಖಂಡಿತವಾಗಿ ನಮಗೆ ಬಂದಿರುವ ಮುಗ್ಗಟ್ಟನ್ನು ನಾವು ಎದುರಿಸಬಹುದು ಎಂಬುದು ಈ ಅಲೋಕೇಷನನ್ನು ನೋಡಿದ್ದಂಥ ಸಂದರ್ಭದಲ್ಲಿ ನನಗಾದರೂ ಸಂತೋಷ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಕೆಲವು ಅಲೋಕೇಷನ್ಸ್ ಮಾಡುವಾಗ ಕೆಲವು ಬದಲಾವಣೆಗಳನ್ನು ಇನ್ನೂ ಚೆನ್ನಾಗಿ ಮಾಡಬಹುದಿತ್ತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿದ್ಯುಚ್ಛಕ್ತಿ ಬಗ್ಗೆ ಐದಾರು ವರ್ಷಗಳಿಂದ ಉತ್ಪಾದನೆ ಜಾಸ್ತಿ ಮಾಡಲಿಲ್ಲ. We are in a critical stage, ಆದರೆ ಬೇಡಿಕೆ ಮಾತ್ರ ಜಾಸ್ತಿಯಾಗಿದೆ. ಅದನ್ನು ಸರಿದೂಗಿಸುವುದಕ್ಕೆ ಇನ್ನಷ್ಟು ಅಲೋಕೇಷನ್ಸ್ ಜಾಸ್ತಿ ಮಾಡದಿದ್ದರೆ ಚೆನ್ನಾಗಿತ್ತು. ಆದೇ ರೀತಿ ಕೃಷಿಗೆ ಜಾಸ್ತಿ ಅಲೋಕೇಷನ್ ಕೊಟ್ಟಿದಿದ್ದರೆ

ಚೆನ್ನಾಗಿರುತ್ತಿತ್ತು. ಎಂದು ನನಗಾದರೂ ಅನ್ನಿಸುತ್ತದೆ. ಅದು ಏನೇ ಇದ್ದರೂ ಕೂಡಾ ಈ ಒಂದು ಬಜೆಟ್‌ನ್ನು, ಈ ಅಲೊಕೇಷನ್ಸ್‌ನ್ನು ನೋಡಿದಂಥ ಸಂದರ್ಭದಲ್ಲಿ ನನಗಾದರೂ ಒಂದು ಸಂತೋಷ ಏನೆಂದರೆ, ಯಾವಾಗಲೂ ಕೂಡಾ ನಮ್ಮ ದೇಶದಲ್ಲಿ ಡೆಫಿಸಿಟ್ ಬಜೆಟನ್ನು ತಯಾರು ಮಾಡುವುದರಲ್ಲಿ ನಾವು ಬಹಳ ನಿಪುಣರು. ಯಾವಾಗಲೂ ಕೂಡಾ ಈ ಬಜೆಟ್‌ನ್ನು ತಯಾರು ಮಾಡಿ ಕೊನೆಯಲ್ಲಿ ಇಷ್ಟು ನೂರು ಕೋಟಿ ಇಷ್ಟು ಸಾವಿರ ಕೋಟಿ ರೂಪಾಯಿ ಡೆಫಿಸಿಟ್ ಬಜೆಟ್ ಇದೆ, ಅದನ್ನು ಆಮೇಲೆ ತುಂಬಲು ಏನಾದರೂ ಮಾಡುತ್ತೇವೆ ಎನ್ನುವ ಮಾತನ್ನು ಹಿಂದಿನಿಂದಲೂ ಹೇಳಿ ಕೊಂಡು ಬಂದಿದ್ದೇವೆ. ಆದರೆ ಈ ವರ್ಷದ ಬಜೆಟನ್ನು ನೋಡಿದಾಗ ೫೬.೭೩ ಕೋಟಿ ಅಂಥ ಇದ್ದರೂ ಕೂಡಾ ಅದರಲ್ಲಿ ಒಂದು ಮಾತನ್ನು ಫೈನಾನ್ಸ್ ಮಿನಿಸ್ಟರ್ ಹೇಳುತ್ತಾರೆ. ಏನೆಂದರೆ,

> "I expect that even this will be coverd in the course of the year largely through buoyancy in taxes and treater efficiency in Collection"

ಎಂದು, ಇದು ನಿಜವಾಗಿಯೂ ಕೂಡಾ ಒಪ್ಪತಕ್ಕಂಥ ಒಂದು ಬಜೆಟ್. ಇದು ಎಲ್ಲಾ ರೀತಿಯಿಂದ ಸಂತೋಷದ ವಿಚಾರ ಎನ್ನುವ ಮಾತನ್ನು ಕೂಡಾ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದಕ್ಕೆ ಮುಂದೆ ಹೋಗುತ್ತಾ......

ಅಧ್ಯಕ್ಷರು.—ಬಜೆಟ್ ಬಗ್ಗೆ ತಾವು ಹಿಂದೆ ಮಾತನಾಡಿರಲಿಲ್ಲವೇ ಡಾಕ್ಟರೇ ?

ಡಾ॥ ಎಸ್. ಬಿ. ನಂಜಪ್ಪ.—ಅದನ್ನು ನಾನು ಏತಕ್ಕೆ ಹೇಳಿದೆ ಎಂದರೆ......

MR. SPEAKER. Please continue.

ಡಾ॥ ಎಸ್. ಬಿ. ನಂಜಪ್ಪ.—ಅದು ಯಾರಿಗೂ ಗೊತ್ತಿಲ್ಲ ಎಂದು ನಾನೇನು ಹೇಳಲಿಲ್ಲ. ನಾನು ನನ್ನ ವಾದವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೋಸ್ಕರ ಆ ಮಾತನ್ನು ಹೇಳಿದೆ ಆಮೇಲೆ ಈ ಒಂದು ಎಕ್ಸೈಜ್ ಮೇಲೆ ಬಹಳ ಮಾತುಗಳನ್ನು ನಾನು ಕೇಳಿದೆ. ಅಡಲ್‌ಟ್ರೇಷನ್, ಡೂಪ್ಲಿಕೇಟ್, ವಿಟಮಿನ್ಸ್, ಪಾಯಿಜನ್ಸ್, ಇದೆಲ್ಲಾ ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವುದು. ಹ್ಯೂಮನ್ ಹಾಬಿಟ್ಸ್‌ನ್ನು ಯಾರು ಕೂಡಾ ಅಷ್ಟು ಸುಲಭವಾಗಿ ಪ್ರಿವೆಂಟನ್ನು ಇಂದು ಮಾಡುವುದಕ್ಕಾಗಿಲ್ಲ, ಮುಂದೆಯೂ ಮಾಡುವುದಕ್ಕಾಗುವುದಿಲ್ಲ, ಈಗಲೂ ಕೂಡಾ ಮಾಡುವುದಕ್ಕಾಗುವುದಿಲ್ಲ. ಇವರ ಬಗ್ಗೆ ಎಲ್ಲರೂ ಕೂಡಾ ಏತಕ್ಕೆ ತಲೆ ಕೆಡಿಸಿಕೊಳ್ಳಬೇಕು ಎಂದು ನನಗೆ ಅರ್ಥ ಕೂಡಾ ಆಗುವುದಿಲ್ಲ. ಈ ಎಕ್ಸೈಜ್ ಬಗ್ಗೆ ಹ್ಯೂಮನ್ ಹಾಬಿಟ್ಸ್ ಏನು ಇದೆಯೋ, ಇದಕ್ಕೆ ಇಷ್ಟೊಂದು ನಾವು ಕಾಲವನ್ನು ವ್ಯಯ ಮಾಡುವುದು ಪ್ರಯೋಜನವಿಲ್ಲ ಎಂದು ನನಗಾದರೂ ಅನಿಸುತ್ತದೆ. ಈಗ ಟಾಡಿ, ಅದನ್ನು ಯಾವುದೋ ಒಂದು ಕಾರಣ ಇಟ್ಟು ಅದರ ಮಾರಾಟವನ್ನು ಸ್ಟಾಪ್ ಮಾಡಿ ಆಯಿತು. ಅದಕ್ಕೆ so many problems have cropped up, ಈಗ ನಾವು ಪ್ರಾಬ್ಲಮ್ಸ್‌ಸಾಲ್ವ್ ಮಾಡಬೇಕಾಗಿ ಬರುತ್ತದೆ. ಏಕೆಂದರೆ ಬಹಳಷ್ಟು ಜನ ಅಂದರೆ ಲಕ್ಷೋಪಲಕ್ಷ ಜನ ಇವತ್ತು ನಿರಾಶ್ರಿತರಾಗಿದ್ದಾರೆ ಎಂದು ಹೇಳಿದರೂ ಕೂಡಾ ತಪ್ಪಾಗುವುದಿಲ್ಲ. ಆಮೇಲೆ ಇನ್ನು ಯಾರು ತೆಂಗಿನ ಮರಗಳನ್ನು ಕೊಡುತ್ತಿದ್ದರು, ಅದರಲ್ಲಿ ಹಣವನ್ನು ಸಂಪಾದನೆ ಮಾಡುತ್ತಿದ್ದರು, ಅದು ಹೀಗೆ it is a viscious circle. ಅಲ್ಲಿ ಒಂದು ಪ್ರಾಬ್ಲಮ್‌ನ್ನು ನಾವೇ ಕ್ರಿಯೇಟ್ ಮಾಡಿದ್ದೇವೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದನ್ನು ಕಾಂಪೆನ್‌ಸೇಟ್ ಮಾಡುವುದಕ್ಕೋಸ್ಕರ ಬೇರೆ ಅರ್ಯ್ರಾಕ್ ಅಂಡ್ ಅದರ್ ಫಾರೀನ್ ಲಿಕ್ಕರ್ಸ್, ಆ ಟ್ರೇಡ್‌ನಲ್ಲಿ ಟ್ಯಾಕ್ಸೇಷನ್‌ನ್ನು ಜಾಸ್ತಿ ಹಾಕಿದ್ದರಿಂದ ಅವರಲ್ಲಿ ಹೆಚ್ಚಿಗೆ ಹಣ ಇವತ್ತು ನಮಗೆ ಬಂದಿದೆ. ಅದು ಬಂದಿರುವುದರಿಂದ ಇವತ್ತು ಕರ್ನಾಟಕ ರಾಜ್ಯದ ಆರ್ಥಿಕ ಸ್ಥಿತಿಯ ಮುಗ್ಗಟ್ಟನ್ನು ಸರಿದೂಗಿಸುವುದಕ್ಕೆ ಸಾಧ್ಯವಾಗಿದೆ ಎಂದು ನನಗಾದರೂ ಕೂಡಾ ಅನಿಸುತ್ತದೆ. ಅದು ಇಲ್ಲದೆ ಹೋಗಿದ್ದರೆ ಇವತ್ತು ಬಹಳ ಕಷ್ಟವಾಗುತ್ತಿತ್ತು ಎನ್ನುವುದನ್ನು ನಾವೆಲ್ಲರೂ ಕೂಡಾ ಒಪ್ಪಿಕೊಳ್ಳ ಬೇಕಾಗುತ್ತದೆ. ಈ ಎಕ್ಸೈಜ್ ಹಾಬಿಟ್ಸ್ ಏನಿದೆ. ಇದು ನ್ಯಾಚುರಲ್ ಆಗಿ ಹೇಗೆ ಬರುತ್ತದೋ ಅದನ್ನು ಹಾಗೆಯೇ ಬಿಟ್ಟುಬಿಟ್ಟರೆ ಒಳ್ಳೆಯದು ಎಂದು ನನಗೆ ಕಾಣುತ್ತದೆ. ನಾವು ಪಾಶ್ಚಿಮಾತ್ಯ ದೇಶಗಳನ್ನೆಲ್ಲಾ ನೋಡಿದಾಗ ಅಥವಾ ನಮ್ಮ ಪ್ರಾಬ್ಲಮ್ಸ್‌ನ್ನು ೪೦–೪೫ ವರ್ಷಗಳಿಂದ ನೋಡಿದಾಗ ನಾವು ಈ ಪ್ರೊಗ್ರೆಸ್ಸೀವ್ ಪಾಲಿಸಿಯನ್ನು ಇಟ್ಟುಕೊಳ್ಳದೇ, ಯಾವುದೋ ಒಂದು ಓಲ್ಡ್ ಟೈಪ್ ಆಫ್ ಮೆಂಟಾಲಿಟಿಯನ್ನು ಇಟ್ಟುಕೊಂಡು ಅಥವಾ ಒಂದು ಛೇಂಜಸ್‌ನ್ನು ಮಾಡಬೇಕು. ಎಂದು ಕೊಂಡು ನಮ್ಮಲ್ಲಿರತಕ್ಕಂಥದ್ದನ್ನೇ ಮಾಡುವುದನ್ನು ಬಿಟ್ಟು ನಮಗೆ ಆದ್ಯತೆ ಇರತಕ್ಕಂಥದ್ದು ನಮಗೆ

ಬೇಕಾಗಿಗತಕ್ಕಂಥದ್ದು ಅನ್ನ, ಬಟ್ಟೆ, ನೀರು, ವಿದ್ಯುಚ್ಛಕ್ತಿ ಹೀಗೆ ಏನು ಮನುಷ್ಯನಿಗೆ ಬೇಕಾಗ ತಕ್ಕಂಥದ್ದನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಪಟ್ಟರೆ ಬಹಳ ಒಳ್ಳೆಯದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಈ ಎಕ್ಸ್‌ಚೇಂಜ್ ಕಂಟ್ರೈನರ್ಸ್ ಬಗ್ಗೆ ಆವೇಲೆ ಲೈಸೆನ್ಸ್ ಬಗ್ಗೆ ಇದಕ್ಕೆ ಯಾರನ್ನು ಯಾವ ರೀತಿ ಕೇಳುವುದು, ಹೇಗೆ ಇದನ್ನು ಸರಿಮಾಡುವುದು ? ಎನ್ನುವುದಕ್ಕೆ ನಾವು ಭೈರೇಗೌಡರನ್ನೇ ಕೇಳಬೇಕು. ಭೈರೇಗೌಡರನ್ನೇ ಮಾದರಿಯಾಗಿಟ್ಟುಕೊಂಡು ಅವರ ಮೂಲಕ ಇದನ್ನೆಲ್ಲಾ ಮಾಡಿಸಿದರೆ ಸರಿ ಹೋಗುತ್ತದೆ ಎಂದು ನನಗಾದರೂ ಅನಿಸುತ್ತದೆ. ತೆರಿಗೆಯನ್ನು ಮಾತ್ರ ಎಲ್ಲರೂ ಕೊಡಬೇಕಾಗುತ್ತದೆ. ಆದರೆ ಕದಿಯುವವರಿತ್ತಾರೆ. ಸುಳ್ಳು ಲೆಕ್ಕ ಬರೆಯುವವರು ಇರುತ್ತಾರೆ, ಇದನ್ನು ತಡೆ ಗಟ್ಟುವ ಬಗ್ಗೆ ಈ ಸದನದಲ್ಲಿ ಕಾಲ ವ್ಯಯ ಮಾಡದೆ, ಇಷ್ಟು ಮಾತ್ರ ನಾನು ಹೇಳುತ್ತೇನೆ, ಏನು ಹ್ಯೂಮನ್ ಹ್ಯಾಬಿಟ್ಸ್ ಇದೆಯೋ ಅವುಗಳ ಬಗ್ಗೆ ಹೆಚ್ಚು ಚಿಂತನೆ ಮಾಡದೆ, ಶೀಲಕ್ಕಿಂತ ಕಾಲವೇ ಮೇಲು ಎಂಬ ಜಪಾನ್ ಗಾಧೆಯಂತೆ ನಾವು ಕಾಲಕ್ಕೆ ನಮ್ಮ ಪ್ರಗತಿಯ ಬಗ್ಗೆ ಜಾಸ್ತಿ ಚಿಂತನೆ ಮಾಡಿ ಬಡವರ ಮತ್ತು ರೈತರ ಸಮಸ್ಯೆಗಳನ್ನು ಸಾಲ್ವ್ ಮಾಡಲು ಪ್ರಯತ್ನಿಸಿದರೆ ಒಳ್ಳೆಯದೆಂದು ಹೇಳಿ, ನಾನು ಜಾಸ್ತಿ ಕಾಲ ತೆಗೆದುಕೊಳ್ಳದೆ ಈ ಬೇಡಿಕೆಗಳನ್ನು ಅನುಮೋದಿಸುತ್ತೇನೆಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. "ಜೈಹಿಂದ್"

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರ ಹೆಸರಿನಲ್ಲಿ ಸುಮಾರು ೧೦ ಇಲಾಖಾ ಬೇಡಿಕೆಗಳು ಒಟ್ಟಿಗೆ ಚರ್ಚೆಗೆ ಇವೊತ್ತು ಬಂದಿದೆ. ನಾನಾದರು ಈ ಸಂದರ್ಭದಲ್ಲಿ ರಾಜ್ಯ ವಿಧಾನಮಂಡಲದ ಬಗ್ಗೆ ಹೇಳುವುದಾದರೆ ಹಿಂದೆ ಮುಖ್ಯಮಂತ್ರಿಗಳು ಇಲ್ಲಿ ಭಾಷಣ ಮಾಡುವಾಗ ಇದನ್ನು ಬದಲಾವಣೆ ಮಾಡಿ ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಕೆಂದು ಹೇಳಿ ಭಯ ಭೀತಿ ಹುಟ್ಟಿಸಿದ್ದರು. ನನಗನಿಸುತ್ತದೆ, ಅದು ಇಲ್ಲೇ ಇರಬೇಕು. ಇಲ್ಲಿರುವುದನ್ನು ಬದ ಲಾಯಿಸುವ ಕೆಲಸಕ್ಕೆ ಸರ್ಕಾರ ಕೈಹಾಕಬಾರದು. ಶಾಸಕಾಂಗಕ್ಕೆ ಎಲ್ಲ ರೀತಿಯ ಸಮಗ್ರ ಸೌಲಭ್ಯ ಮತ್ತು ಸೌಕರ್ಯಗಳನ್ನು ಸರ್ಕಾರ ನೀಡಬೇಕೆಂದು ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಇಲ್ಲಿನ ಸಿಬ್ಬಂದಿ ವರ್ಗದವರಿಗೆ ಶಾಸನ ಸಭೆ ನಡೆಯುವಾಗ ಕಾಲವೇಳೆ ಯಾವುದೂ ನಿಗದಿ ಇಲ್ಲ. ಅವರಿಗೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಭತ್ಯೆ ಕೊಡುವುದಕ್ಕೆ ಅತ್ಯಂತ ಕಳಕಳಿಯಿಂದ ಚಿಂತಿಸಬೇಕು. ಇದರ ಜೊತೆಗೆ ಅನೇಕ ನಮ್ಮ ವಿರೊಧಪಕ್ಷಗಳ ಸದಸ್ಯರು ಬಯಸುವಂತೆ ಲೋಕಸಭೆಯಲ್ಲಿ ಯಾವರೀತಿ ಬೇರೆ ಬೇರೆ ಪಕ್ಷಗಳವರಿಗೆ ಒಂದೊಂದು ಕಾರ್ಯಾಲಯವನ್ನು ಕೊಟ್ಟಿದ್ದಾರೆ. ಇದರಿಂದ ಅವರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಕ್ಕೆ ಮತ್ತು ಪರಿಣಾಮಕಾರಿಯಾಗಿ ಕೆಲಸ ಮಾಡಲು ಹೆಚ್ಚಿನ ಅನುಕೂಲವಾಗುತ್ತದೆ. ಇಲ್ಲಿ ವಿಧಾನಸೌಧದಲ್ಲೂ ಕೂಡ ವಿವಿಧ ವಿರೋಧಪಕ್ಷಗಳಿರುವುದರಿಂದ ನಮಗೂ ಒಂದೊಂದು ಕಾರ್ಯಾಲಯವನ್ನು ಕೊಟ್ಟು ಅದಕ್ಕೆ ಬೇಕಾದ ಸಕಲ ಸೌಕರ್ಯಗಳನ್ನೂ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ವಿಧಾನಸೌಧವನ್ನು ನಿರ್ಮಾಣ ಮಾಡಿದಂತಹ ಶಿಲ್ಪಿ ಶ್ರೀ ಹನುಮಂತಯ್ಯನವರ ಚಿತ್ರಪಟ ಇಲ್ಲಿಲ್ಲ, ಬೇರೆ ರಾಷ್ಟ್ರನಾಯಕರ ಚಿತ್ರಗಳೆಲ್ಲ ಇಲ್ಲಿವೆ. ಅದರಂತೆ ಹನುಮಂತಯ್ಯನವರ ಚಿತ್ರಪಟವೂ ಇರಬೇಕಾದ್ದು ಆವಶ್ಯಕ. ಈ ಬಗ್ಗೆ ನಾನು ಹಿಂದೆ ಅನೇಕಬಾರಿ ಸರ್ಕಾರದ ಗಮನಕ್ಕೆ ತಂದಿದ್ದರೂ ಇಲ್ಲೀವರೆಗೂ ಆ ಚಿತ್ರ ಇಲ್ಲಿ ಬರಲಿಲ್ಲ. ಬಹುಶಃ ಈ ವಿಧಾನಸಭೆ ಶುರುವಾದಾಗಲೇ ಪ್ರಪ್ರಥಮವಾಗಿ ಅವರ ಭಾವಚಿತ್ರ ಬರಬೇಕಾಗಿತ್ತು. ಈ ಸಸದದಲ್ಲೂ ಬರಬೇಕು

೫-೪೫ ಪಿ. ಎಂ.

ಮತ್ತು ವಿಧಾನ ಪರಿಷತ್ತಿನ ಸದನದಲ್ಲೂ ಬರಬೇಕಾದ್ದು ಆದ ಕರ್ತವ್ಯ. ಯಾವುದೇ ಸರ್ಕಾರ ಇರಲಿ, ಯಾರೇ ನಡೆಸಲಿ. ಈಗಲೂ ಅತ್ಯಂತ ಜಾಗರೂಕತೆಯಿಂದ ಆ ಒಂದು ಕೆಲಸವನ್ನು ಕೂಡಲೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯ ಎನ್ನತಕ್ಕಂಥ ಮಾತನ್ನು ಅತ್ಯಂತ ಗಂಭೀರವಾಗಿ ನಾನು ಸರ್ಕಾರಕ್ಕೆ ಹೇಳುತ್ತಾ ಇದ್ದೇನೆ. ಈಗಾಗಲೇ ನಮ್ಮಲ್ಲಿ ಅನೇಕ ಜನ ಚಿತ್ರವನ್ನು ಬರೆದು ಕೊಡತಕ್ಕ ಪರಿಣಿತರು ಇದ್ದಾರೆ, ತಾವು ಹಾಕತಕ್ಕಂಥ ಒಂದು ನೀತಿಯನ್ನು ಅನುಸರಿಸಿ ಈ ಕೆಲಸ ಮಾಡಬೇಕು. ತಮಗೆ ಗೊತ್ತಿರಬೇಕು, ಸರ್ಕಾರದ ಕೆಲಸ ದೇವರ ಕೆಲಸ ಎಂದು ಶ್ರೀಮಾನ್ ಹನುಮಂತಯ್ಯನವರು ಬರೆಸಿದ್ದರು. ಮತ್ತೆ ಅದು ದೊಡ್ಡ ರಾಜಕೀಯವಾಗಿ ಸರ್ಕಾರದ ಕೆಲಸ ದೇವರ ಕೆಲಸ ಎನ್ನುವುದನ್ನು ಅಳಿಸಿ ಹಾಕಿದರು, ಮತ್ತೆ ಬರೆಸಿದರು, ಮತ್ತೆ ಅಳಿಸಿ ಹಾಕಿದರು. ಈ ರೀತಿ ಒಂದು ದೊಡ್ಡ ಇತಿಹಾಸವೇ ನಡೆದಿದೆ. ಇವತ್ತು ನಡೆಯುತಕ್ಕಂಥ ರಾಜಕೀಯಕ್ಕೂ, ಅಂದಿನ ರಾಜಕೀಯಕ್ಕೂ ಬಹಳ ವ್ಯತ್ಯಾಸವಿದೆ. ಅವತ್ತು ಸರ್ಕಾರದ ಕೆಲಸ ದೇವರ ಕೆಲಸ ಎಂದು ಹೇಳಿದರೆ ಸರ್ಕಾರ ಅಂದರೆ ಹನುಮಂತಯ್ಯನವರು, ಅಂದರೆ ಅವರು ದೇವರು

ಇದ್ದಂತೆ ಎನ್ನುವ ರೀತಿ ಕಲ್ಪನೆಯನ್ನು ಸೃಷ್ಟಿಮಾಡಿ ಅಂದು ಲೋಕೋಪಯೋಗಿ ಸಚಿವರಾದಂಥ ಶ್ರೀಮಾನ್ ವೀರಣ್ಣಗೌಡರು ಅವರವರ ರಾಜಕೀಯ ದ್ವಂದ್ವದಿಂದ ಅದನ್ನು ಅಳಿಸಿ ಹಾಕಿದ್ದಾಯಿತು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದು ಒಂದು ಪ್ರಮುಖವಾದಂಥ ಸದನವಾಗಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸನ್ಮಾನ್ಯ ಹನುಮಂತಯ್ಯನವರ ಮೇಲೆ ಅಭಿಮಾನದಿಂದ ಮಾತನಾಡಿದ್ದಕ್ಕೆ ನಮ್ಮೆಲ್ಲ ಸ್ವಾಗತ ಇದೆ. ತಮ್ಮ ಸೂಚನೆಗೂ ಸ್ವಾಗತ ಇದೆ. ಆದರೆ ಸನ್ಮಾನ್ಯ ವೀರಣ್ಣಗೌಡರ ವಿಚಾರವನ್ನು ನಾವು ಇಲ್ಲಿ ಏಕೆ ಮಾತನಾಡಬೇಕು. ಏಕೆಂದರೆ, ಅವರು ಈ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಾರೆ, ಅವರು ಸತ್ತು ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನೀವು ನಿಮಿಷ ನಿಮಿಷಕ್ಕೂ ಪ್ರತಿಯೊಂದಕ್ಕೂ ಈ ರೀತಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮಿಷ ಅಲ್ಲ, ಕೆಲವರ ವಿಚಾರದಲ್ಲಿ ನಾವು ಲಘುವಾಗಿ ಮಾತನಾಡುವುದು......

ಶ್ರೀ ವಾಟಾಳ್ ನಾಗರಾಜ್.—ಇತಿಹಾಸ ಇದು, ಇತಿಹಾಸವನ್ನು ಅಳಿಸುವುದಕ್ಕೆ ಸಾಧ್ಯವಿಲ್ಲ. ಇತಿಹಾಸ ನಡೆದಿರುವುದು. ನಾನೇನು ಅವರನ್ನು ಆಕ್ಷೇಪಣೆ ಮಾಡುತ್ತಾ ಇಲ್ಲ. ಅವತ್ತಿನ ಪರಿಸ್ಥಿತಿಯನ್ನು ಹೇಳಿದೆ. ಇತಿಹಾಸವನ್ನು ಅಳಿಸಿ ಹಾಕಬೇಕು ಎನ್ನತಕ್ಕಂಥ ಪ್ರಶ್ನೆಯಲ್ಲ, ಇದೆಲ್ಲ ನಡೆದಿದೆ. ದಯಮಾಡಿ ತಾವು ನನ್ನ ಸಲಹೆಯನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ತಾವು ಪ್ರಾಮಾಣಿಕವಾಗಿ ಈ ಸದನದಲ್ಲಿ ಅವರ ಒಂದು ಒಳ್ಳೆಯ ಚಿತ್ರವನ್ನು ಹಾಕತಕ್ಕಂಥ ನೀತಿಯನ್ನು ತೆಗೆದುಕೊಳ್ಳಬೇಕು. ಇದರ ಜೊತೆಗೆ ಮಾಜಿ ಶಾಸಕರುಗಳ ಬಗ್ಗೆ ಹೇಳಬೇಕಾಗಿದೆ. ಈಗಾಗಲೇ ತಮಗೆ, ಅವರಿಂದ ಸರ್ಕಾರಕ್ಕೆ ಅನೇಕ ಮನವಿಗಳು ಬಂದಿವೆ. ಬಹುಶಃ ಮಾಜಿ ಶಾಸಕರು ತಮ್ಮನ್ನು ಭೇಟಿಯಾಗಿರ ಬಹುದು. ಇವತ್ತು ಅವರ ಪರಿಸ್ಥಿತಿ ಬಹಳ ಹೀನಾಯವಾಗಿದೆ. ನಾನು ಅನೇಕರನ್ನು ನೋಡಿದ್ದೇನೆ. ಅವರೆಲ್ಲರೂ ಮಂತ್ರಿಗಳ ಮನೆಮನೆಗೆ ಅಲೆಯುತ್ತಾ ಇದ್ದಾರೆ. ಈ ಸದನದಲ್ಲಿ ಕುಳಿತು ಈ ರಾಜ್ಯದ ಅಭಿವೃದ್ಧಿಗಾಗಿ ಚಿಂತನೆ ಮಾಡಿದಂಥ ಅನೇಕ ಜನ ಮಾಜಿ ಶಾಸಕರುಗಳು ತಮಗೆ ಸ್ವಲ್ಪ ಮಾಸಾಶನ ಜಾಸ್ತಿಮಾಡಿ ಎಂದು ಕೈಮುಗಿದು, ಕಾಲು ಕಟ್ಟಿ ಕೇಳಿದ್ದಾರೆ. ಇದು ಜೋಕಲ್ಲ, ನಗುವಂಥ ಪ್ರಶ್ನೆಯಲ್ಲ. ಅವರು ಪ್ರಾಮಾಣಿಕವಾಗಿ ಕೇಳಿದ್ದಾರೆ.

ಶ್ರೀ ಹಲಗೇಗೌಡ.—ಮಾನ್ಯ ವಾಟಾಳ್ ನಾಗರಾಜ್‌ರವರು ಮಾಜಿ ಶಾಸಕರ ಬಗ್ಗೆ ಮಾತನಾಡುತ್ತ, ಕೈಮುಗಿದು, ಕಾಲು ಕಟ್ಟಿ ಕೇಳುತ್ತಿದ್ದಾರೆ ದು ಹೇಳಿದರು. ಅವರು ಕೈನೂ ಮುಗಿದಿಲ್ಲ, ಕಾಲೂ ಕಟ್ಟಿಲ್ಲ. ನಮ್ಮ ಹಕ್ಕನ್ನು ಕೊಡಿ ಎಂದು ಹೇಳುತ್ತಿದ್ದಾರೆಯೇ ಹೊರತು, ಪಾಪ ಈ ರೀತಿ ಹೇಳಿ ಅವರನ್ನು ಅವಮಾನ ಮಾಡುವುದು ತರವಲ್ಲ. ಅವರು ಕಾಲೂ ಕಟ್ಟುತ್ತಾ ಇಲ್ಲ, ಕೈ ಮುಗಿಯುತ್ತಾ ಇಲ್ಲ. ಅದನ್ನು ನಮ್ಮ ಕರ್ತವ್ಯವೆಂದು ತಿಳಿದು ಮಾಡಬೇಕು. ಆದರೆ ಈ ರೀತಿ ಅವಮಾನ ಮಾಡುವುದು ಚೆನ್ನಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಆ ಭಾವನೆ ಇಟ್ಟುಕೊಂಡಿಲ್ಲ. ನನಗೆ ಅವರ ಬಗ್ಗೆ ಬಹಳ ಗೌರವವಿದೆ.

ಅಧ್ಯಕ್ಷರು.—ಕಾಲು ಕಟ್ಟಿದರು ಎಂದು ಹೇಳಬೇಕಾಗಿಲ್ಲ, ಎದುರಿಗೆ ಸಿಕ್ಕಿದಾಗ ಕೈಮುಗಿಯದೆ ಇನ್ನೇನು ಮಾಡುತ್ತಾರೆ. ನಾವೂ ಕೈ ಮುಗಿಯುತ್ತೇವೆ. ನೀವೂ ಕೈ ಮುಗಿಯುತ್ತೀರಿ.

ಶ್ರೀ ವಾಟಾಳ್ ನಾಗರಾಜ್.—ಅಂದರೆ ಇದರ ಹಿಂದೆ ಎಷ್ಟು ಒತ್ತಡ ಇದೆ ಎನ್ನುವ ಭಾವನೆಯೇ ಹೊರತು ಅವರು ಕಾಲು ಹಿಡಿದರು ಎನ್ನತಕ್ಕ ಪ್ರಶ್ನೆಯಲ್ಲ. ಇದು ಎಷ್ಟು ಒತ್ತಡ ಇದೆ ಎನ್ನತಕ್ಕಂಥ ಪ್ರಶ್ನೆ. ಅವರ ಬಗ್ಗೆ ಮಾನ್ಯ ಅರ್ಥ ಸಚಿವರು ಸ್ವಲ್ಪ ಗಮನಹರಿಸಬೇಕು. ಏಕೆಂದರೆ ಮಾಜಿ ಶಾಸಕರುಗಳಿಗೆ ವೇತನ ಕೊಡಬೇಕು ಎಂದು ನಡೆದದ್ದು ಶ್ರೀಮಾನ್ ದೇವರಾಜ ಅರಸರ ಕಾಲದಲ್ಲಿ, ಅದನ್ನು ಇವತ್ತು ನೆನೆಸಿಕೊಳ್ಳಬೇಕು ಶ್ರೀಮಾನ್ ದೇವರಾಜ ಅರಸರು ಇದನ್ನು ಚಿಂತನೆ ಮಾಡಿದರು, ಮಾಜಿ ಶಾಸಕರು, ಈ ಸಭೆಯಲ್ಲಿದ್ದಂತಹವರು, ಅವರ ಪರಿಸ್ಥಿತಿ ಸ್ವಲ್ಪ ಹಸನಾಗಲಿ ಎಂದು ಮಾಡಿದಂಥಾದ್ದು ಚರಿತ್ರೆಯಲ್ಲಿ ಉಳಿಯತಕ್ಕದ್ದು. ಆದುದರಿಂದ ದಯಮಾಡಿ ಅವರಿಗೆ ಒಂದು ತಿಂಗಳಿಗೆ ಮಾಸಾಶನ ಒಂದು ಸಾವಿರ ರೂಪಾಯಿ ಜೊತೆಗೆ ಅವರಿಗೆ ವೈದ್ಯಕೀಯ ಸೌಲಭ್ಯ ಮತ್ತು ಸಾರಿಗೆ ವ್ಯವಸ್ಥೆ. ಈ ಮೂರನ್ನು ತಾವು ಮಾಡಿದರೆ ಬಹುಶಃ ಅತ್ಯಂತ ಪ್ರಾಮಾಣಿಕವಾದಂಥ

ತೀರ್ಮಾನ ಸರ್ಕಾರ ಮಾಡಿದಂತಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಅದನ್ನು ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಆದರೆ ನಾನು ಮಾತ್ರ ಮಾಜಿ ಶಾಸಕನಾಗದೆ ನನ್ನ ಉಸಿರು ಇರುವವರೆಗೆ ಶಾಸನ ಸಭೆಯಲ್ಲಿರಬೇಕೆಂದು ತೀರ್ಮಾನ ಮಾಡಿದ್ದೇನೆ. ಆ ತೀರ್ಮಾನಕ್ಕೆ ಬಂದಿದ್ದೇನೆ. ಇವತ್ತು ನಮ್ಮ ಅರ್ಥ ಸಚಿವರನ್ನು ನಿಜವಾಗಲೂ ಒಂದು ರೀತಿ ಅಭಿನಂದಿಸುತ್ತೇನೆ. ಅವರನ್ನು ಅಭಿನಂದಿಸದೇ ಇರತಕ್ಕ ಕಠೋರವಾದ ಮನಸ್ಸು ನಮ್ಮದಲ್ಲ. ಅವರು ನಕ್ಕರು ಎಂದು ಬೈರೇಗೌಡರು ಹೇಳಿದರು. ಆಗ ನಾನು ಅದನ್ನು ಗಿನ್ನೀಸ್ ಬುಕ್‌ನಲ್ಲಿ ಬರೆಯಬಹುದೆಂದು ಹೇಳಿದೆ. ಕಾರಣ. ಅವರು ನಗುವುದೇ ಅಪರೂಪ. ಅವರು ನಕ್ಕಿದ್ದು ನಿಜವಾಗಲೂ ದೊಡ್ಡ ಸಾಹಸವೇ. ಅವರ ಸಾಹಸಕ್ಕೆ ಅಭಿನಂದಿಸುತ್ತೇನೆ. ನೀವು ಉಳಿತಾಯ ಮಾಡಿದ್ದು, ಸರ್ಕಾರ ಉಳಿಸುವುದನ್ನು ಆಮೇಲೆ ನೋಡಿಕೊಳ್ಳೋಣ. ಈಗ ಅಮೇರಿಕಾಕ್ಕೆ ಹೋಗಿ ಅವರು ನಕ್ಕಿದ್ದನ್ನು ಗಿನ್ನೀಸ್ ಬುಕ್‌ನಲ್ಲಿ ಬರೆದರೆ ನಮ್ಮ ರಾಜ್ಯ ಹಸನಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಒಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ, ಅದನ್ನು ನಾನು ತಳ್ಳಿ ಹಾಕುವುದಿಲ್ಲ. ಈ ಒಂದು ಅಬ್ಕಾರಿ ಇಲಾಖೆಯಲ್ಲಿ ಏನೇನು ಅಪ್ರಮಾಣಿಕತನ ನಡೆಯುತ್ತಿತ್ತು. ಇದರಿಂದ ರಾಜ್ಯದಲ್ಲಿ ಬಹಳಷ್ಟು ಹಣ ಸೋರಿಹೋಗುತ್ತಿತ್ತು. ಅದರ ಬಗ್ಗೆ ತಾವು ಚಿಂತನೆ ಮಾಡಿದ್ದೀರಿ. ತಾವು ಚಿಂತನೆ ಮಾಡುವಾಗ, ತಮಗೆ ರಾಜಕೀಯ ದ್ವೇಷ ರಾಗ ಯಾವುದು ಬಂತೋ ನನಗೆ ಅರ್ಥವಾಗಲಿಲ್ಲ. ಏನೇ ಬರಲಿ. ಆದರೆ ಇದಕ್ಕೆ ಒಂದು ಹೊಸ ಚಾಲನೆ ಚಿಂತನೆ ಸಿಕ್ಕಿ ಈ ರಾಜ್ಯಕ್ಕೆ, ಹೆಚ್ಚಿನ ಹಣ ಬರತಕ್ಕ ಪ್ರಯತ್ನ ಮಾಡಿದ್ದೀರಿ. ಈ ರಾಜ್ಯ ಕಷ್ಟಕಾಲದಲ್ಲಿದ್ದಾಗ ಒಳ್ಳೆಯ ಕೆಲಸ ಮಾಡಿದ್ದೀರಿ, ಅದಕ್ಕಾಗಿ ನಾನು ನಿಮ್ಮನ್ನು ಮುಕ್ತಕಂಠದಿಂದ ಎರಡು ಮಾತನ್ನು ಹೇಳಬೇಕಾದುದು ನನ್ನ ಕರ್ತವ್ಯ. ಇಷ್ಟೆಲ್ಲಾ ಕಷ್ಟಪಟ್ಟು ಮಾಡಿದ್ದೀರಿ. ಇವತ್ತು ರಾಜ್ಯ ಉಳಿದಿರುವುದು ಪಾನಪ್ರಿಯರಿಂದ, ಮಧ್ಯಪಾನ ಯಾರು ಮಾಡುತ್ತಾರೆ, ಅವರ ತೆರಿಗೆಯಿಂದ ಹೆಚ್ಚಿನ ಹಣವನ್ನು ಪಡೆದಿದ್ದೀರಿ. ಮಧ್ಯಪಾನ ಮಾಡುವವರು ಯಾರು? ಅವರೂ ಸಹ ಸಾಮಾನ್ಯ ಜನರು. ಇವತ್ತು ನಿಮಗೆ ಬಂದಿರತಕ್ಕ ಹಣ ಸಾಮಾನ್ಯ ಜನರಿಂದ. ಅತ್ಯಂತ ಬಡವರಿಂದ, ಸಾರಾಯಿ ಕುಡಿಯುತಕ್ಕವರು ಯಾರು ಸ್ವಾಮಿ? ಸಾಮಾನ್ಯ ಜನ. ಬೆಲೆ ಇಳಿಸುವುದಕ್ಕೆ ತಾವು ಏನಾದರೂ ಪ್ರಯತ್ನ ಮಾಡಬೇಕು. ಸಾರಾಯಿ ಬೆಲೆ ಒಂದೇ ಸಾರಿ ಮೇಲಕ್ಕೆ ಹೋಗಿದೆ. ಗಗನಕ್ಕೇರಿದೆ, ಸಾಮಾನ್ಯ ಜನರ ದೃಷ್ಟಿಯಿಂದ ಅದರ ಬೆಲೆಯನ್ನು ಇಳಿಸಬೇಕು. ನಮ್ಮ ರಾಜ್ಯದಲ್ಲಿ ತಯಾರಾಗತಕ್ಕ ಮದ್ಯಕ್ಕೆ ಒಂದರಿಂದ ೨೦ ರವರೆಗೆ ಒಂದೇ ಸಾರಿ ತೆರಿಗೆ ಹಾಕಿದ್ದೀರಿ, ಯಾವ ಆಧಾರದ ಮೇಲೆ ಈ ತೆರಿಗೆಯನ್ನು ಹಾಕಿದ್ದೀರಿ. ಈ ಸೆಕೆಂಡ್ಸ್ ಮಾರಾಟವನ್ನು ತಪ್ಪಿಸಲು ಈ ರೀತಿ ತೆರಿಗೆಯನ್ನು ನೀವು ಹೆಚ್ಚು ಮಾಡಿರಬಹುದು. ಆದರೆ ಈ ಸೆಕೆಂಡ್ಸ್‌ಗೆ ದೊಡ್ಡ ಆಥರ್ ಇದೆ. ಸೆಕೆಂಡ್ ಯಾವುದು, ಈಗ ಮೂರನೇದು ಬಂದಿದೆ. ಅದನ್ನು ಒಂದು ಕಡೆ ಕಟ್ಟಿ ಹಾಕಿ ನಿಲ್ಲಿಸುವುದಕ್ಕೆ ಹೊರಟಿದ್ದೀರಿ. ಆದರೆ ಮತ್ತೊಂದು ಕಡೆ ಹಾದಿಬೀದಿಯಲ್ಲಿ ಕಾಫಿ ಟೀ ಕುಡಿದಂತೆ ಆಗಿದೆ. ಬೀದಿ ಬೀದಿಯಲ್ಲಿ ಕಳ್ಳಬಟ್ಟಿ ಮಾರಾಟ ಮಾಡುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಒಂದು ಕಾಲದಲ್ಲಿ ದಿವಂಗತ ಹೆಚ್. ಎಂ. ಚನ್ನಬಸಪ್ಪನವರು ಅಬ್ಕಾರಿ ಇಲಾಖೆಯ ಮಂತ್ರಿಗಳಾಗಿದ್ದಾಗ, ಕಳ್ಳಬಟ್ಟಿಗೆ ಹೆಚ್. ಎಂ. ಸಿ. ಎಂದು ಹೆಸರಿಟ್ಟಿದ್ದರು. ಇವತ್ತು ಕಳ್ಳಬಟ್ಟಿಗೆ ತಮ್ಮ ಹೆಸರು ಇಡಬೇಕಾಗುತ್ತದೆ. ನಿಮ್ಮ ದಕ್ಷತೆ ಬಗ್ಗೆ ಎರಡು ಮಾತು ಆಡುತ್ತಿಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕಾದು ನೋಡಿ.

ಶ್ರೀ ಮಟ್ಟೊಳ್ ನಾಗರಾಜ್.—೬ ತಿಂಗಳಿಂದ ನೋಡುತ್ತಿದ್ದೇವೆ. ಮುಂದೆ ಕಾಯಬೇಕಾಗಿಲ್ಲ. ಬೇಕಾದರೆ ಕಾದು ನೋಡುತ್ತೇವೆ. ನಾಲ್ಕುವರೆ ವರ್ಷ ನೀವು ಅದೇ ಖಾತೆಯಲ್ಲಿದ್ದರೆ ನೋಡೋಣ. ಇಷ್ಟೆಲ್ಲಾ ಮಾಡಿ ಪಾನಪ್ರಿಯರಿಂದ ಹಣ ಗಳಿಸುವ ಬದಲು ಈ ಪಾನನಿರೋಧದ ಬಗ್ಗೆ ಸರ್ಕಾರದ ನೀತಿ ಏನು? ಸರ್ಕಾರ ಒಂದು ತೀರ್ಮಾನಕ್ಕೆ ಬರಲಿ. ಇಷ್ಟೆಲ್ಲಾ ಕಷ್ಟಪಟ್ಟು ಆಕಾಶ ಭೂಮಿಗೆ ಇಳಿದು ಇದೆಲ್ಲಾ ತರಿಸಿ ಮಾರಿ ಮತ್ತು ಸರ್ಕಾರವೇ ಮಾರಾಟ ಮಾಡುವುದಕ್ಕೆ ಹೊರಟು, ಸರ್ಕಾರದ ಏಜನ್ಸಿ ಮೂಲಕ ಮಾರಾಟ ಮಾಡತಕ್ಕ ಪರಿಸ್ಥಿತಿ ಏನಿದೆ, ಈ ಮಟ್ಟಕ್ಕೆ ತಾವು ಇಳಿದರೆ. ನಿಮಗೆ ಧೈರ್ಯ ಇದ್ದರೆ, ತತ್ವ, ನೀತಿ, ದೇಶ ಹಾಗೂ ಇತಿಹಾಸದ ಬಗ್ಗೆ ನಂಬಿಕೆ ಇದ್ದರೆ, ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಸಾಧ್ಯವೇ? ಆ ಶಕ್ತಿ ನಿಮಗೆ ಇದೆಯೇ? ಸೆಕೆಂಡು ಬೇಡ, ಮೂರನೇದು ಬೇಡ, ನಾಲ್ಕನೆಯದು ಬೇಡ. ಕಳ್ಳಬಟ್ಟಿಯನ್ನು ಧೈರ್ಯವಾಗಿ ನಿಲ್ಲಿಸುವುದಾದರೆ, ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರುತ್ತೇವೆಂದು ಹೇಳಿ ಸ್ವಾಮಿ. ಆ ಶಕ್ತಿ ನಿಮಗೆ ಇಲ್ಲ, ಈ ರೀತಿ ಹೇಳಲು ಬಹಳ ಕಷ್ಟ ಇದೆ. ನನಗೆ ಗೊತ್ತು. ನೀವು ಧೈರ್ಯವಾಗಿ ಹೇಳಿ. ಯಾರಿಗೂ ಆಗುವುದಿಲ್ಲ. ಇವೊತ್ತು ನಮ್ಮಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಯಾರಿಗೆ ಕೊಟ್ಟಿದ್ದೀರಿ ಸ್ವಾಮಿ?

ಎಷ್ಟು ಜನ ತೆಗೆದುಕೊಳ್ಳುತ್ತಿದ್ದಾರೆ. ಅದರ ಹಿಂದೆ ಇರತಕ್ಕಂಥ ಕುಳಗಳು ಯಾರು ಎಂದು ಹೇಳುತ್ತೀರಾ? ಅದರ ಬಗ್ಗೆ ನೀವು ತನಿಖೆ ಮಾಡಿಸುತ್ತೀರಾ? ಈ ೬ ಕೋಟಿ ಲೀಟರ್ ಯಾರಿಗೆ ಹೋಗುತ್ತದೆ ಎಂದು ಹೇಳಿ? ಕೆಮಿಕಲ್ ಕಾರ್ಖಾನೆಗಳಿಗೆ ಎಂದು ತೆಗೆದುಕೊಂಡಿದ್ದಾರಲ್ಲಾ, ಎಷ್ಟು ಜನ ಕಾರ್ಖಾನೆ ನಡೆಸುತ್ತಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಕೆಮಿಕಲ್ ಯೂನಿಟ್ಸ್‌ಗೆ ಕೊಟ್ಟಿರುವುದು ೬ ಕೋಟಿ ಲೀಟರ್ ಎಂದು ಹೇಳಿದಿರಿ. ಆದರೆ ೧೯೮೯–೯೦ ರಲ್ಲಿ ಅವರುಗಳು ಲಿಫ್ಟ್ ಮಾಡಿರುವುದು ೭೮ ಲಕ್ಷ ಲೀಟರ್.

ಶ್ರೀ ವಾಟಾಳ್ ನಾಗರಾಜ್.—೬ ಕೋಟಿ ಲೀಟರ್ಸ್ ಉತ್ಪಾದನೆಯಾಗುತ್ತಿದೆ. ತಾವು ನ್ಯಾಯಾಂಗ ತನಿಖೆ ಮಾಡಿಸಿದರೆ, ಎಲ್ಲವೂ ಹೊರಬರುತ್ತವೆ. ಇದರಲ್ಲಿ ಯಾವ ಯಾವ ಭಾರಿ ಕುಳಗಳು ಇವೆ ಎಂಬುದನ್ನು ಈ ಸಭೆಯಲ್ಲಿ ಹೇಳಿ ಸ್ವಾಮಿ.

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಸ್ವಲ್ಪ ಟೈಮ್ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ತಮಗೆ ಸಹಕಾರ ಕೊಡುತ್ತೇವೆ.

ಅಧ್ಯಕ್ಷರು.—ಅವರು ಸಹಕಾರ ಕೇಳಲಿಲ್ಲ. ಟೈಮ್ ಕೇಳಿದರು.

ಶ್ರೀ ಡಿ. ಬಿ. ಚಂದ್ರೇಗೌಡ.—ನ್ಯಾಯಾಂಗ ತನಿಖೆಯಲ್ಲಿ ನಾಲ್ಕು ವರ್ಷ ಕಳೆಯುವುದು ಬೇಡ. ನಾಲ್ಕು ತಿಂಗಳಲ್ಲಿ ಮಾಡಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ನಾವು ಸ್ವಾಗತ ಮಾಡುತ್ತೇವೆ. ತನಿಖೆಯನ್ನು ಮಾಡಿ. ಈಗ ಅಬ್ಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಎಷ್ಟು ಬರಬೇಕಾಗಿದೆ. ೬ ತಿಂಗಳಿಂದ ಎಷ್ಟು ಕೋಟಿ ರೂಪಾಯಿ ವಸೂಲು ಮಾಡಿದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ವಿಚಾರ ಕೋರ್ಟಿನಲ್ಲಿದೆ.

ಶ್ರೀ ವಾಟಾಳ್ ನಾಗರಾಜ್.—ಕೋರ್ಟಿನಲ್ಲಿರುವುದು ಎಷ್ಟಿದೆ.

ಅಧ್ಯಕ್ಷರು.—ಈಗ ನೀವು ಭಾಷಣ ಮಾಡಬೇಕು. ಪಾಟಿಸವಾಲಿಗೆ ನಿಂತ ಹಾಗೆ ಕಾಣುತ್ತದೆ. ನಾನು ಪಾಟಿ ಸವಾಲಿಗೆ ಅಲೋ ಮಾಡುವುದಿಲ್ಲ. ನಾನು ನಿಮ್ಮನ್ನು ಭಾಷಣ ಮಾಡಲಿಕ್ಕೆ ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇದರ ಹಿಂದೆ ಬಹಳ ದೊಡ್ಡ ಭೂತ ಸೃಷ್ಟಿಯಾಗಿದೆ. ಸಾರಾಯಿ ಹರಾಜಿನಲ್ಲಿ ಜಾಸ್ತಿ ಹಣ ಬಂದಿದೆ. ಆದರೆ ಹೊರಗಡೆ ಗುತ್ತಿಗೆದಾರರಿಂದ ಬರಬೇಕಾದ ಹಣ ಎಷ್ಟು? ಆ ಸಾಲ ಉಳಿಸಿಕೊಂಡಿರತಕ್ಕ ಗುತ್ತಿಗೆದಾರರಿಗೆ ಮತ್ತೆ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿರುವುದು ನಿಜವೇ? ಬೇರೆ ಕಡೆಗಳಲ್ಲಿ ಡಿಸ್ಟಿಲರೀಸ್ ತುಳಿದು ಮತ್ತೊಂದು ಕಡೆ ಸಾರಾಯಿ ಮಾಲೀಕರಿಗೆ ಬೆಂಬಲ ಕೊಡುತ್ತಿರುವುದು ನಿಜವೇ? ದಯಮಾಡಿ ತಾವು ಯಾರನ್ನೋ ತುಳಿಯುವುದಕ್ಕೆ ಹೋಗಿ ಇನ್ನೇನೋ ಮಾಡಲಿಕ್ಕೆ ಹೋಗಿ ಈ ಪ್ರಶ್ನೆಗೆ ಹೋಗುವುದು ಬೇಡ. ಒಂದು ಕಡೆ ಡಿಸ್ಟಿಲರಿಗಳು ಮುಚ್ಚತಕ್ಕದ್ದರ ಬಗ್ಗೆ ಹೇಳುತ್ತಿದ್ದಾರೆ. ನಾನು ಪ್ರಮಾಣವಾಗಿ ಹೇಳುವುದಾದರೆ ಸಮಗ್ರವಾಗಿ ಇದರ ವ್ಯಾಪಾರವೇ ಬೇಡ ಎಂದು ಹೇಳುವವನು ನಾನು. ಪಾನ ನಿರೋಧ ಯಶಸ್ವಿಯಾಗಿ ಜಾರಿಯಾಗಬೇಕೆನ್ನುವ ಮನುಷ್ಯ. ಏಕೆಂದರೆ ನನಗೆ ಇದರ ವಾಸನೆ ಗೊತ್ತಿಲ್ಲ. ಯಾವ ಯಾವ ಬಾಟಲಿನಲ್ಲಿ ಎಷ್ಟೆಷ್ಟು ಇರುತ್ತದೆ. ಯಾವ ಯಾವ ರೀತಿ ಇರುತ್ತದೆ. ಬ್ರಾಂದಿ ಎಷ್ಟು, ವಿಸ್ಕಿ ಎಷ್ಟು, ಸಾರಾಯಿ ಎಷ್ಟು, ಹೆಂಡ ಎಷ್ಟು ಇದರ ಬಗ್ಗೆ ನಿಖರವಾದ ಬೆಲೆ ನಿರ್ಧಾರ ನಮಗೆ ಗೊತ್ತಿಲ್ಲ.

ಅಧ್ಯಕ್ಷರು.—ಪೂರ್ಣ ಪಾನನಿರೋಧ ಜಾರಿಗೆ ತಂದರೆ ೧೨೦೦ ಕೋಟಿ ರೂಪಾಯಿಯಷ್ಟು ನಷ್ಟ ಬರುತ್ತದೆ ಅಷ್ಟು ನಿಂತು ಹೋದರೆ ಆಮೇಲೆ ಚಾಮರಾಜನಗರದ ನೀರಿಗೆ ಏನು ಮಾಡುತ್ತೀರಿ? ಈಗಾಗಲೇ ಸರ್ಕಾರದವರು ಹೇಳಿದ್ದಾರೆ. ಪಾನನಿರೋಧದ ಬಗ್ಗೆ ಇವೊತ್ತಿನ ಪರಿಸ್ಥಿತಿಯನ್ನು ಗಮನಿಸಿ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕ ಸರ್ಕಾರದ ನಿಲುವನ್ನು ಈಗಾಗಲೇ ಹೇಳಿದ್ದಾರೆ. ಅದರ ಬಗ್ಗೆ ಪುನಃ ಪುನಃ ಸ್ಪಷ್ಟೀಕರಣ ಅವರು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್. ಗುಜರಾತ್‌ನಲ್ಲಿ ಪಾನನಿರೋಧ ಜಾರಿಗೆ ತಂದಿದ್ದಾರೆ. ನಮ್ಮ ರಾಜ್ಯದಲ್ಲಿ ಏತಕ್ಕೆ ತರಬಾರದು.?

ಅಧ್ಯಕ್ಷರು.—ರೆವಿನ್ಯೂ ಆ್ಯಂಗಲ್ ನೋಡಬೇಕಲ್ಲವೆ. ಆದಾಯದ ವಿಚಾರವನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಗುಜರಾತಿನ ಕೆಲವು ಕಡೆಗಳಲ್ಲಿ ಮಾತ್ರ ಜಾರಿಗೆ ತಂದಿದ್ದಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಗುಜರಾತ್ ಒಂದು ದೊಡ್ಡ ರಾಜ್ಯ ಹಾಗೂ ಅದು ಸಂಪತ್‌ಭರಿತವಾದಂಥ ರಾಜ್ಯ.

ಶ್ರೀ ಸಿ. ಬೈರೇಗೌಡ.—ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದರೆ ಆಗತಕ್ಕ ನಷ್ಟದಲ್ಲಿ ಕೇಂದ್ರ ಸರ್ಕಾರದವರು ಅರ್ಧ ಭಾಗ ತುಂಬಿಕೊಡುತ್ತಾರೆ. ಇದನ್ನು ಜಾರಿ ಮಾಡುವುದರಿಂದ, ಆರೋಗ್ಯ ಬಾಬಿನಲ್ಲಿ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಎಷ್ಟೋ ಅನಾವಶ್ಯಕವಾಗಿ ಆಗುತ್ತಿರುವ ಖರ್ಚು ವೆಚ್ಚಗಳೆಲ್ಲ ಉಳಿಯುತ್ತದೆ. ದುಶ್ಚಟಗಳನ್ನು ತಪ್ಪಿಸುವ ಸಲುವಾಗಿ ಖರ್ಚು ಮಾಡತಕ್ಕ ಹಣವೆಲ್ಲಾ ಉಳಿಯುತ್ತದೆ. ಹೀಗೆ ನಮಗೆ ಇದರ ಎರಡರಷ್ಟು ಸಂಪಾದನೆ ಆಗುತ್ತದೆ. ಆದ್ದರಿಂದ ರಾಜ್ಯದಲ್ಲಿ ಸಂಪೂರ್ಣ ಪಾನನಿರೋಧ ಜಾರಿಗೆ ತರುವುದು ಒಳ್ಳೆಯದು. ಈ ಒಂದು ತತ್ವ ಬಹಳ ಒಳ್ಳೆಯದು.

ಶ್ರೀ ಬಿ. ಬಿ. ಚಂದ್ರೇಗೌಡ.—ಅಧ್ಯಕ್ಷರೆ, ಇವೊತ್ತು ಬೆಳಿಗ್ಗೆ ಒಂಭತ್ತು ಗಂಟೆಗೆ ನಾವು ಬಂದೆವು. ಈಗ ಆರು ಗಂಟೆಯಾಗಿದೆ ಇನ್ನು ಎಷ್ಟು ಹೊತ್ತು ನಾವು ಕುಳಿತುಕೊಳ್ಳಬೇಕು ಎಂದು ನಿರ್ಣಯ ಮಾಡುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಇನ್ನು ೫–೧೦ ನಿಮಿಷ ತೆಗೆದುಕೊಳ್ಳುವುದಾದರೆ, ಈಗಲೇ ಮುಗಿಸಿಬಿಡೋಣ. ಇಲ್ಲದಿದ್ದರೆ ನಾಳೆ ಬೆಳಿಗ್ಗೆ ಒಂಭತ್ತು ಗಂಟೆಗೆ ಸೇರೋಣ.

ಅಧ್ಯಕ್ಷರು.—ಈಗ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವೊತ್ತು ಈ ಬೇಡಿಕೆ ಮೇಲೆ ಚರ್ಚೆ ಮುಗಿದು ಉತ್ತರ ಆಗಿ ನಾಳೆ ಮತ್ತೊಂದು ಬೇಡಿಕೆಯನ್ನು ತೆಗೆದುಕೊಳ್ಳಬೇಕಾಗಿತ್ತು ಈಗ ಹಿಂದೆ ಇದ್ದೇವೆ. ಆದ್ದರಿಂದ ನಾಳೆ ಮಾನ್ಯ ಸದಸ್ಯರು ತಮ್ಮ ಭಾಷಣಗಳನ್ನು ಸಂಕ್ಷಿಪ್ತವಾಗಿ ಮಾಡತಕ್ಕದ್ದರ ಮೂಲಕ ಈ ಬೇಡಿಕೆಗಳನ್ನು ಅಂಗೀಕರಿಸುವುದಕ್ಕೆ ಸಹಾಯಕರಾಗಬೇಕು ಎಂದು ತಮ್ಮನ್ನು ಕೇಳಿಕೊಂಡು ಈಗ ಸಭೆಯನ್ನು ಮುಂದೂಡುತ್ತೇನೆ. ಮತ್ತೆ ನಾಳೆ ಬೆಳಿಗ್ಗೆ ಪ್ರಾತಃಕಾಲ ಒಂಭತ್ತು ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ೬ ಗಂಟೆ ೨ ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ ೧೧ನೇ ಜುಲೈ ೧೯೯೦ರ ಬುಧವಾರದಂದು ಬೆಳಿಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಿತು.)

ಕಾ. ಸೂ. 173